ನಿವೃತ್ತಿ ನೆಮ್ಮದಿ

ಲೇಖಕ - ಎನ್. ಆನಂದ ರಾಮರಾವ್



ಚತುರ್ಮುಖ
ಬೆಂಗಳೂರು-560 019

ನಿವೃತ್ತಿ ನೆಮ್ಮದಿ



ಲೇಖಕರು
ಎನ್. ಆನಂದ ರಾಮರಾವ್

ಚತುರ್ಮುಖ
ನಂ. 43, 1ನೇ ಮಹಡಿ, 5ನೇ ಅಡ್ಡರಸ್ತೆ
4ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು – 560 019

ನಿವೃತ್ತಿ ನೆಮ್ಮದಿ - ಲೇಖಕರು ಎನ್. ಆನಂದ ರಾಮರಾವ್
ಶ್ರೀ ನರಸಿಂಹ ಕೃಪ, ನಂ. 88, ನೆಹರೂ ರಸ್ತೆ, ಗಿರಿನಗರ,
ಬೆಂಗಳೂರು 560 085
ಮೊ: 99802 04351; ದೂ : 080-2672 2575

ಮುದ್ರಣ ವರ್ಷ : 2013

ಪ್ರಕಾಶಕರು : ಚತುರ್ಮುಖ
ನಂ. 43, 1ನೇ ಮಹಡಿ, 5ನೇ ಅಡ್ಡರಸ್ತೆ
4ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು - 560 019
ದೂ: 080-26672141, ಮೊ.: 8088868525

ಪುಟಗಳು : VI+138=144

ಬೆಲೆ : ರೂ. 130/-

ಕಾಗದ : 70 Gsm Maplitho

ರಕ್ಷಾಪುಟ ವಿನ್ಯಾಸ : ಚಂದ್ರಶೇಖರ ವುಣ್ಣಿಮನಿ

ಅಕ್ಷರಜೋಡಣೆ : ಚಂದ್ರಶೇಖರ.ವುಣ್ಣಿಮನಿ,
ರಚನಾ ಕ್ರಿಯೇಶನ್ಸ್, ಶ್ರೀನಗರ, ಬೆಂಗಳೂರು
94484 61085

ಮುದ್ರಕರು :
ರೀಗಲ್ ಪ್ರಿಂಟ್ ಸರ್ವೀಸ್
ಕಸ್ತೂರಿಬಾ ನಗರ, ಬೆಂಗಳೂರು - 26
ಮೊ.: 9964351655

ಮುನ್ನುಡಿ

"ನಿವೃತ್ತಿ ನೆಮ್ಮದಿ " ಪುಸ್ತಕದ ಕರಡುಪ್ರತಿ ಓದಿದ ಪತ್ರಕರ್ತ ಮಿತ್ರರಾದ ಶ್ರೀ ಎಚ್.ಎಸ್. ರಂಗನಾಥ್ ರವರು (ಆತ್ಮೀಯವಾಗಿ ಹೇಳಬಹುದಾದರೆ ಮೀಸೆ ರಂಗಣ್ಣನವರು) " ಪುಸ್ತಕ ಓದಲು 11 ಗಂಟೆಗೆ ಶುರು ಮಾಡಿದೆ. ಓದಿ ಮುಗಿಸಿದಾಗ ಬೆಳಗ್ಗೆ 3 ಗಂಟೆ ಆಗಿತ್ತು. ಒಂದೇ ಸಮನೆ ಓದುವಂತಹ ಗ್ರಂಥ ಆಗಿತ್ತು. ಇಂಥ ಅಪರೂಪದ ಪುಸ್ತಕ ಒದಗಿಸುತ್ತಿರುವ ನಿಮ್ಮಂತಹ ಮಿತ್ರರಿಗೆ ಶುಭ ಹಾರೈಕೆಗಳು" ಎಂದು ಪುಸ್ತಕದ ಬಗ್ಗೆ ತಮ್ಮ ಮೆಚ್ಚುಗೆ, ಅಭಿಮಾನವನ್ನು ವ್ಯಕ್ತಪಡಿಸಿದರು ಹಾಗೂ ಪತ್ರವನ್ನೂ ಬರೆದರು.

ಹಿರಿಯ ಲೇಖಕಿ ಶ್ರೀಮತಿ ಎ. ಪಂಕಜರವರು ದೂರವಾಣಿ ಕರೆ ಮಾಡಿ ಪುಸ್ತಕದ ಉಪಯುಕ್ತತೆಯ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಮತ್ತೊಬ್ಬ ಹಿರಿಯ ಲೇಖಕಿ ಹರಿಹರದ ಶ್ರೀಮತಿ ಲಲಿತಮ್ಮ ಡಾ. ಚಂದ್ರಶೇಖರ್ ರವರು ಕಾಗದವನ್ನು ಬರೆದು "ಈ ದಿನ ಪುಸ್ತಕವನ್ನು ಓದಿದೆ. ಅತ್ಯಂತ ಸ್ವಾರಸ್ಯಕರವಾಗಿ ಅನೇಕ ಉಪಯುಕ್ತ ವಿಚಾರಗಳ ಬಗ್ಗೆ ಬರೆದಿರುವಿರಿ." ಎಂದು ಆತ್ಮೀಯವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಈ ಎಲ್ಲ ಪ್ರತಿಕ್ರಿಯೆಗಳಿಂದ ವ್ಯಕ್ತವಾಗುವುದೆಂದರೆ ಕನ್ನಡದಲ್ಲಿ ಹಣಕಾಸಿಗೆ ಸಂಬಂಧಪಟ್ಟಂತಹ ಇಂತಹ ಪುಸ್ತಕಗಳ ಬಗ್ಗೆ ಸಾಕಷ್ಟು ಅಗತ್ಯತೆ ಹಾಗೂ ಬೇಡಿಕೆಯಿದೆಯೆಂಬುದು. ಈ ದಿಶೆಯಲ್ಲಿ ನನ್ನ ಈ ಕಿರು ಪುಸ್ತಕ ಆ ಕೊರತೆಯನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸಿದೆಯೆಂಬುದು ನನಗೆ ಹರ್ಷ ತರುವ ಸಂಗತಿಯಾಗಿದೆ.

ಮೊದಲಿಗೆ ಉದಯವಾಣಿ ಪತ್ರಿಕೆಯ ಹಿರಿಯರ ಪುಟ ಉತ್ತರಾಯಣದಲ್ಲಿ ಅಂಕಣ ಮಾಲೆಯಾಗಿ ಪ್ರಕಟಿಸಿದ ಶ್ರೀಮತಿ ಆರ್. ಪೂರ್ಣಿಮಾರವರಿಗೆ ವಂದನೆಗಳು.


ಎಂದಿನಂತೆ ಈ ಬಾರಿಯೂ ನನ್ನ ಆತ್ಮೀಯರಾದ ಶ್ರೀ ಗೌರಿಸುಂದರ್ ರವರು ಈ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅವರಿಗೆ ನನ್ನ ವಂದನೆಗಳು.

ನನ್ನ ಎಲ್ಲಾ ಕಾರ್ಯಗಳಲ್ಲಿಯೂ ಸದಾ ತನ್ನ ಸಹಾಯ ಸಹಕಾರಗಳನ್ನು ನೀಡುತ್ತಿರುವ ನನ್ನ ಪತ್ನಿ ಉಷಾಗೆ ವಂದನೆಗಳು.

ಡಿ.ಟಿ.ಪಿ. ಮಾಡಿ ಉತ್ತಮ ರಕ್ಷಾಪುಟ ರಚಿಸಿ ಕೊಟ್ಟ ಶ್ರೀ ಚಂದ್ರಶೇಖರ ವುಣ್ಣಿಮನಿಯವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ರೀಗಲ್ ಪ್ರಿಂಟ್ ಸರ್ವೀಸ್ ರವರಿಗೂ ನನ್ನ ವಂದನೆಗಳು.

ಎನ್. ಆನಂದ ರಾಮ ರಾವ್

ನಿವೃತ್ತಿಯ ಮುಂಚಿನ ಮನೋಭಾವ



ಪ್ರತಿಯೊಬ್ಬ ಉದ್ಯೋಗಿಯೂ ಒಂದಷ್ಟು ವರ್ಷಗಳ ಸೇವೆಯ ನಂತರ ಕೆಲಸದಿಂದ ನಿವೃತ್ತನಾಗುವುದು ಅತ್ಯಂತ ಸಹಜವೂ ಹಾಗೂ ನಿರೀಕ್ಷಿತವಾದುದೂ ಆಗಿರುತ್ತದೆ. ಕೆಲಸಕ್ಕೆ ಸೇರಿದ ದಿನದಂದೇ ನಿವೃತ್ತಿಯ ದಿನಾಂಕವೂ ಸಹ ಪೂರ್ವ ನಿಶ್ಚಿತವಾದುದಾಗಿರುತ್ತದೆ. ಆದಾಗ್ಯೂ ನಿವೃತ್ತಿಯ ದಿನ ಸಮೀಪಿಸುತ್ತಿದ್ದಂತೆ ಹಲವಾರು ಮಂದಿ ಮಾನಸಿಕ ಕ್ಷೋಭೆಗೆ ಒಳಗಾಗುತ್ತಾರೆ. ಅನವಶ್ಯಕವಾಗಿ ಭಾವುಕರಾಗುತ್ತಾರೆ. ನಿವೃತ್ತಿಯ ನಂತರ ತನಗೆ ಭವಿಷ್ಯವೇ ಇಲ್ಲವೇನೋ ಎಂದು ವಿನಾಕಾರಣ ಚಿಂತನೆಗೆ ಒಳಗಾಗುತ್ತಾರೆ. ಭೀತಿಗೆ ಒಳಗಾಗುತ್ತಾರೆ. ಆತಂಕ, ದುಗುಡ, ಕಳವಳಗಳಿಂದ ಜೀವನದಲ್ಲಿ ನಿರುತ್ಸಾಹ ಹೊಂದುತ್ತಾರೆ. ಎಲ್ಲರಲ್ಲಿಯೂ ಈ ಮನೋಭಾವನೆ ಇಲ್ಲದಿದ್ದರೂ ಸುಮಾರು ಜನರಲ್ಲಿ ಈ ಆತಂಕಕಾರಿ ಪ್ರವೃತ್ತಿಯನ್ನು ಕಾಣಬಹುದು.

ನಿವೃತ್ತಿ ಎಂಬುವುದು ಎಲ್ಲಾ ಉದ್ಯೋಗಿಗಳ ಜೀವನದಲ್ಲಿ ಸಂಭವಿಸಲೇಬೇಕಾದ ಸಹಜ ಪ್ರಕ್ರಿಯೆ. ಅದು ಅನಿವಾರ್ಯವೂ ಹೌದು. 'ಜಾತಸ್ಯ ಮರಣಂ ಧೃವಂ' ಹುಟ್ಟಿದವನು ಸಾಯಲೇಬೇಕು ಎಂಬಂತೆ ಕೆಲಸಕ್ಕೆ ಸೇರಿದವನು ನಿವೃತ್ತಿಯಾಗುವುದೂ ಸಹ ಒಂದು ಪೂರ್ವ ನಿಶ್ಚಯವಾದ ಸಂಗತಿಯೇ. ಬಾಲ್ಯ ಯೌವನ, ವೃದ್ಧಾಪ್ಯ ಘಟ್ಟಗಳನ್ನು ದಾಟಿದ ನಂತರ ಮರಣವನ್ನಪ್ಪುವಂತೆಯೇ ಕೆಲಸಕ್ಕೆ ಸೇರಿದ ಪ್ರತಿಯೊಬ್ಬನೂ ನಿವೃತ್ತನಾಗಲೇಬೇಕು. ಇದಕ್ಕೆ ಯಾವ ವಿನಾಯತಿಯೂ ಇಲ್ಲ. ಇರುವುದಕ್ಕೆ ಸಾಧ್ಯವೂ ಇಲ್ಲ.

ಇಲ್ಲಿ ಗೌತಮ ಬುದ್ಧನ ಜೀವಿತ ಕಾಲದ ಒಂದು ಘಟನೆಯನ್ನು – ಕಿಸಾ ಗೌತಮಿಯ ಪ್ರಕರಣವನ್ನು – ನೆನಪಿಗೆ ತಂದು ಕೊಳ್ಳಬಹುದು. ಮರಣ ಹೊಂದಿದ ತನ್ನ ಮಗುವಿನ ಜೀವವನ್ನು ಮರಳಿ ಬದುಕಿಸಿ ಕೊಡುವಂತೆ ಬುದ್ಧ ದೇವನನ್ನು ಪ್ರಾರ್ಥಿಸಿದ ಗೌತಮಿಗೆ ಬುದ್ಧ ಕೇಳಿದ್ದು ಸ್ವಲ್ಪ ಸಾಸಿವೆಯನ್ನು – ಸಾವಿಲ್ಲದ ಮನೆಯ ಸಾಸಿವೆಯನ್ನು. ಅದನ್ನು ತಂದುಕೊಟ್ಟಲ್ಲಿ ಮಗುವಿನ ಜೀವ ಮರಳಿ ತಂದು ಕೊಡಬಲ್ಲೆ ಎಂಬ ಬುದ್ಧನ ಮಾತಿಗೆ ಕಿವಿಗೊಟ್ಟ ಗೌತಮಿ ಅದಕ್ಕಾಗಿ ಊರಿನ ಮನೆ ಮನೆಯನ್ನೆಲ್ಲಾ ಭೇಟಿ ಮಾಡಿ ಸಾಸಿವೆಗಾಗಿ ಪ್ರಾರ್ಥಿಸಿದಳು. ಸಾವಿಲ್ಲದ ಮನೆ ಯಾವುದೂ ಇಲ್ಲವೆಂಬ ಅರಿವಾಯಿತು. ಹಾಗಾಗಿ ಬುದ್ಧನ ಬಳಿ ಬಂದು

ಶರಣಾದಾಗ ಅವಳಿಗೆ ದೊರೆಯಿತು - ಬುದ್ಧ ದೇವನ ಸಾಂತ್ವನದ ಮಾತು. ದೊರಕಿತು ಜೀವನ ದರ್ಶನದ ನಿಜ ಚಿತ್ರಣ.

ಹಾಗೆಯೇ ಔದ್ಯೋಗಿಕ ಜೀವನವನ್ನು ಒಂದು ರೈಲ್ವೇ ಪ್ರಯಾಣಕ್ಕೆ ಹೋಲಿಸಬಹುದು. ಒಂದು ಊರಿನಿಂದ ಮತ್ತೊಂದು ಊರಿಗೆ ಧೀರ್ಘಾವಧಿ ಪ್ರಯಾಣವನ್ನು ಕೈಗೊಂಡಾಗ ಪ್ರತಿ ಪ್ರಯಾಣಿಕನೂ ರೈಲು ತನ್ನ ಊರಿನ ನಿಲ್ದಾಣವನ್ನು ತಲುಪಿದಾಗ ಇಳಿದು ಹೋಗುತ್ತಾನೆ. ಅದೇ ರೀತಿ, ಉಳಿದ ಪ್ರಯಾಣಿಕರೂ ತಮ್ಮ ಪ್ರಯಾಣವನ್ನು ಮುಂದುವರೆಸಿ, ರೈಲು ಅವರ ಊರನ್ನು ತಲುಪಿದ ಕೂಡಲೇ ಇಳಿದು ಹೋಗುತ್ತಾರೆ. ರೈಲು ಕೊನೆಯ ನಿಲ್ದಾಣವನ್ನು ತಲುಪುತ್ತಲೇ ಎಲ್ಲಾ ಪ್ರಯಾಣಿಕರು ಇಳಿಯಲೇ ಬೇಕು.

ಅಂತೆಯೇ ಒಂದು ಸಂಸ್ಥೆಗೆ ಉದ್ಯೋಗಕ್ಕೆ ಸೇರಿದ ಮೇಲೆ ಎಲ್ಲ ಉದ್ಯೋಗಿಗಳು ಒಂದಲ್ಲ ಒಂದು ದಿನ ನಿವೃತ್ತರಾಗಲೇಬೇಕು. ನಿವೃತ್ತಿಯ ವಯಸ್ಸು ಸಾಮಾನ್ಯವಾಗಿ 58 /60 ವರ್ಷಗಳಾಗಿರುತ್ತವೆ. ಆ ವಯಸ್ಸನ್ನು ಪೂರೈಸಿದ ಪ್ರತಿಯೊಬ್ಬ ಉದ್ಯೋಗಿಯೂ ನಿವೃತ್ತನಾಗುತ್ತಾನೆ.

ನಿವೃತ್ತಿ ಯಾರಿಗಿಲ್ಲ ?

ಕೆಲವೊಂದು ಸಂದರ್ಭಗಳಲ್ಲಿ 58/60 ವರ್ಷಗಳನ್ನು ಪೂರೈಸಿದ ಕೆಲವರು ಇನ್ನೂ ತಮ್ಮ ಉದ್ಯೋಗದಲ್ಲಿ ಮುಂದುವರೆಸುವ ಸಂದರ್ಭಗಳು ಇರುತ್ತವೆ.

ಅವರೆಂದರೆ ಸ್ವಂತ ಉದ್ದಿಮೆ ಸ್ಥಾಪಿಸಿರುವ ಉದ್ಯೋಗಪತಿಗಳು, ಲೇಖಕರು, ಕಲಾವಿದರು, ರಾಜಕೀಯ ನೇತಾರರು ಮುಂತಾದವರು. ನಿವೃತ್ತಿಯೇ ಇಲ್ಲದ ಮತ್ತೊಂದು ವರ್ಗದ ಜನರೆಂದರೆ ತಮ್ಮ ಜೀವನ ನಿರ್ವಹಣೆಗೆ ಬೇರೆದಾರಿಯೇ ಇಲ್ಲದೆ ತಮ್ಮ ದುಡಿಮೆಯನ್ನು ಆಶ್ರಯಿಸಬೇಕಾದ ಬಡ ಜನರು. ಇವರು ನಿರ್ವಾಹವಿಲ್ಲದೆ. ತಮ್ಮ ನಿತ್ಯದ ಅನ್ನಕ್ಕಾಗಿ- ಬದುಕಿಗಾಗಿ, ಕೈಲಾಗದಿದ್ದರೂ ದುಡಿಯುತ್ತಲೇ ಇರಬೇಕಾದ ಅನಿವಾರ್ಯ ಪರಿಸ್ಥಿತಿಗೆ ಶರಣಾಗಿ ಉದ್ಯೋಗವನ್ನು / ಕಸುಬನ್ನು ಮುಂದುವರೆಸಲೇ ಬೇಕಾದ ಸಂಕಟಮಯ ಪರಿಸ್ಥಿತಿಯಲ್ಲಿ ಸಿಲುಕಿ ಹಾಕಿಕೊಂಡಿರುವಂಥವರು.

ನಿವೃತ್ತಿಯನ್ನೇ ಹೊಂದದ ಮತ್ತೊಂದು ವರ್ಗದವರಿದ್ದಾರೆ, ಅವರೆಂದರೆ ಗೃಹಿಣಿಯರು. ಇವರಿಗೆ ನಿವೃತ್ತಿಯೆಂಬುದೇ ಇಲ್ಲ. ಉದ್ಯೋಗಸ್ಥ ಮಹಿಳೆಯಾದರೆ,

ಉದ್ಯೋಗದಿಂದ ನಿವೃತ್ತಳಾಗುವಳೇ ಹೊರತು ಮನೆಯ ಗೃಹ ಕೃತ್ಯದಿಂದಲ್ಲ. ಅಂದರೆ ಗಂಡನ, ಮಕ್ಕಳ, ಮೊಮ್ಮಕ್ಕಳ ಆರೈಕೆ ಹಾಗೂ ಅವರ ಯೋಗ ಕ್ಷೇಮದಲ್ಲಿ ಆಕೆ ವಹಿಸುವ ಪಾತ್ರ ಪ್ರಮುಖವಾದುದು.

ಮೆಚ್ಚಿನ ಮಡದಿಯಾಗಿ, ಅಕ್ಕರೆಯ ಅಮ್ಮನಾಗಿ, ಮಮತೆಯ ಅಜ್ಜಿಯಾಗಿ, ಹಲವು ವ್ಯಕ್ತಿತ್ವವನ್ನು ಹೊಂದಿರುವ ಗೃಹಿಣಿಗೆ ನಿವೃತ್ತಿಯೆಂಬುದೇ ಇಲ್ಲ.

ಅಲ್ಲದೆ ಉದ್ಯೋಗದಿಂದ ನಿವೃತ್ತಿ ಹೊಂದಲು 58/60ವರ್ಷಗಳೆಂದು ನಿಗದಿ ಮಾಡಿರುವುದಾದರೂ ಯಾತಕ್ಕಾಗಿ? ಈ ವಯಸ್ಸನ್ನು ತಲುಪಿದ ಮೇಲೆ ಮನುಷ್ಯನಿಗೆ ಕೆಲಸ ಮಾಡಲು ಶಕ್ತಿ ಇರುವುದಿಲ್ಲವೇ? ಆರೋಗ್ಯದಲ್ಲಿ ಏರು ಪೇರಾಗುವುದೇ? ನಿವೃತ್ತಿ ಎನ್ನುವುದು ಅನಿವಾರ್ಯವೇ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ.

58/60 ವರ್ಷಗಳಾದ ಮೇಲೆ ದೇಹ ಶಕ್ತಿ ಕುಂದುತ್ತದೆ. ಮಾನಸಿಕ ಚೈತನ್ಯ ಕ್ಷೀಣಿಸುತ್ತದೆ. ಮೊದಲಿನಂತೆ ಕೆಲಸ ಮಾಡುವ ದಕ್ಷತೆ ಕಡಿಮೆಯಾಗುತ್ತದೆ. ನೆನಪಿನ ಶಕ್ತಿ ಕುಂಠಿತವಾಗುತ್ತದೆ. ಅದಕ್ಕಾಗಿಯೇ 'ಅರವತ್ತಕ್ಕೆ ಅರಳು ಮರಳು' ಎಂಬ ಗಾದೆಯೇ ಪ್ರಚಲಿತದಲ್ಲಿದೆ.

ಹಾಗಾಗಿ ನಿವೃತ್ತಿಯ ವಯಸ್ಸನ್ನು ನಿಗದಿ ಮಾಡಲು ಮನುಷ್ಯನ ವಯಸ್ಸು – ಆರೋಗ್ಯ ಸಹ ಕಾರಣವಾಗಿದೆ.

ಅಲ್ಲದೆ ಪ್ರಕೃತಿ ನಿಯಮಕ್ಕೆ ಅನುಗುಣವಾಗಿ ಕೂಡ ಹಳೆಯದು ಹೊಸದಕ್ಕೆ ಜಾಗ ಮಾಡಿ ಕೊಡಲೇ ಬೇಕು. ಶರತ್ಕಾಲದಲ್ಲಿ ಹಣ್ಣಾಗಿ ಉದುರುವ ಎಲೆಗಳು ವಸಂತ ಕಾಲ ಆಗಮಿಸುತ್ತಲೇ ಚಿಗುರುವ ಎಲೆಗಳಿಗೆ ಅವಕಾಶ ಮಾಡಿಕೊಡುವುದಿಲ್ಲವೆ? ಈ ಪ್ರಕೃತಿ ನಿಯಮಕ್ಕೆ ಎಲ್ಲರೂ ಬದ್ಧರಾಗಲೇಬೇಕು.

ಹೀಗೆ ನಿವೃತ್ತಿ ಎನ್ನುವುದು ಅನಿವಾರ್ಯ ಎಂದು ಖಚಿತವಾದ ಮೇಲೆ ಅದಕ್ಕಾಗಿ ವೃಥಾ ಚಿಂತಿಸುವುದನ್ನು ಬಿಟ್ಟು ಸಂದರ್ಭಕ್ಕೆ ತಕ್ಕಂತೆ ನಮ್ಮನ್ನು ನಾವೇ ಹೊಸ ಜೀವನಕ್ಕೆ ಹೊಂದಿಕೊಂಡು, ಜೀವನಶೈಲಿಯಲ್ಲಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವುದು ಅಗತ್ಯವೂ ಹೌದು, ಅನಿವಾರ್ಯವೂ ಹೌದು.

ನಿವೃತ್ತಿಯ ದಿನಗಳಲ್ಲಿ ಪ್ರತಿದಿನವೂ ಕೊನೇ ದಿನ ಎಂದು ಸುಖಪಡಿ

ನಿವೃತ್ತಿಯ ನಂತರದ ಸಮಸ್ಯೆಗಳು



ನಿವೃತ್ತಿಯು ಜೀವನದ ಕೊನೆಯಲ್ಲ. ಆದರೆ ಅದು ಹೊಸ ಜೀವನದ ಆರಂಭ. ಜೀವನದಲ್ಲಿ ಅಲ್ಪವಿರಾಮ (Comma,), ಅರ್ಧವಿರಾಮ (Semicolon;) ಇದ್ದೇ ಇರುತ್ತದೆ. ಆದರೆ ಪೂರ್ಣ ವಿರಾಮ (full stop) ಇರುವುದಿಲ್ಲ. ಒಂದರ ಕೊನೆ ಮತ್ತೊಂದರ ಆರಂಭವಾಗುತ್ತದೆ. (End of One thing is commencement of other thing) ಹಾಗೆಯೇ ನಿವೃತ್ತಿಯ ನಂತರ ನಮ್ಮ ಜೀವನದ ಮತ್ತೊಂದು ಅಧ್ಯಾಯದ ಆರಂಭವಾಗುತ್ತದೆ.

ನಿವೃತಿಯ ನಂತರ ಸಾಮಾನ್ಯವಾಗಿ ಎದುರಾಗುವ ಸಮಸ್ಯೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

1. ಮಾನಸಿಕ 2. ದೈಹಿಕ 3.ಆರ್ಥಿಕ

ಈಗಾಗಲೇ ತಿಳಿದುಕೊಂಡಂತೆ ನಿವೃತ್ತಿ ಎನ್ನುತ್ತಲೇ ಆತಂಕ ದುಗುಡ ಕಳವಳಗಳಿಗೆ ಬಹಳಷ್ಟು ಜನ ಒಳಗಾಗುತ್ತಾರೆ. ಕಾರಣ ಅದಕ್ಕೆ ತಕ್ಕ ಹಾಗೆ ಮಾನಸಿಕ ಸಿದ್ಧತೆಯನ್ನು ಮಾಡಿಕೊಳ್ಳದಿರುವುದು ಹಾಗೂ ನಿವೃತ್ತಿಯ ನಂತರದ ಅವಧಿಯನ್ನು ಹೇಗೆ ಬಳಸಿಕೊಳ್ಳಬಹುದು ಎಂಬ ಅರಿವಿಲ್ಲದಿರುವುದು. ಮತ್ತೊಂದು ಕಾರಣವೆಂದರೆ ತಮ್ಮ ಕುಟುಂಬದವರೊಡನೆ ಹಾಗೂ ಸಮಾಜದೊಂದಿಗೆ ಹೇಗೆ ವ್ಯವಹರಿಸಬೇಕು ಎಂಬ ಅರಿವಿಲ್ಲದಿರುವುದು.

ತನ್ನ ಉದ್ಯೋಗದ ಕಾಲದಲ್ಲಿ ದಿನದ ಬಹು ಭಾಗವನ್ನು ಕಳೆಯುತ್ತಿದ್ದ ವ್ಯಕ್ತಿಗೆ ನಿವೃತ್ತಿಯ ನಂತರದ ದೊರಕುವ ಬಿಡುವಿನ ವೇಳೆಯನ್ನು ಕಳೆಯುವುದೇ ದೊಡ್ಡ ಸಮಸ್ಯೆ. ಎಷ್ಟೋ ಜನರ ಮನಃಸ್ಥಿತಿ ನೀರಿನಿಂದ ಹೊರಬಂದ ಮೀನಿನಂತಾಗುತ್ತದೆ. ಈ ಹೊಸ ಬದಲಾವಣೆಗೆ ಹೊಂದಿಕೊಳ್ಳುವುದು ಸ್ವಲ್ಪ ಕಷ್ಟದ ಕೆಲಸವೇ ಸರಿ. ಆದರೆ ಇದಕ್ಕೆ ಪರಿಹಾರವಾದರೂ ಏನು?

ಉದ್ಯೋಗದಲ್ಲಿದ್ದಾಗ ಮಾಡಲಾಗದಿದ್ದ ಎಷ್ಟೋ ಕೆಲಸಗಳನ್ನು ನಿವೃತ್ತಿಯ ನಂತರ ಪೂರೈಸಲು ಪ್ರಯತ್ನಿಸಬಹುದು. ಯಾವ ಕಟ್ಟುಪಾಡಿಗೂ- ಅಂಕೆಗೂ ಒಳಗಾಗದ ಸಂಪೂರ್ಣ ಸ್ವತಂತ್ರ ವ್ಯಕ್ತಿಯಾದ ತಾನು ಈ ಸಮಯದ ಸಂಪೂರ್ಣ ಬಳಕೆಯಲ್ಲಿ ತನಗಿಷ್ಟ ಬಂದಂತೆ ಬಳಸಿಕೊಳ್ಳಬಹುದು. ಉದ್ಯೋಗದ

ಅವಧಿಯಲ್ಲಿದ್ದಂತೆ ಯಾವ ಅಧಿಕಾರಿಯ ಅಧೀನಕ್ಕೂ, ಆಜ್ಞೆಗೂ ಒಳಗಾಗದೆ ಮನಃಪೂರ್ತಿಯಾಗಿ ಸಮಯವನ್ನು ಬಳಸಿಕೊಳ್ಳಬಹುದು. ಹಾಗೆ ಬಳಸಿಕೊಳ್ಳಲು ಇರುವ ದಾರಿ ಹಲವಾರು. ಉತ್ತಮ ಸಾಹಿತ್ಯ, ಕಥೆ, ಕವನ ಓದುವುದು, ಒಳ್ಳೆಯ ಉಪನ್ಯಾಸ, ಸಂಗೀತ ಸಾಹಿತ್ಯ ಮುಂತಾದ ಸಾಂಸ್ಕೃತಿಕ ಹಾಗೂ ಕಲಾತ್ಮಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದು. ಇದರಿಂದ ಸಮಯದ ಸದ್ಬಳಕೆ ಆಗುವುದೇ ಅಲ್ಲದೆ ಜ್ಞಾನಾರ್ಜನೆ ಹಾಗೂ ಮನೋರಂಜನೆ ಒದಗುತ್ತದೆ. ಮೈ ಮನ ಮುದಗೊಳ್ಳುತ್ತದೆ. ಅನವಶ್ಯಕ ಚಿಂತೆಗೆ-ಚಿಂತನೆಗೆ ಮನಸ್ಸು ಒಳಗಾಗಿ ಕಲುಷಿತಗೊಳ್ಳುವುದನ್ನು ತಪ್ಪಿಸಬಹುದು.

ಪ್ರೇಕ್ಷಣೀಯ ಸ್ಥಳಗಳಿಗೆ ಆಗಾಗ್ಗೆ ಪ್ರವಾಸ ಹೋಗುವುದು, ಧಾರ್ಮಿಕ ಪ್ರವಚನ, ಆಸಕ್ತಿಯಿದ್ದರೆ ತೀರ್ಥಯಾತ್ರೆಗಳಲ್ಲಿ ಭಾಗವಹಿಸುವುದು ಮುಂತಾದವುಗಳಲ್ಲಿಯೂ ಸಹ ತೊಡಗಿಸಿಕೊಳ್ಳಬಹುದು.

ಯಾವುದಾದರೂ ಸಮಾಜ ಸೇವಾ ಸಂಸ್ಥೆಗಳಲ್ಲಿ ಸದಸ್ಯರಾಗಿ, ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸುವುದರ ಮುಖೇನ ಸಮಾಜ ಕಲ್ಯಾಣದಲ್ಲಿ ನೆರವಾಗುವುದೇ ಅಲ್ಲದೇ ಉಪಯುಕ್ತ ರೀತಿಯಲ್ಲಿ ವೇಳೆಯನ್ನು ಕಳೆದಂತೆಯೂ ಆಗುತ್ತದೆ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನಂತೂ ನೆನಪಿಟ್ಟುಕೊಳ್ಳಬೇಕು. ಯಾವುದೇ ಸಮಾಜ ಸೇವೆಯನ್ನು ಮಾಡುವಾಗಲೂ ಪದವಿ, ಪ್ರತಿಷ್ಠೆ, ಸನ್ಮಾನಗಳಿಗೆ ಅಪೇಕ್ಷೆ ಪಡದೆ ನಿಃಸ್ವಾರ್ಥವಾಗಿ, ನಿರ್ವಂಚನೆಯಿಂದ ಕೆಲಸ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಆಗಲೇ ಬಯಸಿದ ಆನಂದ ಸಂತೃಪ್ತಿ ಸಾರ್ಥಕತೆ ಸಿಗುವುದು.

ಸಮಯದ ಸದ್ಬಳಕೆಯಲ್ಲಿ ತೊಡಗಬೇಕೆಂದರೆ ಒಂದಲ್ಲ ಎರಡಲ್ಲ ಹಲವಾರು ದಾರಿಗಳಿವೆ. ತಾವು ಉದ್ಯೋಗದಲ್ಲಿದ್ದಾಗ ಗಳಿಸಿದ್ದ ಅನುಭವವನ್ನು ನೈಪುಣ್ಯತೆಯನ್ನು ಇತರರೊಂದಿಗೆ ಹಂಚಿಕೊಳ್ಳಬಹುದು. – ತಮ್ಮ ಅನುಭವ ಸಾರವನ್ನು ಬರಹರೂಪದಲ್ಲಿ ಪ್ರಕಟಿಸಬಹುದು– ಉಪನ್ಯಾಸಗಳನ್ನು ನೀಡ ಬಹುದು. ಸಾಹಿತ್ಯ ರಚನೆಯಲ್ಲಿ ಆಸಕ್ತಿ ಇದ್ದರೆ ಅದರಲ್ಲಿ ತೊಡಗಬಹುದು. ಭಾಷಾ ಪಾಂಡಿತ್ಯವಿದ್ದಲ್ಲಿ ಬೇರೆ ಭಾಷೆಗಳಲ್ಲಿ ಅಡಗಿರುವ ಸಾಹಿತ್ಯವನ್ನು ಒಂದು ಭಾಷೆ ಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡಬಹುದು. ಕಲೆ, ಚಿತ್ರಕಲೆಯಲ್ಲಿ ತೊಡಗುವುದು, ತೋಟಗಾರಿಕೆಯ ಹವ್ಯಾಸವನ್ನು ಹೊಂದುವುದು ಇತ್ಯಾದಿ.

ಈ ಮೇಲಿನ ತರದ ಎಲ್ಲಾ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಅನೇಕ ಮಹನೀಯರನ್ನು ನಾವು ಕಾಣಬಹುದಾಗಿದೆ.

ಕುಟುಂಬದವರೊಡನೆ ಸಾಮರಸ್ಯದ ಬದುಕು



ನಿವೃತ್ತರಾದವರಲ್ಲಿ ಬಹುಪಾಲು ಮಂದಿಗೆ ನಿವೃತ್ತಿಯ ನಂತರ 'ತಾವು ಯಾರಿಗೂ ಬೇಡವಾದವರು ತಮಗೆ ಮನೆಯಲ್ಲಿ ಪ್ರಾಧಾನ್ಯತೆ ಇಲ್ಲ, ನನ್ನನ್ನು ಎಲ್ಲರೂ ಕಡೆಗಾಣಿಸುತ್ತಿದ್ದಾರೆ' ಇತ್ಯಾದಿ ಇತ್ಯಾದಿ ಕೀಳರಿಮೆ ಉಂಟಾಗುತ್ತದೆ. ಹಾಗಾಗಿ ಮನೆಯಲ್ಲಿ ಅಸಹಜವಾಗಿ ವರ್ತಿಸಲು ಆರಂಭಿಸುತ್ತಾರೆ. ಎಲ್ಲರೂ ತಮ್ಮನ್ನು ಗೌರವದಿಂದ ಕಾಣಬೇಕು ಎಂಬ ಅಪೇಕ್ಷೆ ಹೊಂದುತ್ತಾರೆ. ಅಲ್ಲದೆ ಮನೆಯಲ್ಲಿ ಎಲ್ಲರ ಮೇಲೂ ತಮ್ಮ ಅಧಿಕಾರ ದರ್ಪವನ್ನು ಚಲಾಯಿಸಲು ಪ್ರಾರಂಭಿಸುತ್ತಾರೆ. ಇದರಿಂದಾಗಿ ಎಲ್ಲರ ಮನಸ್ಸಿಗೂ ಕಿರಿಕಿರಿಯುಂಟಾಗುತ್ತದೆ. ಅನವಶ್ಯಕ ವೈಮನಸ್ಸು ಮೂಡುತ್ತದೆ.

ಆದ್ದರಿಂದ ಈ ಯಾವ ಭಾವನೆಗಳಿಗೂ ಎಡೆಕೊಡದೆ ಎಲ್ಲರೊಂದಿಗೆ ಶಾಂತಿಯಿಂದ ಸಹನೆಯಿಂದ ಸೌಹಾರ್ದಯುತವಾಗಿ ಬಾಳುವುದನ್ನು ಕಲಿಯಬೇಕು. ಹಿರಿಯರಾಗಿ ಕಿರಿಯರಿಗೆ ಮಾರ್ಗದರ್ಶಕರಾಗಬೇಕು. ಸಂಯಮ ಶೀಲರಾಗಬೇಕು.

ನಿವೃತ್ತ ಜೀವನವು ಸುಖವಾಗಿ ಸಂತೋಷವಾಗಿ ಇರುವುದರಲ್ಲಿ ನಮ್ಮ ಪಾತ್ರವೇ ಪ್ರಧಾನವಾದುದು. ಹಾಗಾಗಿ ಈ ಕೆಳಗಿನ ಹಲವು ಸೂತ್ರಗಳನ್ನು ಅಳವಡಿಸಿಕೊಂಡರೆ ಸ್ವಲ್ಪ ಮಟ್ಟಿಗಾದರೂ ಸಮಾಧಾನಕರವಾಗಿ ಬಾಳಬಹುದು.

1. ಕುಟುಂಬದಲ್ಲಾಗಲೀ, ಸಮಾಜದಲ್ಲಾಗಲೀ ಅಧಿಕಾರ ಚಲಾಯಿಸಲು ಹೋಗಬಾರದು.
2. ಮತ್ತೊಬ್ಬರ ವಿಷಯದಲ್ಲಿ ತಲೆ ಹಾಕಬಾರದು ಅಥವಾ ಅನಗತ್ಯ ಆಸಕ್ತಿಯನ್ನು ತೋರಿಸಬಾರದು.
3. ವಯಸ್ಸಿನ ಹಿರಿತನದಿಂದ ಪ್ರಾಧಾನ್ಯತೆಯನ್ನು ಅಪೇಕ್ಷಿಸಬಾರದು.
4. ಮತ್ತೊಬ್ಬರಿಂದ ಸಹಾನುಭೂತಿಯನ್ನು ಅಪೇಕ್ಷಿಸಬಾರದು.
5. ತಮ್ಮ ಅಧಿಕಾರವಧಿಯ ವೈಭವವನ್ನು ಹೇಳಿಕೊಳ್ಳಬಾರದು (ಕೊಚ್ಚಿ ಕೊಳ್ಳಬಾರದು)
6. ತಮಗೆ ಆಸಕ್ತಿ ಇರುವ ವಿಷಯದಲ್ಲಿ ಹೆಚ್ಚು ಸಮಯ ಕಳೆಯಬಹುದು.

ಉದಾ : ಪತ್ರಿಕೆ ಓದುವುದು, ಪುಸ್ತಕ ಓದುವುದು, ಪದಬಂಧ ಬಿಡಿಸುವುದು ಹಾಗೂ ಇನ್ನಿತರ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದು ಇತ್ಯಾದಿ.

7. ಈಗಿನ ಯುವ ಜನಾಂಗ ಎಲ್ಲ ರೀತಿಯಿಂದಲೂ ಹಿಂದಿನ (ನಮ್ಮ) ಕಾಲದವರಿಗಿಂತ –ವಿದ್ಯೆ, ತಿಳುವಳಿಕೆ, ಆರ್ಥಿಕಸ್ಥಿತಿಯಲ್ಲಿ ಪ್ರಗತಿ ಹೊಂದಿದವರಾಗಿದ್ದಾರೆ. ತಮ್ಮ ನಿರ್ಧಾರವನ್ನು ತಾವು ಸ್ವತಂತ್ರವಾಗಿ

ತೆಗೆದುಕೊಳ್ಳುವ ಸಾಮರ್ಥ್ಯ ಅವರಿಗಿದೆ ಹಾಗಾಗಿ ಅನವಶ್ಯಕವಾಗಿ ಅವರ ವಿಚಾರಗಳಲ್ಲಿ ತಲೆಹಾಕಬಾರದು. ಮೂಗು ತೂರಿಸಬಾರದು. ಅವರು ಕೇಳಿದಾಗ ಮಾತ್ರ ಸಲಹೆ ನೀಡಬಹುದು.

8. ಪಿನಾಕಾಲಣ ಆತಂಕಕ್ಕೆ ಒಳಗಾಗಬಾರದು. **"ಆತಂಕವು ಅತಿಯಾದಾಗ ಅಂತಕನು ಹತ್ತಿರ ಬರುತ್ತಾನೆ"** ಎಂಬ ನಾಣ್ನುಡಿ ಸದಾ ನೆನಪಿನಲ್ಲಿರಲಿ.

ಜೀವನದಲ್ಲಿ ಎಂದಿಗೂ ಉತ್ಸಾಹವನ್ನು ಕಳೆದುಕೊಳ್ಳಬಾರದು. ಉದಾಸೀನರಾಗಬಾರದು. ಲವಲವಿಕೆಯಿಂದ ಚೈತನ್ಯ ಪೂರ್ಣರಾಗಿರಬೇಕು. ಬಂಧು ಮಿತ್ರರೊಡನೆ, ಸ್ನೇಹಿತರೊಡನೆ ಆತ್ಮೀಯತೆಯಿಂದ ಸ್ನೇಹಪೂರ್ಣ ವಾಗಿರಬೇಕು.

"ವಯಸ್ಸಾಯಿತು ಹೇಗಿದ್ದರೇನು?' ಎಂಬ ಮನೋಭಾವನೆಯನ್ನು ದೂರತಳ್ಳಬೇಕು. ತಾತ್ಸಾರ ಭಾವನೆಯನ್ನು ತಾಳದೆ ಒಳ್ಳೆಯ ರೀತಿಯಲ್ಲಿ ದಿರಸನ್ನು (ಬಟ್ಟೆಯನ್ನು) ಹಾಕುವುದು, ಆಕರ್ಷಕವಾಗಿ ಕಾಣುವಂತೆ ಇರುವುದು ಬಹು ಮುಖ್ಯ. ಇದರಿಂದ ಮೈಮನಗಳೆರಡೂ ಉತ್ಸಾಹದಿಂದ ಕೂಡಿದ್ದು ಇತರರು ನಿಮ್ಮ ಸಹವಾಸಕ್ಕೆ ಅಪೇಕ್ಷೆ ಪಡುವಂತೆ ಆಗುತ್ತದೆ.

ನನಗೆ ತಿಳಿದಿರುವ ಒಬ್ಬ ಪರಿಚಿತ ವ್ಯಕ್ತಿಯಿದ್ದಾರೆ. ಒಂದು ಅಂದಾಜಿನಂತೆ ಅವರ ವಯಸ್ಸು ಕನಿಷ್ಠ ಎಪ್ಪತ್ತಾದರೂ ಆಗಿದೆ. ಆದರೆ ಅವರ ಉತ್ಸಾಹ, ಆರೋಗ್ಯ ನೋಡಿದರೆ ಇಪ್ಪತ್ತು ವರ್ಷದವರೂ ಸಹ ನಾಚಿಕೊಳ್ಳಬೇಕು. ಅವರ ಆರೋಗ್ಯದ ಗುಟ್ಟನ್ನು ಕೇಳಿದರೆ ಅವರೆನ್ನುತ್ತಾರೆ : "ವಯಸ್ಸಾಯಿತು ಎಂದು ಕೊರಗಿದರೆ ಬಂದ ಭಾಗ್ಯವಾದರೂ ಏನು? ಪುನಃ ನನ್ನ ವಯಸ್ಸು ವಾಪಸ್ಸು ಬರುತ್ತದೆಯೇ? ಈಗಿರುವ ಪರಿಸ್ಥಿತಿಗೆ ನಾನು ಹೊಂದಿಕೊಳ್ಳಲೇಬೇಕು. ಹಾಗಾಗಿ ನಾನು ವಯಸ್ಸಾಗಿದೆ ಎಂಬುದನ್ನೇ ಮರೆತಿದ್ದೇನೆ. ಇರುವಷ್ಟು ದಿನ ಸಂತೋಷವಾಗಿ ಉತ್ಸಾಹದಿಂದ ಜೀವನದಲ್ಲಿ ಆಸಕ್ತಿಯಿಂದ ಬದುಕ ಬೇಕೆಂದಿದ್ದೇನೆ. ಅದಕ್ಕಾಗಿ ನಾನು ವಯಸ್ಸನ್ನು ಮರೆತು ಮನೆಯಲ್ಲಿರುವ ಮಕ್ಕಳೊಂದಿಗೆ ಆಟವಾಡುತ್ತೇನೆ. ಮಕ್ಕಳೊಂದಿಗೆ ಮಗುವಾಗಿ ಬೆರೆಯುತ್ತೇನೆ. ತಮಾಷೆಯ ಮಾತು, ಹಾಡುಗಳಿಂದ ಅವರೊಂದಿಗೆ ನಲಿಯುತ್ತೇನೆ. ಬೆಳಗ್ಗೆ ಸಂಜೆ ಒಂದು ಸ್ವಲ್ಪ ಹೊತ್ತು ನಡೆಯುತ್ತೇನೆ. ನನಗೆ ಯಾವುದೇ ಕಾಯಿಲೆ ಇಲ್ಲವೆಂದೇನೂ ಇಲ್ಲ. ಆದರೆ ಅದರೊಂದಿಗೆ ಬಾಳುವುದನ್ನು ಕಲಿತಿದ್ದೇನೆ. ಅದರ ಬಗ್ಗೆ ಜಾಸ್ತಿ ಯೋಚನೆ ಮಾಡದೆ ವೈದ್ಯರು ನೀಡಿರುವ ಔಷಧವನ್ನು ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳುತ್ತಿದ್ದೇನೆ."

ಅವರ ಮಾತು ಎಷ್ಟೊಂದು ನಿಜ! ಇಲ್ಲದ್ದಕ್ಕಾಗಿ ಯೋಚನೆ ಮಾಡುವುದನ್ನು ಬಿಟ್ಟು ಇರುವುದನ್ನು ಅನುಭವಿಸುವುದರಲ್ಲಿ ಎಷ್ಟೊಂದು ಸುಖವಿದೆ?

ಆರೋಗ್ಯವಂತರಾಗಿ ಬಾಳುವುದು ಹೇಗೆ ?



ನಿವೃತ್ತ ಜೀವನದಲ್ಲಿ ಪ್ರತಿಯೊಬ್ಬರನ್ನೂ ಕಾಡುವುದು ಎಂದರೆ ಆರೋಗ್ಯ ಸಮಸ್ಯೆ.

ಒಬ್ಬರನ್ನೊಬ್ಬರು ಭೇಟಿ ಮಾಡಿದಾಗ ಅಥವಾ ವಿಚಾರಿಸಿದಾಗ ಮೊದಲು ಕೇಳುವ ಪ್ರಶ್ನೆಯೆಂದರೆ "ಆರೋಗ್ಯವೇ?" ಹಾಗಾಗಿ ನಮ್ಮ ಜೀವನದಲ್ಲಿ ಮೊದಲು ಆದ್ಯತೆ ಇರುವುದು ಆರೋಗ್ಯಕ್ಕೆ. ಮಾನವನ ಜೀವನದಲ್ಲಿ ಸಿಗುವ ಎಲ್ಲಾ ಭಾಗ್ಯಗಳಲ್ಲಿಯೂ ಅತಿಶಯವಾದುದು ಆರೋಗ್ಯ ಭಾಗ್ಯ. ಅದಕ್ಕಾಗಿಯೇ ಹಿರಿಯರು ಆಶೀರ್ವಾದ ಮಾಡುವಾಗ / ಶುಭಹಾರೈಸುವಾಗ "ಆರೋಗ್ಯವಾಗಿರು, ಧೀರ್ಘಾಯುಷಿಯಾಗು" ಎಂದು ಹರಸುತ್ತಾರೆ.

ಜೀವನದಲ್ಲಿ ಮನುಷ್ಯನು ಹಣಕಾಸಿನ ವ್ಯವಸ್ಥೆಗಾಗಿ ಎಷ್ಟು ಎಚ್ಚರಿಕೆಯುನ್ನು ತೆಗೆದುಕೊಳ್ಳುತ್ತಾನೋ, ಎಷ್ಟು ಯೋಜನೆಗಳನ್ನು ಮಾಡುತ್ತಾನೋ ಅಷ್ಟೇ ಎಚ್ಚರಿಕೆಯನ್ನು, ಯೋಜನೆಗಳನ್ನು ತನ್ನ ಆರೋಗ್ಯವನ್ನು ಹೊಂದುವದರತ್ತಲೂ ಕಾಪಾಡಿಕೊಳ್ಳುವತ್ತಲೂ ಮಾಡಿಕೊಳ್ಳಲೇ ಬೇಕು. ಎಷ್ಟೇ ಹಣಕಾಸಿನ ಸಂಪತ್ತು ಇದ್ದರೂ, ಆರೋಗ್ಯವಿಲ್ಲದಿದ್ದರೆ ಅದನ್ನು ಅನುಭವಿಸಲು ಆಗುವುದಿಲ್ಲ.

ಹದಿಹರೆಯವನ್ನು ದಾಟಿ ವಯಸ್ಸು ಐವತ್ತು ಸಮೀಪಿಸುತ್ತಿದ್ದಂತೆ ವಯಸ್ಸಿಗೆ ಸಹಜವಾದ ಹಲವಾರು ಕಾಯಿಲೆಗಳು ತಾವಿದ್ದೇವೆ ಎಂದು ಸೂಚನೆಯನ್ನು ಕೊಡುತ್ತವೆ. ನಲವತ್ತು ದಾಟುತ್ತಲೇ ಕಣ್ಣು ಕನ್ನಡಕ ಬಯಸುತ್ತದೆ. ಚಾಲೀಸ್ ಆಗಿದೆಯೆಂದು ಸೂಚಿಸುತ್ತದೆ. ಸಕ್ಕರೆ ಕಾಯಿಲೆ, ರಕ್ತದೊತ್ತಡ, ಹೃದಯದ ಬೇನೆಗಳು ನಮ್ಮ ದೇಹದ ಮೇಲೆ ತಮ್ಮ ಆಸ್ತಿತ್ವವನ್ನು ಸಾರುತ್ತವೆ.

ನಮಗೆ ಬರುವ ಕಾಯಿಲೆಗಳನ್ನು ನಮ್ಮ ಮನೆಗೆ ಬರುವ ಅತಿಥಿಗಳಿಗೆ ಹೋಲಿಸಬಹುದು. ಕೆಲವು ಅತಿಥಿಗಳು ಬಂದರೆ ಹಾಗೊಮ್ಮೆ ಬಂದು ಒಂದೆರಡು ದಿನ ಇದ್ದು ವಾಪಸ್ಸು ಹೋಗುತ್ತಾರೆ. ಆದರೆ ಮತ್ತೆ ಕೆಲವರು ಬಂದರೆ ಭದ್ರವಾಗಿ ತಳ ಊರಿ ನಾವು ಏನಾದರೂ ನೆಪ ಹೇಳಿ ಸಾಗಹಾಕುವವರೆಗೆ ಜಪ್ಪಯ್ಯ ಎಂದು ಕುಳಿತು ಬಿಡುತ್ತಾರೆ. ಹಾಗೆಯೇ ನಮ್ಮನ್ನು ಆಕ್ರಮಿಸುವ ಕಾಯಿಲೆಗಳನ್ನು ಸಹ ನಾವು ಎರಡು ಬಗೆಯಾಗಿ ವಿಂಗಡಿಸಬಹುದು. ಕೆಲವೊಮ್ಮೆ ಬದಲಾಗುವ ಹವಾಮಾನಕ್ಕೆ ತಕ್ಕಂತೆ ಬರುವ ನೆಗಡಿ, ಕೆಮ್ಮು ಜ್ವರ ಮುಂತಾದ ಕಾಯಿಲೆಗಳಿಗೆ ಸೂಕ್ತ ಚಿಕಿತ್ಸೆ ನೀಡಿದರೆ ಒಂದೆರಡು ದಿನದಲ್ಲಿಯೇ ಅವು ವಾಸಿಯಾಗಿ ನಮ್ಮನ್ನು

ಬಿಟ್ಟು ಹೋಗುತ್ತವೆ. ಆದರೆ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಹೃದಯದ ಬೇನೆಗಳು ಮುಂತಾದವುಗಳು ಬಂದರೆ ಅವುಗಳ ಆರೈಕೆಗಾಗಿ ಸಾಕಷ್ಟು ಔಷಧಿಗಳನ್ನು ತೆಗೆದುಕೊಂಡರೂ ಅವು ಶಾಶ್ವತವಾಗಿ ಬಿಟ್ಟು ಹೋಗುವುದೇ ಇಲ್ಲ. ಎಷ್ಟೇ ಆರೈಕೆ ಮಾಡಲಿ ಎಷ್ಟೇ ಖರ್ಚು ಮಾಡಲಿ ಅದರಿಂದ ಬಿಡಿಸಿಕೊಳ್ಳಲು ಕಷ್ಟವಾಗುತ್ತೆ. ಕೊನೆಯಲ್ಲಿ ನಾವೇ ಅದಕ್ಕೆ ಶರಣಾಗಿ ಅದರೊಂದಿಗೆ ಹೊಂದಿಕೊಳ್ಳುವ ಹಾಗೆ ಆಗುತ್ತದೆ.

ಹಾಗಾಗಿ ಜೀವನದಲ್ಲಿ ಆರೋಗ್ಯವಂತರಾಗಿ ಬಾಳಬೇಕಾದರೆ ಕೆಲವೊಂದು ಪದ್ಧತಿಗಳನ್ನು ಅನುಸರಿಸಬೇಕಾಗುತ್ತದೆ. ಆಹಾರ ವಿಹಾರಗಳಲ್ಲಿ, ಆಚಾರ ವಿಚಾರಗಳಲ್ಲಿ ಶಿಸ್ತು ಸಂಯಮವನ್ನು ಆಚರಿಸಬೇಕಾಗುತ್ತದೆ. ಕೆಲವನ್ನು ವರ್ಜಿಸಬೇಕಾಗುತ್ತದೆ. ಕೆಲವನ್ನು ಅನುಸರಿಸಬೇಕಾಗುತ್ತದೆ.

ಆರೋಗ್ಯ ಸಾಧನೆಗೆ ಕೆಲವೊಂದು ಪದ್ಧತಿಗಳನ್ನು/ ಸೂತ್ರಗಳನ್ನು ಅನುಸರಿಸಿದರೆ, ಪೂರ್ತಿಯಾಗಿ ಅಲ್ಲದಿದ್ದರೂ ಸ್ವಲ್ಪ ಮಟ್ಟಿಗಾದರೂ ನಮ್ಮ ಆರೋಗ್ಯವನ್ನು ಹಿಡಿತದಲ್ಲಿಟ್ಟುಕೊಳ್ಳಬಹುದು.

ಬೆಳಗ್ಗೆ ಬೇಗ ಎದ್ದು ವಾಕಿಂಗ್ ಮಾಡುವ ಅಭ್ಯಾಸ ಜೀವನವು ಕ್ರಿಯಾಶೀಲವಾಗಿರಲು ಸಿದ್ಧೌಷಧಿ ಎಂದರೆ ತಪ್ಪಾಗಲಾರದು. ಬೆಳಗಿನ ಅರ್ಧಮುಕ್ಕಾಲುಗಂಟೆಯ ಜೋರಾದ ನಡಿಗೆಯಿಂದ ಹೃದಯಕ್ಕೆ ಹೆಚ್ಚು ಆಮ್ಲಜನಕ ಪೂರೈಕೆಯಾಗಿ ರಕ್ತ ಸಂಚಾರ ತೀವ್ರವಾಗುತ್ತದೆ ಶುದ್ಧವಾದ ಕಲುಷಿತವಿಲ್ಲದ ಮುಂಜಾನೆಯ ಹಿತಕರವಾದ ಗಾಳಿ ಮನಸ್ಸಿಗೆ ಮುದ ನೀಡುತ್ತದೆ. ಮನಸ್ಸಿಗೆ ಶಾಂತಿ ಲಭಿಸುತ್ತದೆ. ಪ್ರತಿನಿತ್ಯದ ಈ ನಡಿಗೆಯ ಅಭ್ಯಾಸದಿಂದ ಆದಷ್ಟು ಮಟ್ಟಿಗಿನ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಆದಷ್ಟು ಮಿತವಾಗಿ ಔಷಧಿಯಿಂದ ಹಣದ ಉಳಿತಾಯವನ್ನೂ ಮಾಡಬಹುದು.

ನಿಯಮಿತವಾದ ನಡಿಗೆಯಿಂದ ಉಂಟಾಗುವ ಲಾಭ :

- ಶರೀರದಲ್ಲಿನ ಕಲ್ಮಶಗಳನ್ನು ಹೊರಹಾಕಲು ನೆರವಾಗುತ್ತದೆ. ಹೃದಯಕ್ಕೆ ವ್ಯಾಯಾಮ ದೊರೆತು ರಕ್ತನಾಳಗಳು ಪುಷ್ಟಿಗೊಂಡು ರಕ್ತ ಸಂಚಾರ ಸರಾಗವಾಗಿ ನಡೆಯುವುದು.
- ಜೀವಕೋಶಗಳ ಕ್ರಿಯೆಗಳು ಹೆಚ್ಚಿ ಎಲ್ಲ ಅಂಗಾಂಗಗಳು ಕ್ರಿಯಾಶೀಲವಾಗುತ್ತವೆ.
- ಮೂತ್ರಪಿಂಡಗಳಿಗೆ ರಕ್ತ ಸರಬರಾಜಾಗಿ ವಿಸರ್ಜನ ಕ್ರಿಯೆಗೆ ಅನುಕೂಲ ವಾಗುತ್ತದೆ.

- ನಡಿಗೆಯು ಖರ್ಚಿಲ್ಲದ ಆಯಾಸವಿಲ್ಲದ, ಸುಲಭ ಸುರಕ್ಷಿತ ವ್ಯಾಯಾಮ
- ನಡಿಗೆಯಿಂದ ಹೃದಯದ ಕಾರ್ಯ ಸಮರ್ಥ್ಯ ಹೆಚ್ಚುವುದು.
- ಹೃದಯಾಘಾತ, ಪಾರ್ಶ್ವವಾಯು, ಅತಿ ರಕ್ತದೊತ್ತಡ ಮುಂತಾದ ಕಾಯಿಲೆಗಳನ್ನು ತಡೆಯಬಹುದು.
- ಮಧುಮೇಹ ರೋಗಿಗಳಗಂತೂ ಇದು ಅತ್ಯಂತ ಒಳ್ಳೆಯ ವ್ಯಾಯಾಮ.
- ಮಾಂಸಖಂಡಗಳ ಚಟುವಟಿಕೆ ಹೆಚ್ಚಾಗುವುದರಿಂದ ಅವು ಸದೃಢಗೊಳ್ಳುತ್ತವೆ.
- ಬೊಜ್ಜು ಮೈ ಹೊಂದಿರುವವರಿಗೆ ಬೊಜ್ಜು ಕರಗಿಸಲು ನಡಿಗೆಯು ಅತ್ಯಂತ ಸಹಕಾರಿ ಹಾಗೂ ಸುಲಭಮಾರ್ಗ.
- ಹಸಿವು ಚೆನ್ನಾಗಿ ಆಗುತ್ತದೆ. ಹಾಗಾಗಿ ತಿನ್ನುವ ಆಹಾರ ರುಚಿಸುತ್ತದೆ.
- ಮಾನಸಿಕ ಒತ್ತಡ ಕಡಿಮೆಯಾಗುತ್ತದೆ. ಮನಸ್ಸು ನೆಮ್ಮದಿಯಿಂದಿರಲು ಸಹಾಯವಾಗುತ್ತದೆ.
- ಚೆನ್ನಾಗಿ ನಿದ್ರೆ ಬರುತ್ತದೆ.

ನಡಿಗೆಯಲ್ಲಿ ಅನುಸರಿಸಬೇಕಾದ ನಿಯಮಗಳು :

- ಪ್ರತಿನಿತ್ಯ ನಿಯಮಿತವಾಗಿ ಎರಡರಿಂದ ಮೂರು ಕಿಲೋಮೀಟರ್ ನಡೆಯುವುದು ಒಂದು ಉತ್ತಮ ಅಭ್ಯಾಸ.
- ನಡಿಗೆಗೆ ವಯಸ್ಸಿನ ಮಿತಿ ಇಲ್ಲ. ಯಾವುದೇ ವಯಸ್ಸಿನವರಿಗಾದರೂ ಇದು ಒಳ್ಳೆಯ ವ್ಯಾಯಾಮ. ಆದರೆ ವಯಸ್ಸಿಗನುಗುಣವಾಗಿ ನಡೆಯುವ ದೂರ ಮತ್ತು ವೇಗದ ಮಿತಿಯನ್ನು ಹೊಂದಿಸಿಕೊಳ್ಳಬೇಕು.
- ವಾರದಲ್ಲಿ ಐದುದಿನವಾದರೂ ನಡೆಯುವ ಅಭ್ಯಾಸ ರೂಢಿಸಿಕೊಳ್ಳಬೇಕು.
- ಸಾಮಾನ್ಯವಾಗಿ ಬೆಳಗಿನ ವೇಳೆ ಮತ್ತು ಸಂಜೆಯ ವೇಳೆಯಲ್ಲಿ ನಡೆಯುವುದು ಒಳ್ಳೆಯದು. ಉದ್ಯಾನವನದಲ್ಲಿನ ನಡಿಗೆ ಸೂಕ್ತ. ಕಾರಣ ಅಲ್ಲಿ ದೊರಕುವ ಶುಧ್ಧಗಾಳಿ ಮತ್ತು ಯಾವುದೇ ವಾಹನದ ಓಡಾಟವಿರುವುದಿಲ್ಲ.
- ನಡೆಯುವಾಗ ಸುಸ್ತಾದ ಸಂದರ್ಭದಲ್ಲಿ ಆಯಾಸವಾದಾಗ ಅಥವಾ ಕಾಯಿಲೆ ಕಸಾಲೆಗಳ ಸಂದರ್ಭದಲ್ಲಿ ವೈದ್ಯರ ಸಲಹೆ ಪಡೆಯಬೇಕು.

ನಡಿಗೆಯೊಂದಿಗೆ ಒಂದಿಷ್ಟು ಹರಟೆಯೂ ಇರಲಿ

ನಡಿಗೆಯ ಜೊತೆಗೆ ಸ್ವಲ್ಪ ಮಟ್ಟಿಗೆ ಹರಟೆಯೂ ಸಹ ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಬಲ್ಲದು.

ಅರ್ಧಮುಕ್ಕಾಲು ಗಂಟೆಯ ನಡಿಗೆ

ನಂತರದ ಒಂದಷ್ಟು ಹರಟೆ

ಕರೆದೊಯ್ಯುವುದು ಆರೋಗ್ಯದ ಕಡೆಗೆ

ಹರಟೆಯ ವಿಷಯ ಯಾವುದಾದರೂ ಇರಬಹುದು. ಸಮ ವಯಸ್ಕರೊಡನೆ, ಸಮಾನ ಮನಸ್ಕರೊಡನೆ ಆಡುವ ಮಾತು ಚರ್ಚಿಸುವ ವಿಷಯ ದುಗುಡ ದುಮ್ಮಾನಗಳಿಂದ ಕ್ಷೋಭೆಗೊಂಡ ಮನಸ್ಸಿಗೆ ನೆಮ್ಮದಿಯನ್ನು ತರಬಲ್ಲದು. ಮನೆಯವರೊಂದಿಗೆ ಹೇಳಿಕೊಳ್ಳಲಾಗದ, ಚರ್ಚಿಸಲಾಗದ ಎಷ್ಟೋ ಘಟನೆಗಳನ್ನು ಸ್ನೇಹಿತರೊಂದಿಗೆ ಹೇಳಿಕೊಂಡಾಗ ಮನಸ್ಸಿನ ಭಾರ ಕಡಿಮೆಯಾಗುತ್ತದೆ.

ಪಾರ್ಕ್‌ಗಳಲ್ಲಿ ವಿಹಾರ ಕೇಂದ್ರಗಳಲ್ಲಿ ಅಡ್ಡಾಡುವ ಎಷ್ಟೋಜನ ಹರಟೆಗಳಲ್ಲಿ ಮಗ್ನರಾಗಿರುವುದನ್ನು ಕಾಣಬಹುದು. ರಾಜಕೀಯ, ಕ್ರೀಡೆ, ನಾಟಕ, ಸಿನಿಮಾ, ಸಂಗೀತ ಹೀಗೆ ಎಷ್ಟೋ ವಿಷಯಗಳ ಮೇಲೆ ಪರಿಣಿತರು ತಾವೆಂಬಂತೆ ವರ್ತಿಸಿರುತ್ತಾರೆ ಮಧ್ಯೆ ಮಧ್ಯೆ ತಮ್ಮ ಸ್ವಂತ ಅನುಭವಗಳನ್ನೂ ಮೆಲಕು ಹಾಕುತ್ತಿರುತ್ತಾರೆ. ಈ ಎಲ್ಲ ರೀತಿಯ ಮಾತುಕತೆ ಅವರ ವಿಚಾರ ಶಕ್ತಿ ಹೊರ ಹೊಮ್ಮಲು ಸಹ ಕಾರಣವಾಗುತ್ತದೆ.

ಮತ್ತೊಂದು ವರ್ಗದ ಜನಗಳ ಗುಂಪನ್ನು ಸಹ ಇಂತಹ ಸ್ಥಳಗಳಲ್ಲಿ ಕಾಣಬಹುದು. ಅವರಲ್ಲಿ ಕೆಲವರು ತಮ್ಮ ಮನೆಯಲ್ಲಿ ನಡೆದಿರಬಹುದಾದ ಸಣ್ಣ ಪುಟ್ಟ ಘಟನೆಗಳು, ಅವುಗಳಿಂದ ಉದ್ಭವಿಸಿದ ವೈಮನಸ್ಸು, ತಮ್ಮನ್ನು ಕಡೆಗಾಣಿಸುತ್ತಿರುವ ಮಕ್ಕಳು ಸೊಸೆಯಂದಿರು, ಹಾಗೂ ಇನ್ನಿತರ ಘಟನೆಗಳ ಬಗ್ಗೆಯೂ ಹೇಳಿಕೊಂಡು ದುಃಖ ಪಡುವುದುಂಟು. ಅವರ ಈ ಘಟನೆಗಳಲ್ಲಿ ತಮ್ಮ ಪಾತ್ರವೂ ತಕ್ಕಮಟ್ಟಿಗಿರುತ್ತದೆ ಎಂಬುದನ್ನು ಮರೆತಿರುತ್ತಾರೆ. ಈ ಎಲ್ಲದಕ್ಕೆ ತಮ್ಮ ಮನೆಯವರನ್ನೇ ಹೊಣೆಗಾರರನ್ನಾಗಿ ಮಾಡಿ ತಮ್ಮ ಮನದ ಬೇಗುದಿಯನ್ನು ತೋಡಿಕೊಳ್ಳುತ್ತಾರೆ.

ತಮ್ಮ ಸಂಕಟವನ್ನು ಇನ್ನೊಬ್ಬರ ಬಳಿ ಹೇಳಿಕೊಳ್ಳುವುದರಿಂದ ಅವರಲ್ಲಿ ಹುದುಗಿದ್ದ ಸಂಕಟದ ತೀವ್ರತೆ ಕಡಮೆಯಾಗಬಹುದು. ಅಲ್ಲದೆ ಸಂಗಡಿಗರಿಂದ

ಒಂದೆರಡು ಸಾಂತ್ವನದ ಮಾತು ಪರಿಹಾರ ದೊರಕಬಹುದು. ಮನಸ್ಸು ನಿರಾಳವಾಗಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನೋವು ಸಂಕಟಗಳನ್ನು ಕುಟುಂಬದಲ್ಲಿ ನಡೆದಿರಬಹುದಾದ ವೈಮನಸ್ಸುಗಳನ್ನು, ಕಹಿ ಘಟನೆಗಳನ್ನು ಕೇವಲ ಆಪ್ತರೊಂದಿಗೆ ಹೇಳಿಕೊಳ್ಳಬಹುದೇ ಹೊರತು ಸಿಕ್ಕ ಸಿಕ್ಕವರೊಡನೆ ಹೇಳಿಕೊಳ್ಳಬಾರದು.

ಸಂಸಾರಗುಟ್ಟು - ವ್ಯಾಧಿರಟ್ಟು ಎಂಬ ಗಾದೆಯೇ ಇದೆಯಲ್ಲವೇ? ಸಂಸಾರದ ಗುಟ್ಟು ಬೇರೆಯವರಿಗೆ ರಟ್ಟಾದಾಗ ನಮ್ಮ ಮಾನ ಕುಟುಂಬದ ಗೌರವ ನಗೆ ಪಾಟಲಿಗೆ ಈಡಾಗುತ್ತದೆ.

ಆರೋಗ್ಯ ಮತ್ತು ಆಹಾರ ಸೇವನೆ



ಆಹಾರ ಸೇವನೆ ಆರೋಗ್ಯ ಕಾಪಾಡಿ ಕೊಳ್ಳುವುದರಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ವಯಸ್ಸಿನಲ್ಲಿ ಕಲ್ಲು ತಿಂದೂ ಅರಗಿಸಿಕೊಳ್ಳುವ ಸಾಮರ್ಥ್ಯವಿದ್ದವರೂ ವಯಸ್ಸು ಮಾಗಿದಂತೆ ಆಹಾರದಲ್ಲಿ ಕೆಲವೊಂದು ನೀತಿ ನಿಯಮಗಳನ್ನು ಅನುಸರಿಸಲೇ ಬೇಕಾಗುತ್ತದೆ. "**ಊಟಬಲ್ಲವನಿಗೆ ರೋಗವಿಲ್ಲ - ಮಾತು ಬಲ್ಲವನಿಗೆ ಜಗಳವಿಲ್ಲ**" ಎಂಬ ನಾಣ್ನುಡಿಯಂತೆ ಯಾರು ಆಹಾರದ ಬಗ್ಗೆ ಎಚ್ಚರವಹಿಸಿ ಸೇವಿಸುವರೋ ಅಂತಹವರನ್ನು ಯಾವ ರೋಗವೂ ಕಾಡುವುದಿಲ್ಲ.

ಆಹಾರದ ನಿಯಮಗಳಲ್ಲಿ ಉಲ್ಲೇಖಿಸಿರುವಂತೆ ಹಸಿವಾದಾಗ ಮಾತ್ರ ಊಟ ಮಾಡುವುದು ಉಚಿತ. **ಸಾತ್ವಿಕ ಆಹಾರ - ಸಾತ್ವಿಕ ವಿಚಾರ ಉತ್ತಮ ಆರೋಗ್ಯದ ಆಧಾರ.**

No Hurry, No Worry Be Merry ಮೇಲಿನ ಮೂರು ಮಾತು ಗಳಲ್ಲಿ ನಂಬಿಕೆ ಇಟ್ಟು ಪ್ರತಿ ದಿನವೂ ಎಚ್ಚರಿಕೆಯಿಂದ ಅನುಸರಿಸಿದರೆ ಯಾವ ವಿಧವಾದ Tension ಇಲ್ಲದೆ, ಕೋಪ ಇಲ್ಲದೆ, ಬಳಲಿಕೆ ಇಲ್ಲದೆ ಇರಬಹುದು.

Hurry ಇಲ್ಲದಿದ್ದರೆ Worry ಮರೆತರೆ ತಾನೇ ತಾನಾಗಿ ಮನಸ್ಸಿನಲ್ಲಿ Merry ಮೆರೆಯುತ್ತದೆ.

ಹಾಗಾಗಿ ಉತ್ತಮ ಆರೋಗ್ಯವಂತರಾಗಿ ಬಾಳಲು ಈ ಸೂತ್ರದ ಅನುಸರಣೆ ಮಾಡುವುದು ಒಳ್ಳೆಯದು.

ಹಿತಮಿತವಾಗಿ ಆಹಾರವನ್ನು ಸೇವಿಸುವ ಪದ್ಧತಿಯನ್ನು ಮಾಡಿಸಿಕೊಂಡವರಿಗೆ ಅನಾರೋಗ್ಯದ ಬಾಧೆ ಕಾಡುವುದಿಲ್ಲ. ಆಹಾರವನ್ನು ಸೇವಿಸುವ ಬಗ್ಗೆ ಅಯುರ್ವೇದ ಶಾಸ್ತ್ರದಲ್ಲಿನ ಒಂದು ವಾಕ್ಯ ಹೀಗಿದೆ : **"ಹಿತ ಭುಕ್ತ ಋತು ಭುಕ್ತ ಮಿತ ಭುಕ್ತ"** ಅಂದರೆ ದೇಹಕ್ಕೆ ಹಿತವಾದುದನ್ನು ತಿನ್ನು - ಅಯಾ ಋತುಗಳಲ್ಲಿ ಬೆಳೆಯುವ ಪದಾರ್ಥಗಳನ್ನು ತಿನ್ನು - ಹಾಗೆಯೇ ಬೇಕಾದಷ್ಟನ್ನು ಮಾತ್ರ ತಿನ್ನು ಎಂದು.

ಅಂತೆಯೇ ಆರೋಗ್ಯಕರವಲ್ಲದ ಆಹಾರವನ್ನು ವರ್ಜಿಸಬೇಕು. ಜಿಡ್ಡಿನ ಪದಾರ್ಥ, ಸಕ್ಕರೆ, ಮಾಂಸಾಹಾರ ಸಾಧ್ಯವಾದಷ್ಟು ಕಡಿಮೆ ಮಾಡಬೇಕು.

ಹಸಿರು ತರಕಾರಿ, ನಾರಿನ ತರಕಾರಿ, ಮೊಳಕೆ ಧನ್ಯಗಳನ್ನು ಜಾಸ್ತಿ ಸೇವಿಸಬೇಕು.

ಹೀಗೆ ಸಮರ್ಪಕ ಆಹಾರ ಸೇವನೆಯ ಕ್ರಮದಿಂದ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯವಾಗುತ್ತದೆ.

ಹಾಗಾಗಿಯೂ ಕೆಲವೊಮ್ಮೆ ರೋಗ ನಮ್ಮನ್ನು ಆವರಿಸುತ್ತದೆ. ಕಾಡಿಸುತ್ತದೆ - ಪೀಡಿಸುತ್ತದೆ. ರೋಗವೆನ್ನುವುದು ನಮ್ಮನ್ನು ಹೇಳಿ ಕೇಳಿ ಬರುವುದಿಲ್ಲ. ಅದರಲ್ಲಿಯೂ ವೃದ್ಧಾಪ್ಯದ ಕಾಯಿಲೆಗಳಾದ ರಕ್ತದೊತ್ತಡ (High Blood Pressure) ಹೃದಯಾಘಾತ (Heart Attack), ಹಾಗೂ ಸಕ್ಕರೆ ಕಾಯಿಲೆ (Diabetes) ಮುಂತಾದವು ನಮ್ಮನ್ನು ಆಕ್ರಮಿಸಿದರೆ ವಾಸಿಯಾಗುವುದೇ ಕಷ್ಟ. ನಮ್ಮ ನಿಯಮಿತ ಆಹಾರ, ವ್ಯಾಯಾಮ ಮುಂತಾದವುಗಳಿಂದ ಅದನ್ನು ನಿಯಂತ್ರಿಸಬಹುದಷ್ಟೇ ಹೊರತು ಪೂರ್ತಿಯಾಗಿ ಅದನ್ನು ವಾಸಿ ಮಾಡುವುದು ಕಷ್ಟವೇ ಸರಿ. ಅಂತಹ ಸಂದರ್ಭದಲ್ಲಿ ಅದನ್ನೇ ಮನಸ್ಸಿಗೆ ಹಚ್ಚಿಕೊಳ್ಳದೆ, ಚಿಂತೆಯ ದಾಸರಾಗದೆ, ವೈದ್ಯರ ಮಾರ್ಗದರ್ಶನದಂತೆ ಔಷಧಿ ಸೇವನೆ ಮಾಡಲೇ ಬೇಕು.

ಸುಖಕ್ಕೆ ಸ್ಪಂದಿಸಿದಂತೆಯೇ ಕಷ್ಟ (ದುಃಖ)ಕ್ಕೂ ಸ್ಪಂದಿಸುವ ಸಮಾನ ಮನೋಭಾವವನ್ನು ನಮ್ಮದಾಗಿಸಿಕೊಳ್ಳಬೇಕು. ಬಂದದ್ದೆಲ್ಲಾ ಬರಲಿ ಎಂದು ವಿಧಿಗೆ ಶರಣಾಗಲೇ ಬೇಕು.

ಈ ಸಂದರ್ಭದಲ್ಲಿ ನಾಡಿನ ಶ್ರೇಷ್ಠ ಆಡಳಿತಗಾರರೂ ಹಾಗೂ ಹಿರಿಯ ಸಾಹಿತಿಗಳೂ ಆಗಿದ್ದ ನವರತ್ನ ರಾಮರಾಯರು ತಮ್ಮ ಪುಸ್ತಕವೊಂದರಲ್ಲಿ - "ಕೆಲವು ನೆನಪುಗಳು" ಎಂದು ನನ್ನ ನೆನಪು - ಬರೆದಿರುವ ಒಂದು ಘಟನೆ ನೆನಪಿಗೆ

ಬಂದಿತು.

ಅವರು ಅಧಿಕಾರಕ್ಕೆ ಒಳಪಟ್ಟಿದ್ದ ಹಳ್ಳಿಯಲ್ಲಿ ನಡೆದ ಪ್ರಸಂಗ. ಆ ಹಳ್ಳಿಗೆ ಹಿರಿಯರಾಗಿದ್ದ ಶ್ರೋತ್ರೀಯ ಬ್ರಾಹ್ಮಣ. ಹಳ್ಳಿಯವರಿಗೆಲ್ಲಾ ಬೇಕಾಗಿದ್ದ ಹಿರಿಯರು. ಅವರು ನಿಧನರಾದಾಗ ಅಲ್ಲಿಯ ಕೆಲವರು ಬಂದು ರಾಮರಾಯರಿಗೆ ವಿಷಯ ತಿಳಿಸಿ ನಿಧನರಾದ ಶ್ರೋತ್ರೀಯರ ಪತ್ನಿಗೆ ಸಮಾಧಾನದ ನಾಲ್ಕು ಮಾತನಾಡಿದರೆ ಒಳ್ಳೆಯದು ಎಂದರು.

ರಾಮರಾಯರು ಆ ಹಳ್ಳಿಗೆ ಹೋಗಿ ಆ ಹಿರಿಯರ ಪತ್ನಿಗೆ ನಾಲ್ಕು ಸಾಂತ್ವನದ ಮಾತುಗಳನ್ನು ಬಲು ಸಂಕೋಚದ ಧ್ವನಿಯಲ್ಲಿ ಹೇಳಲಾರದೆ ಹೇಳಿದರು.

ಗಾಂಭೀರ್ಯದ ಪ್ರತಿ ಮೂರ್ತಿಯಾಗಿದ್ದಂತಹ ಆಕೆ ಒಂದು ಕ್ಷಣ ತಲೆ ಎತ್ತಿ ನೋಡಿ. "ಅಪ್ಪಾ. ನೀವು ದೊಡ್ಡವರು. ಬಡವರ ಮನೆಗೆ ಬಂದಿರಿ. ಸಮಾಧಾನ ಹೇಳಿದಿರಿ. ಇದು ನಿಮ್ಮ ಹಿರಿಮೆ. ಮುಂಜಾನೆ ಯಜಮಾನರಿಗಿಂತ ಮೊದಲಿಗೇ ಏಳುತ್ತಿದ್ದೆ ಎಂಬುದನ್ನು ಒಂದನ್ನು ಹೊರತು ಪಡಿಸಿದರೆ. ಎಲ್ಲದರಲ್ಲಿಯೂ ಅವರು ಮೊದಲು ಆನಂತರ ನಾನು. ಅವರಿಗೆ ಸ್ನಾನ ಮಾಡಿಸಿದ ನಂತರ ನನ್ನ ಸ್ನಾನ. ಅವರು ಉಂಡ ನಂತರ ನನ್ನ ಊಟ. ಅವರು ನಿದ್ರೆ ಹೋದ ಮೇಲೆಯೇ ನನ್ನ ನಿದ್ರೆ. ಹೀಗಿರುವಾಗ ನನಗಿಂತ ಮುಂದಾಗಿ ಅವರು ಹೋದದ್ದು ಒಳತಲ್ಲವೇ? ಅವರು ಉಳಿದು ನಾನು ಹೋಗಿ ಬಿಟ್ಟಿದ್ದರೆ ಅವರನ್ನು ಯಾರು ನೋಡಿಕೊಳ್ಳುತ್ತಿದ್ದರು?" ಎಂದರು.

ಎಂತಹ ತಿಳುವಳಿಕೆಯ ಮಾತು ! ಅಂತಹ ಪರಿಸ್ಥಿತಿಯಲ್ಲಿಯೂ ಎಂತಹ ಮನೋಧೈರ್ಯ !

ನಾಡಿನ ಶ್ರೇಷ್ಠರಾದ ಡಿ.ವಿ.ಜಿಯವರ ಈ ಕೆಳಗಿನ ಪದ್ಯ ಬಾಳನ್ನು ಅನುಭವಿಸಬೇಕಾದ ದಾರಿಯನ್ನು ಸಾರಿ ಹೇಳುತ್ತದೆ.

ಬದುಕು ಜಟಕಾ ಬಂಡಿ. ವಿಧಿಯದರ ಸಾಹೇಬ ।
ಕುದುರೆ ನೀನ್. ಅವನು ಪೇಳ್ದಂತೆ ಪಯಣಿಗರು ॥
ಮದುವೆಗೋ ಮಸಣಕೋ ಹೋಗೆಂದು ಕಡೆಗೋಡು ।
ಪದ ಕುಸಿಯೆ ನೆಲವಿಹುದು – ಮಂಕುತಿಮ್ಮ ॥

Watch ನ್ನು Watch ಮಾಡಿ ಸುಖವಾಗಿ ಬಾಳಿ

ಬಹಳ ವರ್ಷಗಳ ಹಿಂದೆ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದ 'ಚಿಂತನ'ದಲ್ಲಿ ಕೇಳಿಬರುತ್ತಿದ್ದ ಕನ್ನಡದ ಪ್ರಖ್ಯಾತ ಸಾಹಿತಿಗಳಾಗಿದ್ದ ದಿ|| ಜಿ.ಪಿ.ರಾಜರತ್ನಂ ಅವರ ಕಂಚಿನ ಕಂಠದ ನುಡಿಮುತ್ತುಗಳನ್ನು ಇಲ್ಲಿ ಉಲ್ಲೇಖಿಸಬಹುದು.

ನಮ್ಮ ಪ್ರತಿದಿನದ ಜೀವನದಲ್ಲಿ ಹಾಸು ಹೊಕ್ಕಾಗಿ ಬಳಕೆಯಲ್ಲಿರುವ ಅತ್ಯಗತ್ಯವಾಗಿರುವ Watchನ್ನು ವಿಶ್ಲೇಷಿಸಿ ಅವರು ನೀಡುತ್ತಿದ್ದ ವಾಕ್ಯಾರ್ಥವು ಹೀಗಿರುತ್ತಿತ್ತು.

W = Watch your Words

A = Watch your Action

T = Watch your Thoughts

C = Watch your Character

H = Watch your Health



ಇಲ್ಲಿ ವಿವರಿಸಿರುವ ಪ್ರತಿಯೊಂದು ಪದವನ್ನು ಅರ್ಥಮಾಡಿಕೊಂಡು ಜೀವನದಲ್ಲಿ ಹೇಗೆ ಬಾಳಬಹುದೆಂಬುದನ್ನು ವಿವರಿಸುತ್ತಿದ್ದರು.

ನಮ್ಮ ಜೀವನದ ಸುಖ ಸಂತೋಷಗಳು, ಕಷ್ಟ-ದುಃಖಗಳು ನಾವು ಪ್ರತಿದಿನವೂ ನಮ್ಮ ಕುಟುಂಬದವರೊಂದಿಗೆ - ನೆರೆಹೊರೆಯವರೊಂದಿಗೆ ನಡೆಯುವ ಮಾತು ಕತೆ –Words, ಕಾರ್ಯವೈಖರಿ –Action, ಯೋಚನಾ ಲಹರಿ- Thoughts, ಹೊಂದಿರುವ ಸ್ವಭಾವ - Character ಹಾಗೂ ನಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯ - Health ಈ ಎಲ್ಲದರ ಬಗ್ಗೆ ನಾವು ವಹಿಸುವ ಗಮನ, ಪಾಲಿಸಬೇಕಾದ ಎಚ್ಚರಿಕೆ ಇವುಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ಗುಣ ವಿಶೇಷಣಗಳ ಬಗ್ಗೆ ನಾವು ಒತ್ತುಕೊಟ್ಟು ಬಾಳಿದರೆ ಸುಖೀ ಜೀವನದ- ನೆಮ್ಮದಿಯ ಜೀವನದ ಬಾಳನ್ನು ನಮ್ಮದಾಗಿಸಿಕೊಳ್ಳಬಹುದು.

ನಿವೃತ್ತಿಯ ನಂತರ ಹಣಕಾಸಿನ ನಿರ್ವಹಣೆ



ನಿವೃತ್ತಿಯ ನಂತರ ಮಾನಸಿಕ ಹಾಗೂ ಆರೋಗ್ಯದ ಕಡೆ ಗಮನ ಹರಿಸಿದ ಮೇಲೆ ಸಹಜವಾಗಿ ಕಾಡುವುದು ಹಣಕಾಸಿನ ಸಮಸ್ಯೆ. ಉದ್ಯೋಗದಲ್ಲಿದ್ದಾಗ ಪ್ರತಿ ತಿಂಗಳೂ ದೊರಕುತ್ತಿದ್ದ ಸಂಬಳದಿಂದ ಜೀವನ ನಡೆಸುತ್ತಿದ್ದ – ಕುಟುಂಬ ನಿರ್ವಹಣೆ ಮಾಡುತ್ತಿದ್ದವನಿಗೆ ಸಂಬಳ ಬರುವುದು ನಿಂತಾಗ ಕಾಡುವುದು ಆರ್ಥಿಕ ಸಂಕಟ. ಅದರಲ್ಲಿಯೂ ನಿವೃತ್ತಿ ವೇತನದ (Pension) ಸೌಲಭ್ಯವಿಲ್ಲದವರಿಗೆ ಎದುರಾಗುವ ಸಮಸ್ಯೆಗಳು ಹಲವಾರು. ಅದಕ್ಕಾಗಿಯೇ ಚೀನಿಗಾದೆಯೊಂದು ಈ ರೀತಿ ಹೇಳುತ್ತದೆ. "**ವೃದ್ಧಾಪ್ಯಕ್ಕಾಗಿ ಹಣ ಹಾಗೂ ಗೆಳೆಯರನ್ನು ಕೂಡಿಡು**" ಎಂದು.

ಒಬ್ಬ ವ್ಯಕ್ತಿಯು ನಿವೃತ್ತನಾದ ಸಮಯದಲ್ಲಿ ಆತನಿಗೆ ಆಡಳಿತ ವರ್ಗದಿಂದ ಹಲವಾರು ರೀತಿಯ ಸೇವಾಂತ್ಯ ಸೌಲಭ್ಯಗಳು ಸಿಗುತ್ತವೆ. ಅವುಗಳಲ್ಲಿ ಪ್ರಮುಖವಾದುದೆಂದರೆ

ನಿವೃತ್ತಿ ವೇತನ – Pension

ಭವಿಷ್ಯ ನಿಧಿ – Provident Fund

ಉಪಾದಾನ – Gratuity

ಗಳಿಕೆಯ ಸಂಬಳದ ನಗದೀಕರಣ – Leave Encashment ಮುಂತಾದವು.

ನಿವೃತ್ತಿ ವೇತನದ ಸೌಲಭ್ಯವಿರುವವರಿಗಾದರೆ ಅವರು ಪಡೆಯುತ್ತಿದ್ದ ಕೊನೆಯ ಸಂಬಳದ ಸರಿ ಸುಮಾರು ಅರ್ಧದಷ್ಟದರೂ ಹಣ ಅವರಿಗೆ ಪ್ರತಿ ತಿಂಗಳೂ ಕರಾರುವಕ್ಕಾಗಿ ಲಭಿಸುತ್ತದೆ. ಆದರೆ ಈ ಸೌಲಭ್ಯವಿಲ್ಲದವರು ಅಂದರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು, ಖಾಸಗೀ ಸಂಸ್ಥೆಗಳ ಉದ್ಯೋಗಿಗಳು ತಮ್ಮ ಮುಂದಿನ ಜೀವನಕ್ಕೆ ತಮಗೆ ಇಡುಗಂಟಾಗಿ ಸಿಗುವ ಸೇವಾಂತ್ಯ ಸೌಲಭ್ಯಗಳ ಆಧಾರದ ಮೇಲೆಯೇ ತಮ್ಮ ಇಡೀ ಭಾವೀ ಜೀವನವನ್ನು ಕಳೆಯಬೇಕಾಗುತ್ತದೆ. ಆ ಹಣವೇ ಅವರ ಮುಂದಿನ ಜೀವನದ ಸೋಪಾನವಾಗುತ್ತದೆ. ಹಲವಾರು ವರ್ಷಗಳ ದುಡಿಮೆಯ ಪ್ರತಿ ಫಲವಾಗಿ

ದೊರಕಿದ ಈ ಹಣದ ಮೊತ್ತ ಅವರ ನಿವೃತ್ತ ಜೀವನದ ಶ್ರೀ ರಕ್ಷೆಯಾಗಿ ಅವರ ಜೀವಮಾನ ಪರ್ಯಂತ ಕಾಯ್ದಿಟ್ಟ ನಿಧಿಯಾಗಿ ಅವರನ್ನು ಕಾಪಾಡು ವಂತಹದಾಗಿರುತ್ತದೆ.

ನಿವೃತ್ತರಾಗುವ ಸಮಯದಲ್ಲಿ ಉದ್ಯೋಗಿಗಳಿಗೆ ದೊರಕಬಹುದಾದ ಕೆಲವು ಸೇವಾಂತ್ಯ ಸೌಲಭ್ಯಗಳು.

ನಿವೃತ್ತಿ ವೇತನ – Pension

ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಉದ್ಯೋಗಿಗಳಿಗೆ ಅವರ ನಿವೃತ್ತಿಯನಂತರ ಸೇವಾ ನಿಯಮಗಳಿಗನುಗುಣವಾಗಿ ಅವರು ಪಡೆಯುತ್ತಿದ್ದ ವೇತನದ ಆಧಾರದ ಮೇಲೆ ನಿವೃತ್ತಿ ವೇತನವನ್ನು ಮತ್ತು ಅದಕ್ಕೆ ಸರಿಹೊಂದುವ ತುಟ್ಟಿ ಭತ್ಯವನ್ನು ನೀಡಲಾಗುತ್ತದೆ. ಇದನ್ನು ಪ್ರತಿ ತಿಂಗಳೂ, ನಿವೃತ್ತಿದಾರನ ಜೀವಮಾನ ಪರ್ಯಂತ ನೀಡಲಾಗುವುದು. ನಿವೃತ್ತಿದಾರನ ನಿಧನಾನಂತರ ಆತನ/ಆಕೆಯ ಪತ್ನಿ ಅಥವಾ ಪತಿಗೆ ಕುಟುಂಬ ನಿವೃತ್ತಿವೇತನವಾಗಿ ನೀಡಲಾಗುವುದು.

ಅಲ್ಲದೆ ನಿವೃತ್ತಿ ವೇತನದ ೩ನೇ ಒಂದು ಭಾಗದಷ್ಟು ಪರಿವರ್ತಿತ ನಿವೃತ್ತಿ ವೇತನವಾಗಿ (Commutation) ಪಡೆಯುವ ಅವಕಾಶವನ್ನು ನಿವೃತ್ತಿದಾರನು ಹೊಂದಿರುತ್ತಾನೆ. ಹೀಗೆ ಮುಂಗಡವಾಗಿ ಪಡೆದ ಹಣವನ್ನು ಪ್ರತಿ ತಿಂಗಳೂ ನೀಡುವ ನಿವೃತ್ತಿ ವೇತನದಲ್ಲಿ ಕಡಿತಗೊಳಿಸಲಾಗುವುದು. 15 ವರ್ಷಗಳ ನಂತರ ನಿವೃತ್ತಿ ವೇತನವು ಪೂರ್ಣವಾಗಿ ದೊರಕುವುದು. ಪರಿವರ್ತಿತ ನಿವೃತ್ತಿ ವೇತನವನ್ನು ಮೊತ್ತವಾಗಿ ಪಡೆಯುವ ಸಂದರ್ಭದಲ್ಲಿ ಅದು ಆದಾಯ ತೆರಿಗೆಗೆ ಒಳಪಡುವುದಿಲ್ಲ.

ನಿವೃತ್ತಿ ವೇತನವು ಸರ್ಕಾರದ ಉದ್ಯೋಗಿಗಳಿಗೆ ಸಿಗುವ ಸೌಲಭ್ಯವಾದರೆ ಕೈಗಾರಿಕೆಗಳಲ್ಲಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ಇದು ಅನ್ವಯವಾಗುವುದಿಲ್ಲ. ಆದರೆ ಭವಿಷ್ಯನಿಧಿ ಕಾಯ್ದೆಯಡಿಯಲ್ಲಿ ಲಭ್ಯವಿರುವ ನೌಕರರ ಕುಟುಂಬ ನಿವೃತ್ತಿ ಯೋಜನೆ – 1971 (Employees Family Pension Scheme 1971) ಹಾಗೂ ನೌಕರರ ನಿವೃತ್ತಿ ಯೋಜನೆ 1995 (Employees Pension Scheme - 1995) ರಲ್ಲಿ ಸದಸ್ಯರಾಗಿರುವ ಎಲ್ಲ

ನೌಕರರಿಗೆ ನಿಯಮಗಳಗೊಳಪಟ್ಟು ನಿವೃತ್ತಿ ವೇತನವನ್ನು ನೀಡಲಾಗುವುದು. ಈ ಯೋಜನೆಯಡಿಯಲ್ಲಿಯೂ ಸಹ ನೌಕರನಿಗೆ ಅವನ ಮರಣದ ನಂತರ ಆತನ ವಿಧವೆಗೆ ಈ ಸೌಲಭ್ಯವನ್ನು ನೀಡಲಾಗುವುದು.

ಉಪಾದಾನ (Gratuity)

ಉಪಾದಾನವು ಸಾಮಾಜಿಕ ಸುರಕ್ಷಣಾ ಯೋಜನೆಯಾಗಿದ್ದು ಎಲ್ಲ ಸರ್ಕಾರಿ ನೌಕರರಿಗೂ ಹಾಗೂ ಕೈಗಾರಿಕಾ ನೌಕರರಿಗೂ ದೊರಕುತ್ತದೆ. ನೌಕರಿಯಲ್ಲಿದ್ದಾಗ ಸಲ್ಲಿಸಿದ ನಿಷ್ಠಾವಂತ ಪ್ರಾಮಾಣಿಕ ಸೇವೆಗೆ ಆಡಳಿತವರ್ಗವು ನೀಡುವ ಕೊಡುಗೆ-ಉಪಾದಾನ ಎನ್ನಬಹುದು.

ಸರ್ಕಾರಿ ನೌಕರರಿಗೆ ನಾಗರೀಕ ಸೇವಾ ನಿಯಮಾವಳಿಗಳ ಅಡಿ ನೀಡಲಾಗುವ ಗರಿಷ್ಠ ನಿವೃತ್ತಿ ಉಪಾದಾನವು 10 ಲಕ್ಷ ರೂಗಳಾಗಿರುತ್ತದೆ.

ಕೈಗಾರಿಕೆಗಳಲ್ಲಿ (ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ) ಕೆಲಸ ಮಾಡುವ ನೌಕರರಿಗೆ Payment of Gratuity Act 1972 ರ ಅನ್ವಯ ಉಪಾದಾನವು ಲಭ್ಯವಾಗುತ್ತದೆ. ಹೀಗೆ ಲಭ್ಯವಾಗುವ ಗರಿಷ್ಠಮೊತ್ತ 3.5 ಲಕ್ಷ ರೂಗಳು. 24.5.2010 ರಿಂದ 10 ಲಕ್ಷ ರೂಗಳಿಗೆ ಗರಿಷ್ಠಮಿತಿಯನ್ನು ಏರಿಸಲಾಗಿದೆ. ಹೀಗೆ ಪಡೆಯುವ ಉಪದಾನದ ಮೊತ್ತವು ಆದಾಯ ತೆರಿಗೆಗೆ ಒಳಪಡುವುದಿಲ್ಲ.

ಈ ಹಿಂದೆ ಇದ್ದ ಉಪಾದಾನದ ಗರಿಷ್ಠ ಮಿತಿ :

31.01.1982 ಕ್ಕೆ ಮುಂಚೆ	ರೂ 30,000
30.01.1982 ರ ನಂತರ - 31.03.1985ಕ್ಕೆ ಮುಂಚೆ	ರೂ 36,000
30 03.1985ರ ನಂತರ- 01.01.1986 ಕ್ಕೆ ಮುಂಚೆ	ರೂ 50,000
31.01.1985 ರ ನಂತರ- 01.04.1995 ಕ್ಕೆ ಮುಂಚೆ	ರೂ 1,00,000
31.3.1995ರ ರ ನಂತರ- 24.9.1997 ಕ್ಕೆ ಮುಂಚೆ	ರೂ 2,50,000
23.09.1997 ರ ನಂತರ- 24.05.2010 ಕ್ಕೆ ಮುಂಚೆ	ರೂ 3,50,000
23.05.2010 ರ ನಂತರ	ರೂ 10,00,000

ಭವಿಷ್ಯ ನಿಧಿ – Provident Fund

ಕೈಗಾರಿಕೆಗಳಲ್ಲಿ ಕೆಲಸಮಾಡುವ ಉದ್ಯೋಗಸ್ಥರಿಗೆ ಸಿಗುವ ಮತ್ತೊಂದು ಸೇವಾಂತ್ಯ ಸೌಲಭ್ಯವೆಂದರೆ ಭವಿಷ್ಯನಿಧಿ. ಭವಿಷ್ಯನಿಧಿ ಯೋಜನೆ 1952 ರ ಅನುಗುಣವಾಗಿ ಪ್ರತಿಯೊಬ್ಬ ಉದ್ಯೋಗದಾತನು ತಾನು ತನ್ನ ಉದ್ಯೋಗಿಗಳಿಗೆ ನೀಡುವ ವೇತನದ ಒಂದು ಭಾಗವನ್ನು (ಪ್ರಸ್ತುತ ಶೇ.12) ಉದ್ಯೋಗಿಗಳ ವೇತನ ದಿಂದ ಕಡಿತಗೊಳಿಸಿ ಅದಕ್ಕೆ ತತ್ಸಮನಾದ ತನ್ನ ವಂತಿಗೆಯನ್ನು ಸೇರಿಸಿ ಉದ್ಯೋಗಿಯ ಭವಿಷ್ಯನಿಧಿಗೆ ಸಂದಾಯ ಮಾಡಬೇಕು. ಹೀಗೆ ಸಂದಾಯ ಮಾಡಿದ ಹಣಕ್ಕೆ ವಾರ್ಷಿಕವಾಗಿ ನೀಡುವ ಬಡ್ಡಿಯ ಹಣವೂ ಸೇರಿ ಉದ್ಯೋಗಿಯು ನಿವೃತ್ತನಾಗುವ ವೇಳೆಗೆ ಗಣನೀಯ ಮೊತ್ತವಾಗಿ ಆತನಿಗೆ ಸಿಗುತ್ತದೆ. ಯೋಜನೆಯ ಹೆಸರೇ ಸೂಚಿಸುವಂತೆ ನಿವೃತ್ತಿಯ ನಂತರದ ಭವಿಷ್ಯದ ಜೀವನಕ್ಕೆ ಆ ಹಣವು ನೆರವಾಗುತ್ತದೆ.

ಅದರಂತೆ ಸರ್ಕಾರಿ ನೌಕರರಿಗೂ, ಸರ್ಕಾರದ ಸೇವಾನಿಯಮದಂತೆ, ಭವಿಷ್ಯನಿಧಿಗೆ ಸಂದಾಯವಾಗಿರುವ ಹಣದ ಮೊತ್ತ ಸಿಗುತ್ತದೆ. ಇಲ್ಲಿ ಗಮನಿಸ ಬೇಕಾದ ಅಂಶವೆಂದರೆ, ಸರ್ಕಾರಿ ನೌಕರರು ನಿವೃತ್ತಿ ವೇತನದ ಸೌಲಭ್ಯವನ್ನು ಪಡೆಯುವುದರಿಂದ ಭವಿಷ್ಯನಿಧಿಗೆ ಸರ್ಕಾರದ ವಂತಿಗೆ ಇರುವುದಿಲ್ಲ. ಭವಿಷ್ಯನಿಧಿಯ ಸೌಲಭ್ಯವು ಆದಾಯ ತೆರಿಗೆಯಿಂದ ಮುಕ್ತವಾಗಿರುತ್ತದೆ.


ರಜೆಯ ನಗದೀಕರಣ (Leave Encashment)

ಉದ್ಯೋಗಿಯು ಸೇವೆಯಲ್ಲಿರುವಾಗ ಆತನು ಗಳಿಸಬಹುದಾದ ಹಕ್ಕಿನ ರಜೆಯನ್ನು (earned leave) / ವಾರ್ಷಿಕ ರಜೆ (Annual Leave) ಯನ್ನು ಬಳಸಿಕೊಳ್ಳದೆ ಹಾಗೆಯೇ ಉಳಿಸಿಕೊಂಡಿದ್ದ ಪಕ್ಷದಲ್ಲಿ ನಿವೃತ್ತಿಯ ಸಮಯದಲ್ಲಿ ಆ ರಜೆಗೆ ತತ್ಸಮವಾದ ವೇತನವನ್ನು ನೀಡಲಾಗುವುದು. ಹೀಗೆ ಪಡೆಯುವ ರಜೆಯ ನಗದೀಕರಣದ ಹಣಕ್ಕೆ 3 ಲಕ್ಷರೂಗಳವರೆಗೆ ಆದಾಯ ತೆರಿಗೆಯ ವಿನಾಯಿತಿ ಇರುತ್ತದೆ.

ನಿವೃತ್ತಿಯ ದಿನಾಂಕ	ಮೊತ್ತ	ನಿವೃತ್ತಿಯ ದಿನಾಂಕ	ಮೊತ್ತ
ಜನವರಿ 1982 ಕ್ಕೆ ಮುಂಚೆ	25.500	01.01.1982-30.06.1986	30.000
01.07.1986-31.12.1986	73.400	01.01.1987-30.06.1987	75.600
01.07.1987-31.12.1987	77,760	01.01.1988-31.03.1995	79,920
01.04.1995-30.06.1995	1,30,320	01.07.1995-01.07.1997	1,35,360
02.07.1997-01.04.1998	2,40,000	02.04.1998 ರ ನಂತರ	3,00,000

ಈ ಮೇಲೆ ಹೇಳಿದ ನಿವೃತ್ತಿ ವೇತನ, ಉಪಾದಾನ, ಭವಿಷ್ಯನಿಧಿ ಹಾಗೂ ರಜೆಯ ನಗದೀಕರಣ ಮುಂತಾದವೇ ಅಲ್ಲದೆ ಉದ್ಯೋಗಿಯು ತಾನು ಸೇವೆಯಲ್ಲಿರುವಾಗ ಮಾಡಿಕೊಂಡಿರಬಹುದಾದ ಅನೇಕ ಉಳಿತಾಯ ಯೋಜನೆಗಳು - ಜೀವವಿಮೆ, ಆವರ್ತಕ ಠೇವಣಿ, ಸಹಕಾರ ಸಂಘಗಳಲ್ಲಿ ತೊಡಗಿಸಿರಬಹುದಾದ ಉಳಿತಾಯ ಹಣ ಹಾಗೂ ಆಡಳಿತವರ್ಗದಿಂದ ಸಿಗಬಹುದಾದ ಇನ್ನಾವುದೇ ತರನಾದ ಬಳುವಳಿಗಳು ಆತನ ಸೇವಾವಧಿಯ ಅಂತ್ಯದಲ್ಲಿ ಸಿಗಬಹುದಾಗಿದೆ.

ಸೇವಾಂತ್ಯ ಸೌಲಭ್ಯ - ತರಲಿ ಸುಖ ಸೌಲಭ್ಯ



ನಿವೃತ್ತಿಯ ಸಮಯದಲ್ಲಿ ಸಿಗುವ ಸೇವಾಂತ್ಯ ಸೌಲಭ್ಯಗಳು ಯಾವುದೆಂದು ತಿಳಿದಂತಾಯಿತು. ಈಗ ಅದನ್ನೇ ಮುಂದಿನ ಜೀವನದ ನಿರ್ವಹಣೆಗಾಗಿ, ಸುಖ ಸಂತೃಪ್ತಿಗಾಗಿ ಹೇಗೆ ಬಳಸಿಕೊಳ್ಳಬಹುದು, ಹೇಗೆ ಅದರ ಆಧಾರದ ಮೇಲೆ ಜೀವನ ಪರ್ಯಂತ ಇನ್ನೊಬ್ಬರಿಗೆ ಹೊರೆಯಾಗದೆ ಬಾಳಬಹುದು. ನಮ್ಮ ನಂತರ ನಮ್ಮ ವಾರಸುದಾರರಿಗೆ ಹೇಗೆ ಹಸ್ತಾಂತರ ಮಾಡಬಹುದು ಎಂಬುದರ ಬಗ್ಗೆ ವಿವರವಾಗಿ ತಿಳಿಯೋಣ.

ಉದ್ಯೋಗಸ್ಥರಾಗಿದ್ದಾಗ ಪ್ರತಿ ತಿಂಗಳೂ ನಿಶ್ಚಿತವಾಗಿ ದೊರಕುತ್ತಿದ್ದ ವೇತನದಲ್ಲಿ ಬದುಕುತ್ತಿದ್ದವರಿಗೆ ನಿವೃತ್ತಿಯನಂತರ ವೇತನ ನಿಂತು ಹೋಗುತ್ತದೆ ಮುಂದೆ ಅವರು ಅವಲಂಬಿತವಾಗಬೇಕಾದ್ದು ಈ ಇಡುಗಂಟಿನ ಮೇಲೆ. ಆದ್ದರಿಂದ ಆ ಗಂಟನ್ನು ಸುರಕ್ಷಿತವಾಗಿ ಕಾಯ್ದುಕೊಳ್ಳಬೇಕಾದ್ದು ಅತಿ ಮುಖ್ಯ.

"ಧರ್ಮೋ ರಕ್ಷತಿ ರಕ್ಷಿತಃ" ಎಂಬ ಸಂಸ್ಕೃತದ ಸೂಕ್ತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಂದರೆ ಧರ್ಮವನ್ನು ರಕ್ಷಿಸಿದವನನ್ನು ಧರ್ಮವು ರಕ್ಷಿಸುತ್ತದೆ. ಅದರಂತೆ ಹಣವನ್ನು ಕಾಪಾಡಿಕೊಂಡು ಬಂದವನನ್ನು ಹಣವೇ ಕಾಪಾಡುತ್ತದೆ ಎಂದೂ ತಿಳಿಯಬಹುದು. ಹಾಗೆಂದ ಮೇಲೆ ಅದರ ರಕ್ಷಣೆಯ

ಹೊಣೆ ನಮ್ಮದಾಗಿರುತ್ತದೆ.

ಯೌವನದಲ್ಲಿ ಸಾಕಷ್ಟು ಹಣ ಸಂಪಾದಿಸಿ, ನಂತರ ವೃದ್ಧಾಪ್ಯದಲ್ಲಿ ಹಣಕಾಸಿನ ತಾಪತ್ರಯದಿಂದ ಸಂಕಟಪಡುತ್ತಿರುವ ಅನೇಕ ಜನರನ್ನು ನಾವು ಇಂದು ಕಾಣುತ್ತಿದ್ದೇವೆ. ಅದರಲ್ಲಿಯೂ ಮುಖ್ಯವಾಗಿ ಸ್ವಂತಗಳಿಕೆಯ ಮೇಲೆ ಅವಲಂಬಿತವಾಗಿರುವ ಕಲಾವಿದರು ಬರಹಗಾರರು ಜೀವನದ ಸಂಧ್ಯಾಕಾಲದಲ್ಲಿ ತೊಂದರೆಗೊಳಗಾಗಿರುವುದನ್ನು, ಅವರ ಕರುಣಾಜನಕ ಸ್ಥಿತಿಯನ್ನು ನಾವು ಆಗಾಗ್ಗೆ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ ಕೆಲವರ ಸ್ಥಿತಿಯಂತೂ ಅತ್ಯಂತ ಚಿಂತಾಜನಕವಾಗಿದ್ದು ಹಣ ಸಹಾಯಕ್ಕಾಗಿ ಸಂಘಸಂಸ್ಥೆಗಳ- ಸಾರ್ವಜನಿಕರ ನೆರವಿಗಾಗಿ ಮೊರೆ ಇಡುತ್ತಿರುವುದನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣವೆಂದರೆ ತಮ್ಮ ಸಂಪಾದನೆಯ ಕಾಲದಲ್ಲಿ ಹಣದ ಬಗ್ಗೆ ಸಾಕಷ್ಟು ಎಚ್ಚರವಹಿಸದೆ, ಉಳಿತಾಯದ ಬಗ್ಗೆ ಗಮನ ಕೊಡದಿರುವುದು.

ಇನ್ನು ಸರ್ಕಾರಿ ಅಥವಾ ಇತರೇ ಕ್ಷೇತ್ರಗಳಲ್ಲಿ ಸೇವೆಯಲ್ಲಿದ್ದು ನಿವೃತ್ತರಾದವರ ಕೆಲವರ ಪರಿಸ್ಥಿತಿಯೂ ಅದಕ್ಕಿಂತ ಭಿನ್ನವಾಗಿ ಇರುವುದಿಲ್ಲ. ನಿವೃತ್ತಿ ಸೌಲಭ್ಯವಿಲ್ಲದವರ ಪಾಡಂತೂ ಶೋಚನೀಯವಾಗಿರುತ್ತದೆ.

ಇಂತಹ ಪರಿಸ್ಥಿತಿಗೆ ಕಾರಣರಾದವರು ಯಾರು? ತಾವೇ ಅಥವಾ ಬೇರೊಬ್ಬರೇ?

ಇತ್ತೀಚೆಗೆ ನನ್ನ ಸ್ನೇಹಿತರೊಬ್ಬರು ನಗರದ ವೃದ್ಧಾಶ್ರಮ (ಅನಾಥಾಶ್ರಮ)ಕ್ಕೆ ಭೇಟಿಯಿತ್ತ ಘಟನೆಯನ್ನು ವಿವರಿಸಿದಾಗ ಮನ ಕಲಕಿತು. ಕಣ್ಣೀರು ತರಿಸಿತು. ಅಲ್ಲಿದ್ದ ಹಲವಾರು ವೃದ್ಧ ಜೀವಗಳ – ಹಲವಾರು ದಂಪತಿಗಳ – ಕರುಣಾಜನಕ ಅವಸ್ಥೆ ಮನ ಮಿಡಿಯುವಂತಿತ್ತು.

ವಯಸ್ಸಿನಲ್ಲಿ ಅವರೆಲ್ಲ ಚೆನ್ನಾಗಿ ಬಾಳಿ ಬದುಕಿದ್ದವರೇ. ಆದರೆ ಇವರಲ್ಲಿ ಹಣವಿದ್ದಾಗ ಕೆಲವರಿಂದ ವಂಚನೆಗೊಳಗಾದರು. ಮೋಸ ಹೋದರು, ಇನ್ನು ಕೆಲವರ ವಿಷಯದಲ್ಲಿ ತಮ್ಮ ಸ್ವಂತ ಮನೆಯವರೇ ಮೋಸದಿಂದ ಇವರ ಆಸ್ತಿಪಾಸ್ತಿಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡು ಮನೆಯಿಂದ ಹೊರದೂಡಿದರು. ಹೀಗೆ ವಂಚಿತರಾದವರು ಕೊನೆಗಾಲದಲ್ಲಿ ಪರರನ್ನಾಶ್ರಯಿಸ ಬೇಕಾಗಿ ಬಂದು, ನಿರ್ಗತಿಕರಾಗಿ ಕೊನೆಗೆ ಆಶ್ರಮವಾಸಿಗಳಾಗಬೇಕಾಗಿ ಬಂತು. ಊಟ ತಿಂಡಿಗೆ ತಟ್ಟೆ ಹಿಡಿದು ಸಾಲಿನಲ್ಲಿ ನಿಲ್ಲಬೇಕಾದ ದಯನೀಯ ಸ್ಥಿತಿ ಇವರದಾಯಿತು.

ಇದು ಯಾರ ತಪ್ಪು? ಇದು ಯಾಕಾಯಿತು? ಅವರ ಅಜ್ಞಾನವೇ? ಅಸಹಾಯಕತೆಯೇ?

ಹೀಗೆ ಮೋಸ ಹೋದವರಿಗೆ ತಮ್ಮ ಆಸ್ತಿಯನ್ನು, ಹಣವನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಬೇಕು ಎಂಬ ಅರಿವಿದ್ದಿದ್ದರೆ ಹೀಗಾಗುತ್ತಿತ್ತೇ? ಅದು ಅವರ ಅಜ್ಞಾನವೋ ಅಥವಾ ವಿಧಿಯಾಟವೋ ಏನೆಂದು ಹೇಳುವುದು?

ಇಂತಹ ಮೋಸ ಮಾಡುವ ಮಂದಿ ಎಲ್ಲಾ ಕಾಲದಲ್ಲಿಯೂ ಎಲ್ಲಾ ಜಾಗದಲ್ಲಿಯೂ ಇರುತ್ತಾರೆ. ಇಡುಗಂಟಿದೆ ಎಂದು ಗೊತ್ತಾಗುತ್ತಲೇ ಆಪ್ತರಂತೆ ಬಂದು ಇಲ್ಲಸಲ್ಲದ ಆಸೆ ತೋರಿಸಿ, ಹಲವಾರು ಸಲಹೆಗಳನ್ನು ನೀಡಿ ಹಣ ಲಪಟಾಯಿಸುವ ಮಂದಿಯೂ ಇರುತ್ತಾರೆ. ಹಣಕಾಸಿನ ಸಂಸ್ಥೆಗಳ ಏಜೆಂಟರಾಗಿರುವವರಂತೂ ನಿವೃತ್ತಿ ಹೊಂದುವ ದಿನಾಂಕವನ್ನು ಮುಂಚೆಯೇ ತಿಳಿದುಕೊಂಡು ತಮಗೆ ಎಲ್ಲಿ ಕಮೀಷನ್ ಸಿಗುತ್ತದೆಯೋ ಅಂತಹ ಕಡೆಗಳಲ್ಲಿ ಹಣ ಹೂಡಲು ಸಲಹೆ ನೀಡುತ್ತಾರೆ. ಅವರಿಗೆ ತಾವು ಪಡೆಯುವ ಕಮೀಷನ್ ಹಣದ ಕಡೆ ಗಮನವಿರುತ್ತದೆಯೇ ಹೊರತು ಹಣದ ಸುಭದ್ರತೆಯ ಬಗೆಗೆ ಗಮನವಿರುವುದಿಲ್ಲ. ಹೂಡಿಕೆದಾರರ ಭವಿಷ್ಯತ್ತಿನ ಬಗೆಗೆ ಆಸಕ್ತಿಯಿರುವುದಿಲ್ಲ. ಹೀಗಾಗಿ ಹಲವಾರು ಜನ ಹಲವು ರೀತಿಯಲ್ಲಿ ಸರಿಯಾದ ಮಾರ್ಗದರ್ಶನವಿಲ್ಲದೆ ತಮ್ಮ ಇಡೀ ಜೀವನದ ಉಳಿತಾಯದ ಹಣವನ್ನು ಕಳೆದುಕೊಳ್ಳುತ್ತಾರೆ. ಬೀದಿ ಭಿಕಾರಿಗಳಾಗುತ್ತಾರೆ.

ಹಾಗಿದ್ದರೆ, ಹಣವನ್ನು ಎಲ್ಲಿ ಹೂಡಬೇಕು? ಹೂಡಿಕೆಯ ಸೂತ್ರಗಳು ಯಾವುದು ಎಂಬುದನ್ನು ಮುಂದೆ ತಿಳಿಯೋಣ.

ಹಣಹೂಡಿಕೆಯ ಮೂರು ಸರಳ ಸೂತ್ರಗಳು

ಹಣ ಹೂಡಿಕೆಯ ಸಂದರ್ಭದಲ್ಲಿ ಅನುಸರಿಸಬೇಕಾದ ಮೂರು ಸೂತ್ರಗಳೆಂದರೆ

1. ಭದ್ರತೆ – Safety
2. ಪ್ರತಿಫಲ/ ಬಡ್ಡಿ – Returns
3. ಬೇಕೆಂದಾಗ ಹಣ ಹಿಂತಿರುಗಿ ಪಡೆಯಲು ಇರುವ ಅವಕಾಶ – Liquidity

ಭದ್ರತೆ – Safety

ಹಣ ನಮ್ಮ ಜೀವನದ ಸುಭದ್ರತೆಗೆ ಅತ್ಯಗತ್ಯವಾಗಿ ಬೇಕಾದದ್ದು. ನಮ್ಮ ಜೀವನದ ಕೊನೆಯವರೆಗೂ ಅದು ನಮ್ಮ ಜೀವನ ನಿರ್ವಹಣೆಗೆ ಬೇರೊಬ್ಬರ ಹಂಗಿಲ್ಲದೆ ಜೀವಿಸಲು – ಬೇಕೇ ಬೇಕು. ಹಾಗಾಗಿ ಹಣವನ್ನು ಹೂಡುವಾಗ ಅದರ ಭದ್ರತೆಗೆ ಗಮನ ಕೊಡಬೇಕಾದುದು ಅವಶ್ಯಕ.

ಹಿಂದಿನ ಕಾಲದಲ್ಲಿ ಹಣದ ಭದ್ರತೆಗಾಗಿ, ಸುರಕ್ಷಿತೆಗಾಗಿ ಅದನ್ನು ನೆಲದಲ್ಲಿ ಹೂಳಡುತ್ತಿದ್ದರು. ಕಬ್ಬಿಣದ ಪೆಟ್ಟಿಗೆಗಳಲ್ಲಿ ಶೇಖರಿಸಿಡುತ್ತಿದ್ದರು. ಈಗಿನಂತೆ ಹಣದ ವ್ಯವಹಾರ ಹೆಚ್ಚಿಲ್ಲದ ಅಂದಿನ ದಿನಗಳಲ್ಲಿ ಹಣಕಾಸು ಸಂಸ್ಥೆಗಳ ಅನುಪಸ್ಥಿತಿಯಲ್ಲಿ, ಇದ್ದರೂ ಅವುಗಳಲ್ಲಿ ನಂಬಿಕೆ ಇರದ ಮಂದಿ, ತಮ್ಮ ಮನೆಗಳಲ್ಲಿಯೇ ಹಣವನ್ನು ಗೋಪ್ಯವಾಗಿ ಬಚ್ಚಿಡುತ್ತಿದ್ದರು. ಆದರೆ ಇದರಿಂದ ಹಣದ ಬಳಕೆ ಸಾರ್ಥಕ ರೀತಿಯಲ್ಲಿ ಆಗುತ್ತಿರಲಿಲ್ಲ. ಅಲ್ಲದೆ ಹಣದ ಒಡೆಯನಿಗೂ ಅದರ ಪ್ರತಿಫಲ ದೊರೆಯುತ್ತಿರಲಿಲ್ಲ.

ಹಣಕಾಸಿನ ಮಹತ್ವ ನೀತಿಯೆಂದರೆ ಹಣ ಚಲಾವಣೆಯಲ್ಲಿರಬೇಕು. ಅದಕ್ಕಾಗಿಯೇ "ನಡೆದರೆ ನಾಣ್ಯ" ಎಂಬ ಉಕ್ತಿ ಪ್ರಚಲಿತದಲ್ಲಿರುವುದು. ಹಣ ಚಲಾವಣೆಯಲ್ಲಿದ್ದರೆ ಮಾತ್ರ ಅದರ ಸಾರ್ಥಕತೆ ಮತ್ತು ಪ್ರಯೋಜನ. ಅಲ್ಲದೆ ರಾಷ್ಟ್ರದ ಅಭಿವೃದ್ಧಿ ಕಾರ್ಯಗಳಿಗೂ ಸಹಾಯಕವಾಗುವುದು. ಬಚ್ಚಿಟ್ಟ ಹಣ ಯಾವುದೇ ಕಾಲಕ್ಕೂ ಯಾವುದೇ ಕಾರಣಕ್ಕೂ ಸಾರ್ಥಕತೆ ಪಡೆಯುವುದಿಲ್ಲ.

ಆದರೆ ಈಗ ಕಾಲ ಬದಲಾಗಿದೆ. ಜನಗಳ ಮನೋಭಾವವೂ ಬದಲಾಗಿದೆ. ಅಲ್ಲದೇ ಹಣದ ಹೂಡಿಕೆಗೆ ನಾನಾತರದ ಅವಕಾಶಗಳಿವೆ. ಎಲ್ಲಕ್ಕೂ ಮಿಗಿಲಾಗಿ ಜೀವನ ನಿರ್ವಹಣೆಯನ್ನು ಉಳಿತಾಯದ ಹಣದ ಮೇಲೆಯೇ ಮಾಡಬೇಕಾಗಿರುವುದರಿಂದ ಹೂಡಿಕೆಯ ಮೇಲೆ ಪ್ರತಿಫಲವನ್ನು ಅಪೇಕ್ಷಿಸಲೇ ಬೇಕು. ಅದುವೇ ಬಡ್ಡಿ.

ಪ್ರತಿಫಲ / ಬಡ್ಡಿ – Returns - Interest

ಹೂಡಿದ ಹಣಕ್ಕೆ ಪ್ರತಿಫಲವಾಗಿ ದೊರಕುವುದು ಬಡ್ಡಿ. ಬಡ್ಡಿಯ ದರ ಎಷ್ಟಿರಬೇಕು ಎನ್ನುವುದು ಆಯಾಕಾಲದ ಸರ್ಕಾರದ/ರಿಸರ್ವ್ ಬ್ಯಾಂಕಿನ ರೀತಿನೀತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಹಲವು ವರ್ಷಗಳ ಹಿಂದೆ ಬ್ಯಾಂಕುಗಳಲ್ಲಿ, ಅಂಚೆ ಕಛೇರಿಯ ಹೂಡಿಕೆಯಲ್ಲಿ ನೀಡಲಾಗುತ್ತಿದ್ದ ಬಡ್ಡಿಯ ದರ ಹೆಚ್ಚಾಗಿದ್ದು ಈಗ ನೀಡುತ್ತಿರುವ ಬಡ್ಡಿಯ ದರ ಕಡಿಮೆಯಾಗಿದೆ.

ಸಾಮಾನ್ಯವಾಗಿ ಜನ ಎಲ್ಲಿ ಬಡ್ಡಿ ಜಾಸ್ತಿ ಸಿಗುವುದೋ ಅಂತಹ ಕಡೆ ಆಕರ್ಷಿತರಾಗುತ್ತಾರೆ. ಹೂಡಿಕೆಯ ನಿಯಮವನ್ನು ಮರೆತು ಹೆಚ್ಚಿನ ಬಡ್ಡಿಗೆ/ಹೆಚ್ಚಿನ ಪ್ರಚಾರಕ್ಕೆ ಮನಸೋತು ಇಡೀ ಜೀವಮಾನದ ಗಳಿಕೆಯನ್ನು ಕಳೆದುಕೊಳ್ಳುತ್ತಾರೆ.

ಹಲವಾರು ಹಣಕಾಸು ಸಂಸ್ಥೆಗಳು ಮುಗ್ಧ ಜನಗಳ ಹಣವನ್ನು ನುಂಗುವುದಕ್ಕಾಗಿಯೇ ಸಂಸ್ಥೆಗಳನ್ನು ಸ್ಥಾಪಿಸುತ್ತವೆ. ತಮ್ಮ ಮಾರ್ಕೆಟಿಂಗ್ ಕೌಶಲ್ಯದಿಂದ ಜನರಲ್ಲಿ ಪ್ರಲೋಭನೆಯನ್ನುಂಟು ಮಾಡಿ ಹಣವನ್ನು ಸೆಳೆಯುವ ತಂತ್ರವನ್ನು ಹೆಣೆಯುತ್ತವೆ. ಹೆಚ್ಚಿನ ಬಡ್ಡಿದರ, ಪ್ರೋತ್ಸಾಹ ಧನ (Incentive) ಚಿನ್ನ/ ಬೆಳ್ಳಿ, ಉಡುಗೊರೆಗಳು, ಪ್ರವಾಸಕ್ಕೆ ಕರೆದುಕೊಂಡು ಹೋಗುವುದು ಮುಂತಾದ ಆಮಿಷಗಳನ್ನು ಒಡ್ಡಿ ಜನಗಳಿಗೆ ಮಂಕುಬೂದಿ ಎರಚುತ್ತಾರೆ. ಅದಕ್ಕಾಗಿಯೇ ಚೆನ್ನಾಗಿ ಮಾತುಬಲ್ಲ ಏಜಂಟರನ್ನು ನೇಮಿಸಿ, ಕಮೀಷನ್ ನೀಡಿ, ಅವರ ಮೂಲಕ ಜನಗಳ ಹಣವನ್ನು ಲಪಟಾಯಿಸುತ್ತಾರೆ. ಮುಗ್ಧ ಜನರ ದರೋಡೆ ಮಾಡುತ್ತಾರೆ.

ಇಂತಹ ಮೋಸದಾಟ ಇಂದು ನಿನ್ನೆಯದಲ್ಲ. ಕಾಲ ಕಾಲಾಂತರ ದಿಂದಲೂ ನಡೆದು ಬಂದಿದೆ. ಇಂದಿಗೂ ನಡೆಯುತ್ತಿದೆ. ಇದಕ್ಕೆ ಮುಖ್ಯ ಕಾರಣ ಹಿಂದೆ ನಡೆದ ಸಂಗತಿಗಳನ್ನು ಜನ ಸುಲಭವಾಗಿ ಮರೆಯುವುದು. ಒಂದಾದರೆ ಮತ್ತೊಂದು ಹಣ ಹೂಡಿಕೆಯ ಬಗ್ಗೆ ಜನಗಳಿಗಿರುವ ಅಜ್ಞಾನ/ಮುಗ್ಧತೆ ಮತ್ತು ದುರಾಸೆ.

ತಿಳುವಳಿಕೆ ಇಲ್ಲದವರು, ಅಜ್ಞಾನಿಗಳು ಅಥವಾ ಮುಗ್ಧತೆ ಇಲ್ಲದವರು ಎಂದರೆ ಯಾರು?

ಚೆನ್ನಾಗಿ ವಿದ್ಯೆ ಬುದ್ಧಿ ಇದ್ದು, ಒಳ್ಳೆಯ ಅಧಿಕಾರದಲ್ಲಿಯೂ ಇದ್ದು ಆದರೆ ಹಣಕಾಸಿನ ನಿರ್ವಹಣೆಯಲ್ಲಿ ಹೆಚ್ಚಿನ ಪರಿಶ್ರಮವಾಗಲಿ ಅಥವಾ ಅನುಭವವಿಲ್ಲದವರೆಂದು ಹೇಳಬಹುದು. ಇಂತಹ ಜನ ಆ ಕಾಲಕ್ಕೂ ಇದ್ದರು ಇಂದಿಗೂ ಇದ್ದಾರೆ.

ಇದಕ್ಕೆ ಪೂರಕವಾಗಿ ಈಗ ಸುಮಾರು 60ವರ್ಷಗಳ ಹಿಂದಿನ ಪ್ರಕರಣವೊಂದನ್ನು ಉದಹರಿಸಬಹುದು.

ಆ ಕಾಲದ ನೆನಪಿದ್ದ ಎಷ್ಟೋ ಹಿರಿಯರಿಗೆ ಈಗಲೂ ನೆನಪಿರುವ ಹೆಸರು ಬಿ. ಎನ್. ಗೋಪಾಲ್‌ರಾವ್ ಅರ್ಥಾತ್ ಧರ್ಮರತ್ನಾಕರ ಗೋಪಾಲರಾವ್.

ಸಾಮಾನ್ಯ ಕುಟುಂಬದಿಂದ ಬಂದ ಈತ ಅಂದಿನ ಬ್ರಿಟಿಷರ

ಆಡಳಿತಾವಧಿಯಲ್ಲಿದ್ದ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ (ಭಾರತ ಸ್ವಾತಂತ್ರ್ಯ ಪಡೆದ ನಂತರದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ)ದಲ್ಲಿ ಸಾಮಾನ್ಯ ಗುಮಾಸ್ತನಾಗಿದ್ದ. ಹಣಕಾಸಿನ ವ್ಯವಹಾರದ ಬಗ್ಗೆ ಸಾಕಷ್ಟು ತಿಳಿದು ಕೊಂಡಿದ್ದವನಿಗೆ ತಾನೇ ಯಾಕೆ ಒಂದು ಹಣಕಾಸಿನ ಸಂಸ್ಥೆಯನ್ನು ಪ್ರಾರಂಭಿಸಬಾರದೆಂಬ ಯೋಚನೆ ಬಂದು ಒಂದು ಹಣಕಾಸು ಸಂಸ್ಥೆಯನ್ನು ಆರಂಭಿಸಿದ. ಜನಸಾಮಾನ್ಯರಿಗೆ ಅಧಿಕ ಬಡ್ಡಿ ಆಸೆ ತೋರಿಸಿ ಅವರಿಂದ ಹಣ ಸಂಗ್ರಹಿಸಿದ. ಅದನ್ನು ಹೆಚ್ಚಿನ ಬಡ್ಡಿಗೆ ಸಾಲ ನೀಡಲಾರಂಭಿಸಿದ. ಜನ ಹಣ ಇಡುವಂತೆ ಪ್ರಚಾರ ಮಾಡಲಾರಂಭಿಸಿದ. ಹೀಗಾಗಿ ಹೆಚ್ಚು ಹೆಚ್ಚು ಹಣ ಸಂಗ್ರಹವಾಗತೊಡಗಿತು. ತನ್ನ ಸಂಸ್ಥೆಯ ಏಳಿಗೆಗಾಗಿ, ಕೀರ್ತಿಗಾಗಿ ನಾನಾ ಸಂಘಸಂಸ್ಥೆಗಳಿಗೆ, ಗುಡಿ ಗೋಪುರಗಳಿಗೆ ಸಾರ್ವಜನಿಕ ಸಂಸ್ಥೆಗಳಿಗೆ, ಧರ್ಮಕಾರ್ಯಗಳಿಗೆ ಕೊಡುಗೈಯಿಂದ ದಾನ ಮಾಡತೊಡಗಿದ.

ಮಹಾರಾಜರಿಂದ "ಧರ್ಮರತ್ನಾಕರ" ಎಂಬ ಬಿರುದನ್ನೂ ಪಡೆದಿದ್ದ. ಅಧಿಕಾರದಲ್ಲಿದ್ದ ಹಿರಿಯ ಅಧಿಕಾರಿಗಳು, ಗಣ್ಯ ಮಹನೀಯರು ಇವನಲ್ಲಿ ಹಣವನ್ನು ಇಟ್ಟಿದ್ದರು.

ನೋಬಲ್ ಪ್ರಶಸ್ತಿ ವಿಜೇತರಾಗಿದ್ದ ಸರ್. ಸಿ.ವಿ.ರಾಮನ್ ಅವರೂ ಸಹ ತಮಗೆ ಸಂದ ಪ್ರಶಸ್ತಿಯ ಹಣವನ್ನೆಲ್ಲಾ ಗೋಪಾಲರಾಯರ ಸಂಸ್ಥೆಯಲ್ಲಿ ಠೇವಣಿ ಮಾಡಿದ್ದರು.

ಆದರೆ ಆದದ್ದೇನು? ಒಂದು ದಿನ ಇದ್ದಕ್ಕಿದ್ದಂತೆ ಗೋಪಾಲರಾಯನ ಸಾಮ್ರಾಜ್ಯ ಕುಸಿದು ಬಿದ್ದಿತು. ಅವನ ಸಂಸ್ಥೆ ಹೇಳ ಹೆಸರಿಲ್ಲದೆ ಹೋಯಿತು. ಅವನನ್ನು ನಂಬಿ ಜೀವಮಾನದ ಉಳಿತಾಯವನ್ನೆಲ್ಲಾ ಹೂಡಿದ್ದವರಿಗೆ ದೊಡ್ಡದಾದ ಪಂಗನಾಮ ಬಿದ್ದಿತ್ತು.

ಅಂದು ಸರ್.ಸಿ.ವಿ.ರಾಮನ್ ಹೇಳಿದ ಮಾತು " ನಾನು ನೋಬಲ್ ಬಹುಮಾನ ಪಡೆದಿದ್ದು ಸುಳ್ಳು. ಆ ಬಹುಮಾನ ಗೋಪಾಲರಾವ್ ಗೆ ಸೇರಬೇಕಾದ್ದು. ನೋಬಲ್ ಬಹುಮಾನ ಕೊಡುವುದು ನನ್ನ ಕೈಯಲ್ಲಿ ಇದ್ದಿದ್ದರೆ ಆ ಬಹುಮಾನವನ್ನು ಖಂಡಿತವಾಗಿ ನಾನೇ ಅವನಿಗೆ ನೀಡುತ್ತಿದ್ದೆ" ಎಂದು.

ಈಗಲೂ ಸಹ ಮತ್ತದೇ ತರಹದ ಘಟನೆಗಳು ಪುನರಾವರ್ತನೆ ಯಾಗುತ್ತಲೇ ಇವೆ. ಸಾವಿರಾರು ಮಂದಿ - ಹಲವಾರು ತಮ್ಮ ಮುಗ್ಧತೆಯಿಂದ ಹಣ ಕಳೆದುಕೊಂಡಂತೆ ಮತ್ತೆ ಹಲವರು ದುರಾಸೆಯಿಂದ ಕಳೆದುಕೊಳ್ಳುತ್ತಲೇ ಇದ್ದಾರೆ.

ಜನಗಳ ಮುಗ್ಧತೆಯನ್ನು, ಮೌಢ್ಯವನ್ನು, ದುರಾಸೆಯನ್ನು ತಮ್ಮ ಬಂಡವಾಳವಾಗಿ ಮಾಡಿಕೊಂಡು ಹಗಲು ದರೋಡೆ ಮಾಡುತ್ತಿರುವ ಸಂಸ್ಥೆಗಳು ಅಂದಿನಿಂದ ಇಂದಿನವರೆಗೆ ಅವ್ಯಾಹತವಾಗಿ ಬರುತ್ತಲೇ ಇವೆ. ಜನಗಳಿಗೆ ಟೋಪಿ ಹಾಕುವವರು ಹುಟ್ಟಿಕೊಳ್ಳುತ್ತಲೇ ಇದ್ದಾರೆ.

ಹೆಚ್ಚಿನ ಬಡ್ಡಿಯ ಆಮಿಷ ತೋರಿಸುವುದು, ಟಿ.ವಿ. ಫ್ರಿಡ್ಜು ಮುಂತಾದ ಬೆಲೆ ಬಾಳುವ ಸಾಮಾನುಗಳನ್ನು ಕಂಪನಿಯ ಬೆಲೆಗಿಂತ ಅರ್ಧ ಬೆಲೆಗೆ ನೀಡುವ ಆಕರ್ಷಕ ಜಾಹೀರಾತು ನೀಡಿ ಡಿಪಾಸಿಟ್ ಪಡೆಯುವುದು ಮುಂತಾದ ಹತ್ತು ಹಲವು ರೀತಿಯ ಮೋಸದ ತಂತ್ರಗಾರಿಕೆಯಲ್ಲಿ ಜನಗಳಿಂದ ಹಣವಸೂಲು ಮಾಡಿ ರಾತ್ರೋರಾತ್ರಿ ಊರು ಬಿಟ್ಟು ಕಣ್ಮರೆಯಾಗುವುದು. ಮತ್ತೊಂದು ಊರಿನಲ್ಲಿ ಇದೇ ಕೆಲಸವನ್ನು ಮುಂದುವರೆಸುವುದು ಹಲವರ ದಂಧೆಯಾಗಿದೆ.

ಇಂತಹ ಮೋಸಗಾರ ಸಂಸ್ಥೆಗಳಿಂದ ಜನ ಎಚ್ಚೆತ್ತುಗೊಳ್ಳಬೇಕು. ಇಂತಹ ಘಟನೆಗಳು ಪದೇ ಪದೇ ನಡೆಯುತ್ತಲೇ ಇರುತ್ತವೆ. ಪತ್ರಿಕೆಗಳಲ್ಲಿ ಬರುತ್ತಲೇ ಇರುತ್ತವೆ. ಆದರೂ ಜನ ದುರಾಸೆಯಿಂದ ಇಂತಹ ಸಂಸ್ಥೆಗಳಲ್ಲಿ ಹಣವನ್ನು ತೊಡಗಿಸುತ್ತಲೇ ಇರುತ್ತಾರೆ.

ಇತ್ತೀಚೆಗೆ ನಡೆದ ಒಂದು ಘಟನೆಯನ್ನು ಇಲ್ಲಿ ತಿಳಿಯಹೇಳಲು ಇಚ್ಛಿಸುತ್ತೇನೆ. ಇಂತಹುದೇ ಒಂದು ಸಂಸ್ಥೆ ಬೆಂಗಳೂರಿನ ಭವ್ಯ ಸಭಾಂಗಣದಲ್ಲಿ "ಹೂಡಿಕೆದಾರರ ಸಮಾವೇಶ"ವನ್ನು ಆಯೋಜಿಸಿತ್ತು. ಕೆಲವಾರು ಪ್ರಸಿದ್ಧ ವ್ಯಕ್ತಿಗಳನ್ನು ಸಮಾರಂಭದ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿ ತಮ್ಮ ಸಂಸ್ಥೆಯ ಬಗ್ಗೆ ಅತಿಯಾದ ಆಕರ್ಷಕ ರೀತಿಯಲ್ಲಿ ಪ್ರಚಾರ ನಡೆಸಿತು. ಹೆಚ್ಚಿನ ಬಡ್ಡಿದರವನ್ನು ನೀಡುವುದಾಗಿ ತಾವು ಮುದ್ರಿಸಿದ್ದ ಕರಪತ್ರಗಳಲ್ಲಿ ಸೂಚಿಸಿದ್ದರು. ಅದಕ್ಕೆ ಮರುಳಾದ ಹಲವಾರು ಮಂದಿ ಸ್ಥಳದಲ್ಲಿಯೇ ಡಿಪಾಸಿಟ್ ನೀಡಿದರು. ಅವರೆಲ್ಲರೂ ವಿದ್ಯಾವಂತರೇ, ಮಧ್ಯಮವರ್ಗದವರೇ, ವ್ಯವಹಾರ ನಿಪುಣರೇ, ಅವರಲ್ಲಿ ಕೆಲವರನ್ನು ಈ ಬಗ್ಗೆ ವಿಚಾರಿಸಿದಾಗ ಅವರೇನೆಂದರು ಗೊತ್ತೇ? "ಬಿಡಿ ಸಾರ್, ಇಷ್ಟು ಹೆಚ್ಚಿನ ಬಡ್ಡಿದರದಿಂದ ನಮಗೆ 5-6 ತಿಂಗಳುಗಳಲ್ಲಿ ನಮ್ಮ ಹಣವಾಪಸು ಬಂದು ಬಿಟ್ಟಿರುತ್ತದೆ. ಮುಂದೆ ಸಂಸ್ಥೆ ಇದ್ದು ಬಡ್ಡಿ ಬಂದರೆ ಅಷ್ಟು ನಮಗೆ ಲಾಭವೇ. ಅಕಸ್ಮಾತ್ ಸಂಸ್ಥೆ ಮುಳುಗೇ ಹೋದರೆ ನಮಗೆ ನಷ್ಟವೇನೂ ಇಲ್ಲ."

ಅದರಂತೆಯೇ ಆ ಸಂಸ್ಥೆ ನೂರಾರು ಜನರಿಂದ ಠೇವಣಿ ಸ್ವೀಕರಿಸಿತು. ಮುಂಚಿನವರಿಗೆ ಅಸಲಾದರೂ ಸಿಕ್ಕಿತು. ನಂತರದವರಿಗೆ ಬಡ್ಡಿಯೂ ಇಲ್ಲ, ಅಸಲೂ ಇಲ್ಲ. ಸಿಕ್ಕಿದ್ದು ಪಂಗನಾಮ.

ಮೇಲೆ ಹೇಳಿದ ಘಟನೆಗಳಿಂದ ಜನ ಎಚ್ಚೆತ್ತುಕೊಳ್ಳಬೇಕು. ಅಂತಹ ಮೂರ್ಖತನದ ಬೇಜವಾಬ್ದಾರಿತನಕ್ಕೆ ಶರಣಾಗಬಾರದು. ಇನ್ನೊಬ್ಬರಿಗಾದ ಮೋಸದಿಂದ ನಾವು ಪಾಠಕಲಿಯಬೇಕು. ನಾವೇ ಮೋಸ ಹೋಗಿ ಪಾಠ ಕಲಿಯಬಾರದು. **"ರಾತ್ರಿಕಂಡ ಬಾವಿಯಲ್ಲಿ ಹಗಲು ಹೋಗಿ ಬಿದ್ದರಂತೆ"** ಎಂಬ ಗಾದೆಯ ಮಾತಿನಂತೆ ವಂಚಕರ ಮಾತಿಗೆ ಆಮಿಷಕ್ಕೆ ಬಲಿಯಾಗಬಾರದು.

ತಮ್ಮ ಜೀವಮಾನವಿಡೀ ದುಡಿದು ಸಂಪಾದಿಸಿದ ಹಣ ತಮ್ಮ ನಿವೃತ್ತ ಜೀವನದ ಊರುಗೋಲಾದ ಹಣ - ತಮ್ಮ ನಂತರ ತಮ್ಮ ವಾರಸುದಾರರಿಗೆ ಸೇರಬೇಕಾದ ಹಣ - ತಮ್ಮ ಮೂರ್ಖತನದಿಂದ ದುರಾಸೆಯಿಂದ ವಂಚಕರ ಪಾಲಾಗದಂತೆ ಎಚ್ಚರವಹಿಸಬೇಕಾದುದು ಅತಿ ಅಗತ್ಯ.

ಬೇಕೆಂದಾಗ ಹಣ ಪಡೆಯುವ ಸೌಲಭ್ಯ (Liquidity)

ಹಣ ಹೂಡಿಕೆಯಲ್ಲಿ ಗಮನ ಕೊಡಬೇಕಾದ ಮತ್ತೊಂದು ಅಂಶವೆಂದರೆ ಬೇಕೆಂದಾಗ ನಾವು ಹೂಡಿದ ಹಣವನ್ನು ಅವಧಿಗೆ ಮುಂಚೆ ಪಡೆಯುವ ಅವಕಾಶವಿರುವುದು. ಕೆಲವೊಂದು ಸಂದರ್ಭದಲ್ಲಿ ಒಂದು ನಿರ್ದಿಷ್ಟ ಅವಧಿಗೆ ಹೂಡಿದ ಹಣವನ್ನು ಹಿಂದಕ್ಕೆ ಪಡೆಯಬೇಕಾದ ತುರ್ತು ಸಂದರ್ಭಗಳು ಬಂದೊದಗುತ್ತವೆ. ಕೆಲವೊಮ್ಮೆ ಸಂಸಾರದಲ್ಲಿ ಎದುರಾಗುವ ಅನಿರೀಕ್ಷಿತ ಘಟನೆಗಳು, ಅನಿವಾರ್ಯ ಸಂದರ್ಭಗಳಲ್ಲಿ ಹಣದ ಅವಶ್ಯಕತೆ ಬಂದೊದಗುತ್ತದೆ. ಅಂತಹ ಸಂದರ್ಭಗಳಲ್ಲಿ ಹಣವನ್ನು ಹಿಂದಕ್ಕೆ ಪಡೆಯಬೇಕಾಗುತ್ತದೆ. ಆಗ ನಮ್ಮ ಠೇವಣಿಯ ಹಣ ನಮ್ಮ ಕೈಗೆ ಸಿಗದಿದ್ದರೆ, ನೆರವಿಗೆ ಒದಗದಿದ್ದರೆ ಪ್ರಯೋಜನವಾದರೂ ಏನು? ಇನ್ನೊಬ್ಬರತ್ತ ಕೈ ಚಾಚುವ ಪರಿಸ್ಥಿತಿ ಬರಬಾರದು. ಹಾಗಾಗಿ ಬೇಕೆಂದಾಗ ಹಣವನ್ನು ಹಿಂದಕ್ಕೆ ಪಡೆಯುವ ಸೌಲಭ್ಯ ಸೌಕರ್ಯ ಎಲ್ಲಿರುತ್ತದೆಯೋ ಅಂತಹ ಅವಕಾಶವನ್ನು ಪಡೆದುಕೊಳ್ಳಬೇಕಾಗುತ್ತದೆ.

ಈ ಮೇಲಿನ ಮೂರೂ ಅಂಶಗಳನ್ನು ಗಮನಿಸಿ ಅಂತಹ ಕಡೆಗಳಲ್ಲಿ ಅಂದರೆ - ಭದ್ರತೆ, ಪ್ರತಿಫಲ ಹಾಗೂ ಅಗತ್ಯವಿದ್ದಾಗ ಹಿಂದಕ್ಕೆ ಪಡೆಯಬಹುದಾದ ಅವಶ್ಯಕತೆ ಇರುವಂತಹ ಸ್ಥಳಗಳಲ್ಲಿ ಹಣ ಹೂಡಿದಾಗ ಹೂಡಿಕೆದಾರರು ಹೂಡಿಕೆಯ ಸಂಪೂರ್ಣ ಪ್ರಯೋಜನ ಪಡೆಯುವುದೇ ಅಲ್ಲದೆ, ನಿವೃತ್ತಿಯ ನಂತರ ತನ್ನ ಜೀವಿತಾವಧಿಯವರೆಗೂ ನಿಶ್ಚಿಂತೆಯಿಂದ ಇದ್ದು ಪ್ರತಿ ತಿಂಗಳೂ ಅದರಿಂದ ಬರುವ ಬಡ್ಡಿಯ ಹಣದಿಂದ ಇನ್ನೊಬ್ಬರ ಹಂಗಿಲ್ಲದೆ ಜೀವನ ನಡೆಸ ಬಹುದು.

ಹಣ ಹೂಡಿಕೆಗೆ ಇರುವ ಹಲವು ಅವಕಾಶಗಳು

ಸುರಕ್ಷತೆ, ಪ್ರತಿಫಲ ಹಾಗೂ ಬೇಕೆಂದಾಗ ಹಣ ಹಿಂತಿರುಗಿ ಪಡೆಯಲು ಇರುವ ಅವಕಾಶಗಳು ಇವುಗಳನ್ನು ಗಮನದಲ್ಲಿರಿಸಿಕೊಂಡು ಪರಿಶೀಲಿಸಿದಾಗ, ಕೆಳಕಂಡ ಠೇವಣಿಗಳಲ್ಲಿ ಹಣ ಹೂಡುವುದು ಸೂಕ್ತವೆಂದು ಕಂಡು ಬರುತ್ತದೆ.



1) ಅಂಚೆ ಕಛೇರಿಯ ಮಾಸಿಕ ವರಮಾನ ಯೋಜನೆ –

Post Office Monthly Income Scheme

ಹೆಸರೇ ಸೂಚಿಸುವಂತೆ ಪ್ರತಿ ತಿಂಗಳೂ ಆದಾಯ (ಬಡ್ಡಿ) ತರುವ ಅಂಚೆ ಕಛೇರಿಯ ಉಳಿತಾಯ ಯೋಜನೆ ಇದಾಗಿದೆ. ಅಂಚೆ ಕಛೇರಿಯಲ್ಲಿರುವ ಅನೇಕ ಉಳಿತಾಯ ಯೋಜನೆಗಳಲ್ಲಿ ನಿವೃತ್ತರು ಸುರಕ್ಷಿತವಾಗಿ ಹೂಡಬಹುದಾದ ಯೋಜನೆಯೆಂದು ಹೇಳಬಹುದು.

ಇದರ ವೈಶಿಷ್ಟ್ಯ ಹೀಗಿದೆ :

ಬಡ್ಡಿಯ ದರ : ವಾರ್ಷಿಕ ಶೇ.8.2 ಇದನ್ನು ಪ್ರತಿ ತಿಂಗಳೂ ನೀಡಲಾಗುತ್ತದೆ. ಅಂಚೆ ಕಛೇರಿಯಲ್ಲಿಯೇ ಉಳಿತಾಯ ಖಾತೆಯನ್ನು ತೆಗೆದರೆ ಪ್ರತಿತಿಂಗಳೂ ಸಂದಾಯವಾಗುವ ಬಡ್ಡಿಯನ್ನು ಆ ಖಾತೆಗೆ ಜಮಾ ಮಾಡಲಾಗುವುದು. ಅವಶ್ಯಕತೆಗನುಗುಣವಾಗಿ ಬೇಕೆಂದಾಗ ಹಣವನ್ನು ಹಿಂದಕ್ಕೆ ಪಡೆಯಬಹುದು. ಅಥವಾ ಪ್ರತಿ ತಿಂಗಳೂ ವಿತ್‌ಡ್ರಾ ಸ್ಲಿಪ್ ಮುಖಾಂತರ ಬಡ್ಡಿ ಹಣವನ್ನು ಪಡೆಯಬಹುದು.

ಠೇವಣಿಯ ಅವಧಿ : ಐದು ವರ್ಷ

ಹೂಡಬಹುದಾದ ಕನಿಷ್ಠ/ಗರಿಷ್ಠ ಮೊಬಲಗು : ಕನಿಷ್ಠ ಒಂದು ಸಾವಿರದ ಐದು ನೂರು (1500) ರೂಪಾಯಿಗಳು.

ಒಂದೇ ಹೆಸರಿನಲ್ಲಿ ಹೂಡಬಹುದಾದ ಗರಿಷ್ಠ ಮೊತ್ತ : 4,50,000.00 ರೂ

ಜಂಟಿ ಹೆಸರಿನಲ್ಲಿ ಹೂಡಬಹುದಾದ ಗರಿಷ್ಠ ಮೊತ್ತ : 9,00,000.00 ರೂ.

ಅವಧಿಗೆ ಮುನ್ನ ಹಣ ಪಡೆಯುವ ಸೌಕರ್ಯ : ಠೇವಣಿ ಇಟ್ಟ ಒಂದು ವರ್ಷದೊಳಗೆ ಹಣವನ್ನು ಹಿಂದಕ್ಕೆ ಪಡೆಯಲಾಗುವುದಿಲ್ಲ. ಆದರೆ ಒಂದು ವರ್ಷದ ನಂತರ ಕೆಲವು ನಿಬಂಧನೆಗೊಳಪಟ್ಟು ಹಣವನ್ನು ಹಿಂದಕ್ಕೆ ಪಡೆಯು

ಸೌಲಭ್ಯವಿರುತ್ತದೆ. 1 ರಿಂದ 3 ವರ್ಷಗಳವರೆಗೆ ಶೇ. 2% ರಷ್ಟು, 3 ರಿಂದ 5 ವರ್ಷಗಳವರೆಗೆ ಶೇ.1 ರಷ್ಟು ಹಣವನ್ನು ಕಡಿತಗೊಳಿಸಲಾಗುವುದು. ಐದು ವರ್ಷಗಳ ನಂತರ ಪೂರ್ತಿ ಹಣವನ್ನು ಹಿಂದಕ್ಕೆ ಪಡೆಯಬಹುದು.

ಇತರೆ ಸೌಲಭ್ಯಗಳು : ಬಡ್ಡಿಯ ಹಣವನ್ನು ನೀಡುವಾಗ –

1) ಮೂಲದಲ್ಲಿ ಆದಾಯ ತೆರಿಗೆಯನ್ನು ಕಡಿತಗೊಳಿಸುವುದಿಲ್ಲ.

2) ಒಂದು ಅಂಚೆ ಕಛೇರಿಯಿಂದ ಮತ್ತೊಂದು ಅಂಚೆ ಕಛೇರಿಗೆ ವರ್ಗಾಯಿಸುವ ಸೌಲಭ್ಯವನ್ನು, ಅಗತ್ಯವಿದ್ದಲ್ಲಿ ಪಡೆಯಬಹುದು.

3) ನಾಮ ನಿರ್ದೇಶನದ ಸೌಲಭ್ಯವಿರುತ್ತದೆ.

ಹಿರಿಯ ನಾಗರಿಕರ ಉಳಿತಾಯ ಯೋಜನೆ 2004

Senior Citizen Savings Scheme 2004

ಹಿರಿಯ ನಾಗರಿಕರು ತಮ್ಮ ಹಣವನ್ನು ಸುರಕ್ಷಿತವಾಗಿಟ್ಟು ಅದರಿಂದ ಬರುವ ನಿಗದಿತ ಆದಾಯದಿಂದ ಸುಖೀ ಜೀವನವನ್ನು ನಡೆಸಲೆಂಬ ಸುದುದ್ದೇಶದಿಂದ ಕೇಂದ್ರ ಸರ್ಕಾರ ಹಿರಿಯ ನಾಗರಿಕರಿಗಾಗಿಯೇ ಉಳಿತಾಯ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯು ಆಗಸ್ಟ್ 2, 2004 ರಿಂದ ಜಾರಿಗೆ ಬಂದಿದೆ.

ಅರವತ್ತು ವರ್ಷಗಳನ್ನು ಪೂರೈಸಿರುವ ಯಾರು ಬೇಕಾದರೂ ಈ ಯೋಜನೆಯಡಿಯಲ್ಲಿ ಠೇವಣಿ ಮಾಡಲು ಅವಕಾಶವಿದೆ. ಅಲ್ಲದೆ 55 ವರ್ಷ ದಾಟಿ ನಿವೃತ್ತರಾದ ಅಥವಾ ಸ್ವಯಂ ನಿವೃತ್ತಿ ಪಡೆದವರೂ ಸಹ ಈ ಯೋಜನೆಯಡಿಯಲ್ಲಿ ಹಣವನ್ನು ಠೇವಣಿ ಮಾಡಬಹುದು. ಆದರೆ ಇಂತಹವರು ತಾವು ನಿವೃತ್ತರಾದ ಮೂರು ತಿಂಗಳುಗಳೊಳಗೆ ಠೇವಣಿಯನ್ನು ಮಾಡಬೇಕು.

ಅಂಚೆ ಕಛೇರಿಗಳಲ್ಲಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಪ್ರಧಾನ ಕಛೇರಿಗಳಲ್ಲಿ ಈ ಯೋಜನೆಯಲ್ಲಿ ಹಣ ಹೂಡಬಹುದು. ಠೇವಣಿಯನ್ನು ಒಂಟಿಯಾಗಿ (ಒಂದೇ ಹೆಸರಿನಲ್ಲಿ) ಅಥವಾ ಜಂಟಿಯಾಗಿ ತೊಡಗಿಸಬಹುದು. ಜಂಟಿಯಾಗಿ ಠೇವಣಿ ಮಾಡಿದಾಗ ಮೊದಲ ಠೇವಣಿದಾರರಿಗೆ ಮಾತ್ರ ವಯಸ್ಸಿನ ನಿರ್ಬಂಧವಿರುತ್ತದೆಯೇ ಹೊರತು ಮತ್ತೊಬ್ಬ ಠೇವಣಿದಾರರಿಗೆ ವಯಸ್ಸಿನ

ನಿರ್ಬಂಧವಿರುವುದಿಲ್ಲ.

ಈ ಯೋಜನೆಯ ಗಮನಾರ್ಹ ಅಂಶವೆಂದರೆ ಗಂಡ/ಹೆಂಡತಿಯನ್ನು ಹೊರತುಪಡಿಸಿ ಇನ್ನೊಬ್ಬರ ಹೆಸರಿನೊಂದಿಗೆ ಜಂಟಿಖಾತೆಯನ್ನು ತೆರೆಯುವಂತಿಲ್ಲ.

ಅನಿವಾಸಿ ಭಾರತೀಯರು (ಎನ್.ಆರ್.ಐ) ಹಾಗೂ ಹಿಂದೂ ಅವಿಭಾಜ್ಯ ಕುಟುಂಬದವರು ಈ ಯೋಜನೆಯಲ್ಲಿ ಹಣ ತೊಡಗಿಸಲಾಗುವುದಿಲ್ಲ.

ಠೇವಣಿದಾರರು ವಯಸ್ಸಿನ ಸಮರ್ಥನಾ ಪತ್ರ, ಪ್ಯಾನ್ ಕಾರ್ಡ್ ಮತ್ತು ಇತ್ತೀಚಿನ 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕಾಗುತ್ತದೆ.

ನಾಮ ನಿರ್ದೇಶನದ ಸೌಲಭ್ಯವನ್ನು ಸಹ ಬಳಸಿಕೊಳ್ಳುವ ಅವಕಾಶವಿದೆ.

ಯೋಜನೆಯ ವೈಶಿಷ್ಟ್ಯ

ಬಡ್ಡಿದರ : ವಾರ್ಷಿಕ ಶೇಕಡಾ 9.3 ರಷ್ಟು ಬಡ್ಡಿ. ಪ್ರತಿ ಮೂರು ತಿಂಗಳಿಗೊಮ್ಮೆ ಅಂದರೆ ಮಾರ್ಚ್ 31, ಜೂನ್ 30, ಸೆಪ್ಟೆಂಬರ್ 30 ಹಾಗೂ ಡಿಸೆಂಬರ್ 31 ರಂದು ಬಡ್ಡಿಯನ್ನು ನೀಡಲಾಗುತ್ತದೆ.

ಠೇವಣಿಯನ್ನು (ಅಂಚೆ ಕಛೇರಿಯಲ್ಲಾಗಲಿ/ರಾಷ್ಟ್ರೀಕೃತ ಬ್ಯಾಂಕಿನಲ್ಲಿಯಾಗಲೀ) ಮಾಡಿರುವ ಕಡೆ, ಉಳಿತಾಯ ಖಾತೆಯನ್ನು ತೆಗೆದರೆ ಬಡ್ಡಿಯನ್ನು ಆ ಖಾತೆಗೆ ವರ್ಗಾಯಿಸಲಾಗುವುದು. ನಮ್ಮ ಅವಶ್ಯಕತೆಗನುಗುಣವಾಗಿ ನಮಗೆ ಬೇಕಾದಾಗ ಹಣವನ್ನು ಹಿಂದಕ್ಕೆ ಪಡೆಯಬಹುದು.

ಠೇವಣಿ ಅವಧಿ : ಠೇವಣಿ ಅವಧಿ 5 ವರ್ಷಗಳು. ಐದು ವರ್ಷಗಳ ನಂತರ ಮತ್ತೆ ಮೂರು ವರ್ಷಗಳಿಗೆ ವಿಸ್ತರಿಸಿಕೊಳ್ಳಬಹುದು.

ಮಿತಿ : ಕನಿಷ್ಠ ಒಂದು ಸಾವಿರ ಮತ್ತು ನಂತರ ಒಂದು ಸಾವಿರ ರುಪಾಯಿಗಳ ಗುಣಕದಲ್ಲಿ ಗರಿಷ್ಠ 15 ಲಕ್ಷ ರೂಪಾಯಿಗಳು.

ಅವಧಿಗೆ ಮುನ್ನ ಹಣ ಪಡೆಯುವ ಸೌಕರ್ಯ : ಠೇವಣಿ ಇಟ್ಟ ದಿನದಿಂದ ಒಂದು ವರ್ಷದವರೆಗೆ ಹಣವನ್ನು ವಾಪಸ್ಸು ಪಡೆಯುವಂತಿಲ್ಲ. ನಂತರದ ದಿನಗಳಲ್ಲಿ ಕೆಲವೊಂದು ನಿಬಂಧನೆಗೊಳಪಟ್ಟಂತೆ ಹಣವನ್ನು ಹಿಂತಿರುಗಿ ಪಡೆಯಬಹುದು.

ಒಂದು ವರ್ಷದ ನಂತರ ಎರಡು ವರ್ಷಕ್ಕೆ ಮುಂಚೆ ವಾಪಸ್ ಪಡೆದರೆ ಶೇ.1.5, ಎರಡು ವರ್ಷಗಳ ನಂತರ ವಾಪಸ್ ಪಡೆದರೆ ಶೇ.1 ರಷ್ಟು ಹಣವನ್ನು ಕಡಿತಗೊಳಿಸಲಾಗುವುದು.

ಠೇವಣಿದಾರನ ಅಗತ್ಯತೆಗಳಿಗನುಗುಣವಾಗಿ ಎಷ್ಟು ಖಾತೆಗಳನ್ನು ಬೇಕಾದರೂ ತೆಗೆಯಬಹುದು. ಆದರೆ ಪ್ರತಿ ಸಲ ಠೇವಣಿ ಮಾಡುವಾಗಲೂ ಹೊಸ ಖಾತೆಯನ್ನು ತೆರೆಯಬೇಕು. ಒಂದು ಸಲ ತೆರೆದಿರುವ ಖಾತೆಗೆ ಪುನಃ ಠೇವಣಿ ಜಮಾಮಾಡಲು ಬರುವುದಿಲ್ಲ. ಅಲ್ಲದೆ ಒಂದು ತಿಂಗಳಿನ ಅವಧಿಯಲ್ಲಿ ಒಂದು ಖಾತೆಯನ್ನು ಮಾತ್ರ ತೆರೆಯಬಹುದು. ಹೀಗೆ ತೆರೆದ ಎಲ್ಲಾ ಖಾತೆಗಳ ಒಟ್ಟು ಠೇವಣಿ ಮೊತ್ತವು 15 ಲಕ್ಷಕ್ಕೆ ಮಾತ್ರ ಸೀಮಿತವಾಗಿರಬೇಕು.

ಠೇವಣಿ ಮಾಡುವ ಮೊತ್ತವು ಒಂದು ಲಕ್ಷಕ್ಕಿಂತ ಕಡಿಮೆ ಇದ್ದರೆ ಅದನ್ನು ನಗದು ಅಥವಾ ಚೆಕ್ ಮುಖಾಂತರ ಪಾವತಿ ಮಾಡಬಹುದು. ಆದರೆ ಒಂದು ಲಕ್ಷಕ್ಕಿಂತ ಹೆಚ್ಚಿಗೆ ಠೇವಣಿ ಮಾಡುವಾಗ ಚೆಕ್ ಅಥವಾ ಡಿ.ಡಿ ಮುಖಾಂತರವೇ ಮಾಡಬೇಕಾದ್ದು ಕಡ್ಡಾಯ. ಅಲ್ಲದೆ ಸುರಕ್ಷಿತತೆಯ ದೃಷ್ಟಿಯಿಂದಲೂ ಸಹ ಚೆಕ್ ಮುಖಾಂತರವೇ ವ್ಯವಹಾರ ಮಾಡುವುದು ಸೂಕ್ತ.


ಬಡ್ಡಿಯ ಮೇಲಿನ ತೆರಿಗೆ : ಈ ಯೋಜನೆಯಡಿಯಲ್ಲಿ ಸಂದಾಯವಾಗುವ ಬಡ್ಡಿಗೆ ಆದಾಯ ತೆರಿಗೆ ಅನ್ವಯಿಸುತ್ತದೆ. ಮತ್ತು ಬಡ್ಡಿಯ ಸಂದಾಯ ಮಾಡುವಾಗ ಮೂಲದಲ್ಲಿಯೇ ತೆರಿಗೆಯನ್ನು ಕಡಿತಗೊಳಿಸಲಾಗುತ್ತದೆ.

ಆದರೆ ಮೂಲದಲ್ಲಿ ಆದಾಯ ತೆರಿಗೆಯ ಕಡಿತದಿಂದ ಮುಕ್ತರಾಗಲು ನಿಗದಿತ 15ಜಿ / 15ಹೆಚ್‌ನ್ನು ಭರ್ತಿ ಮಾಡಿಕೊಡಬೇಕು. 60 ವರ್ಷ ಪೂರೈಸಿರುವ ಹಿರಿಯನಾಗರಿಕರು 15 ಹೆಚ್ ಹಾಗೂ 55 ರಿಂದ 60 ವರ್ಷಗಳ ನಡುವಿನಲ್ಲಿರುವ ಠೇವಣಿದಾರರು 15 ಜಿಯನ್ನು ಉಪಯೋಗಿಸಬಹುದು. ಅರ್ಜಿಗಳನ್ನು ದ್ವಿಪ್ರತಿಯಲ್ಲಿ ನೀಡಬೇಕಾಗುತ್ತದೆ.

ಇತ್ತೀಚೆಗೆ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ಹಿರಿಯ ನಾಗರಿಕರ ಉಳಿತಾಯ ಯೋಜನೆಯಡಿಯಲ್ಲಿ ಹೂಡಲಾಗುವ ಠೇವಣಿಗೆ ಒಂದು ಲಕ್ಷರೂಪಾಯಿಗಳವರೆಗೆ (ಆದಾಯ ತೆರಿಗೆ ಕಾಯಿದೆಯ ಸೆಕ್ಷನ್ 80 ಸಿ ಅಡಿಯಲ್ಲಿ) ತೆರಿಗೆ ವಿನಾಯತಿಯನ್ನು ಘೋಷಿಸಿದ್ದಾರೆ. ಈ ವಿನಾಯಿತಿಯು ಏಪ್ರಿಲ್ 1, 2008 ರಿಂದ ಜಾರಿಗೆ ಬಂದಿದೆ.

ಅಂಚೆ ಕಛೇರಿಯಲ್ಲಿ ನಿಗದಿತ ಠೇವಣಿ

Post Office Term Deposit



ಅಂಚೆ ಕಛೇರಿಗಳಲ್ಲಿಯೂ ಸಹ, ಬ್ಯಾಂಕುಗಳಲ್ಲಿ ಠೇವಣಿ ಇಡುವಂತೆ ನಿಗದಿತ ಠೇವಣಿಯನ್ನು ಮಾಡಬಹುದು. ಕನಿಷ್ಠ ಒಂದು ವರ್ಷಕ್ಕೆ ನಂತರದಲ್ಲಿ ಎರಡು ವರ್ಷ ಮೂರು ವರ್ಷಗಳ ಅವಧಿಗೆ ಹಾಗೂ 5 ವರ್ಷಗಳ ಗರಿಷ್ಠ ಅವಧಿಗೆ ಠೇವಣಿ ಮಾಡಬಹುದು.

ಬಡ್ಡಿದರ :

ಒಂದು ವರ್ಷಕ್ಕೆ – ಶೇ.8.2 ಎರಡು ವರ್ಷಕ್ಕೆ – ಶೇ.8.3

ಮೂರು ವರ್ಷಕ್ಕೆ – ಶೇ. 8.4 ಐದು ವರ್ಷಕ್ಕೆ – ಶೇ. 8.5

ಠೇವಣಿಯನ್ನು ಕನಿಷ್ಠ 200 ರೂಪಾಯಿಗಳಿಂದ ಆರಂಭಿಸಬಹುದು ಹಾಗೂ ಯಾವುದೇ ಗರಿಷ್ಠಮಿತಿಯಿಲ್ಲದೆ ಎಷ್ಟು ಬೇಕಾದರೂ ಹಣವನ್ನು ಹೂಡಬಹುದು. ಆದರೆ ಠೇವಣಿ 200 ರೂಪಾಯಿಗಳ ಗಣಕದಲ್ಲಿ ಇರತಕ್ಕದ್ದು.

ಬಡ್ಡಿಯನ್ನು ವಾರ್ಷಿಕವಾಗಿ ನೀಡಲಾಗುವುದು. ಆದರೆ ಬಡ್ಡಿಯ ಲೆಕ್ಕಾಚಾರ ಮೂರು ತಿಂಗಳಿಗೊಮ್ಮೆ ಮಾಡಲಾಗುವುದು.

ಠೇವಣಿಯನ್ನು ಆರು ತಿಂಗಳಿಗೆ ಮುಂಚೆ ಹಿಂದಕ್ಕೆ ಪಡೆಯಲಾಗುವುದಿಲ್ಲ. ಆದರೆ ಆರು ತಿಂಗಳ ನಂತರ ಹಿಂದಕ್ಕೆ ಪಡೆಯಬಹುದು. ಹಾಗೆ ಒಂದು ವರ್ಷದ ಒಳಗೆ ಹಿಂತಿರುಗಿ ಪಡೆಯುವ ಹಣಕ್ಕೆ ಬಡ್ಡಿಯನ್ನು ನೀಡಲಾಗುವುದಿಲ್ಲ. ಒಂದು ವರ್ಷದ ನಂತರ ಹಿಂತಿರುಗಿ ಪಡೆಯುವ ಹಣಕ್ಕೆ ಠೇವಣಿಯ ಹಣಕ್ಕೆ ನಿಗದಿಗೊಳಿಸಲಾಗಿರುವ ಬಡ್ಡಿಯ ದರದಲ್ಲಿ ಶೇಕಡ 2 ರಷ್ಟನ್ನು ಕಡಿಮೆ ಗೊಳಿಸಲಾಗುವುದು.

ಅಂಚೆ ಕಛೇರಿಯಲ್ಲಿ ಹೂಡಿಕೆಗೆ ಇರುವ ಇತರ ಅವಕಾಶಗಳು

ಈಗಾಗಲೇ ತಿಳಿಸಿದ ಮಾಸಿಕ ವರಮಾನ ಯೋಜನೆ, ಹಿರಿಯ ನಾಗರಿಕ ಉಳಿತಾಯ ಯೋಜನೆ ಹಾಗೂ ನಿಗದಿತ ಠೇವಣಿಗಳೇ ಅಲ್ಲದೇ ಈ ಕೆಳಕಂಡ ಯೋಜನೆಗಳೂ ಅಂಚೆ ಕಛೇರಿಯಲ್ಲೂ ಲಭ್ಯವಿದೆ.

ಅಂಚೆ ಕಛೇರಿಯ ಉಳಿತಾಯ ಖಾತೆ : ಒಂದೇ ಹೆಸರಿನಲ್ಲಿ ಅಥವಾ ಇಬ್ಬರು ಅಥವಾ ಮೂರು ಜನ ವಯಸ್ಕರೊಂದಿಗೆ ಸೇರಿ ಜಂಟೀ ಖಾತೆಯನ್ನು ತೆಗೆಯಬಹುದು.

ಸಾಮಾನ್ಯ ಖಾತೆಗೆ ಕನಿಷ್ಠ 50 ರೂಗಳು ಹಾಗೂ ಚೆಕ್ ಸೌಲಭ್ಯವಿರುವ ಜೊತೆಗೆ 250 ರೂಗಳ ಕನಿಷ್ಠ ಬ್ಯಾಲೆನ್ಸ್ ಇರಬೇಕು.

ಒಂದೇ ಹೆಸರಿನಲ್ಲಿರುವ ಖಾತೆಯಲ್ಲಿ ಇರಬಹುದಾದ ಗರಿಷ್ಠ ಮೊತ್ತ 1,00,000ರೂ ಹಾಗೂ ಜಂಟೀ ಖಾತೆಯಲ್ಲಿರಬಹುದಾದ ಗರಿಷ್ಠ ಮೊತ್ತ 2,00,000 ರೂಗಳು.

ವಾರ್ಷಿಕ ಶೇಕಡಾ 4 ರ ದರದಲ್ಲಿ ಬಡ್ಡಿಯನ್ನು ನೀಡಲಾಗುವುದು. ನಾಮ ನಿರ್ದೇಶನದ ಸೌಲಭ್ಯವಿರುವುದು.

ಆವರ್ತ ಠೇವಣಿ – Recurring Deposit

5 ವರ್ಷಗಳ ಅವಧಿಯ ಆವರ್ತಕ ಠೇವಣಿಯನ್ನು ಕನಿಷ್ಠ 10 ರೂ. ಗಳೊಂದಿಗೆ ಆರಂಭಿಸಬಹುದು.

5 ವರ್ಷದ ಆವರ್ತಕ ಠೇವಣಿಗೆ ಶೇ. 8.4 ಬಡ್ಡಿಯನ್ನು ನೀಡಲಾಗುತ್ತದೆ.

ಸಾರ್ವಜನಿಕ ಭವಿಷ್ಯ ನಿಧಿ – Public Provident Fund

ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 500 ರೂಗಳನ್ನು ಠೇವಣಿ ಮಾಡಬಹುದು. ಒಂದು ವರ್ಷದಲ್ಲಿ ಹೂಡಬಹುದಾದ ಗರಿಷ್ಠ ಮೊತ್ತ 70,000 ರೂಗಳು. ಒಂದು ವರ್ಷದಲ್ಲಿ 12 ಕಂತುಗಳಲ್ಲಿ ಈ ಮೊಬಲಗನ್ನು ಸಂದಾಯ ಮಾಡಬಹುದು. ವಾರ್ಷಿಕ ಬಡ್ಡಿಯದರ ಶೇಕಡ 8.8 ಹಾಗೂ ಈ ಬಡ್ಡಿಯ ಹಣವು ಆದಾಯ ತೆರಿಗೆಯಿಂದ ಮುಕ್ತವಾಗಿರುತ್ತದೆ.

ಅಂಚೆ ಕಛೇರಿ ಅಥವಾ ಈ ಖಾತೆಯ ಸೌಲಭ್ಯವಿರುವ ಬ್ಯಾಂಕುಗಳಲ್ಲಿ ಒಂದು ಖಾತೆಯನ್ನು ಮಾತ್ರ ತೆಗೆಯಲು ಅವಕಾಶವಿರುತ್ತದೆ.

ಖಾತೆಯನ್ನು ತೆರೆದು ಮೂರು ವರ್ಷಗಳ ನಂತರ ಖಾತೆಯಲ್ಲಿ ಸಂದಾಯವಾಗಿ ಇರಬಹುದಾದ ಹಣದ ಮೊತ್ತದ ಮೇಲೆ ಶೇಕಡಾ 25ರಷ್ಟು ಹಣವನ್ನು ಸಾಲವಾಗಿ ಪಡೆಯುವ ಸೌಲಭ್ಯವಿರುತ್ತದೆ. ಹಾಗೂ ಇದು ಕೆಲವು ನಿಬಂಧನೆಗೊಳಪಟ್ಟಿರುತ್ತದೆ.

ಖಾತೆಯನ್ನು ತೆರೆದ ಏಳು ವರ್ಷಗಳ ನಂತರ ಪ್ರತಿವರ್ಷಕ್ಕೊಮ್ಮೆ ಹಣವನ್ನು ಹಿಂದಕ್ಕೆ ಪಡೆಯಬಹುದು.

ಈ ಖಾತೆಯಲ್ಲಿ ಠೇವಣಿ ಮಾಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ

ಸೆಕ್ಷನ್ 80 ಸಿಯ ಅಡಿಯಲ್ಲಿ ಆದಾಯ ತೆರಿಗೆಯ ವಿನಾಯಿತಿ ಸೌಲಭ್ಯವಿರುತ್ತದೆ. ಅಂತಹ ವಿನಾಯತಿಯು ವರ್ಷಕ್ಕೆ ಗರಿಷ್ಠ 70,000 ರೂಗಳಿಗೆ ಸೀಮಿತವಾಗಿರುತ್ತದೆ.

ರಾಷ್ಟ್ರೀಯ ಉಳಿತಾಯ ಪತ್ರಗಳು : VIII ಶ್ರೇಣಿ

ಈ ಉಳಿತಾಯ ಪತ್ರಗಳು 5 ವರ್ಷಗಳ ಅವಧಿಯದಾಗಿದ್ದು ಠೇವಣಿ ಮಾಡಿದ ಐದು ವರ್ಷಗಳ ನಂತರ ಬಡ್ಡಿಯ ಸಮೇತ ಹಿಂತಿರುಗಿಸಲಾಗುವುದು. ಬಡ್ಡಿಯನ್ನು ಆರು ತಿಂಗಳಿಗೊಮ್ಮೆ ಲೆಕ್ಕ ಹಾಕಲಾಗುತ್ತದೆ.

100 ರೂ. 500 ರೂ. 1000ರೂ. 5000ರೂ ಹಾಗೂ 10,000ರೂಗಳ ಗಣಕದಲ್ಲಿ ಈ ಪತ್ರಗಳು ಲಭ್ಯವಿರುತ್ತವೆ.

ಈ ಯೋಜನೆಯಲ್ಲಿ ಹೂಡಿದ ಹಣಕ್ಕೆ ಆದಾಯ ತೆರಿಗೆ 80 ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ದೊರಕುವುದು. ಅಲ್ಲದೆ ಪ್ರತಿವರ್ಷ ಲಭ್ಯವಾಗುವ ಬಡ್ಡಿಯ ಹಣಕ್ಕೂ ಸಹ ತೆರಿಗೆ ವಿನಾಯಿತಿಯ ಸೌಲಭ್ಯವಿರುತ್ತದೆ.

ಈ ಉಳಿತಾಯ ಪತ್ರಗಳನ್ನು ಒಂದು ಅಂಚೆ ಕಛೇರಿಯಿಂದ ಇನ್ನೊಂದು ಅಂಚೆ ಕಛೇರಿಗೆ ವರ್ಗಾಯಿಸಿಕೊಳ್ಳಬಹುದು. ಅಲ್ಲದೆ ಈ ಪತ್ರಗಳನ್ನು ಅಗತ್ಯವಿದ್ದಾಗ ಒತ್ತೆಯಿಡಬಹುದು.

ಸಣ್ಣ ಉಳಿತಾಯ – ಸುಭದ್ರ ಜೀವನದ ಅಡಿಪಾಯ

ಇದುವರೆಗೆ ವಿವರಿಸಿರುವ ಅಂಚೆ ಕಛೇರಿಯ ಎಲ್ಲಾ ಉಳಿತಾಯ ಯೋಜನೆಗಳೂ ಸಣ್ಣ ಉಳಿತಾಯ ಯೋಜನೆಯಡಿಯಲ್ಲಿ ಬರುತ್ತವೆ. ಈ ಯೋಜನೆಗಳಿಗೆ ಭಾರತ ಸರ್ಕಾರದ ಗ್ಯಾರಂಟಿ ಲಭ್ಯವಿದೆ. ಹಾಗಾಗಿ ಇವು ಸಂಪೂರ್ಣ ಸುರಕ್ಷಿತವಾಗಿರುತ್ತವೆ ಮತ್ತು ಇದರಿಂದ ದೊರಕುವ ಬಡ್ಡಿ / ಪ್ರತಿಫಲವು ನೈಜವಾದುದಾಗಿರುತ್ತದೆ. ಬಡ್ಡಿಯ ನೀಡಿಕೆಯಲ್ಲಿ ಯಾವುದೇ ಪೊಳ್ಳು ಭರವಸೆಯಾಗಲೀ, ಅಥವಾ ಪ್ರಲೋಭನೆಯಾಗಲಿ ಇರುವುದಿಲ್ಲ.

ಹಾಗಾಗಿ ಈ ಕ್ಷೇತ್ರದ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸುವುದು ವಿಶ್ವಾಸಾರ್ಹತೆ (Reliability) ಲಾಭದಾಯಕ (Profitability) ಮತ್ತು ಸುರಕ್ಷತೆ (Security) ಯನ್ನು ಒಳಗೊಂಡಿರುತ್ತದೆ.

ಹೂಡಿಕೆದಾರರು ಅವರವರ ಅವಶ್ಯಕತೆಗೆ ಅನುಗುಣವಾಗಿ ಈ ಯೋಜನೆಗಳಲ್ಲಿ ಹಣವನ್ನು ಹೂಡಬಹುದು.

ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರವು ಬೇರೆ ಕ್ಷೇತ್ರಗಳಲ್ಲಿನ ಹೂಡಿಕೆಯ ದರಕ್ಕಿಂತ ಕಡಿಮೆಯಾಗುತ್ತಾ ಬಂದಿದ್ದರಿಂದ ಆ ಕ್ಷೇತ್ರದಲ್ಲಿ ಹೂಡಿಕೆದಾರರ ಆಕರ್ಷಣೆಯ ಪ್ರಮಾಣ ಕಡಿಮೆಯಾಗುತ್ತಾ ಬಂದಿತು. ಸಣ್ಣ ಉಳಿತಾಯ ಯೋಜನೆಗಳಲ್ಲಿ ಹಣ ಹೂಡಿದಾಗ ಆ ಹಣದ ಪ್ರಯೋಜನ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ದೊರಕುತ್ತದೆ. ಹೂಡಿಕೆಯ ಪ್ರಮಾಣ ಕಡಿಮೆಯಾದಾಗ ಅಥವ ಹೂಡಿಕೆದಾರರು ಕಡಿಮೆ ಬಡ್ಡಿಯ ಕಾರಣದಿಂದ ಹಣವನ್ನು ವಾಪಸ್ ಪಡೆದಾಗ, ಆ ಹೊಡೆತ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮೇಲೆ ಪರಿಣಾಮ ಬೀರುತ್ತದೆ.

ಹಾಗಾಗಿ ಸರ್ಕಾರ, ಸಣ್ಣ ಉಳಿತಾಯ ಯೋಜನೆಯ ಮೇಲಿನ ಬಡ್ಡಿದರಗಳನ್ನು ಪರಿಷ್ಕರಿಸಲು ಶ್ಯಾಮಲಾಗೋಪಿನಾಥ್ ಸಮಿತಿಯನ್ನು ರಚಿಸಿತು. ಆ ಸಮಿತಿಯು ಬಡ್ಡಿದರಗಳನ್ನು ಮಾರುಕಟ್ಟೆಯ ದರಗಳಿಗೆ ಹೋಲಿಸಿ ಅದರಂತೆ ನೀಡಲು ಸಲಹೆ ಮಾಡಿತು. ಅಲ್ಲದೆ ಆರ್ಥಿಕ ವರ್ಷದ ಆರಂಭದಲ್ಲಿ ಬಡ್ಡಿಯ ದರವನ್ನು ಪುನರ್ವಿಮರ್ಶಿಸಿ ಅಧಿಸೂಚನೆ ನೀಡಬೇಕೆಂದು ಸಲಹೆ ಮಾಡಿತು.

	ಹಿಂದಿನ ದರ ಶೇ	01.04.2012 ರಿಂದ ಶೇ
ಉಳಿತಾಯ ಖಾತೆ	4.0	4.0
ನಿಗದಿತ ಠೇವಣಿ – 1 ವರ್ಷ	7.7	8.2
2 ವರ್ಷ	7.8	8.3
3 ವರ್ಷ	8.0	8.4
5 ವರ್ಷ	8.3	8.5
ರಿಕರಿಂಗ್ ಡಿಪಾಸಿಟ್ –5 ವರ್ಷ	8.0	8.4
ಹಿರಿಯ ನಾಗರಿಕರ ಉಳಿತಾಯ ಯೋಜನೆ –5 ವರ್ಷ	9.0	9.3
ಮಾಸಿಕ ಉಳಿತಾಯ ಯೋಜನೆ – 5 ವರ್ಷ	8.2	8.5
ರಾಷ್ಟ್ರೀಯ ಉಳಿತಾಯ ಪತ್ರ – 5 ವರ್ಷ	8.4	8.6
10 ವರ್ಷ	8.7	8.9
ಸಾರ್ವಜನಿಕ ಭವಿಷ್ಯನಿಧಿ	8.6	8.8

ಬ್ಯಾಂಕುಗಳಲ್ಲಿ ಹಣ ಹೂಡುವಿಕೆ



ಅಂಚೆ ಕಛೇರಿಯಲ್ಲಿ ಸುರಕ್ಷಿತ ಠೇವಣಿಗೆ ಇರುವ ಅವಕಾಶಗಳ ನಂತರ ಉಳಿದ ಅವಕಾಶಗಳ ಬಗ್ಗೆ ಗಮನ ಹರಿಸಿದಾಗ ನಮಗೆ ಕಾಣ ಬರುವುದು ಬ್ಯಾಂಕುಗಳು.

ಬ್ಯಾಂಕುಗಳು ನಮ್ಮ ಜನ ಜೀವನದಲ್ಲಿ ಹಾಸುಹೊಕ್ಕಾಗಿ ಬಂದಿದೆ ಎಂದರೆ ಅತಿಶಯೋಕ್ತಿಯೇ ನಲ್ಲ. ಸಾಮಾನ್ಯವಾಗಿ ಸಮಾಜದ ಎಲ್ಲಾ ಸ್ತರದ ಜನರಿಗೂ ಬ್ಯಾಂಕಿನ ವ್ಯವಹಾರದ ಸಾಮಾನ್ಯ ಜ್ಞಾನವಾದರೂ ಕನಿಷ್ಠ ಪಕ್ಷ ಇದ್ದೇ ಇರುತ್ತದೆ. ಹಳ್ಳಿಯಿಂದ ದಿಲ್ಲಿಯವರೆಗೂ ಬಡವನಿಂದ ಬಲ್ಲಿದನವರೆಗೂ ಜನ ಸಾಮಾನ್ಯರಿಂದ ಠೇವಣಿಯನ್ನು ಸ್ವೀಕರಿಸಿ ಹಣಕಾಸಿನ ನೆರವು ನೀಡುವುದರ ಮುಖೇನ ಇಡೀ ರಾಷ್ಟ್ರದ ಜನತೆಯ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವ ಮಹತ್ತರ ಕಾರ್ಯದಲ್ಲಿ ಬ್ಯಾಂಕುಗಳು ನಿರತವಾಗಿವೆ.

ಇಂದು ನಮ್ಮ ದೇಶದಲ್ಲಿರುವ ಬ್ಯಾಂಕುಗಳನ್ನು ಈ ಕೆಳಕಂಡಂತೆ ಸ್ಥೂಲವಾಗಿ ವಿಭಾಗಿಸಬಹುದು.

- ಸಾರ್ವಜನಿಕ ವಲಯದ ಬ್ಯಾಂಕುಗಳು
- ಖಾಸಗೀ ಬ್ಯಾಂಕುಗಳು
- ವಿದೇಶೀ ಬ್ಯಾಂಕುಗಳು
- ಸಹಕಾರಿ ಬ್ಯಾಂಕುಗಳು

ಸಾರ್ವಜನಿಕ ವಲಯದ ಬ್ಯಾಂಕುಗಳು

ಈ ವಲಯದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಅದರ ಸಹಯೋಗಿ ಬ್ಯಾಂಕುಗಳು ಸೇರಿವೆ.

1969ಕ್ಕೂ ಮುಂಚೆ ಭಾರತದಲ್ಲಿ ಹಲವಾರು ಖಾಸಗೀ ಬ್ಯಾಂಕುಗಳು ವ್ಯವಹಾರ ನಡೆಸುತ್ತಿದ್ದವು. ಅವುಗಳ ಮುಖ್ಯ ಉದ್ದೇಶ ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸಿ ಕೈಗಾರಿಕೆ, ವಾಣಿಜ್ಯ ಮುಂತಾದ ಲಾಭದಾಯಕ ಕ್ಷೇತ್ರಗಳಿಗೆ ಸಾಲವಾಗಿ ನೀಡಿ ತನ್ಮೂಲಕ ಹೆಚ್ಚು ಬಡ್ಡಿ/ಲಾಭ ಸಂಪಾದಿಸುತ್ತಿದ್ದವು. ಆದರೆ ವ್ಯವಸಾಯ,

ಗೃಹಕೈಗಾರಿಕೆ ಮುಂತಾದ ಲಾಭದಾಯಕವಲ್ಲದ ಕ್ಷೇತ್ರಗಳಲ್ಲಿ ಹಣವನ್ನು ಸಾಲವಾಗಿ ನೀಡುವುದಕ್ಕೆ ಅಷ್ಟಾಗಿ ಆಸಕ್ತಿಯನ್ನು ತೋರಿಸುತ್ತಿರಲಿಲ್ಲ.

ಆದರೆ 1969ರ ಜುಲೈ 19ರಂದು ಭಾರತ ಸರ್ಕಾರವು ರಾಷ್ಟ್ರದಲ್ಲಿದ್ದ ಹದಿನಾಲ್ಕು ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿತು. ಅಂದರೆ ಈ ರಾಷ್ಟ್ರೀಕರಣದ ಮೂಲಕವೇ ಸಮಾಜದ ಪ್ರಗತಿ ಹಾಗೂ ಠೇವಣಿದಾರರ ಹಿತವನ್ನು ಕಾಪಾಡುವ ದಿಸೆಯಲ್ಲಿ ಈ ಎಲ್ಲಾ ಬ್ಯಾಂಕುಗಳ ಬಂಡವಾಳವನ್ನು ತನ್ನದಾಗಿಸಿಕೊಂಡಿತು. ರಾಷ್ಟ್ರೀಕರಣದ ಪ್ರಮುಖ ಉದ್ದೇಶ ವ್ಯವಸಾಯ ಕ್ಷೇತ್ರಕ್ಕೆ ಆರ್ಥಿಕ ನೆರವು ನೀಡುವುದು. ಬಡಜನತೆಯ ಏಳಿಗೆ ಹಾಗೂ ಸಾಮಾಜಿಕ ಅಭಿವೃದ್ಧಿ ಆಗಿತ್ತು.

ಕಾಲಾನು ಕ್ರಮದಲ್ಲಿ ಹಂತಹಂತವಾಗಿ ಮತ್ತಷ್ಟು ಖಾಸಗೀ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಯಿತು.

ಆದರೆ ಬದಲಾದ ಸರ್ಕಾರದ ನೀತಿಯಂತೆ ಬ್ಯಾಂಕಿನ ಬಂಡವಾಳದಲ್ಲಿ ಸಾರ್ವಜನಿಕರನ್ನು ಪಾಲುದಾರರನ್ನಾಗಿ ಮಾಡಬೇಕೆಂದು ಬ್ಯಾಂಕುಗಳು ತಮ್ಮ ಬಂಡವಾಳದ ಸ್ವಲ್ಪ ಭಾಗವನ್ನು ಸಾರ್ವಜನಿಕರಿಗೆ ಷೇರುಗಳಾಗಿ ನೀಡುತ್ತಿವೆ. ಹಾಗಾಗಿ ಜನ ಸಾಮಾನ್ಯರು ಸಹ ಈ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಷೇರುಗಳನ್ನು ಪಡೆಯಬಹುದಾಗಿದೆ. ಆದರೆ ಬ್ಯಾಂಕುಗಳ ಸಂಪೂರ್ಣ ಆಡಳಿತ ಹಾಗೂ ನಿಯಂತ್ರಣ ಸರ್ಕಾರದ ಹಾಗೂ ರಿಸರ್ವ ಬ್ಯಾಂಕಿನ ಅಂಕುಶದಲ್ಲಿದೆ.

ಇಡೀ ರಾಷ್ಟ್ರದ ಬ್ಯಾಂಕುಗಳಲ್ಲಿಯೇ ಅತಿ ದೊಡ್ಡ ಬ್ಯಾಂಕೆಂದು ಪರಿಗಣಿಸಲ್ಪಟ್ಟಿರುವುದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ. 1955ಕ್ಕೂ ಹಿಂದೆ ಇದ್ದ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾವನ್ನು ರಾಷ್ಟ್ರೀಕರಿಸಿ ಅದನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂದು ಕರೆಯಲಾಯಿತು. ಈ ಬ್ಯಾಂಕಿನ ಸಹವರ್ತಿ ಬ್ಯಾಂಕುಗಳಾಗಿ ಹಿಂದಿನ ಅರಸೊತ್ತಿಗೆಯ ಸಂಸ್ಥಾನಗಳಲ್ಲಿದ್ದ ಏಳು ಬ್ಯಾಂಕುಗಳನ್ನು ಸಹ ರಾಷ್ಟ್ರೀಕರಿಸಲಾಯಿತು.

ಈ ಎಲ್ಲಾ ಸಹವರ್ತಿ ಬ್ಯಾಂಕುಗಳ ಷೇರು ಬಂಡವಾಳದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಪಾಲೇ ಅತಿ ಹೆಚ್ಚಿನ ಪ್ರಮಾಣದಲ್ಲಿದೆ.

ಎಲ್ಲಾ ಬ್ಯಾಂಕುಗಳೂ ರಾಷ್ಟ್ರದ ಮೂಲೆಮೂಲೆಯಲ್ಲೂ ಶಾಖೆಗಳನ್ನು ತೆರೆದು ಜನಸಾಮಾನ್ಯರಿಗೆ ಬ್ಯಾಂಕ್ ವ್ಯವಹಾರ ನಡೆಸಲು ಅನುಕೂಲ ಮಾಡಿಕೊಟ್ಟಿದೆ. ಆದರೆ ಈಚೆಗೆ ಸರ್ಕಾರವು ತೆಗೆದುಕೊಂಡಿರುವ ತೀರ್ಮಾನದಂತೆ

ಈ ಎಲ್ಲಾ ಸಹವರ್ತಿ ಬ್ಯಾಂಕುಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ವಿಲೀನಗೊಳಸಬೇಕೆಂಬ ಕ್ರಮವನ್ನು ಜಾರಿಗೆ ತರಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಖಾಸಗೀ ಬ್ಯಾಂಕುಗಳು

1956ರ ಕಂಪನಿಗಳ ಅಧಿನಿಯಮದಂತೆ ಖಾಸಗೀ ಸಂಸ್ಥೆಗಳು ರಿಸರ್ವ್ ಬ್ಯಾಂಕಿನ ಅನುಮತಿ ಪಡೆದು ಬ್ಯಾಂಕುಗಳನ್ನು ಸ್ಥಾಪಿಸಿ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುತ್ತಿದೆ.

ಖಾಸಗೀ ಬ್ಯಾಂಕುಗಳೂ ಸಹ ರಿಸರ್ವ್ ಬ್ಯಾಂಕಿನ ನಿರ್ದೇಶನ ಹಾಗೂ ಅಧಿನಿಯಮಗಳಂತೆಯೇ ಕಾರ್ಯ ನಿರ್ವಹಿಸಬೇಕಾಗಿರುವುದು ಕಡ್ಡಾಯ.

ಆದರೂ ಇತ್ತೀಚೆಗೆ ಹಲವು ಬ್ಯಾಂಕುಗಳು ಉದಾಹರಣೆಗೆ ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಮುಂತಾದವು ತಮ್ಮ ವ್ಯವಹಾರದಲ್ಲಿ ವಿಫಲವಾಗಿ ರಿಸರ್ವ್ ಬ್ಯಾಂಕಿನ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಹಾಗೂ ತಮ್ಮ ಬ್ಯಾಂಕಿಂಗ್ ಕಾರ್ಯವನ್ನು ಸ್ಥಗಿತಗೊಳಸಬೇಕಾಯಿತು. ಆದರೆ ಗ್ಲೋಬಲ್ ಟ್ರಸ್ಟ್ ಬ್ಯಾಂಕನ್ನು ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನೊಂದಿಗೆ ವಿಲೀನಗೊಳಸಿ ಠೇವಣಿದಾರರನ್ನು ಸಂಪೂರ್ಣವಾಗಿ ರಕ್ಷಿಸಲಾಯಿತು.

ವಿದೇಶಿ ಬ್ಯಾಂಕುಗಳು

ವಿದೇಶಿ ಬ್ಯಾಂಕುಗಳೆಂದರೆ ಬೇರೆ ಬೇರೆ ದೇಶಗಳಲ್ಲಿ ಸ್ಥಾಪನೆಗೊಂಡ ಬ್ಯಾಂಕುಗಳು ಭಾರತದಲ್ಲಿ ಶಾಖೆಗಳನ್ನು ಸ್ಥಾಪಿಸಿ ವ್ಯವಹಾರ ನಡೆಸುತ್ತಿರುವಂತಹವು. ನಮ್ಮ ದೇಶದಲ್ಲಿ ಅವು ಶಾಖೆಗಳನ್ನು ಹೊಂದ ಬೇಕಾದರೆ ಭಾರತ ಸರ್ಕಾರದ ಮತ್ತು ರಿಸರ್ವ್ ಬ್ಯಾಂಕಿನ ಅನುಮತಿಯನ್ನು ಪಡೆದಿರುತ್ತವೆ.

ಈ ಬ್ಯಾಂಕುಗಳು ಜನಸಾಮಾನ್ಯರು ನಡೆಸುವ ಸಾಮಾನ್ಯ ಬ್ಯಾಂಕಿನ ವ್ಯವಹಾರಗಳತ್ತ ಗಮನ ಹರಿಸುವುದು ಕಡಿಮೆ. ಅಂತರ್ರಾಷ್ಟ್ರೀಯ ಹಣಕಾಸು ವ್ಯವಹಾರ ಹಾಗೂ ಮಾರುಕಟ್ಟೆಯಲ್ಲಿ ಹೆಚ್ಚಿನ ನೈಪುಣ್ಯತೆಯನ್ನು ಹೊಂದಿದ್ದು ಅಂತಹ ವ್ಯವಹಾರದಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸುತ್ತದೆ. ಹಾಗಾಗಿ ಸಾಮಾನ್ಯ ಠೇವಣಿದಾರರಿಗೂ ಇಂತಹ ಬ್ಯಾಂಕುಗಳಗೂ ಸಂಬಂಧ ಸ್ವಲ್ಪ ದೂರವೇ ಎಂದು ಹೇಳಬಹುದು.

ಸಹಕಾರಿ ಬ್ಯಾಂಕುಗಳು

ಸಹಕಾರಿ ಬ್ಯಾಂಕುಗಳು ಸಹಕಾರ ತತ್ವದ ಆಧಾರದಲ್ಲಿ ರೂಪುಗೊಂಡು

ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಮಾತ್ರ ಸೀಮಿತಗೊಂಡು ಕಾರ್ಯ ನಿರ್ವಹಿಸುತ್ತವೆ. ಅಲ್ಲದೆ ಅವು ಸ್ಥಾಪಿತವಾದ ರಾಜ್ಯದ ಸಹಕಾರಿ ಇಲಾಖೆಯ ನಿಯಮಗಳು ಹಾಗೂ ಕಟ್ಟುಪಾಡುಗಳಿಗೆ ಒಳಪಟ್ಟು ಕಾರ್ಯ ನಿರ್ವಹಿಸುತ್ತವೆ.

ಈ ಬ್ಯಾಂಕುಗಳ ಲೆಕ್ಕಪತ್ರಗಳನ್ನು ಆಯಾ ರಾಜ್ಯದ ಸಹಕಾರ ಇಲಾಖೆ ಮತ್ತು ಭಾರತೀಯ ರಿಜರ್ವ್ ಬ್ಯಾಂಕ್ ಎರಡೂ ಪರಿಶೀಲಿಸುತ್ತವೆ.

ಈ ಬ್ಯಾಂಕುಗಳು ಸಹಕಾರ ತತ್ವದ ಆಧಾರದ ಮೇಲೆ ಸ್ಥಾಪಿತವಾಗಿರುತ್ತವೆ. ಹಾಗೂ ಕಾರ್ಯಕ್ಷೇತ್ರ ಕೆಲವು ಸೀಮಿತ ಪ್ರದೇಶಕ್ಕೆ ಮಾತ್ರ ಹಬ್ಬಿರುತ್ತದೆ. ಠೇವಣಿದಾರರೂ ಹಾಗೂ ಸಾಲಪಡೆಯುವವರೂ ಸಾಮಾನ್ಯವಾಗಿ ಈ ಬ್ಯಾಂಕುಗಳ ಸದಸ್ಯರೇ ಆಗಿರುತ್ತಾರೆ. ಸಹಕಾರಿ ಮನೋಭಾವ ಜನ ಸಾಮಾನ್ಯರಲ್ಲಿ ಬೇರೂರಲೆಂಬ ಉದ್ದೇಶದಿಂದ, ಬೇರೆ ಬ್ಯಾಂಕುಗಳಿಗಿಂತ ಈ ಬ್ಯಾಂಕುಗಳು ಅಧಿಕ ಬಡ್ಡಿಯನ್ನು ಠೇವಣಿದಾರರಿಗೆ ನೀಡುವ ಅವಕಾಶವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಈ ಬ್ಯಾಂಕ್‌ಗಳಿಗೆ ನೀಡಿದೆ. ಅಲ್ಲದೆ ಹಿರಿಯ ನಾಗರೀಕರಿಗೆ ಅಂದರೆ ಅರವತ್ತು ವರ್ಷ ದಾಟಿದವರಿಗೆ 0.50% ರಿಂದ 1% ರವರೆಗೆ ಅಧಿಕ ಬಡ್ಡಿಯನ್ನು ನೀಡಲಾಗುತ್ತದೆ.

ಜನಸಾಮಾನ್ಯರು ಹಾಗೂ ಬ್ಯಾಂಕ್ ವ್ಯವಹಾರ

ಸಾಮಾನ್ಯವಾಗಿ ಜನಸಾಮಾನ್ಯರು ಬ್ಯಾಂಕುಗಳಲ್ಲಿ ಎರಡು ರೀತಿಯ ಖಾತೆಗಳನ್ನು ಪಡೆದಿರುತ್ತಾರೆ. ಅವೆಂದರೆ 1. ಉಳಿತಾಯ ಖಾತೆ (Savings Bank Account) 2. ಠೇವಣಿಗಳು (Fixed Deposit Account)

ಉಳಿತಾಯ ಖಾತೆಯನ್ನು ಹೊಂದಿಲ್ಲದವರೇ ಅತಿ ವಿರಳ ಎಂದು ಹೇಳಬಹುದು. ಈ ಖಾತೆಯನ್ನು ತೆಗೆಯುವಾಗ ಅದನ್ನು ಒಂದೇ ಹೆಸರಿನಲ್ಲಿ ತೆಗೆಯಬಹುದು ಅಥವಾ ಜಂಟಿ ಹೆಸರಿನಲ್ಲಿ ತೆಗೆಯಬಹುದು. ಇದು ಅವರವರ ಅವಶ್ಯಕತೆ, ಕೌಟುಂಬಿಕ ಸನ್ನಿವೇಶಗಳಿಗೆ ಅನ್ವಯವಾಗುತ್ತದೆ.

ಆದರೆ ಸಾಧ್ಯವಾದಷ್ಟು ಸಹ ಈ ಖಾತೆಯನ್ನು ಜಂಟೀ ಹೆಸರಿನಲ್ಲಿ ತೆಗೆಯುವುದು ಉತ್ತಮ. ಅಂದರೆ Either or Survivor (E/S) ಕ್ರಮದಲ್ಲಿ ಈ ಖಾತೆಯನ್ನು ತೆಗೆದಾಗ ಇಬ್ಬರಲ್ಲಿ ಯಾರಾದರೊಬ್ಬರು ಅಥವಾ ಉಳಿದವರು ಬ್ಯಾಂಕ್ ಖಾತೆಯನ್ನು ನಡೆಸಬಹುದು. ವಯಸ್ಸಾದಂತೆ ಕಾಯಿಲೆ ಕಸಾಲೆ

ಬರುವುದು ಸಹಜ. ಅಶಕ್ತತೆ, ಸಹಿ ಮಾಡಲು ಸಾಧ್ಯವಾಗದಿರುವುದು ಇಂತಹ ಸಂದರ್ಭದಲ್ಲಿ ಈ ರೀತಿಯ ಜಂಟೀ ಹೆಸರಿನ ಖಾತೆ ಬಹಳ ಉಪಯುಕ್ತವಾದುದು ಖಾತೆದಾರರಲ್ಲಿ ಯಾರಾದರೊಬ್ಬರು ಖಾತೆಯನ್ನು ನಿರ್ವಹಿಸಲು ಸೌಲಭ್ಯ ಹೊಂದಿರುವುದರಿಂದ ಒಬ್ಬರ ಅನುಪಸ್ಥಿತಿಯಲ್ಲಿ ಅಥವಾ ಅಶಕ್ತತೆಯಲ್ಲಿ ಇನ್ನೊಬ್ಬರು ಹಣವನ್ನು ಖಾತೆಯಿಂದ ಹಿಂತೆಗೆದುಕೊಳ್ಳುವುದರಲ್ಲಿ ಯಾವುದೇ ಅಡ್ಡಿಯಿರುವುದಿಲ್ಲ. ಆದರೆ ಒಂದೇ ಹೆಸರಿನಲ್ಲಿ ಖಾತೆ ತೆಗೆದಾಗ ಈ ಸೌಲಭ್ಯವಿರುವುದಿಲ್ಲ. ಹಾಗಾಗಿ ಬ್ಯಾಂಕಿನ ಖಾತೆಯಲ್ಲಿ ಎಷ್ಟೇ ಹಣ ಇದ್ದರೂ ಅವಶ್ಯಕ ಸಂದರ್ಭದಲ್ಲಿ ಅದನ್ನು ಖಾತೆದಾರನ ವಿನಃ ಮತ್ತೊಬ್ಬರು ಹಿಂತೆಗೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಯಾವುದೇ ವಯಸ್ಸಿನವರಿರಲಿ, ಅದರಲ್ಲಿಯೂ ಪ್ರಮುಖವಾಗಿ ವಯಸ್ಸಾದವರು ಜಂಟೀ ಖಾತೆಯನ್ನು ತೆರೆಯುವುದು ಎಲ್ಲಾ ದೃಷ್ಟಿಯಿಂದಲೂ ಅನುಕೂಲ.

ಅಲ್ಲದೆ ಜಂಟೀ ಖಾತೆಯೊಂದಿಗೆ ನಾಮ ನಿರ್ದೇಶನದ ಸೌಲಭ್ಯವನ್ನೂ ಸಹ ಉಪಯೋಗಿಸಿಕೊಂಡು, ತಮ್ಮ ವಾರಸುದಾರರಲ್ಲಿ ಯಾರಿಗೆ ಮಾಡಬೇಕೋ ಅಂತಹವರ ಹೆಸರಿಗೆ ನಾಮ ನಿರ್ದೇಶನ ಮಾಡಬಹುದು. ದುರದೃಷ್ಟವಶಾತ್ ಖಾತೆದಾರನು ನಿಧನಹೊಂದಿದಾಗ ಆತನ ಖಾತೆಯಲ್ಲಿರುವ ಹಣವನ್ನು ನಾಮನಿರ್ದೇಶಿತ ವ್ಯಕ್ತಿ(ವಾರಸುದಾರರು) ಯಾವ ತೊಂದರೆ ಅಥವಾ ವಿಳಂಬವಿಲ್ಲದೆ ಪಡೆಯಲು ಅನುಕೂಲವಾಗುತ್ತದೆ.

ಠೇವಣಿಗಳು

ಬ್ಯಾಂಕಿನಲ್ಲಿರುವ ಮತ್ತೊಂದು ಸೌಲಭ್ಯವೆಂದರೆ ಠೇವಣಿ. ಈಗಾಗಲೇ ತಿಳಿಸಿರುವ ಎಲ್ಲಾ ರೀತಿಯ ಬ್ಯಾಂಕುಗಳಲ್ಲಿಯೂ (ರಾಷ್ಟ್ರೀಕೃತ, ಖಾಸಗಿ ಹಾಗೂ ಸಹಕಾರಿ ಬ್ಯಾಂಕುಗಳಲ್ಲಿ) ಠೇವಣಿ ಮಾಡಬಹುದು. ಕನಿಷ್ಠ 15 ದಿನದಿಂದ ಐದು ವರ್ಷ ಹಾಗೂ ಅದಕ್ಕೂ ಮೇಲ್ಪಟ್ಟ ಅವಧಿಗೆ ಠೇವಣಿ ಇಡಬಹುದು. ಹೀಗೆ ಠೇವಣಿ ಇಟ್ಟ ಹಣಕ್ಕೆ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿಗದಿ ಪಡಿಸಿದ ದರದಲ್ಲಿ ಬಡ್ಡಿಯನ್ನು ನೀಡಲಾಗುತ್ತದೆ. ಹಿರಿಯನಾಗರಿಕರಿಗೆ (ಅಂದರೆ 60 ವರ್ಷಕ್ಕೆ ಮೀರಿದವರಿಗೆ) ಶೇಕಡಾ ಒಂದರವರೆಗೆ ಅಧಿಕ ಬಡ್ಡಿಯನ್ನು ನೀಡಲಾಗುವುದು.

ಈ ಠೇವಣಿ ಖಾತೆಯನ್ನು ತೆಗೆಯುವಾಗಲೂ ಸಹ ಜಂಟೀ ಖಾತೆ ತೆಗೆಯುವುದು ಉತ್ತಮ. ಅಲ್ಲದೆ ನಾಮ ನಿರ್ದೇಶನವನ್ನು ಸಹ ಮಾಡಬೇಕಾದುದು ಅಗತ್ಯ.

ನಿಗದಿತ ಠೇವಣಿಯ ಕೆಲವು ವೈಶಿಷ್ಟ್ಯಗಳು

- ನಿಗದಿತ ಠೇವಣಿಯು ಒಂದು ನಿರ್ದಿಷ್ಟ ಅವಧಿಗೆ ಮಾತ್ರ. ಆದ್ದರಿಂದ ಅದು ಮುಕ್ತಾಯವಾಗುವ ವಾಯಿದೆ ದಿನಾಂಕ ಮುಂದಾಗಿಯೇ ತಿಳಿದು ಕೊಂಡಿರಬಹುದು.
- ಠೇವಣಿಯ ಅವಧಿ ಪೂರ್ತಿ ನಿಗದಿತ ಬಡ್ಡಿಯ ದರ ಸಂದಾಯವಾಗುತ್ತಿರುತ್ತದೆ.
- ಬೇಕೆಂದಾಗ, ಅವಶ್ಯಕತೆ ಇದ್ದಾಗ, ಠೇವಣಿಯ ಮೇಲೆ ಸಾಲವನ್ನು ಪಡೆಯ ಬಹುದು. ಹಾಗಾಗಿ ಕಷ್ಟ ಕಾಲದಲ್ಲಿ ಹಣದ ಮರುಪಾವತಿಗೆ ಸೌಲಭ್ಯವಿರುತ್ತದೆ.
- ತುರ್ತುಪರಿಸ್ಥಿತಿಯಲ್ಲಿ ಪೂರಾ ಹಣವನ್ನು ವಾಯಿದೆಗೆ ಮುಂಚೆಯೇ ಪಡೆಯಬಹುದು.
- ಠೇವಣಿ ಇಟ್ಟ ದಿನದಂದಿನಿಂದಲೇ ಬಡ್ಡಿ ಸಂದಾಯವಾಗುತ್ತದೆ.

ಬ್ಯಾಂಕ್ ಠೇವಣಿ ಎಷ್ಟು ಸುರಕ್ಷಿತ ?

ಈಗಾಗಲೇ ಮೇಲೆ ವಿವರಿಸಿರುವಂತೆ ರಾಷ್ಟ್ರೀಕೃತ ಹಾಗೂ ಖಾಸಗೀ ಬ್ಯಾಂಕುಗಳು ಸಂಪೂರ್ಣವಾಗಿ ರಿಸರ್ವ್ ಬ್ಯಾಂಕಿನ ನಿಬಂಧನೆಗೊಳಪಟ್ಟಿರುತ್ತವೆ. ಒಂದೆರಡು ಸಂದರ್ಭಗಳಲ್ಲಿ ಬ್ಯಾಂಕುಗಳು ವಿಫಲವಾದಾಗ ಅಂತಹ ಬ್ಯಾಂಕುಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ಬೇರೆ ಶಕ್ತಿಶಾಲಿ ಬ್ಯಾಂಕುಗಳೊಂದಿಗೆ ವಿಲೀನಗೊಳಿಸಿರುವುದನ್ನು ತಿಳಿದಿದ್ದೇವೆ. ಹಾಗಾಗಿ ಈ ಮೇಲಿನ ಬ್ಯಾಂಕುಗಳಲ್ಲಿ ಠೇವಣಿ ಸುರಕ್ಷಿತವೆಂದು ತಿಳಿಯಬಹುದು.

ಆದರೆ ಸಹಕಾರಿ ಬ್ಯಾಂಕುಗಳಲ್ಲಿ ಠೇವಣಿ ಇಡುವಾಗ ಕೆಲವು ಅಂಶಗಳತ್ತ ತೀವ್ರ ಗಮನಹರಿಸಬೇಕು. ಉದಾಹರಣೆಗೆ ಆ ಬ್ಯಾಂಕಿನ ನಿರ್ದೇಶಕರು (ಆಡಳಿತ ವರ್ಗ), ಬ್ಯಾಂಕಿನ ಬಗ್ಗೆ ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಇಲಾಖೆ ಕಾಲಕಾಲಕ್ಕೆ ನೀಡಿರುವ ವರದಿ, ಆಡಿಟ್ ವರದಿ ಎಷ್ಟು ವರ್ಷಗಳಿಂದ ಬ್ಯಾಂಕ್ ಅಸ್ತಿತ್ವದಲ್ಲಿದೆ ಬ್ಯಾಂಕ್ ಹೊಂದಿರುವ ಷೇರು ಬಂಡವಾಳ ಮತ್ತು ಮೀಸಲು ನಿಧಿ, ಠೇವಣಿಗಳು ಬ್ಯಾಂಕ್ ಗ್ರಾಹಕರಿಗೆ ನೀಡಿರುವ ಸಾಲ ಮತ್ತು ಮುಂಗಡ, ಎನ್‌ಪಿಎ ಪ್ರಮಾಣ ಇವೇ ಮುಂತಾದ ವಿವರಗಳನ್ನು ಅತ್ಯಗತ್ಯವಾಗಿ ತಿಳಿದುಕೊಳ್ಳಬೇಕು.

ಇತ್ತೀಚೆಗೆ ಹಲವಾರು ರಾಜ್ಯಗಳಲ್ಲಿ ಕೆಲವು ಸಹಕಾರಿ ಬ್ಯಾಂಕುಗಳು ಅದರ ನಿರ್ದೇಶಕರ ಬೇಕಾಬಿಟ್ಟಿ ಮನೋಭಾವ, ಸ್ವಜನ ಪಕ್ಷಪಾತ, ಸ್ವಾರ್ಥಪರ

ಚಟುವಟಿಕೆ ಮುಂತಾದ ಕಾರಣಗಳಿಂದ ತನ್ನ ಸದಸ್ಯರನ್ನು ವಂಚಿಸಿರುವ ಪ್ರಸಂಗಗಳನ್ನು ಸಾಕಷ್ಟು ಸಲ ಪತ್ರಿಕೆಗಳಲ್ಲಿ ಓದಿದ್ದೇವೆ.

ಅಲ್ಲದೆ ಬೆಂಗಳೂರಿನಲ್ಲಿಯೇ ಇತ್ತೀಚೆಗೆ ಶತಮಾನೋತ್ಸವ ಆಚರಣೆಯ ಸಂಭ್ರಮದಲ್ಲಿ ತೊಡಗಬೇಕಾಗಿದ್ದ ಸಹಕಾರೀ ಬ್ಯಾಂಕೊಂದು ತನ್ನ ಅವ್ಯವಹಾರದ ಹಾಗೂ ಸ್ವಾರ್ಥಪರ ನೀತಿಯಿಂದ ಬೇಕಾಬಿಟ್ಟಿ ಸಾಲ ನೀಡಿ ದಿವಾಳಿಯತ್ತ ಸಾಗಿದ್ದರಿಂದ ಆ ಬ್ಯಾಂಕಿನ ವ್ಯವಹಾರವನ್ನು ಸ್ಥಗಿತಗೊಳಿಸಬೇಕಾಗಿ ಬಂತು.

ಆದರೆ ಠೇವಣಿದಾರರ ಅದೃಷ್ಟ ಚೆನ್ನಾಗಿದ್ದುದರಿಂದ ಅಖಿಲ ಭಾರತದ ವ್ಯಾಪ್ತಿಯ ಸಹಕಾರಿ ಬ್ಯಾಂಕೊಂದು ಈ ಬ್ಯಾಂಕನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡು ವ್ಯವಹಾರವನ್ನು ಪುನರಾರಂಭಿಸಿತು. ಆದರೆ ಈ ನಡುವಿನ ವೇಳೆಯಲ್ಲಿ ಠೇವಣಿದಾರರು ಅತೀವ ಆರ್ಥಿಕ ಸಂಕಷ್ಟಕ್ಕೆ ಒಳಗಾಗಬೇಕಾಯಿತು. ಹಲವಾರು ನಿವೃತ್ತರು ತಮ್ಮ ಬದುಕಿನ ಶ್ರೀ ರಕ್ಷೆಯಾಗಿದ್ದಂತಹ ಬಡ್ಡಿಯ ಹಣದಿಂದಲೇ ಜೀವಿಸಬೇಕಾದ ಪರಿಸ್ಥಿತಿಯಲ್ಲಿದ್ದು ಅದರಿಂದ ವಂಚಿತರಾಗಿ ಪರಿತಪಿಸುವಂತಾಯಿತು.

ಇಂತಹ ಒಂದೆರಡು ಕಪ್ಪುಚುಕ್ಕೆ ಘಟನೆಗಳಿಂದ ಇಡೀ ಸಹಕಾರ ಕ್ಷೇತ್ರದಲ್ಲಿಯೇ ಜನತೆ ವಿಶ್ವಾಸ ಕಳೆದುಕೊಳ್ಳುವಂತಾಗುತ್ತದೆ. ಆದ್ದರಿಂದ ಸಹಕಾರಿ ಬ್ಯಾಂಕುಗಳಲ್ಲಿ ಠೇವಣಿ ಇಡುವವರು ಬಹಳ ಎಚ್ಚರಿಕೆಯಿಂದ ಸಂಸ್ಥೆಯ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಂಡು ವ್ಯವಹರಿಸಬೇಕು.

ಠೇವಣಿದಾರರಿಗೆ ಶ್ರೀರಕ್ಷೆ – ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮ

ಬ್ಯಾಂಕುಗಳಲ್ಲಿ ಹಣವನ್ನು ಠೇವಣಿ ಮಾಡುವುದು ಜನಸಾಮಾನ್ಯರಲ್ಲಿ ಬ್ಯಾಂಕುಗಳ ಬಗ್ಗೆ ಇರುವ ನಂಬಿಕೆ ಹಾಗೂ ವಿಶ್ವಾಸದ ಕುರುಹಾಗಿದೆ. ಅಷ್ಟೇ ಅಲ್ಲ, ಬ್ಯಾಂಕಿನಲ್ಲಿಟ್ಟ ಹಣವನ್ನು ಯಾವಾಗ ಬೇಕಾದರೂ ಹಿಂದಕ್ಕೆ ಪಡೆಯುವ ದ್ರವತೆಯ (Liquidity) ಸೌಲಭ್ಯವೂ ಬ್ಯಾಂಕ್ ಠೇವಣಿಗಳಲ್ಲಿ ಲಭ್ಯವಿದೆ. ಅಲ್ಲದೆ, ಬಡವ ಬಲ್ಲಿದರೆಂಬ ಭೇಧವಿಲ್ಲದೆ ಎಲ್ಲ ವರ್ಗದ ಜನರೂ ತಮ್ಮ ಅವಶ್ಯಕತೆ ಹಾಗೂ ಅರ್ಹತೆಗೆ ತಕ್ಕಂತೆ ಬ್ಯಾಂಕುಗಳಲ್ಲಿ ಠೇವಣಿ ಮಾಡಬಹುದು – ಉಳಿತಾಯ ಖಾತೆಯಾಗಲೀ ಅಥವಾ ನಿಗದಿತ ಠೇವಣಿಯನ್ನಾಗಲೀ ಮಾಡಬಹುದು. ಇದರಿಂದ ಉಳಿತಾಯದ ಮನೋಭಾವನೆಯೂ ಬರುತ್ತದೆ. ಕಷ್ಟ ಕಾಲದಲ್ಲಿ ಹಣ ಹಿಂದಕ್ಕೆ ಪಡೆಯುವ ಅವಕಾಶವೂ ಇರುತ್ತದೆ. ಹಾಗಾಗಿ ಈ ಎಲ್ಲ ಸೌಲಭ್ಯಗಳ

ಅನುಕೂಲತೆಯಿಂದ ಬ್ಯಾಂಕಿನಲ್ಲಿ ಠೇವಣಿ ಇಡುವುದು, ಇಂದು ನಿನ್ನೆಯಿಂದಲ್ಲ, ಬಹಳ ಹಿಂದಿನಿಂದಲೂ ಸಹ ಅನೂಚಾನವಾಗಿ ಬಂದಿರುವ ಪದ್ಧತಿ. ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲಂತೂ ಜನಸಾಮಾನ್ಯರಿಗೆ ಬ್ಯಾಂಕುಗಳ ಮೇಲಿನ ನಂಬಿಕೆ ಅಗಾಧವಾಗಿ ಮೂಡಿ ಬಂದಿದೆ. ಹಾಗಾಗಿ ಹೆಚ್ಚಿನ ಸಾಮಾನ್ಯ ಜನರು ತಮ್ಮ ಉಳಿತಾಯದ ಹಣದ ಠೇವಣಿಗೆ ನಂಬಿರುವುದು ಬ್ಯಾಂಕುಗಳನ್ನೇ.

ಆದರೆ ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಮುಂಚೆ ಇದ್ದ ಪರಿಸ್ಥಿತಿಯನ್ನು ಗಮನಿಸಿದರೆ ಇಂದಿನ ಸುರಕ್ಷತೆಯ ಪರಿಸ್ಥಿತಿ ಅಂದು ಇರಲಿಲ್ಲವೆಂದೇ ಹೇಳಬಹುದು. ಬ್ಯಾಂಕುಗಳನ್ನು ಸ್ಥಾಪಿಸಿ ವ್ಯವಹಾರ ಮಾಡುತ್ತಿದ್ದ ಪ್ರವರ್ತಕರು ಮತ್ತು ನಿರ್ದೇಶಕರು ಹೆಚ್ಚು ಹೆಚ್ಚು ಠೇವಣಿಗಳನ್ನು ಸಂಗ್ರಹಿಸಲು ಠೇವಣಿದಾರರಿಗೆ ಅಧಿಕ ಬಡ್ಡಿಯ ಆಮಿಷವನ್ನು ಒಡ್ಡುತ್ತಿದ್ದರು. ಹೀಗೆ ಸಂಗ್ರಹಿಸಿದ ಹಣವನ್ನು ಮನಸೋ ಇಚ್ಛೆ ತಮಗೆ ಬೇಕಾದವರಿಗೆ, ಉದ್ಯಮಿಗಳಿಗೆ ಸಾಲವಾಗಿ ನೀಡುತ್ತಿದ್ದರು. ಇಂತಹ ನೀಡಿಕೆಯಲ್ಲಿ ಅವರಿಗಿದ್ದ ಉದ್ದೇಶವೆಂದರೆ ಅಧಿಕ ಲಾಭ ಗಳಿಸುವುದು ಮತ್ತು ಸ್ವಜನ ಪಕ್ಷಪಾತ ಮಾತ್ರ. ತಾವು ಸಾಲವಾಗಿ ನೀಡಿದ ಹಣ ವಾಪಸು ಬಾರದಿದ್ದರೆ ಠೇವಣಿದಾರರಿಗೆ ವಾಪಸು ಮಾಡಲು ಈ ಬ್ಯಾಂಕುಗಳಲ್ಲಿ ಹಣವಿರುತ್ತಿರಲಿಲ್ಲ. ಕಷ್ಟಪಟ್ಟು ದುಡಿದು ಗಳಿಸಿದ ಹಣವನ್ನು ಬ್ಯಾಂಕಿನಲ್ಲಿಟ್ಟ ಠೇವಣಿದಾರರ ಹಣಕ್ಕೆ ಸಂಚಕಾರ ಬರುತ್ತಿತ್ತು.

1938ರಲ್ಲಿ ತಿರುವಾಂಕೂರು ವಲಯದಲ್ಲಿಯೇ ಅತಿ ದೊಡ್ಡದಾಗಿದ್ದ ಟ್ರಾವಂಕೂರ್ ನ್ಯಾಷನಲ್ ಅಂಡ್ ಕ್ವಿಲಾನ್ ಬ್ಯಾಂಕ್ ಎಂಬ ಬ್ಯಾಂಕ್, ಠೇವಣಿದಾರರಿಗೆ ಅವರ ಹಣವನ್ನು ಹಿಂದಿರುಗಿಸಲು ವಿಫಲವಾಯಿತು. 1946-48ರ ಅವಧಿಯಲ್ಲಿ ಬಂಗಾಳ ಪ್ರಾಂತದಲ್ಲಿಯೂ ಸಹ ಇದೇ ಪರಿಸ್ಥಿತಿ ಉಂಟಾಯಿತು. ಅಷ್ಟೇ ಅಲ್ಲ 1960ರ ಸುಮಾರಿನಲ್ಲಿ ಲಕ್ಷ್ಮೀ ಬ್ಯಾಂಕ್ ಮತ್ತು ಪಲಾಯಿ ಸೆಂಟ್ರಲ್ ಬ್ಯಾಂಕುಗಳು ಸಹ ಠೇವಣಿದಾರರಿಗೆ ಹಣವನ್ನು ಹಿಂದಿರುಗಿಸಲು ವಿಫಲವಾದವು.

ಈ ಸಂದರ್ಭದಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡಲು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಜನಸಾಮಾನ್ಯರಲ್ಲಿ ವಿಶ್ವಾಸ ಹಾಗೂ ಭರವಸೆಯನ್ನು ಮೂಡಿಸುವ ಉದ್ದೇಶ್ಯದಿಂದ **"ಡಿಪಾಸಿಟ್ ಇನ್ಶೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ"** ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅದಕ್ಕಾಗಿ ಪಾರ್ಲಿಮೆಂಟಿನಲ್ಲಿ 21.08.1961ರಂದು ಒಂದು ಕಾಯಿದೆಯನ್ನು ಜಾರಿಗೊಳಿಸಲಾಯಿತು. 07.12.1961ರಂದು ಅದಕ್ಕೆ ರಾಷ್ಟ್ರಾಧ್ಯಕ್ಷರ ಅನುಮತಿಯೂ ದೊರಕಿ 1962ರ

ಜನವರಿ ತಿಂಗಳ ಮೊದಲನೆ ದಿನದಂದು ಈ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು. ಇಡೀ ವಿಶ್ವದಲ್ಲಿಯೇ ಇಂತಹ ಸಂಸ್ಥೆಯನ್ನು ಸ್ಥಾಪಿಸಿದ ಎರಡನೆಯ ದೇಶವೆಂದರೆ, ಭಾರತ. (ಮೊಟ್ಟ ಮೊದಲಿಗೆ ಸ್ಥಾಪಿತವಾಗಿದ್ದು ಅಮೆರಿಕ ದೇಶದಲ್ಲಿ 1933ರಲ್ಲಿ)

ಈ ಸಂಸ್ಥೆಯು ಆರಂಭಗೊಂಡ ಸಮಯದಲ್ಲಿ ಇದ್ದ ಸ್ಥಾಪನೆಯ ಪ್ರಮುಖ ಉದ್ದೇಶವೆಂದರೆ ಬ್ಯಾಂಕುಗಳಲ್ಲಿ ಠೇವಣಿ ಮಾಡಿದವರ, ಅದರಲ್ಲಿಯೂ ಸಣ್ಣ ಠೇವಣಿದಾರರ, ಹಿತಾಸಕ್ತಿಯನ್ನು ಕಾಪಾಡುವುದು. ಬ್ಯಾಂಕುಗಳು ತಮ್ಮ ಕಾರ್ಯದಲ್ಲಿ ವಿಫಲವಾಗಿ ಠೇವಣಿದಾರರಿಗೆ ಹಣವನ್ನು ಹಿಂದಿರುಗಿಸಲು ಆಗದ ಸಂದರ್ಭದಲ್ಲಿ ಠೇವಣಿದಾರರಲ್ಲಿ ಉಂಟಾಗುವ ಆತಂಕವನ್ನು ದೂರ ಮಾಡುವುದು. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಭದ್ರತೆಯನ್ನುಂಟುಮಾಡುವುದು ಹಾಗೂ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಠೇವಣಿದಾರರಿಗೆ ವಿಶ್ವಾಸಾರ್ಹತೆಯನ್ನು ಉಂಟುಮಾಡುವುದು.

1978ರ ಜುಲೈ 15ರಂದು ಡಿಪಾಸಿಟ್ ಇನ್ಶೂರೆನ್ಸ್ ಕಾಯಿದೆಯಲ್ಲಿ ತಿದ್ದುಪಡಿಯನ್ನು ಜಾರಿಗೆ ತಂದು ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮ (ಡಿಪಾಸಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್) ಎಂದು ಹೆಸರಿಸಲಾಯಿತು.

ಈ ನಿಗಮವು ಭಾರತೀಯ ರಿಸರ್ವ್ ಬ್ಯಾಂಕಿನ ಅಧೀನಕ್ಕೆ ಒಳಪಟ್ಟ ಸಂಸ್ಥೆಯಾಗಿದ್ದು ಈ ಸಂಸ್ಥೆಯಲ್ಲಿನ ಸಂಪೂರ್ಣ ಬಂಡವಾಳ ಭಾರತೀಯ ರಿಸರ್ವ್ ಬ್ಯಾಂಕಿನದ್ದಾಗಿರುತ್ತದೆ. ಭಾರತದಲ್ಲಿರುವ ಎಲ್ಲ ವಾಣಿಜ್ಯ ಬ್ಯಾಂಕುಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಪಟ್ಟಣ ಸಹಕಾರೀ ಬ್ಯಾಂಕುಗಳು ಈ ಸಂಸ್ಥೆಯ ಸದಸ್ಯತ್ವವನ್ನು ಪಡೆದಿರುತ್ತವೆ.

ಸಂಸ್ಥೆಯ ಪ್ರಾರಂಭದಲ್ಲಿ ಠೇವಣಿದಾರನಿಗೆ ದೊರಕುತ್ತಿದ್ದ ವಿಮಾ ರಕ್ಷೆಯು 1500 ರೂಪಾಯಿಗಳಿಗೆ ಸೀಮಿತವಾಗಿತ್ತು. ಈ ಮೊತ್ತವು ಕಾಲ ಕ್ರಮೇಣ ಹೆಚ್ಚಾಗತೊಡಗಿತು. 1968ರಲ್ಲಿ 5000 ರೂಪಾಯಿಗಳಿಗೇರಿದ ವಿಮಾ ರಕ್ಷೆಯು 1970ರಲ್ಲಿ 10000 ರೂಪಾಯಿಗಳಿಗೂ, 1976ರಲ್ಲಿ 20000 ರೂಪಾಯಿಗಳಿಗೂ, 1980ರಲ್ಲಿ 30000 ರೂ.ಗಳಿಗೂ ಏರತೊಡಗಿ, 1993ರಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಏರಿತು. ಹಾಗಾಗಿ ಇಂದು ಬ್ಯಾಂಕು ತನ್ನ ಠೇವಣಿದಾರರಿಗೆ ಠೇವಣಿಯ ಮೊತ್ತವನ್ನು ಹಿಂದುರಿಗಿಸಲು ವಿಫಲವಾದಾಗ ನಿಗಮವು ನೀಡುವ ಪರಿಹಾರವು ಒಂದು ಲಕ್ಷ ರೂಪಾಯಿಗಳಾಗಿರುತ್ತವೆ.

ಈ ಸಂಸ್ಥೆಯಲ್ಲಿ ಸದಸ್ಯರಾಗಿರುವ ಬ್ಯಾಂಕುಗಳು ವಿಮಾರಕ್ಷೆಗೆ ಒಳಪಟ್ಟ

ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಂ ಹಣವನ್ನು ನೀಡಬೇಕಾಗುತ್ತದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಈ ಪ್ರೀಮಿಯಂನ್ನು ನೀಡುವ ಹೊಣೆಗಾರಿಕೆ ಯಾವುದೇ ಸಂದರ್ಭದಲ್ಲಿಯೂ ಠೇವಣಿದಾರನ ಮೇಲೆ ಬೀಳುವುದಿಲ್ಲ. ಸದಸ್ಯ ಬ್ಯಾಂಕುಗಳೇ ನೀಡಬೇಕಾಗುತ್ತದೆ.

ತಾವು ಠೇವಣಿ ಇಟ್ಟಿರುವ ಬ್ಯಾಂಕು, ಈ ವಿಮಾ ಸಂಸ್ಥೆಯ ಸದಸ್ಯತ್ವವನ್ನು ಪಡೆದಿರುವುದೋ ಇಲ್ಲವೋ, ಬ್ಯಾಂಕು ಅಕಸ್ಮಾತ್ ದಿವಾಳಿಯಾದ ಸಂದರ್ಭದಲ್ಲಿ ತಮಗೆ ಪರಿಹಾರ ದೊರಕುವುದೋ ಇಲ್ಲವೋ ಎಂಬ ಕುತೂಹಲ ಹಾಗೂ ಸಂದೇಹವು ಪ್ರತಿಯೊಬ್ಬ ಠೇವಣಿದಾರನಲ್ಲಿಯೂ ಮೂಡುವುದು ಸಹಜ. ವಿಮೆ ಉದರಿ ಖಾತರಿ ನಿಗಮವು ಬ್ಯಾಂಕುಗಳಿಗೆ ತನ್ನ ಸದಸ್ಯತ್ವವನ್ನು ನೀಡುವಾಗ ಸದಸ್ಯ ಬ್ಯಾಂಕು ತನ್ನ ಗ್ರಾಹಕರಿಗೆ/ಠೇವಣಿದಾರರಿಗೆ ಈ ವಿಮೆಯ ಸೌಲಭ್ಯದ ಅರಿವನ್ನು ಉಂಟುಮಾಡತಕ್ಕ ಕರಪತ್ರಗಳನ್ನು ಸದಸ್ಯ ಬ್ಯಾಂಕುಗಳಿಗೆ ನೀಡುತ್ತದೆ. ಅಂತಹ ಕರಪತ್ರಗಳನ್ನು ಪ್ರತಿಯೊಬ್ಬ ಸದಸ್ಯ ಬ್ಯಾಂಕೂ ಸಹ ತನ್ನ ಸೂಚನಾ ಪತ್ರ (ನೋಟಿಸ್ ಬೋರ್ಡ್)ದಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕಾಗುತ್ತದೆ ಹಾಗೂ ಸಂದೇಹವಿದ್ದಲ್ಲಿ ಬ್ಯಾಂಕಿನ ವ್ಯವಸ್ಥಾಪಕರನ್ನು ಸಂಪರ್ಕಿಸಿ ತಮ್ಮ ಸಂದೇಹವನ್ನು ಪರಿಹರಿಸಿಕೊಳ್ಳಬಹುದು.

ಹಾಗಾಗಿ ವಿಮೆ ಮತ್ತು ಉದರಿ ಖಾತರಿ ನಿಗಮ ಸ್ಥಾಪಿತವಾದ ನಂತರ ಠೇವಣಿದಾರರು, ತಾವು ಹೂಡಿರುವ ಠೇವಣಿಯ ಬಗ್ಗೆ ಸ್ವಲ್ಪ ಮಟ್ಟಿಗಾದರೂ ನಿಶ್ಚಿಂತತೆಯಿಂದ ಇರಬಹುದಾಗಿದೆ. ಆದ್ದರಿಂದ ಈ ನಿಗಮವು ಠೇವಣಿದಾರರಿಗೆ ಶ್ರೀರಕ್ಷೆಯಾಗಿದೆಯೆಂದು ಧಾರಾಳವಾಗಿ ಹೇಳಬಹುದು.

ಪತ್ತಿನ ಸಹಕಾರಿ ಸಂಘಗಳು

(Credit Co-operative Society)

ಸರ್ವರಿಗೂ ಸಮಬಾಳು – ಸರ್ವರಿಗೂ ಸಮಪಾಲು ಎನ್ನುವ ತತ್ವದ ಅಡಿಯಲ್ಲಿ ಸಹಕಾರೀ ಸಂಘಗಳು ಕಾರ್ಯ ನಿರ್ವಹಿಸುತ್ತವೆ. ಇಂತಹ ಸಂಘಗಳ ಮುಖ್ಯ ಉದ್ದೇಶ ಶೋಷಣೆ ಮತ್ತು ಮಧ್ಯವರ್ತಿಗಳನ್ನು ತಡೆ ಹಿಡಿಯುವುದು. ತನ್ನ ಸಂಘದ ಸದಸ್ಯರ ಕಷ್ಟ ಸುಖಗಳಿಗೆ ಸ್ಪಂದಿಸುವುದು. ಸದಸ್ಯರ ಅಥವ ಅವರ ಮಕ್ಕಳ ಉನ್ನತ ವಿದ್ಯಾಭ್ಯಾಸ, ಮದುವೆ, ನಿವೇಶನ ಕೊಳ್ಳುವುದು, ಗೃಹ ನಿರ್ಮಾಣ,

ಗೃಹೋಪಯೋಗಿ ಸಾಧನಗಳ ಖರೀದಿ ಮತ್ತಿತರ ಅಗತ್ಯತೆಗಳಿಗೆ ನೆರವಾಗುವುದು.

ಈ ಕಾರಣಕ್ಕಾಗಿ ಕೆಲವು ನಿರ್ದಿಷ್ಟ ಸಮುದಾಯ ಅಥವಾ ಗುಂಪಿನವರು ತಮ್ಮ ಪರಸ್ಪರ ಏಳಿಗೆಗಾಗಿ ಸಹಕಾರ ಸಂಘವನ್ನು ಸ್ಥಾಪಿಸಿ ಕೊಂಡಿರುವುದನ್ನು ಕಾಣಬಹುದು. ಇಂತಹ ಸಂಘಗಳಲ್ಲಿ ಪತ್ತಿನ ಸಹಕಾರ ಸಂಘಗಳೂ ಸಹ ಪ್ರಮುಖವಾದುದು.

ಒಂದೇ ಕಸುಬಿನಲ್ಲಿ ನಿರತರಾಗಿರುವವರು, ಒಂದೇ ಉದ್ಯಮದಲ್ಲಿ ಒಂದೇ ಕಾರ್ಖಾನೆಯಲ್ಲಿ ಒಂದೇ ಕಾರ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಇಂತಹ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡಿರುವುದನ್ನು ನಾವು ಕಾಣಬಹುದು. ಅಂದರೆ ಇಂತಹ ಸಂಘಗಳಲ್ಲಿ ಸದಸ್ಯರ ಸಂಖ್ಯೆ, ಅಯಾ ಕ್ಷೇತ್ರಕ್ಕೆ ಪರಿಮಿತಿಕೊಂಡಿರುವುದರಿಂದ ಸೀಮಿತವಾಗಿರುತ್ತದೆ.

ಸದಸ್ಯರಿಂದ ಷೇರು ಧನವನ್ನು ಸಂಗ್ರಹಿಸಿ, ಸಹಕಾರ ಇಲಾಖೆಯಿಂದ ಸೂಕ್ತವಾದ ಹಾಗೂ ಅಗತ್ಯವಾದ ಪರವಾನಗಿಯನ್ನು ಪಡೆದು ಕಾರ್ಯ ನಿರ್ವಹಿಸುವ ಈ ಸಂಘಗಳಲ್ಲಿನ ಕಾರ್ಯ ವ್ಯಾಪ್ತಿ, ಬಹುಮಟ್ಟಿಗೆ ತನ್ನ ಸದಸ್ಯರಿಗೆ ಮಾತ್ರವಾಗಿರುತ್ತದೆ. ಸಂಘದ ಸದಸ್ಯರಿಂದ ಠೇವಣಿ ಸ್ವೀಕರಿಸಿ, ಅವಶ್ಯಕತೆ ಇರುವ ಸದಸ್ಯರಿಗೆ ಸಾಲ ನೀಡುವುದು ಈ ಕ್ರಮದಿಂದ ಠೇವಣಿ ಇಟ್ಟವರಿಗೆ ಬಡ್ಡಿದೊರಕುವುದೇ ಅಲ್ಲದೇ, ಕಷ್ಟದಲ್ಲಿರುವ ಸದಸ್ಯರಿಗೆ ತಕ್ಷಣದ ಹಣದ ನೆರವು ಸಿಗುತ್ತದೆ.

ಬಹಳಷ್ಟು ಜನ ನಿವೃತ್ತ ಉದ್ಯೋಗಿಗಳು ಪದೇ ಪದೇ ಕೇಳುವ ಪ್ರಶ್ನೆ ಏನೆಂದರೆ ಪತ್ತಿನ ಸಹಕಾರ ಸಂಘಗಳಲ್ಲಿ ಹಣವನ್ನು ಠೇವಣಿ ಇಡಬಹುದೇ?

ಈಗಾಗಲೇ ತಿಳಿಸಿರುವಂತೆ ಇಂತಹ ಸಂಘಗಳನ್ನು ಮಾಡಿ ಕೊಂಡಿರುವವರಾದರೂ ಯಾರು? ಒಂದೇ ಸಮಾನ ಭಾವನೆಯನ್ನು ಹೊಂದಿರುವ ಹಾಗೂ ಒಂದು ನಿರ್ದಿಷ್ಟ ಕಾರ್ಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರು, ಅಲ್ಲದೆ ಸಂಘದ ಕಾರ್ಯ ನಿರ್ವಹಣೆಗೆ ನಿರ್ದೇಶಕರುಗಳಾಗಿ ಆಯ್ಕೆಯಾಗಿರುವವರೂ ಸಹ ಸದಸ್ಯರಿಂದ ಚುನಾಯಿತರಾಗಿರುವವರೇ. ಹಾಗಾಗಿ ಅಂತಹ ಸಂಘಗಳ ಆಗುಹೋಗುಗಳ ಪರಿಚಯ ಸದಸ್ಯರಿಗೆ ಚೆನ್ನಾಗಿ ಗೊತ್ತಿರುತ್ತದೆ. ಅಂತಹ ಸಂಘಗಳಲ್ಲಿ ಹಣವನ್ನು ಠೇವಣಿ ಇಡುವುದೂ ಬಿಡುವುದೂ ಅವರ ವಿವೇಚನೆಗೆ ಸಂಬಂಧಪಟ್ಟಂತೆ ಆಗಿರುತ್ತದೆ.

ಅಲ್ಲದೆ ಕೆಲವು ಕಾರ್ಖಾನೆಗಳು ಹಾಗೂ ಸಂಸ್ಥೆಗಳಲ್ಲಿ ಅಲ್ಲಿಯ ನೌಕರರು ಸ್ಥಾಪಿಸಿಕೊಂಡಿರುವ ಇಂತಹ ಪತ್ತಿನ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ನೀಡಿದ ಸಾಲದ ಮೊಬಲಗಿನ ಕಂತುಗಳನ್ನು ಅವರ ಸಂಬಳದಲ್ಲಿಯೇ ಕಡಿತಗೊಳಿಸಿ ಅದನ್ನು ಸಂಘಕ್ಕೆ ಪಾವತಿಸುವ ಸೌಲಭ್ಯವನ್ನು ಆಯಾ ಆಡಳಿತವರ್ಗವು ದೊರಕಿಸಿ ಕೊಡುವ ಪದ್ಧತಿಯೂ ಇದೆ. ಈ ಸೌಲಭ್ಯವಿರುವ ಕಡೆ ಸದಸ್ಯರಿಗೆ ನೀಡಿದ ಸಾಲದ ಮರು ಪಾವತಿಯ ಬಗ್ಗೆ ಯಾವುದೇ ಅಡಚಣೆ ಇರುವುದಿಲ್ಲ.

ಈ ಪತ್ತಿನ ಸಹಕಾರ ಸಂಘಗಳ ಲೆಕ್ಕ ಪತ್ರಗಳು, ರಾಜ್ಯ ಸರ್ಕಾರದ ಸಹಕಾರ ಇಲಾಖೆಯವರ ತನಿಖೆಗೆ (ಆಡಿಟ್) ಒಳಪಡುತ್ತದೆ. ಆದರೂ ಸಹಕಾರೀ ಬ್ಯಾಂಕುಗಳಿಗೆ ಇರುವ ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮ (Deposit Insurance Corporation of India) ದ ಸೌಲಭ್ಯವಿರುವುದಿಲ್ಲ.

ಹಾಗಾಗಿ ತಾವೇ ಸದಸ್ಯರಾಗಿರುವ ಇಂತಹ ಸಂಸ್ಥೆಗಳ ಕಾರ್ಯದಕ್ಷತೆ ಬಗ್ಗೆ ಸಾಕಷ್ಟು ಅರಿವು ಮಾಹಿತಿಯನ್ನು ಸದಸ್ಯರೇ ಹೊಂದಿರಬಹುದಾದ್ದರಿಂದ ಅಂತಹ ಕಡೆ ಠೇವಣಿ ಇಡುವುದು ಬಿಡುವುದು ಸಂಪೂರ್ಣವಾಗಿ ಅವರವರ ವಿವೇಚನೆಗೆ ಒಳಪಟ್ಟಿದ್ದು.

ಪ್ರಾರಂಭದಲ್ಲಿಯೇ ತಿಳಿಸಿದಂತೆ ಹಣ ಹೂಡುವಿಕೆಯ ಮೂರು ಸರಳ ಸೂತ್ರಗಳಾದ ಭದ್ರತೆ, ಪ್ರತಿಫಲ ಹಾಗೂ ಬೇಕೆಂದಾಗ ಹಣ ಪಡೆಯಲು ಇರುವ ಅವಕಾಶ ಇವುಗಳ ಬಗ್ಗೆ ಗಮನ ಹರಿಸುವುದು ಅತ್ಯಗತ್ಯ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಉಳಿತಾಯ ಬಾಂಡ್‌ಗಳು

RBI Savings Bonds

ಭಾರತೀಯ ರಿಸರ್ವ್ ಬ್ಯಾಂಕಿನ ಉಳಿತಾಯ ಬಾಂಡ್‌ಗಳು ಸುರಕ್ಷಿತ ಠೇವಣಿಗಿರುವ ಮತ್ತೊಂದು ಅವಕಾಶ.

ಈ ಯೋಜನೆಯಲ್ಲಿ ಯಾರೂ ಬೇಕಾದರೂ ಹಣಹೂಡಬಹುದು. ಯಾವುದೇ ನಾಗರಿಕ, ಹಿಂದೂ ಅವಿಭಕ್ತ ಕುಟುಂಬ, ಧರ್ಮಾರ್ಥ ಸಂಸ್ಥೆಗಳು ಇತ್ಯಾದಿ.

ಈ ಬಾಂಡ್‌ಗಳ ವೈಶಿಷ್ಟ್ಯ ಹೀಗಿದೆ

ಬಡ್ಡಿ ದರ : ವಾರ್ಷಿಕ ಶೇ.7. ಪ್ರತಿ ಆರು ತಿಂಗಳಿಗೊಮ್ಮೆ ಅಂದರೆ ಆಯಾವರ್ಷದ ಫೆಬ್ರವರಿ 1 ರಂದು ಮತ್ತು ಆಗಸ್ಟ್ 1 ರಂದು ನೀಡಲಾಗುವುದು.

ಠೇವಣಿಯ ಅವಧಿ : ಆರು ವರ್ಷಗಳು

ಮಿತಿ : ಕನಿಷ್ಠ ಆರು ಸಾವಿರ ರೂಪಾಯಿ, ಗರಿಷ್ಠದ ಮಿತಿ ಇಲ್ಲ.

ಹಣ ಹೂಡಿಕೆಯ ಇತರೆ ಅವಕಾಶಗಳು

ಈಗಾಗಲೇ ವಿವರಿಸಿದಂತೆ ಅಂಚೆ ಕಛೇರಿ, ಬ್ಯಾಂಕುಗಳು, ರಿಸರ್ವ್ ಬ್ಯಾಂಕ್ ಬಾಂಡ್‌ಗಳು – ಇವೇ ಮುಂತಾದ ಹಲವಾರು ಸುರಕ್ಷಿತ ಕ್ಷೇತ್ರಗಳಲ್ಲಿ ಹಣ ಹೂಡಿಕೆಯ ಅವಕಾಶಗಳನ್ನು ತಿಳಿಯಲಾಯಿತು.

ಇವುಗಳೇ ಅಲ್ಲದೆ, ಅನೇಕ ಖಾಸಗೀ ಕಂಪನಿಗಳಲ್ಲಿ ಕಂಪನಿಯ ಕಾಯಿದೆಯ ನಿಯಮದಂತೆ ಸಾರ್ವಜನಿಕರಿಂದ ಹಣವನ್ನು ಠೇವಣಿಯ ರೂಪ ದಲ್ಲಿ ಸಂಗ್ರಹಿಸುತ್ತದೆ. ಈ ರೀತಿ ಸಂಗ್ರಹಿಸುವಾಗ ಕಂಪನಿಗಳು ತಾನು ಹೊಂದಿರುವ ಸ್ವಂತ ಆಸ್ತಿ ಹಾಗೂ ತನ್ನ ಬಂಡವಾಳದ ಒಂದಿಷ್ಟು ಭಾಗವನ್ನು ಮಾತ್ರಕ್ಕೆ ಸೀಮಿತಗೊಳಿಸಬೇಕೆಂಬ ನಿಯಮಕ್ಕೆ ಬದ್ಧರಾಗಬೇಕಾಗುತ್ತದೆ.

ಹೌಸಿಂಗ್ ಫೈನಾನ್ಸ್ ಕಂಪನಿಗಳು ಹಾಗೂ ಹಣಕಾಸಿನ ವ್ಯವಹಾರದಲ್ಲಿ ನಿರತವಾಗಿರುವ ಕಂಪನಿಗಳೂ ಸಹ ಸಾರ್ವಜನಿಕರಿಂದ ಠೇವಣಿ ಹಣವನ್ನು ಸ್ವೀಕರಿಸುತ್ತವೆ.

ಈ ಕಂಪನಿಗಳು ಹಲವಾರು ಆಕರ್ಷಣೆಗಳನ್ನು ಹೂಡಿಕೆದಾರರಿಗೆ ನೀಡುತ್ತವೆ. ಹೆಚ್ಚಿನ ಬಡ್ಡಿದರ, ಕಮೀಷನ್, ಆಕರ್ಷಕ ಉಡುಗೊರೆಗಳು, ಇತ್ಯಾದಿ ಇತ್ಯಾದಿ.

ಆದರೆ ಠೇವಣಿದಾರರು ಗಮನಿಸಬೇಕಾದುದುದೆಂದರೆ ಈ ಠೇವಣಿಗಳಿಗೆ ಭದ್ರತೆ ಇರುವುದಿಲ್ಲ. ಬ್ಯಾಂಕುಗಳಲ್ಲಿ ಇರುವಂತೆ ವಿಮಾ ಸೌಲಭ್ಯವಿರುವುದಿಲ್ಲ. ಕಂಪನಿಯು ನಷ್ಟ ಹೊಂದಿದರೆ ಬಡ್ಡಿಯನ್ನು ಪಡೆಯುವುದೂ ಸಹ ಕಷ್ಟವಾಗುತ್ತದೆ.

ಹಾಗಾಗಿ ಸಾಧ್ಯವಾದಷ್ಟು ಠೇವಣಿಗಳನ್ನು ಸಂಪೂರ್ಣ ಸುರಕ್ಷಿತ ವಾಗಿರುವಂತಹ ಮತ್ತು ವಿಮಾ ಸೌಲಭ್ಯವಿರುವಂತಹ ಕಡೆಗಳಲ್ಲಿ ಹೂಡುವುದು ಕ್ಷೇಮಕರ.

ಚಿನ್ನ, ಬೆಳ್ಳಿ ಹಾಗೂ ನಿವೇಶನಗಳಲ್ಲಿ ಹೂಡಿಕೆ

ಚಿನ್ನ ಮತ್ತು ಬೆಳ್ಳಿಯ ಮೋಹ ಎಂತಹವರನ್ನೂ ಆವರಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ, ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಇವೆರಡೂ ಲೋಹಗಳು ಮಹತ್ತರ ಪ್ರಭಾವವನ್ನು ಬೀರಿವೆ. ಪ್ರತಿಯೊಬ್ಬ ಮಹಿಳೆಯೂ, ಬಡವ ಶ್ರೀಮಂತರೆನ್ನುವ ಭೇಧವಿಲ್ಲದೆ ಯೋಗ್ಯತಾನುಸಾರವಾಗಿ ಚಿನ್ನವನ್ನು ಹೊಂದಿಯೇ ಇರುತ್ತಾರೆ.

ಶ್ರೀಮಂತರು ಚಿನ್ನವನ್ನು ಪ್ರತಿಷ್ಠೆಯ ವಸ್ತುವಾಗಿ, ಬಂಡವಾಳ ರೂಪದಲ್ಲಿ ಹೊಂದಿದ್ದರೆ, ಬಡವರು ಅದನ್ನು ಆಪತ್ಕಾಲಕ್ಕೆ ನೆರವಾಗುವುದೆಂಬ ಆಶಾ ಭಾವನೆಯಿಂದ ತಮ್ಮ ಶಕ್ತಿ ಇದ್ದಷ್ಟು ಹೊಂದಲು ಪ್ರಯತ್ನಿಸುತ್ತಾರೆ.

ಸಾಮಾನ್ಯವಾಗಿ ಚಿನ್ನದ ಬೆಲೆ ಯಾವಾಗಲೂ ಜಾಸ್ತಿಯಾಗುತ್ತಲೇ ಇರುತ್ತದೆ. ಈ ಕಾರಣದಿಂದ ಬೆಲೆ ಜಾಸ್ತಿ ಬಂದಾಗ ಮಾರಬಹುದೆಂದೂ ಲಾಭ ಮಾಡಿಕೊಳ್ಳಬಹುದೆಂಬ ಅಭಿಪ್ರಾಯ ಹಲವರದು. ಅಲ್ಲದೆ ಅಗತ್ಯ ಬಿದ್ದಾಗ ಅದರ ಆಧಾರದ ಮೇಲೆ ಸಾಲ ಪಡೆಯುವ ಅನುಕೂಲತೆಯೂ ಇರುತ್ತದೆ.

ಬೆಳ್ಳಿಯ ವಿಚಾರದಲ್ಲಿಯೂ ಸಹ ಇದೇ ಅಭಿಪ್ರಾಯವಿರುತ್ತದೆ.

ಆದರೆ, ಇವೆರಡನ್ನು ಹೂಡಿಕೆಯ ದೃಷ್ಟಿಯಿಂದ ಪರಿಗಣಿಸಿದಾಗ ಅಷ್ಟೊಂದು ಸಮಂಜಸವಲ್ಲವೆಂದು ಹೇಳಬಹುದು. ಏಕೆಂದರೆ, ನಿವೃತ್ತರು ತಮ್ಮ ಇಳಿ ವಯಸ್ಸಿನಲ್ಲಿ ಹೂಡುವ ಪ್ರಮುಖ ಗುರಿ ಎಂದರೆ ಅವರಿಗೆ ಪ್ರತಿತಿಂಗಳಿಗೂ ಬೇಕಾಗುವ ಪ್ರತಿಫಲ ಅಂದರೆ ಬಡ್ಡಿ. ಎರಡೂ ಲೋಹಗಳ ಮೇಲೆ ತಮ್ಮ ಹಣವನ್ನು ವಿನಿಯೋಗಿಸುವುದರಿಂದ ಮಾಸಿಕವಾಗಲಿ ಅಥವಾ ವಾರ್ಷಿಕವಾಗಿ ಆಗಲಿ ಯಾವ ಪ್ರತಿಫಲವೂ ಸಿಗದಿರುವುದು. ಇಷ್ಟೇ ಅಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ಇದನ್ನು ಸಂಗ್ರಹಿಸಿ ಇಟ್ಟು ಕೊಂಡಿದ್ದಲ್ಲಿ ಅದರ ಸುರಕ್ಷಿತ ಕಾಪಾಡುವಿಕೆಗೆ ವಿಶೇಷ ಎಚ್ಚರ ವಹಿಸಬೇಕಾಗುತ್ತದೆ.

ಇನ್ನು ಸೈಟು ಅಥವಾ ನಿವೇಶನದ ಬಗ್ಗೆ ಗಮನ ಹರಿಸಿದಾಗಲೂ ಸಹ ಇದೇ ಅಭಿಪ್ರಾಯ ಮೂಡಿ ಬರುತ್ತದೆ.

ಪ್ರತಿಯೊಬ್ಬ ಮನುಷ್ಯನಿಗೂ ಇರಲೊಂದು ಮನೆ ಅದಕ್ಕಾಗಿ ನಿವೇಶನದ ಅಗತ್ಯ ವಿದ್ದೇ ಇರುತ್ತದೆ. ಅದನ್ನು ಪಡೆದ ನಂತರವೂ, ಹಲವಾರು ಮಂದಿ ತಮ್ಮ ಹಣವನ್ನು ನಿವೇಶನಗಳಲ್ಲಿ ಹೂಡಿಕೆ ಮಾಡಿ ಅದರಿಂದ ಬರಬಹುದಾದ ಅಧಿಕ ಲಾಭದ ನಿರೀಕ್ಷೆಯಲ್ಲಿರುತ್ತಾರೆ.

ಸೈಟಿನ ಮೇಲೆ ಹೂಡಿದ ಹಣ ವಾಪಸು ಪಡೆಯಲು ದೀರ್ಘ ಕಾಲಾವಧಿಯ ಸಮಯಕ್ಕಾಗಿ ಕಾಯಬೇಕಾಗುತ್ತದೆ. ಹಾಕಿದ ಹಣಕ್ಕೆ ನ್ಯಾಯೋಚಿತವಾದ ಪ್ರತಿಫಲ ಸಿಗಲು, ಹಾಕಿದ ಹಣಕ್ಕೆ ಸೂಕ್ತ ಪ್ರತಿಫಲ ಸಿಗಲು ಸಂದರ್ಭಕ್ಕೆ ಕಾಯುತ್ತಿರಬೇಕಾಗುತ್ತದೆ.

ಚಿನ್ನ ಬೆಳ್ಳಿಗಳಂತೆಯೇ ನಿವೇಶನದ, ಮೇಲೆ ಹಾಕಿದ ಹಣಕ್ಕೆ ಕಾಲಕಾಲಕ್ಕೆ ಯಾವುದೇ ಪ್ರತಿಫಲ ಸಿಗುವುದಿಲ್ಲ. ಆ ಬದಲಿಗೆ ಅದರ ಸುಭದ್ರತೆಗೆ, ರಕ್ಷಣೆಗಾಗಿ ಸಾಕಷ್ಟು ಖರ್ಚು ಮಾಡಬೇಕಾಗುತ್ತದೆ. ಪ್ರತಿವರ್ಷವೂ ಸಂಬಂಧಪಟ್ಟ ಮುನಿಸಿಪಾಲಟಿ/ಕಾರ್ಪೋರೇಷನ್ ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ತೆರಿಗೆಯನ್ನು ಕಟ್ಟುತ್ತಿರಬೇಕಾಗುತ್ತದೆ.

ಬೇಕೆಂದಾಗ ಮಾರಿ ತಕ್ಷಣ ಹಣವನ್ನು ಪಡೆಯಲು ಸಾಕಷ್ಟು ಕಾಲ ಕಾಯಬೇಕು. ಅಲ್ಲದೆ ತತ್ಸಬಂಧವಾದ ಕಾನೂನಾತ್ಮಕ ವಿಧಿ ವಿಧಾನಗಳನ್ನು ಅವಶ್ಯಕವಾಗಿ ತಿಳಿದಿರಬೇಕಾಗುತ್ತದೆ.

ಅಲ್ಲದೆ ಸೈಟಿನ ಮೇಲೆ ಹೂಡಬೇಕಾದ ಹಣವೂ ಸಹ ಅಧಿಕವಾಗಿಯೇ ಇರುತ್ತದೆ.

ನಿವೃತ್ತಿಯ ನಂತರದ ಹಣಕಾಸಿನ ನಿರ್ವಹಣೆಯಲ್ಲಿ ಪ್ರಮುಖ ಅಂಶಗಳಾದ 1) ಭದ್ರತೆ, 2) ಪ್ರತಿಫಲ ಹಾಗೂ ಬೇಕೆಂದಾಗ ಹಣ ಮರಳಿ ಪಡೆಯುವ ಅವಕಾಶಗಳು ಈ ಮೂರು ಹೂಡಿಕೆಗಳಲ್ಲಿ ಅಷ್ಟಾಗಿ ಕಾಣಬರುವುದಿಲ್ಲ.

ತಾವು ಹೂಡಿದ ಹಣದ ವೃದ್ಧಿಯಾಗಬಹುದು. ಆದರೂ ಅದಕ್ಕೆ ಸಾಕಷ್ಟು ಸಮಯ ಕಾಯಬೇಕು. ಆದರೆ ಕಾಲಕಾಲಕ್ಕೆ ಅದರಿಂದ ಯಾವುದೇ ಪ್ರತಿಫಲವನ್ನು (ಬಡ್ಡಿ) ಪಡೆಯಲಾಗುವುದಿಲ್ಲ. ಇನ್ನು ಬೇಕೆಂದಾಗ ಹಣವನ್ನು ಹಿಂದಕ್ಕೆ ಪಡೆಯುವ ಅವಕಾಶವೆಂದರೆ, ಸೂಕ್ತ ಬೆಲೆ ಬಂದಾಗ ಮಾರಬಹುದೇ ಹೊರತು ನಮ್ಮ ಅಗತ್ಯ ಬಿದ್ದಾಗ ಅದನ್ನು ಮಾರಲು ಆಗುವುದಿಲ್ಲ.

ಆದ ಕಾರಣದಿಂದ ನಮ್ಮ ಚಿಕ್ಕ ವಯಸ್ಸಿನಲ್ಲಿ ಇವುಗಳ ಮೇಲೆ ಹಣವನ್ನು ವಿನಿಯೋಗಿಸಬಹುದೇ ಹೊರತು, ನಮ್ಮ ಜೀವನದ ಪೂರ್ವಾರ್ಧದಲ್ಲಿ ಅಲ್ಲ. ಆಗ ನಮ್ಮ ಹಣದ ಹೂಡಿಕೆಯ ಉದ್ದೇಶ ಹಣವೃದ್ಧಿಯ ಬಗ್ಗೆ ಅಲ್ಲ. ಆದರೆ ಜೀವನ ನಿರ್ವಹಣೆಗೆ ಅಗತ್ಯವಾಗಿ ಬೇಕಾದ ತಿಂಗಳು ತಿಂಗಳಿಗೂ ಬೇಕಾದ ನಮ್ಮ ಅಗತ್ಯತೆಗಳನ್ನು ಪೂರೈಸುವ ಹಣದ ಬಗ್ಗೆ.

ಠೇವಣಿ ಹೂಡುವಾಗ ಮತ್ತು ನಂತರ ವಹಿಸಬೇಕಾದ ಎಚ್ಚರಿಕೆ

ಹಣ ಹೂಡುವಲ್ಲಿ ವಹಿಸಬೇಕಾದ ಎಚ್ಚರದಷ್ಟೇ ಹಣ ಹೂಡಿದ ನಂತರವೂ ಸಹ ಎಚ್ಚರಿಕೆ ಹೊಂದಿರಬೇಕು. ಹಣ ಹೂಡಿದ ವ್ಯಕ್ತಿಯ ನಂತರ ಅದು ಅವನ ವಾರಸುದಾರರಿಗೆ ಸುಸೂತ್ರವಾಗಿ ವರ್ಗಾವಣೆ ಆಗುವಂತೆಯೂ ಮುನ್ನೆಚ್ಚರಿಕೆ ವಹಿಸಬೇಕು,

ಠೇವಣಿ ಇಡುವಾಗ ಕುಟುಂಬದ ಸದಸ್ಯರೊಂದಿಗೆ ಅದರಲ್ಲೂ ಪ್ರಮುಖವಾಗಿ ಗಂಡ-ಹೆಂಡತಿ ಪರಸ್ಪರ ಚರ್ಚಿಸುವುದು ಅಗತ್ಯ. ತಮಗೆ ತಕ್ಷಣದಲ್ಲಿ ಅಥವಾ ಮುಂದಿನ ಕೆಲವೇ ದಿನಗಳಲ್ಲಿ ಅಗತ್ಯವಿರುವ ಅವಶ್ಯಕತೆಯನ್ನು ಗಮನಿಸಿ ಅಂತಹ ಹಣವನ್ನು ಅಲ್ಪ ಕಾಲಾವಧಿಯ ಠೇವಣಿಯಾಗಿಟ್ಟು, ಉಳಿದ ಹಣವನ್ನು ದೀರ್ಘ ಕಾಲಾವಧಿಯ ಠೇವಣಿಯನ್ನಾಗಿ ಇಡಬಹುದು. ಇದರಿಂದಾಗಿ ಠೇವಣಿಯನ್ನು ಇಟ್ಟ ಕೆಲವೇ ದಿನಗಳ ನಂತರ, ಅದನ್ನು ಹಿಂದಕ್ಕೆ ಪಡೆಯುವ ಅನಿವಾರ್ಯತೆ ಇರುವುದಿಲ್ಲ ಅಲ್ಲದೆ ಪಡೆಯಬಹುದಾದ ಬಡ್ಡಿಯೂ ನಷ್ಟ ಆಗುವುದಿಲ್ಲ.

ವಯಸ್ಸಾದಂತೆ ಮರೆಗುಳಿತನ ಜಾಸ್ತಿಯಾಗುವುದರಿಂದ ಪ್ರತಿಯೊಂದು ಠೇವಣಿಯ ವಿವರವನ್ನು, ಅಂದರೆ ಠೇವಣಿ ಇಟ್ಟ ಸಂಸ್ಥೆಯ ಹೆಸರು, ಠೇವಣಿ ಮೊತ್ತ, ಠೇವಣಿಯ ಅವಧಿ, ಬಡ್ಡಿಯ ದರ, ಬಡ್ಡಿಯ ಸಂದಾಯವಾಗತಕ್ಕ ದಿನಾಂಕ, ಠೇವಣಿಯ ಮುಕ್ತಾಯ ಗೊಳ್ಳುವ ದಿನ ಇತ್ಯಾದಿ ವಿವರಗಳನ್ನು ಒಂದೆಡೆ ದಾಖಲಿಸಿ ಇಟ್ಟುಕೊಳ್ಳಬೇಕು ಮತ್ತು ನಿಗದಿತ ದಿನದಂದು ಬಡ್ಡಿ ಸಂದಾಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅನುಕೂಲವಿರುವೆಡೆಯಲ್ಲೆಲ್ಲಾ ಬಡ್ಡಿಯನ್ನೂ, ತಮ್ಮ ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಆಗುವಂತೆ ಸಂಸ್ಥೆಗಳಿಗೆ ಸೂಚನೆ ನೀಡಬೇಕು. ECS (Electronic Clearing Scheme) ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕು.

ಠೇವಣಿ ಇಟ್ಟ ನಂತರ, ವಿಳಾಸ ಬದಲಾವಣೆಯಾದರೆ, ತಕ್ಷಣವೇ ಅದನ್ನು ಸಂಬಂಧಪಟ್ಟ ಸಂಸ್ಥೆಗೆ ತಿಳಿಸಬೇಕು. ಕಾರಣ, ಠೇವಣಿಯ ಮುಕ್ತಾಯದ ದಿನಾಂಕ ಹತ್ತಿರವಾಗುತ್ತಿದ್ದಂತೆ ಸಂಸ್ಥೆಗಳು ಠೇವಣಿದಾರರಿಗೆ ಜ್ಞಾಪನಾ ಪತ್ರ (Reminder) ವನ್ನು ಕಳುಹಿಸಲು ಅನುಕೂಲವಾಗುತ್ತದೆ.

ಸಾಧ್ಯವಾದಷ್ಟು ಠೇವಣಿಯನ್ನು ಒಂದೇ ಕಡೆ ಹೂಡದೆ ಬೇರೆ ಬೇರೆ ಕಡೆ ಹೂಡುವುದು ಒಳ್ಳೆಯದು.

ಜಂಟಿ ಹೆಸರಿನಲ್ಲಿ ಠೇವಣಿ ಇಡುವುದೇ ಅಲ್ಲದೆ ಪ್ರತಿ ಠೇವಣಿಗೂ ನಾಮನಿರ್ದೇಶನ ಮಾಡಬೇಕಾದ್ದು ಅತ್ಯಗತ್ಯ. ಅದರಲ್ಲಿಯೂ ಒಂದೇ ಹೆಸರಿನಲ್ಲಿ ಹೊಂದಿರುವ ಠೇವಣಿಗೆ ನಾಮನಿರ್ದೇಶನ ಮಾಡಲೇಬೇಕು.

ಜಂಟೀ ಖಾತೆಗೆ ನಾಮನಿರ್ದೇಶನ ಮಾಡಿದ್ದರೂ ಸಹ, ಠೇವಣಿದಾರರಲ್ಲಿ ಯಾರಾದರೊಬ್ಬರೂ ಇರುವವರೆಗೂ, ನಾಮನಿರ್ದೇಶಿತ ವ್ಯಕ್ತಿಗೆ ಯಾವುದೇ ಹಕ್ಕಿರುವುದಿಲ್ಲ. ಠೇವಣಿದಾರರ ನಿಧನದ ನಂತರವೇ ಆತನಿಗೆ ಆ ಠೇವಣಿಯ ಮೇಲಿನ ಅಧಿಕಾರ ದಕ್ಕುವುದು.

*****

ಸಮಯಕ್ಕಾಗದ ಅರ್ಥ ಸಾವಿರವಿದ್ದರೂ ವ್ಯರ್ಥ

*

ನಿವೃತ್ತಿಯ ಸಮಯದಲ್ಲಿ ಕಡಿಮೆ ಚಿಂತೆ, ಹೆಚ್ಚು ಹಣ ಇದ್ದರೆ
ಜೀವನ ಸುಖಮಯ ಬದುಕು ಸುಲಭ

*

ಆಸೆಗೆ ಆಳಾಗುವುದು ಬೇಡ – ಆಸೆಯನ್ನು ಆಳಾಗಿಸೋಣ


*

ಹಣ ಕೊಡಬಲ್ಲ ಧೈರ್ಯ ಮತ್ತಾವುದೂ ಕೊಡಲ್ಲ

*

ಹಣಕ್ಕಾಗಿ ಕೈಯೊಡ್ಡುವ ಪರಿಸ್ಥಿತಿ ತಂದುಕೊಳ್ಳಬೇಡಿ,
ಸ್ವಾಭಿಮಾನ ಬೆಳೆಸಿಕೊಳ್ಳಿ

ಷೇರುಪೇಟೆಯಲ್ಲಿ ಹಣ ಹೂಡುವಿಕೆ



ನಿವೃತ್ತಿ ಹೊಂದಿದವರಿಗೆ ನಿಶ್ಚಿತ ಆದಾಯ ನೀಡುವಂತಹ ಹೂಡಿಕೆಗಳು ಅಂಚೆ ಕಛೇರಿ, ಬ್ಯಾಂಕುಗಳು ಮುಂತಾದ ಕ್ಷೇತ್ರಗಳಲ್ಲಿರುವ ಅವಕಾಶಗಳು ಮತ್ತು ಅವುಗಳಿಂದ ಪಡೆಯ ಬಹುದಾದ ಪ್ರತಿಫಲ (ಬಡ್ಡಿ) ದೊರಕ ಬಹುದಾದ ಸುರಕ್ಷತೆ ಹಾಗೂ ಬೇಕೆಂದಾಗ ಹಣ ಮರಳಿ ಹಿಂದೆ ಪಡೆಯಲು ಇರುವ ಸೌಲಭ್ಯ ಮುಂತಾದವುಗಳ ಬಗ್ಗೆ ಇದುವರೆಗೂ ವಿವರವಾಗಿ ಒಂದಷ್ಟು ವಿಚಾರಗಳನ್ನು ತಿಳಿದಂತಾಯಿತು.

ಇನ್ನು ಷೇರುಪೇಟೆಗಳಲ್ಲಿ ಹಣ ಹೂಡು ವುದರ ಬಗ್ಗೆ ಸ್ವಲ್ಪ ವಿವರಗಳನ್ನು ಪಡೆಯೋಣ.

ಇಂದು ಷೇರುಗಳು ಬಹುಜನರನ್ನು ಆಕರ್ಷಿಸುತ್ತಿವೆ. ಬಡವರಾಗಲೀ, ಬಲ್ಲಿದವರಾಗಲೀ, ಕೆಳಮಟ್ಟದ ನೌಕರನಾಗಲೀ ಅಥವಾ ಹಿರಿಯ ಅಧಿಕಾರಿಗಳಾಗಲೀ, ಷೇರುಗಳ ಬಗ್ಗೆ ಒಲವನ್ನು ತೋರಿಸುತ್ತಿದ್ದಾರೆ.

ಈ ಕ್ಷೇತ್ರದಲ್ಲಿ ಹಣ ತೊಡಗಿಸಬೇಕಾದರೆ ಷೇರುಪೇಟೆಯ ಸಾಮಾನ್ಯ ಜ್ಞಾನ ಹಾಗೂ ತಿಳವಳಿಕೆ ಅತಿಮುಖ್ಯ. ಅಲ್ಲದೆ ಸ್ವಲ್ಪ ಮಟ್ಟಿನ ಧೈರ್ಯ, ರಿಸ್ಕ್ ತೆಗೆದುಕೊಳ್ಳುವ ತಾಕತ್ತು ಹಾಗೂ ಸಂಯಮ ಅಗತ್ಯ. ಷೇರುಗಳಲ್ಲಿ ಹಣ ತೊಡಗಿಸುವುದನ್ನು risk capital ಎಂದೇ ಹೇಳಬಹುದು.

ಸಾಮಾನ್ಯವಾಗಿ ಷೇರುಪೇಟೆಯಲ್ಲಿ ಉಂಟಾಗುವ ಏರಿಳಿತ, ಅನಿರೀಕ್ಷಿತ ಘಟನೆಗಳು, ಒಬ್ಬ ಹೂಡಿಕೆದಾರನ ಹೂಡಿಕೆಯನ್ನು ಏರುಪೇರು ಮಾಡಬಹುದು. ಆತನ ಮನಃಸ್ಥಿತಿಯನ್ನು ತಲ್ಲಣಗೊಳಿಸಬಹುದು.

ರಾಜಕೀಯ ಬದಲಾವಣೆ, ರಾಷ್ಟ್ರದ ಆರ್ಥಿಕ ಪರಿಸ್ಥಿತಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಆಗಬಹುದಾದ ಹಲವಾರು ಸನ್ನಿವೇಶಗಳು, ಕೆಲವೊಮ್ಮೆ ಷೇರುಪೇಟೆಯ ಏರಿಳಿತಗಳಿಗೆ ಕಾರಣವಾಗಬಹುದು. ಅಲ್ಲದೆ ಕೆಲವು ಸಲ ಕೆಲವು ನಿರ್ದಿಷ್ಟ ಕ್ಷೇತ್ರದ ಕಂಪನಿಗಳ ಮೇಲೆ ಬೀರಬಹುದಾದ ಪ್ರಭಾವಗಳು, ಸಂಗತಿಗಳು ಸಹ ಷೇರುಪೇಟೆಯ ಅಲ್ಲೋಲ ಕಲ್ಲೋಲಗಳಿಗೆ ಕಾರಣವಾಗಬಹುದು.

ಷೇರು ಎಂದರೇನು?

ಒಂದು ಕೈಗಾರಿಕಾ ಸಂಸ್ಥೆಯು ಹೂಡಿರುವ ಬಂಡವಾಳದಲ್ಲಿ ಒಂದು

ಪಾಲು ಅಥವಾ ಒಂದು ಭಾಗವನ್ನು ಷೇರು ಎಂದು ಕರೆಯಬಹುದು. ಉದಾಹರಣೆಗೆ ಹೇಳಬಹುದಾದರೆ ಯಾವನೇ ಒಬ್ಬ ಉದ್ದಿಮೆದಾರ ಒಂದು ಕೈಗಾರಿಕೆಯನ್ನು ಅಥವಾ ಸಂಸ್ಥೆಯನ್ನು ಸ್ಥಾಪಿಸಬೇಕಾದರೆ ಅಗಾಧ ಪ್ರಮಾಣದ ಬಂಡವಾಳದ ಅಗತ್ಯತೆ ಇರುತ್ತದೆ. ಅಷ್ಟೊಂದು ಭಾರಿ ಮೊತ್ತವನ್ನು ಅವನೊಬ್ಬನೇ ಹೂಡಲು ಆಗುವುದಿಲ್ಲ. ಅದಕ್ಕಾಗಿ ಬೇಕಾಗುವ ಒಟ್ಟು ಬಂಡವಾಳವನ್ನು ಹಲವಾರು ಘಟಕಗಳಾಗಿ ಅಥವಾ ಭಾಗಗಳಾಗಿ ವಿಂಗಡಿಸುತ್ತಾನೆ. ಆ ಘಟಕ ಅಥವಾ ಭಾಗಕ್ಕೆ ಇಂಗ್ಲಿಷಿನಲ್ಲಿ share ಎಂದು ಕರೆಯಲಾಗುತ್ತದೆ. ಅದನ್ನೇ ಕನ್ನಡದಲ್ಲಿ ಷೇರು ಎಂದು ಹೇಳಲಾಗುತ್ತದೆ.

ಈ ಬಂಡವಾಳವನ್ನು 10ರೂ, 100ರೂಗಳ ಮುಖಬೆಲೆಯ ಷೇರುಗಳನ್ನಾಗಿ ವಿಭಜಿಸಲಾಗಿರುತ್ತದೆ. ಈಚೆಗೆ 1ರೂ. 2ರೂ. 5ರೂ. ಬೆಲೆಯ ಷೇರುಗಳನ್ನಾಗಿಸಿರುವುದು ಸಾಮಾನ್ಯವಾಗಿದೆ.

ಕಂಪನಿಗಳು ಆರಂಭಗೊಂಡಾಗ ಸಾರ್ವಜನಿಕರಿಗೆ ಷೇರುಗಳನ್ನು ನೀಡಲಾಗುತ್ತದೆ. ಈ ಕ್ರಿಯೆಯನ್ನು ಸಾರ್ವಜನಿಕ ನೀಡಿಕೆ (public issue) ಎಂದು ಕರೆಯಲಾಗುತ್ತದೆ. ಈ ಸಾರ್ವಜನಿಕ ನೀಡಿಕೆಯಲ್ಲಿ ಹೂಡಿಕೆದಾರರು ಭಾಗವಹಿಸಿ ಷೇರುಗಳಿಗೆ ಅರ್ಜಿ ಸಲ್ಲಿಸಿದಾಗ ಕಂಪನಿಯಿಂದಲೇ ನೇರವಾಗಿ ಷೇರನ್ನು ಪಡೆಯಬಹುದು. ಈ ಕ್ರಮಕ್ಕೆ ಪ್ರಾಥಮಿಕ ಮಾರುಕಟ್ಟೆ (primary market) ಎಂದು ಕರೆಯಲಾಗುತ್ತದೆ.

ಈ ರೀತಿಯ ಸಾರ್ವಜನಿಕ ನೀಡಿಕೆಯಲ್ಲಿ ಷೇರುಗಳಿಗೆ ಅರ್ಜಿ ಹಾಕುವಾಗ ಕಂಪನಿಯವರು ಸೂಚಿಸಿರುವಂತೆ ಒಂದಿಷ್ಟು ಕನಿಷ್ಠ ಷೇರುಗಳಿಗೆ ಅರ್ಜಿ ಹಾಕಬೇಕಾಗುತ್ತದೆ. ಆ ಸಂದರ್ಭದಲ್ಲಿ ಷೇರಿನ ಮುಖಬೆಲೆಗೆ ಷೇರುಗಳನ್ನು ನೀಡಬಹುದು ಅಥವಾ ಮುಖಬೆಲೆಗಿಂತ ಹೆಚ್ಚಾಗಿ ಪ್ರೀಮಿಯಂ ದರವನ್ನು ನಿಗದಿಪಡಿಸಿರಬಹುದು. ಷೇರುಗಳ ಒಟ್ಟು ನೀಡಿಕೆಗೆ ಬಂದ ಅರ್ಜಿಗಳನ್ನು ಪರಿಗಣಿಸಿ ಸಂಬಂಧಪಟ್ಟ ಸ್ಟಾಕ್ ಎಕ್ಸ್‌ಛೇಂಜಿನ ನಿಯಮದಂತೆ ಷೇರುಗಳನ್ನು ವಿತರಿಸಲಾಗುವುದು. ಕೆಲವೊಮ್ಮೆ ಅರ್ಜಿ ಸಲ್ಲಿಸಿದ ಎಲ್ಲ ಷೇರುಗಳನ್ನು ನೀಡಬಹುದು ಅಥವಾ ಕಡಿಮೆ ಷೇರುಗಳನ್ನು ನೀಡಬಹುದು ಅಥವಾ ನೀಡಿಕೆಗಿಂತ ಅತಿ ಹೆಚ್ಚಿನ ಷೇರುಗಳಿಗೆ ಬೇಡಿಕೆ ಇದ್ದಾಗ ಷೇರುನೀಡಿಕೆಯನ್ನು ದಾಮಾಷಾ ಕ್ರಮದಲ್ಲಿ ಮಾಡಬಹುದು. ಇದರಂತೆ ಕೆಲವರಿಗೆ ಷೇರುಗಳು ಸಿಗಬಹುದು ಮತ್ತೆ ಕೆಲವರಿಗೆ ಸಿಗದೆಯೂ ಇರಬಹುದು.

ಇನ್ನು ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದು ಷೇರುವಿನಿಮಯ ಕೇಂದ್ರ (stock exchange) ದಲ್ಲಿ ವಹಿವಾಟು ನಡೆಸುತ್ತಿರುವ ಕಂಪನಿಗಳ ಷೇರುಗಳನ್ನು ಷೇರು ದಲ್ಲಾಳಿಗಳ ಮುಖಾಂತರ ಕೊಳ್ಳಬಹುದು. ಇದನ್ನು ದ್ವಿತೀಯ ಮಾರುಕಟ್ಟೆ (secondary market) ಎನ್ನಲಾಗುತ್ತದೆ. ಈ ವ್ಯವಹಾರದಲ್ಲಿ ಷೇರುಗಳ ಮಾರುಕಟ್ಟೆ ಬೆಲೆಯು ಅದರ ಮುಖಬೆಲೆಗಿಂತ ವಿಭಿನ್ನವಾಗಿರುತ್ತದೆ- ಅದು ಜಾಸ್ತಿಯೂ ಇರಬಹುದು ಅಥವಾ ಕಡಿಮೆಯೂ ಇರಬಹುದು.

ಮಾರುಕಟ್ಟೆಯ ಬೆಲೆಯು ಕಂಪನಿಯ ದಕ್ಷತೆ, ಅದು ಸಾಧಿಸಿರುವ ಬೆಳವಣಿಗೆ, ಅದರ ಉತ್ಪನ್ನ/ಸೇವೆಗಳಿಗಿರುವ ಬೇಡಿಕೆ, ಗಳಿಸಿದ ಲಾಭ ಷೇರುದಾರರಿಗೆ ಹಂಚಿದ ಲಾಭಾಂಶ (ಡಿವಿಡೆಂಡ್) ಹೊಂದಿರುವ ಬಂಡವಾಳ ಮತ್ತು ಮೀಸಲು ನಿಧಿ (ರಿಸರ್ವ್ ಫಂಡ್) ಇವುಗಳ ಮೇಲೆ ಅವಲಂಬಿತ ವಾಗಿರುತ್ತದೆ. ಅಲ್ಲದೆ ಆ ಕಂಪನಿಯ ಷೇರುಗಳು ಷೇರುಮಾರುಕಟ್ಟೆಯಲ್ಲಿ ಲಭ್ಯವಿರುವ ಪ್ರಮಾಣದ ಮೇಲೂ ಹಾಗೂ ಬೇಡಿಕೆಯ ಮೇಲೂ ಅದರ ಬೆಲೆ ನಿರ್ಧಾರವಾಗುತ್ತದೆ. ಷೇರುಗಳಿಗೆ ಬೇಡಿಕೆ ಇದ್ದು ಲಭ್ಯವಿರುವ ಷೇರುಗಳ ಪ್ರಮಾಣ ಕಡಿಮೆ ಇದ್ದರೆ ಆಗ ಆ ಸಂಸ್ಥೆಯ ಷೇರು ಹೆಚ್ಚು ದರವನ್ನು ಹೊಂದಿರುತ್ತದೆ. ಅದೇ ರೀತಿ ಹೆಚ್ಚು ಷೇರುಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಅದಕ್ಕೆ ಬೇಡಿಕೆ ಇಲ್ಲದಿದ್ದ ಪಕ್ಷದಲ್ಲಿ ಆಗ ಷೇರುಗಳ ಮಾರುಕಟ್ಟೆ ದರ ಕಡಿಮೆ ಇರುತ್ತದೆ. ಹಾಗಾಗಿ ಬೇಡಿಕೆ ಮತ್ತು ಪೂರೈಕೆ (Demand and Supply)ಯನ್ನು ಆಧರಿಸಿ ಬೆಲೆ ನಿಗದಿಯಾಗುತ್ತದೆ.

ಇಷ್ಟೇ ಅಲ್ಲದೆ ಕಂಪನಿಯ ಕೆಲವು ಚಟುವಟಿಕೆಗಳು ಸಹ ಅಂದರೆ, ಕಂಪನಿಯ ಉತ್ಪಾದನೆಗೆ ಬೇಡಿಕೆ ಜಾಸ್ತಿ ಇದ್ದಾಗ, ಕಂಪನಿಯು ಬೋನಸ್ ಷೇರು ಅಥವಾ ಹಕ್ಕಿನ ಷೇರು (Rights share)ಗಳನ್ನು ನೀಡುವ ಸುದ್ದಿಯಲ್ಲಿದ್ದಾಗ ಸಹಜವಾಗಿಯೇ ಅಂತಹ ಕಂಪನಿಯ ಷೇರುಗಳಿಗೆ ಬೇಡಿಕೆ ಜಾಸ್ತಿಯಿರುತ್ತದೆ. ಅಂತಹ ಸಂದರ್ಭದಲ್ಲಿ ಅದರ ಮಾರುಕಟ್ಟೆಯ ಬೆಲೆಯೂ ಸಹ ಜಾಸ್ತಿಯಾಗುತ್ತದೆ.

ಹೀಗಾಗಿ ಹೂಡಿಕೆದಾರರು ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ತಮಗೆ ಯಾವ ಕಂಪನಿಯ ಷೇರುಗಳನ್ನು ಕೊಳ್ಳಬೇಕೆಂದಿದೆಯೋ ಅಂತಹ ಷೇರುಗಳನ್ನು ದ್ವಿತಿಯ ಮಾರುಕಟ್ಟೆಯಲ್ಲಿ ಕೊಳ್ಳಬಹುದು.

ಷೇರುಗಳನ್ನು ಕೊಳ್ಳುವುದು ಹೇಗೆ?

ಪ್ರಾಥಮಿಕ ಹಾಗೂ ದ್ವಿತಿಯ ಮಾರುಕಟ್ಟೆಯಲ್ಲಿ ಷೇರುಗಳನ್ನು ಕೊಳ್ಳುವುದರ ಬಗ್ಗೆ ತಿಳದುಕೊಂಡಂತಾಯಿತು. ಆದರೆ ಆ ನಿಟ್ಟಿನಲ್ಲಿ ಅನುಸರಿಸಬೇಕಾದ ಕೆಲವು ಕ್ರಮಗಳ ಬಗ್ಗೆ ಸ್ವಲ್ಪ ತಿಳಯೋಣ.

ಕೆಲವು ವರ್ಷಗಳ ಹಿಂದೆ ಷೇರಿಗೆ ಅರ್ಜಿ ಸಲ್ಲಿಸುವವರು ಅದಕ್ಕೆ ನಿಗದಿಯಾದ ಅರ್ಜಿನಮೂನೆಯನ್ನು ಭರ್ತಿಮಾಡಿ ಅರ್ಜಿ ಸಲ್ಲಿಸಿದಾಗ, ನೀಡಿಕೆಯಾದ ಷೇರುಗಳನ್ನು, ಕಾಗದದ ರೂಪದಲ್ಲಿ, ಅಂದರೆ ಷೇರ್ ಸರ್ಟಿಫಿಕೇಟ್‌ಗಳನ್ನು ನೀಡಲಾಗುತ್ತಿತ್ತು. ಅಂತಹ ಸರ್ಟಿಫಿಕೇಟ್‌ಗಳಲ್ಲಿ ಕಂಪನಿಯ ಹೆಸರು, ವಿಳಾಸ, ಷೇರುದಾರನ ಹೆಸರು ಹೊಂದಿರುವ ಷೇರುಗಳ ಸಂಖ್ಯೆ ಅವುಗಳ ಕ್ರಮಸಂಖ್ಯೆ (Distinctive No.) ಷೇರುದಾರರ ಖಾತೆ ಸಂಖ್ಯೆ (Folio No.) ಇತ್ಯಾದಿಗಳನ್ನು ನಮೂದಿಸಿರುತ್ತಿತ್ತು.

ದ್ವಿತೀಯ ಮಾರುಕಟ್ಟೆಯಲ್ಲಿ ಷೇರುಗಳನ್ನು ಕೊಂಡಾಗ ಮಾರಾಟ ಮಾಡಿದವರು ತಾವು ಮಾರಿದ ಷೇರುಗಳಿಗೆ, ತಾವು ಹೊಂದಿರುವ ಷೇರು ಸರ್ಟಿಫಿಕೇಟ್‌ಗಳನ್ನು ಹಾಗೂ ವರ್ಗಾವಣೆ ಪತ್ರ (transfer deed) ಗಳನ್ನು ಷೇರು ಕೊಂಡವರಿಗೆ ನೀಡುತ್ತಿದ್ದರು. ಷೇರುಕೊಂಡವರು ವರ್ಗಾವಣೆ ಪತ್ರದಲ್ಲಿ ತಮ್ಮ ವಿವರಗಳನ್ನು ಭರ್ತಿ ಮಾಡಿ ಕಂಪನಿಗೆ ಕಳಸಿದ ನಂತರ ಅವರ ಹೆಸರಿಗೆ ವರ್ಗಾವಣೆಯಾಗಿ ವಾಪಸು ಬರುತ್ತಿತ್ತು. ಈ ಕ್ರಮವು ಬಹಳ ಸುದೀರ್ಘವಾದ ಹಾಗೂ ತೊಡಕಿನದ್ದಾಗಿತ್ತು. ಅಲ್ಲದೆ ಹೆಚ್ಚು ಕಾಲವನ್ನು ತೆಗೆದುಕೊಳ್ಳುತ್ತಿತ್ತು. ಅಲ್ಲದೆ ಈ ಕ್ರಮದಿಂದ ಕೊಳ್ಳುವವರಿಗೂ ಮತ್ತು ಮಾರುವವರಿಗೆ ಮಾತ್ರವೇ ಅಲ್ಲದೆ ಆಡಳತಾತ್ಮಕವಾಗಿಯೂ ಸಹ ಹಲವಾರು ಅಡಚಣೆಗಳು ಉದ್ಭವಿಸುತ್ತಿದ್ದವು.

ಇವುಗಳೆಲ್ಲದರ ನಿವಾರಣೆಗಾಗಿ 1996ರ ಡಿಸೆಂಬರ್‌ನಿಂದ ಷೇರುಗಳಿಗೆ ಅರ್ಜಿ ಸಲ್ಲಿಸುವವರು ಹಾಗೂ ಷೇರುಗಳನ್ನು ಕೊಳ್ಳುವವರು ಮತ್ತು ಮಾರಾಟ ಮಾಡುವವರು – ಇವರುಗಳಿಗೆ ಹಾಗೂ ಷೇರುವ್ಯವಹಾರದಲ್ಲಿ ತೊಡಗಿರುವ ಸಂಬಂಧಿಸಿದ ಎಲ್ಲಾ ಏಜೆನ್ಸಿಗಳಿಗೂ ಅನುಕೂಲವಾಗುವಂತೆ ಹೊಸ ಪದ್ಧತಿಯೊಂದು ಜಾರಿಗೆ ಬಂದಿತು. ಅದುವೇ ಡಿಮ್ಯಾಟ್ ಖಾತೆ. Demat Account.

ಡಿಮ್ಯಾಟ್ ಖಾತೆ ಎಂದರೇನು?

ಡಿಮ್ಯಾಟ್ ಎನ್ನುವುದು ಇಂಗ್ಲಿಷಿನ (Dematerialisation) ಎನ್ನುವುದರ ಸಂಕ್ಷಿಪ್ತ ರೂಪ.

1996ರ ಆಗಸ್ಟ್ ತಿಂಗಳಿನಲ್ಲಿ ಪಾರ್ಲಿಮೆಂಟ್‌ನಲ್ಲಿ ಅನುಮೋದನೆಯಾದ Depository Act 1956 ವಿಧೇಯಕವು ಡಿಸೆಂಬರ್ 26 1996 ರಿಂದ ಜಾರಿಗೆ ಬಂದು ಡಿಪಾಸಿಟರಿ ವ್ಯವಸ್ಥೆ ಜಾರಿಗೆ ಬಂದಿತು.

ಈ ಮೇಲಿನ ಕಾಯಿದೆಯಂತೆ ಡಿಮ್ಯಾಟ್ ಸೇವೆಯನ್ನು ಒದಗಿಸಲು ಎರಡು ಸಂಸ್ಥೆಗಳು ಅಸ್ತಿತ್ವಕ್ಕೆ ಬಂದುವು.

ಅವುಗಳೆಂದರೆ :

- ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನ (NSE) ನ್ಯಾಷನಲ್ ಡಿಪಾಸಿಟರಿ ಲಿಮಿಟೆಡ್(NSDL)
- ಬೊಂಬಾಯಿ ಸ್ಟಾಕ್‌ಎಕ್ಸ್‌ಚೇಂಜಿನ (BSE) ಸೆಂಟ್ರಲ್ ಡಿಪಾಸಿಟರಿ ಲಿಮಿಟೆಡ್ (CDSL)

ಯಾವುದೇ ಒಬ್ಬ ಷೇರುದಾರನು ಪ್ರಾಥಮಿಕ ಷೇರುಪೇಟೆಯಲ್ಲಿ ಅರ್ಜಿ ಸಲ್ಲಿಸಲಾಗಲೀ ಅಥವಾ ದ್ವಿತೀಯ ಮಾರುಕಟ್ಟೆಯಲ್ಲಿ ವ್ಯವಹಾರ ಮಾಡಲಾಗಲೀ (ಅಂದರೆ ಷೇರುಗಳನ್ನು ಕೊಳ್ಳುವುದು/ಮಾರುವುದು) ಮೊದಲಿಗೆ ಮೇಲಿನ ಎರಡು ಸೇವಾ ಸಂಸ್ಥೆಗಳಲ್ಲಿ ಯಾವುದಾದರೂ ಒಂದರಲ್ಲಿ ಒಂದು ಖಾತೆಯನ್ನು ಕಡ್ಡಾಯವಾಗಿ ತೆಗೆಯಲೇ ಬೇಕಾಗುತ್ತದೆ.

ಹಾಗೆ ಖಾತೆಯನ್ನು ತೆಗೆಯಲು, ಖಾತೆದಾರನಾಗ ಬಯಸುವವನು ಈ ಕೆಳಕಂಡ ದಾಖಲೆಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ನೀಡಬೇಕಾಗುತ್ತದೆ. ಅವುಗಳೆಂದರೆ :

- ಆದಾಯ ತೆರಿಗೆ ಇಲಾಖೆಯಿಂದ ನೀಡಲಾಗುವ ಖಾಯಂ ಖಾತೆಯ ಸಂಖ್ಯೆಯ ಪ್ರತಿ –PAN Card-Permanent Account No.
- ವಿಳಾಸದ ದಾಖಲೆ ಪತ್ರ –Address Proof
- ಗುರುತಿನ ದಾಖಲೆ ಪತ್ರ - Identity Proof
- ಅರ್ಜಿದಾರನ ಭಾವಚಿತ್ರ

- ಅರ್ಜಿದಾರನು ಖಾತೆ ಹೊಂದಿರುವ ಬ್ಯಾಂಕಿನ ಕ್ಯಾನ್ಸಲ್ ಮಾಡಿದ ಚೆಕ್‌ನ ಒಂದು ಹಾಳೆ.

ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಖಾತೆ ತೆಗೆಯಲ್ಪಡುವ ಅರ್ಜಿದಾರನು ತಾನು ಒಂದೇ ಹೆಸರಿನಲ್ಲಿ ಖಾತೆಯನ್ನು ತೆಗೆಯುವುದೋ (single name) ಅಥವಾ ಜಂಟಿ ಹೆಸರಿನಲ್ಲಿ (joint name) ಖಾತೆ ತೆಗೆಯುವುದೋ ಎಂಬುದು ಅಥವಾ ಈಗಾಗಲೇ ತಾನು ಷೇರುಗಳನ್ನು ಹೊಂದಿದ್ದರೆ ಅಂತಹ ಸರ್ಟಿಫಿಕೇಟ್‌ಗಳನ್ನು ಯಾವ ರೀತಿ ಅಂದರೆ ಒಂದೇ ಹೆಸರಿನಲ್ಲಿ ಹೊಂದಿರುವನೋ ಅಥವಾ ಜಂಟಿ ಹೆಸರಿನಲ್ಲಿ ಹೊಂದಿರುವನೋ ಎಂಬುದೂ ಸಹ ಅತಿ ಮುಖ್ಯ.

ಷೇರುಗಳನ್ನು ತನ್ನ ಒಂದೇ ಹೆಸರಿನಲ್ಲಿ ಹೊಂದಲು ಅಪೇಕ್ಷೆ ಪಟ್ಟಲ್ಲಿ ಅಥವಾ ಈಗಾಗಲೇ, ಒಂದೇ ಹೆಸರಿನಲ್ಲಿ ಇರುವ ಷೇರ್ ಸರ್ಟಿಫಿಕೇಟ್‌ಗಳಲ್ಲಿ ಇದ್ದು ಅವುಗಳನ್ನು ಡಿಮ್ಯಾಟ್ ಖಾತೆಗೆ ವರ್ಗಾಯಿಸಬೇಕೆಂದಿದ್ದರೆ ಡಿಮ್ಯಾಟ್ ಖಾತೆಯನ್ನು ಒಂದೇ ಹೆಸರಿನಲ್ಲಿ ಹೊಂದಬಹುದು. ಅಥವಾ ಷೇರುಗಳನ್ನು ಜಂಟೀ ಹೆಸರಿನಲ್ಲಿ ಹೊಂದಲು ಇಷ್ಟಪಟ್ಟಲ್ಲಿ ಹಾಗೂ ಈಗಾಗಲೇ ಹೊಂದಿರುವ ಷೇರುಗಳು ಜಂಟೀ ಹೆಸರಿನಲ್ಲಿ ಇದ್ದು ಅವುಗಳನ್ನು ಡಿಮ್ಯಾಟ್ ಖಾತೆಗೆ ವರ್ಗಾಯಿಸಬೇಕಾಗಿದ್ದ ಸಂದರ್ಭದಲ್ಲಿ ಜಂಟಿ ಖಾತೆಯನ್ನು ಮಾಡಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಮೇಲೆ ವಿವರಿಸಿದ ಎಲ್ಲಾ ದಾಖಲೆಗಳನ್ನು ಜಂಟೀ ಖಾತೆದಾರನು ಸಹ ನೀಡಬೇಕಾಗುತ್ತದೆ. ಅಂದರೆ ಎಲ್ಲಾ ದಾಖಲೆಗಳನ್ನು ಇಬ್ಬರ ಹೆಸರಿನಲ್ಲಿಯೂ ನೀಡಬೇಕಾಗುತ್ತದೆ.

ಈ ನಿಟ್ಟಿನಲ್ಲಿ ವಿಶೇಷವಾಗಿ ಗಮನಿಸಬೇಕಾದ ಮತ್ತೊಂದು ಪ್ರಮುಖ ವಿಷಯವೆಂದರೆ, ಡಿಮ್ಯಾಟ್ ಖಾತೆಗೆ ನಾಮನಿರ್ದೇಶನವನ್ನು ಮಾಡಬೇಕಾದುದು ಅತಿ ಮುಖ್ಯ. ಖಾತೆಯು ಒಂದೇ ಹೆಸರಿನಲ್ಲಿರಲಿ, ಅಥವಾ ಜಂಟೀ ಹೆಸರಿನಲ್ಲಿರಲಿ ನಾಮನಿರ್ದೇಶನ ಮಾಡುವುದು ಅತ್ಯಗತ್ಯ. ದುರದೃಷ್ಟವಶಾತ್, ಖಾತೆಯನ್ನು ಹೊಂದಿರುವ ಇಬ್ಬರೂ ವಿಧಿವಶರಾದಾಗ, ಅಥವಾ ಖಾತೆಯೂ ಜಂಟಿ ಹೆಸರಿನಲ್ಲಿ ಇಲ್ಲದಿದ್ದಾಗ ವಾರಸುದಾರರಿಗೆ ಅಂದರೆ ನಾಮನಿರ್ದೇಶಕರಿಗೆ ಷೇರುಗಳ ವರ್ಗಾವಣೆ ಸುಲಭವಾಗುತ್ತದೆ.

ಡಿಮ್ಯಾಟ್ ಪದ್ಧತಿ ಆರಂಭವಾಗುವುದಕ್ಕೆ ಮೊದಲು ಷೇರುಗಳನ್ನು ಮಾರಿದಾಗ ಅಥವಾ ಕೊಳ್ಳುವಾಗ, ಕೆಲವು ಆಡಳಿತಾತ್ಮಕ ವಿಧಾನಗಳಿಂದ ಷೇರುವರ್ಗಾವಣೆಯ ವಿಳಂಬವಾಗುತ್ತಿತ್ತು. ಅಲ್ಲದೆ ಹಲವಾರು ತಾಂತ್ರಿಕ

ಕಾರಣಗಳಿಂದ ವರ್ಗಾವಣೆಯೇ ಆಗದೆ ವಾಪಸ್ ಬರುವ ಸಂದರ್ಭಗಳು ಇರುತ್ತಿದ್ದವು. ಉದಾಹರಣೆಗೆ ಹೇಳಬಹುದಾದರೆ, ಷೇರುಮಾರಿದವರ ಸಹಿ ಹೊಂದಾಣಿಕೆಯಾಗಿಲ್ಲದಿರುವುದು, ವರ್ಗಾವಣೆಗಾಗಿ ನೀಡಬೇಕಾಗಿದ್ದ ಶುಲ್ಕದ ಸ್ಟಾಂಪುಗಳಲ್ಲಿ ವ್ಯತ್ಯಾಸ ಇತ್ಯಾದಿ ಕಾರಣಗಳು.

ಹೀಗಾಗಿ ವರ್ಗಾವಣೆಯಲ್ಲಿ ಸಾಕಷ್ಟು ಕಾಲ ವಿಳಂಬ ಮತ್ತು ಹಣದ ಖರ್ಚು ಆಗುತ್ತಿತ್ತು. ಆದರೆ ಡಿಮ್ಯಾಟ್ ಪದ್ಧತಿ ಜಾರಿಗೆ ಬಂದ ಮೇಲೆ ಷೇರು ವರ್ಗಾವಣೆ, ಕೊಳ್ಳುವುದು, ಮಾರುವುದು ಬಹಳ ಸರಳವಾಗಿದೆ.

ಡಿಮ್ಯಾಟ್ ಮಾಡಿಸುವುದರಿಂದ ಆಗುವ ಅನುಕೂಲಗಳು

- ಷೇರುವರ್ಗಾವಣೆಯಲ್ಲಿ ವಿಳಂಬವಿಲ್ಲ
- ಷೇರು ವರ್ಗಾವಣೆಯ ಸ್ಟಾಂಪ್ ಶುಲ್ಕವಿರುವುದಿಲ್ಲ.

(ಮೊದಲಿಗೆ ಷೇರು ಮಾರಾಟ ಬೆಲೆಯ ಶೇ. 50ಪೈಸೆಯನ್ನು ಸ್ಟಾಂಪ್ ಶುಲ್ಕವಾಗಿ ನೀಡಬೇಕಾಗುತ್ತಿತ್ತು)

- ಷೇರುಪತ್ರಗಳನ್ನು ಸುರಕ್ಷಿತವಾಗಿ ಕಾಪಾಡುವ ಸಮಸ್ಯೆ ಇಲ್ಲ.
- ಷೇರುಪತ್ರಗಳ ಕಳವು, ತಪ್ಪು ಜಾಗದಲ್ಲಿಟ್ಟು ಹುಡುಕುವ ಪ್ರಮೇಯ, ಫೋರ್ಜರಿ ಮುಂತಾದುವುಗಳಿಗೆ ಅವಕಾಶವಿಲ್ಲ.
- ಹಣದ ಅಗತ್ಯತೆ ಇದ್ದಾಗ, ಒತ್ತೆ ಇಟ್ಟು (pledge) ಸಾಲ ಪಡೆಯುವ ಸೌಕರ್ಯ
- ಬೋನಸ್ ಹಾಗೂ ಷೇರಿನ ಹಕ್ಕಿನ ನೀಡಿಕೆಯಲ್ಲಿ (rights offer) ಖಾತೆದಾರನ ಡಿಮ್ಯಾಟ್ ಖಾತೆಗೆ ನೇರವಾಗಿ ಸಂದಾಯವಾಗುವುದರಿಂದ ವಿಳಂಬವಾಗುವುದಿಲ್ಲ.
- ಷೇರುದಾರರ ವಿಳಾಸ ಬದಲಾವಣೆ, ಬ್ಯಾಂಕಿನ ಖಾತೆ ಬದಲಾವಣೆ ಅಥವಾ ನಾಮನಿರ್ದೇಶನದ ಬದಲಾವಣೆ ಮುಂತಾದ ಸಂದರ್ಭಗಳಲ್ಲಿ ಷೇರುದಾರರು ಖಾತೆ ಹೊಂದಿರುವ ಡಿ.ಪಿ.ಸೇವಾಸಂಸ್ಥೆಗಳಿಗೆ (D.P.-Depository participant) ಗೆ ತಿಳಿಸಿದರೆ ಸಾಕು ಅವರ ಖಾತೆಯಲ್ಲಿರುವ ಎಲ್ಲಾ ಷೇರುಗಳ ಕಂಪನಿಗಳ ದಾಖಲೆಗಳಲ್ಲೂ ಈ ಬದಲಾವಣೆಗಳು ತಕ್ಷಣವೇ ಜಾರಿಯಾಗುತ್ತವೆ. ಮುಂಚೆಯಾದರೋ ಒಂದೊಂದು ಕಂಪನಿಗೂ ಈ ಬದಲಾವಣೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೀಡಬೇಕಾಗುತ್ತಿತ್ತು.

- ಕಂಪನಿಗಳು ನೀಡುವ ಲಾಭಾಂಶ -ಡಿವಿಡೆಂಡ್ ವಿಳಂಬವಿಲ್ಲದೆ ಷೇರುದಾರನು ತಿಳಿಸಿರುವ ಬ್ಯಾಂಕ್ ಖಾತೆಗೆ ಜಮಾ ಆಗುತ್ತದೆ. E.C.S. (Electronic Clearing Service) ಸೌಲಭ್ಯವಿಲ್ಲದ ಪ್ರದೇಶಗಳಿಗೆ ಖಾತೆದಾರನ ಬ್ಯಾಂಕ್ ಹೆಸರು ಮತ್ತು ಖಾತೆಯ ಸಂಖ್ಯೆಯನ್ನು ನಮೂದಿಸಿ ಖಾತೆದಾರನ ವಿಳಾಸಕ್ಕೆ ಚೆಕ್‌ನ್ನು ಕಳಿಸಲಾಗುವುದು. ಆ ಕಾರಣದಿಂದ ಯಾರೊಬ್ಬರೂ ಅದನ್ನು ದುರುಪಯೋಗ ಮಾಡಲಾಗುವುದಿಲ್ಲ.
- ಷೇರು ಪೇಟೆಯ ದ್ವಿತೀಯ ಮಾರುಕಟ್ಟೆಯಲ್ಲಿ (secondary market) ಎಷ್ಟು ಷೇರುಗಳನ್ನು ಬೇಕಾದರೂ ಕೊಳ್ಳಬಹುದಾದ ಹಾಗೂ ಮಾರಬಹುದಾದ ಸೌಲಭ್ಯವಿದೆ. ಅಂದರೆ ಒಬ್ಬ ವ್ಯಕ್ತಿಯು ತನಗೆ ಆಸಕ್ತಿ ಇರುವ ಯಾವುದೇ ಕಂಪನಿಯ ಒಂದೇ ಒಂದು ಷೇರನ್ನು ಬೇಕಾದರೂ ಸಹ ಕೊಳ್ಳಬಹುದು. ಹಾಗೂ ಮಾರಲೂ ಬಹುದು. ಈ ಹಿಂದೆ ಈ ಅನುಕೂಲತೆಯು ಇರಲಿಲ್ಲ. ಡಿಮ್ಯಾಟ್ ಖಾತೆಯ ಪದ್ಧತಿಯು ಬಂದನಂತರ ಸಾಮಾನ್ಯರಲ್ಲಿ ಅತಿ ಸಾಮಾನ್ಯನೂ ಸಹ ಯಾವ ವಿಧವಾದ ಕೀಳರಿಮೆಯೂ ಇಲ್ಲದೆ, ಹಿಂಜರಿಕೆಯೂ ಇಲ್ಲದೆ ಷೇರು ಮಾರುಕಟ್ಟೆಯ ವ್ಯವಹಾರವನ್ನು ಮಾಡ ಬಹುದು. ಆದರೆ ಕಂಪನಿಗಳು ಆರಂಭಿಕ ಸಾರ್ವಜನಿಕ ನೀಡಿಕೆ (initial public offer) ನೀಡಿದಾಗ ಮಾತ್ರ ಇಂತಿಷ್ಟು ಕನಿಷ್ಠ ಷೇರುಗಳನ್ನು ನಿಗದಿ ಪಡಿಸಿರುವಂತೆ ಅರ್ಜಿ ಸಲ್ಲಿಸಬೇಕಾಗುತ್ತದೆ.

ಡಿಮ್ಯಾಟ್ ಪದ್ಧತಿಯ ಮತ್ತೊಂದು ಪ್ರಮುಖ ಅನುಕೂಲತೆಯೆಂದರೆ ವ್ಯವಹಾರದಲ್ಲಿರುವ ಪಾರದರ್ಶಕತೆ (transparency). ಷೇರು ಮಾರಾಟ ಅಥವಾ ಕೊಳ್ಳುವಿಕೆಯ ನಂತರ ನೀಡುವ Contract Form ನಲ್ಲಿ ವ್ಯವಹಾರದ ಸಂಪೂರ್ಣವಾದ ವಿವರಗಳು ಲಭ್ಯವಿರುತ್ತದೆ. ಹಾಗಾಗಿ ವ್ಯವಹಾರದಲ್ಲಿ ಯಾವ ಸಂದೇಹಗಳಿಗೂ ಅನುಮಾನವಿರುವುದಿಲ್ಲ.

ಡಿಮ್ಯಾಟ್ ಖಾತೆಯ ಬಗ್ಗೆ ಮತ್ತಷ್ಟು ವಿವರಗಳು

ಈಗಾಗಲೇ ತಿಳಿಸಿದಂತೆ ಕಂಪನಿಗಳು ಹೊಸದಾಗಿ ಷೇರು ನೀಡುವಾಗ ಅವುಗಳನ್ನು ಡಿಮ್ಯಾಟ್ ಖಾತೆಗೆ ಜಮಾ ಮಾಡಬೇಕಾಗಿರುವ ನಿಯಮವು ಜಾರಿಗೆ ಬಂದಿದೆ. ಹಾಗಾಗಿ ಹೊಸದಾಗಿ ಷೇರುಗಳನ್ನು ಕೊಳ್ಳಬಯಸುವವರು

ಕಡ್ಡಾಯವಾಗಿ ಡಿಮ್ಯಾಟ್ ಖಾತೆಯನ್ನು ತೆಗೆಯಲೇಬೇಕಾಗುತ್ತದೆ. ಇಲ್ಲದಿದ್ದಲ್ಲಿ ಅವರು ಷೇರುಪೇಟೆಯ ವ್ಯವಹಾರವನ್ನು ಮಾಡಲು ಸಾಧ್ಯವೇ ಇಲ್ಲ.

ಡಿಮ್ಯಾಟ್ ಖಾತೆಯನ್ನು ಬ್ಯಾಂಕ್ ಖಾತೆಗೆ ಹೋಲಿಸಬಹುದು. ಬ್ಯಾಂಕ್ ಖಾತೆಗೆ ಹೇಗೆ ಹಣವನ್ನು ಜಮ ಮಾಡುತ್ತೇವೆಯೋ ಅದೇ ರೀತಿ ಡಿಮ್ಯಾಟ್ ಖಾತೆಗೆ ನಾವು ಕೊಂಡ ಎಲ್ಲ ಷೇರುಗಳನ್ನು ಜಮಾ ಮಾಡಬಹುದು. ಎಷ್ಟು ಕಂಪನಿಯ ಷೇರುಗಳನ್ನಾದರೂ ಜಮಾ ಮಾಡಬಹುದು. ಇದಕ್ಕೆ ಯಾವುದೇ ನಿಬಂಧನೆಗಳಿರುವುದಿಲ್ಲ.

ಅದೇ ರೀತಿ ಷೇರುಗಳನ್ನು ಮಾರಾಟ ಮಾಡಿದಾಗಲೂ ಸಹ ನಮ್ಮ ಖಾತೆಯಿಂದ ಷೇರುಗಳನ್ನು ಕೊಂಡವರ ಖಾತೆಗೆ ಷೇರುಗಳನ್ನು ವರ್ಗಾವಣೆ ಮಾಡಬಹುದು. ಅಂತಹ ಸಂದರ್ಭದಲ್ಲಿ ನಿಗದಿತ Delivery Instruction Slip ನ್ನು ಉಪಯೋಗಿಸಬೇಕಾಗುತ್ತದೆ. ಇದರಲ್ಲಿ ವಿವರಗಳನ್ನು ಭರ್ತಿ ಮಾಡಿ, ಸಹಿ ಮಾಡಿ ಡಿ.ಪಿ. ಸೇವಾಸಂಸ್ಥೆಗಳಿಗೆ ನೀಡಿದಾಗ ನಮ್ಮ ಡಿಮ್ಯಾಟ್ ಖಾತೆಯಿಂದ ಕೊಂಡವರ ಡಿಮ್ಯಾಟ್ ಖಾತೆಗೆ ಷೇರು ವರ್ಗಾವಣೆ ಆಗುತ್ತದೆ.

ಡಿಪಾಸಿಟರಿ ಸೇವಾಸಂಸ್ಥೆ (Depository Participart - D.P.) ಯು ನಮ್ಮ ಡಿಮ್ಯಾಟ್ ಖಾತೆಯಲ್ಲಿ ಜಮಾ ಆಗಿರುವ ಕಂಪನಿಯ ಷೇರುಗಳ ವಿವರವನ್ನು ಕಾಲಕಾಲಕ್ಕೆ ನೀಡುತ್ತದೆ. ಅದಲ್ಲದೆ, ನಮಗೆ ಅಗತ್ಯವಿದ್ದಾಗ ನಮ್ಮ ಕೋರಿಕೆಯ ಮೇರೆಗೂ ಸಹ ಅಂತಹ ವಿವರಣೆಯನ್ನು ಪಡೆಯಲೂ ಬಹುದು. ಅವರು ನೀಡಿದ ವಿವರಣೆಯಲ್ಲಿ ಏನಾದರೂ ಏರುಪೇರುಗಳಿದ್ದಲ್ಲಿ, ವ್ಯತ್ಯಾಸವಿದ್ದಲ್ಲಿ ಅದನ್ನು ಸೂಕ್ತ ದಾಖಲೆಗಳೊಂದಿಗೆ ಸರಿಪಡಿಸಿಕೊಳ್ಳಬಹುದು.

ಡಿಮ್ಯಾಟ್ ಖಾತೆ ಕೇವಲ ಷೇರುಗಳನ್ನು ಜಮಾ ಮಾಡುವುದಕ್ಕೇ ಮೀಸಲಾಗಿಲ್ಲ. ಷೇರುಗಳೊಂದಿಗೆ, ಪರಸ್ಪರ ನಿಧಿಯ Mutual Fund ಹೂಡಿಕೆಗಳೂ ಮತ್ತು ಬಾಂಡ್‌ಗಳನ್ನು ಸಹ ಜಮಾ ಮಾಡಬಹುದು.

ಡಿಮ್ಯಾಟ್ ಖಾತೆಯ ಮತ್ತೊಂದು ವೈಶಿಷ್ಟ್ಯವೆಂದರೆ, ಡಿಮ್ಯಾಟ್ ಆದ ಷೇರುಗಳನ್ನು ಪುನಃ ಅವಶ್ಯಕತೆ ಇದ್ದರೆ, ಷೇರುಪತ್ರಗಳ ರೂಪಕ್ಕೆ (ಅಂದರೆ ಕಾಗದ ರೂಪಕ್ಕೆ) ಬದಲಾಯಿಸಿಕೊಳ್ಳಬಹುದು. ಈ ಕ್ರಮಕ್ಕೆ (rematerialisation) ಎಂದು ಕರೆಯಲಾಗುತ್ತದೆ.

ಒಟ್ಟಿನಲ್ಲಿ ಹೇಳಬಹುದಾದರೆ, ಡಿಮ್ಯಾಟ್ ಪದ್ಧತಿಯು ಜಾರಿಗೆ ಬಂದ ನಂತರ ಷೇರುವ್ಯವಹಾರ ಮಾಡುವುದು ಸುಲಭವಾಗಿದ್ದು, ಪಾರದರ್ಶಕವಾಗಿದ್ದು

ಹೂಡಿಕೆದಾರರಿಗೆ, ಅದರಲ್ಲಿಯೂ ಪ್ರಮುಖವಾಗಿ ಸಣ್ಣ ಹೂಡಿಕೆದಾರರಿಗೆ ವರಪ್ರದ ಎನಿಸಿದೆ. ಅಂತಹವರು ಷೇರುಪೇಟೆಗೆ ಪ್ರವೇಶಿಸಲು ಮುಕ್ತ ದ್ವಾರವನ್ನು ತೆಗೆದಿದೆ ಎಂದು ಹೇಳಬಹುದು. ಹಾಗೂ ಹೂಡಿಕೆದಾರರ ಮಿತ್ರ investor friendly ಎಂದು ಸಹ ಹೇಳಬಹುದು.



ಷೇರು ವ್ಯವಹಾರದಲ್ಲಿ ಹಣ ತೊಡಗಿಸುವುದರಲ್ಲಿ ಇರುವ ಅನುಕೂಲತೆಗಳು

ಷೇರುಪೇಟೆ ಪ್ರವೇಶಿಸಲು ಅಗತ್ಯವಾಗಿ ಬೇಕಾದ ಡಿಮ್ಯಾಟ್ ಖಾತೆ ಬಗ್ಗೆ ತಿಳಿದುಕೊಂಡ ನಂತರ ಷೇರು ವ್ಯವಹಾರದಲ್ಲಿ ಪಡೆಯಬಹುದಾದ ಅನುಕೂಲತೆಗಳ ಬಗ್ಗೆ ತಿಳಿಯೋಣ.

ಯಾವುದೇ ವ್ಯವಹಾರದಲ್ಲಿ ಹಣ ತೊಡಗಿಸುವುದರ ಮುಖ್ಯ ಉದ್ದೇಶ ಲಾಭಗಳಿಸುವುದು. ಅದರಂತೆಯೇ ಷೇರು ವ್ಯವಹಾರದಲ್ಲಿ ಸಿಗಬಹುದಾದ ಲಾಭದ ಬಗ್ಗೆ ದೃಷ್ಟಿ ಹಾಯಿಸಿದಾಗ ಅದರಿಂದ ದೊರೆಯಬಹುದಾದ ಅನುಕೂಲತೆಗಳನ್ನು ಈ ರೀತಿ ವಿಂಗಡಿಸಬಹುದು :

1. ಲಾಭಾಂಶ– ಡಿವಿಡೆಂಡ್
2. ಬೋನಸ್ ಷೇರು –ಉಚಿತ ಷೇರು
3. ಹಕ್ಕಿನ ಷೇರು Rights Share
4. ಅಲ್ಪಾಕಾಲಾವಧಿಯ ಲಾಭ Short Term Capital Gains
5. ದೀರ್ಘ ಕಾಲಾವಧಿಯ ಲಾಭ Long Term Capital Gains

1. ಲಾಭಾಂಶ– ಡಿವಿಡೆಂಡ್

ನಿಶ್ಚಿತ ಠೇವಣಿಗಳಲ್ಲಿ ಹಣ ಹೂಡಿದಾಗ ಅದಕ್ಕೆ ದೊರಕುವ ಪ್ರತಿಫಲವೇ ಬಡ್ಡಿ. ಅಂತೆಯೇ ಷೇರುಗಳಲ್ಲಿ ಹಣ ಹೂಡಿದಾಗ, ಅದಕ್ಕೆ ದೊರಕುವ ಪ್ರತಿಫಲ ಲಾಭಾಂಶ. ಇದನ್ನು ಡಿವಿಡೆಂಡ್ ಎಂದೂ ಹೇಳಬಹುದು. ಲಾಭಾಂಶವು ಕಂಪನಿಯು ಪ್ರಸಕ್ತವರ್ಷದಲ್ಲಿ ಗಳಿಸಿದ ಒಟ್ಟು ಲಾಭದಲ್ಲಿ ಷೇರುದಾರರಿಗೆ ಹಂಚುವ

ಒಂದು ಭಾಗ. ಕಂಪನಿಯ ಲಾಭದಲ್ಲಿ ಹೆಚ್ಚಿದ್ದರೆ ಅದು ಷೇರುದಾರರಿಗೆ ಹಂಚುವ ಲಾಭಾಂಶವೂ ಹೆಚ್ಚಿರುತ್ತದೆ. ಲಾಭ ಕಡಿಮೆ ಇದ್ದರೆ ಹಂಚುವ ಲಾಭಾಂಶವೂ ಕಡಿಮೆ ಇರುತ್ತದೆ. ಕೆಲವು ಸಲ ಕಂಪನಿಯು ಲಾಭವನ್ನೇ ಮಾಡದಿದ್ದರೆ, ಅಂತಹ ಸಂದರ್ಭದಲ್ಲಿ ಷೇರುದಾರರಿಗೆ ಲಾಭಾಂಶವನ್ನೇ ನೀಡದಿರುವ ಸಂದರ್ಭಗಳೂ ಇರುತ್ತವೆ. ಆದರೆ ಸಾಮಾನ್ಯವಾಗಿ ಒಳ್ಳೆಯ ಕಂಪನಿಗಳಲ್ಲಿ ಷೇರುಗಳನ್ನು ಕೊಂಡಿದ್ದಾಗ ಪ್ರತಿವರ್ಷವೂ ಲಾಭಾಂಶವನ್ನು ತಪ್ಪದೆ ನಿರೀಕ್ಷಿಸಬಹುದು.

ಈ ಲಾಭಾಂಶದ ಮತ್ತೊಂದು ವೈಶಿಷ್ಟ್ಯವೆಂದರೆ ಕಂಪನಿಯು ಷೇರುದಾರರಿಗೆ ನೀಡುವ ಲಾಭಾಂಶಕ್ಕೆ ಷೇರುದಾರರು ಆದಾಯ ತೆರಿಗೆಯನ್ನು ನೀಡಬೇಕಾಗಿಲ್ಲ. ಅಂದರೆ ಡಿವಿಡೆಂಡ್ ಮೊತ್ತವು ಷೇರುದಾರರಿಗೆ ಆದಾಯ ತೆರಿಗೆಯಿಂದ ಮುಕ್ತವಾಗಿರುತ್ತದೆ. ಹಾಗಾಗಿ ಕಂಪನಿಯು ನೀಡಿದ ಲಾಭಾಂಶವು ಸಂಪೂರ್ಣವಾಗಿ ಷೇರುದಾರರಿಗೆ ದಕ್ಕುವುದು.

ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ ಲಾಭಾಂಶ ನೀಡುವುದು ಕಂಪನಿಯ ಷೇರಿನ ಮುಖಬೆಲೆಯ ಮೇಲೆ. ಒಂದು ಕಂಪನಿಯು ಲಾಭಾಂಶವನ್ನು ಶೇ. 50 ಎಂದು ಘೋಷಿಸಬಹುದು. ಆ ಕಂಪನಿಯ ಷೇರಿನ ಮುಖಬೆಲೆ 10ರೂಗಳಾಗಿದ್ದು, ಅದನ್ನು ದ್ವಿತೀಯ ಮಾರುಕಟ್ಟೆಯಲ್ಲಿ ತಲಾ ಷೇರಿಗೆ 100ರೂ.ಗಳಿಗೆ ಕೊಂಡಿದೆಯೆಂದು ತಿಳಿಯೋಣ. ಅಂತಹ ಸಂದರ್ಭದಲ್ಲಿ ಆ ಕಂಪನಿಯಲ್ಲಿ ಹೂಡಿಕೆದಾರನು ಹೂಡಿರುವ ಹಣ ಒಂದು ಷೇರಿಗೆ 100ರೂ . ಆತ ಪಡೆಯುವ ಲಾಭಾಂಶ ಆ ಷೇರಿನ ಮುಖಬೆಲೆ 10ರೂಮೇಲೆ ಶೇ. 50 ಅಂದರೆ 5 ರೂ.ಗಳು ಅಂದರೆ 100ರೂ.ಗಳ ಹೂಡಿಕೆಗೆ ದಕ್ಕಿದ ಪ್ರತಿಫಲ 5ರೂ. ಅಂದರೆ ಶೇ. 5. ಇದನ್ನೇ yield per share ಎನ್ನುತ್ತಾರೆ.

ಲಾಭಾಂಶವು ಸಾಮಾನ್ಯವಾಗಿ ಕಂಪನಿಯ ಆರ್ಥಿಕ ವರ್ಷ ಕೊನೆಗೊಂಡ ನಂತರ, ಷೇರುದಾರರ ಸಾಮಾನ್ಯ ವಾರ್ಷಿಕ ಸಭೆಯಲ್ಲಿ ಷೇರುದಾರರ ಅನುಮೋದನೆಯ ನಂತರ ನೀಡಲಾಗುವುದು.

ಕೆಲವು ಸಲ ಕಂಪನಿಯು ಹೆಚ್ಚು ಲಾಭವನ್ನು ಗಳಿಸಿದ ಸಂದರ್ಭದಲ್ಲಿ ಮಧ್ಯಂತರ ಲಾಭಾಂಶವನ್ನು (Interim Dividend) ನೀಡಬಹುದು. ಇಂತಹ ಮಧ್ಯಂತರದ ಲಾಭಾಂಶವನ್ನು ವರ್ಷದಲ್ಲಿ ಎರಡು ಅಥವಾ ಮೂರು ಬಾರಿ ನೀಡುವ ಸಂದರ್ಭಗಳೂ ಇರುತ್ತವೆ.

2. ಬೋನಸ್ ಷೇರು

ಕಂಪನಿಯು ತನ್ನ ಷೇರುದಾರರಿಗೆ ಉಚಿತವಾಗಿ ನೀಡುವ ಷೇರುಗಳನ್ನು ಬೋನಸ್ ಷೇರುಗಳೆಂದು ಕರೆಯಲಾಗುತ್ತದೆ. ಕಂಪನಿಯು ಪ್ರತಿವರ್ಷವೂ ತಾನು ಗಳಸಿದ ಲಾಭದಲ್ಲಿ ಷೇರುದಾರರಿಗೆ ಲಾಭಾಂಶವನ್ನು ವಿತರಿಸುವ ಮುನ್ನ ಸ್ವಲ್ಪ ಭಾಗವನ್ನು ಕಾಯ್ದಿಟ್ಟ ನಿಧಿಗೆ (Reserve Fund) ವರ್ಗಾಯಿಸುತ್ತದೆ. ಹಾಗೆ ವರ್ಗಾಯಿಸಿದ ಕಾಯ್ದಿಟ್ಟ ನಿಧಿಯು ದೊಡ್ಡ ಮೊತ್ತವಾದಾಗ ಅದನ್ನು ಸಹಜವಾಗಿಯೇ ಅದರ ಬಾಧ್ಯಸ್ಥರಾದ ಷೇರುದಾರರಿಗೆ ಉಚಿತ ಷೇರುಗಳಾಗಿ ನೀಡಲಾಗುತ್ತದೆ.

ಬೋನಸ್ ಷೇರು ನೀಡಿಕೆಯು ಷೇರುದಾರರು ಕಂಪನಿಯಲ್ಲಿ ಹೊಂದಿರಬಹುದಾದ ಷೇರುಗಳ ಪ್ರಮಾಣಕ್ಕನುಗುಣವಾಗಿರುತ್ತದೆ.

ಉದಾಹರಣೆಗೆ 1:1 ಬೋನಸ್ ನೀಡಿಕೆಯೆಂದರೆ ಷೇರುದಾರರು ಕಂಪನಿಯಲ್ಲಿ ಹೊಂದಿರುವ ಪ್ರತಿ ಒಂದು ಷೇರಿಗೆ ಒಂದು ಷೇರನ್ನು ಉಚಿತವಾಗಿ ನೀಡಲಾಗುತ್ತದೆ. ಒಬ್ಬ ಷೇರುದಾರನು ಕಂಪನಿಯಲ್ಲಿ 50 ಷೇರುಗಳನ್ನು ಹೊಂದಿದ್ದರೆ 50 ಉಚಿತ ಷೇರುಗಳನ್ನು ಪಡೆಯುತ್ತಾನೆ. ಅಂದರೆ ಉಚಿತ ಷೇರುಗಳ ಹಂಚಿಕೆಯಾದ ನಂತರ 100 ಷೇರುಗಳನ್ನು ಹೊಂದುತ್ತಾನೆ.

ಅದೇ ರೀತಿ 1:2 ಬೋನಸ್ ನೀಡಿಕೆ ಎಂದರೆ, ಹೊಂದಿರುವ ಪ್ರತಿ 2 ಷೇರಿಗೆ ಒಂದನ್ನು ಉಚಿತವಾಗಿ ನೀಡಲಾಗುತ್ತದೆ. ಆ ಸಂದರ್ಭದಲ್ಲಿ 50 ಷೇರುಗಳನ್ನು ಹೊಂದಿರುವವನು 25 ಷೇರುಗಳನ್ನು ಉಚಿತವಾಗಿ ಪಡೆದು 75 ಷೇರುಗಳನ್ನು ಹೊಂದುತ್ತಾನೆ.

ಹೀಗಾಗಿ ಬೋನಸ್ ಷೇರಿನ ಹಂಚಿಕೆಯ ನಂತರ ಅವನು ಹೊಂದಿರುವ ಷೇರಿನ ಪ್ರಮಾಣವೂ ಹೆಚ್ಚುತ್ತದೆ. ಮುಂದಿನ ವರ್ಷಗಳಲ್ಲಿ, ಅವನು ಪಡೆಯುವ ಡಿವಿಡೆಂಡ್ ಹಣವೂ ಸಹ ಆ ಹೆಚ್ಚಿದ ಷೇರುಗಳ ಮೇಲೆ ಸಿಗುವುದರಿಂದ ಡಿವಿಡೆಂಡ್ ಮೊತ್ತವೂ ಸಹ ಜಾಸ್ತಿ ಸಿಗುತ್ತದೆ.

ಮುಂದೆ ಷೇರಿನ ಮಾರುಕಟ್ಟೆ ದರ ಏರಿದಾಗ ಷೇರುಗಳನ್ನು ಮಾರಿ ಹಣವನ್ನು ಪಡೆಯಬಹುದು. ಹೀಗೆ ದೀರ್ಘಾವಧಿಗಾಗಿ ಷೇರುಗಳನ್ನು ಹೊಂದಿರುವವರಿಗೆ ಈ ಬೋನಸ್ ನೀಡಿಕೆಯಿಂದ ಅಧಿಕ ಲಾಭ ಸಿಗುತ್ತದೆ.

ಹಕ್ಕಿನ ಷೇರು Right Share

ಕಂಪನಿಯು ತನ್ನ ವ್ಯವಹಾರದ ವಿಸ್ತರಣೆಯ ಯೋಜನೆಯನ್ನು

ಹಾಕಿಕೊಂಡಾಗ ಹೆಚ್ಚಿನ ಬಂಡವಾಳದ ಅಗತ್ಯತೆ ಉಂಟಾಗುತ್ತದೆ. ಈ ಅಧಿಕ ಬಂಡವಾಳವನ್ನು ಪಡೆಯಲು ತನ್ನ ಷೇರುದಾರರಿಗೆ ಹಕ್ಕಿನ ಷೇರುಗಳನ್ನು ನೀಡಿ ಅವರಿಂದ ಹಣವನ್ನು ಸಂಗ್ರಹಿಸುತ್ತದೆ. ಈಗಾಗಲೇ ತಾವು ಕಂಪನಿಯ ಷೇರುದಾರರಾಗಿರುವರೆಂಬ ಹಕ್ಕಿನ ಕಾರಣದಿಂದಲೇ ಷೇರುದಾರರು ಈ ಷೇರುಗಳನ್ನು ಪಡೆಯುತ್ತಾರೆ. ಇದು ಬೋನಸ್ ಷೇರುಗಳಂತಲ್ಲದೆ ಈ ಹಕ್ಕಿನ ಷೇರನ್ನು ಪಡೆಯಲು ಷೇರುದಾರರು ಹಣವನ್ನು ನೀಡಿ ಷೇರು ಪಡೆಯಬೇಕಾಗುತ್ತದೆ. ಆದರೆ ಮಾರುಕಟ್ಟೆಯಲ್ಲಿ ಈ ಕಂಪನಿಗೆ ಇರುವ ಮಾರಾಟದ ಬೆಲೆಗಿಂತಲೂ, ಕಂಪನಿಯು ನೀಡುವ ಹಕ್ಕಿನ ಷೇರಿನ ಬೆಲೆ ಸಾಮಾನ್ಯವಾಗಿ ಕಡಿಮೆ ಇರುತ್ತದೆ.

ಉದಾಹರಣೆಗೆ ಇಂಡಿಯೆನ್ ಹೋಟೆಲ್ ತನ್ನ ವ್ಯವಹಾರ ವಿಸ್ತರಣೆಗಾಗಿ ತನ್ನ ಷೇರುದಾರರಿಗೆ ಹಕ್ಕಿನ ಷೇರುಗಳನ್ನು ನೀಡಿತು. ಹಾಗೆ ನೀಡಿದ ಷೇರಿನ ದರ 70ರೂ.ಗಳು. (ಮುಖ ಬೆಲೆ 1ರೂ) ಈ ದರವನ್ನು ಅದು ನಿಗದಿ ಪಡಿಸಿದಾಗ ಅದು ಮಾರುಕಟ್ಟೆಯಲ್ಲಿ ಪಡೆದಿದ್ದ ದರ ರೂ. 135.45 ಪೈಸೆ. ಹಾಗಾಗಿ ಷೇರುದಾರರಿಗೆ ದೊರಕಿದ ಲಾಭ/ರೂ. ಪ್ರತಿಷೇರಿಗೆ ರೂ. 65.45ಪೈಸೆ.

ಅದೇ ರೀತಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತನ್ನ ಷೇರುದಾರರಿಗೆ ನೀಡಿದ ಹಕ್ಕಿನ ಷೇರಿನ ದರ ರೂ. 1590.00(ಮುಖಬೆಲೆ 10ರೂ) ಈ ದರವನ್ನು ಅದು ನಿಗದಿ ಪಡಿಸಿದಾಗ ಅದರ ಮಾರುಕಟ್ಟೆದರ ರೂ. 2414=35 ಪೈಸೆ ಇತ್ತು. ಹಾಗಾಗಿ ಷೇರುದಾರರಿಗೆ ದೊರಕಿದ ಲಾಭ ಪ್ರತಿಷೇರಿಗೆ ರೂ. 824.35 ಪೈಸೆ.

ಈ ರೀತಿಯ ಹಕ್ಕಿನ ಷೇರಿನ ನೀಡಿಕೆಯಿಂದ, ಷೇರುದಾರರಿಗೆ, ಅದರಲ್ಲಿಯೂ ದೀರ್ಘಾವಧಿಯ ಹೂಡಿಕೆದಾರರಿಗೆ ಅತ್ಯಧಿಕ ಪ್ರಯೋಜನವಾಗುತ್ತದೆ. ಕೆಲವೊಮ್ಮೆ ಈ ಹಕ್ಕಿನ ಷೇರುಗಳು ಮಾರುಕಟ್ಟೆಯ ದರಕ್ಕಿಂತಲೂ ಕಡಿಮೆ ಬೆಲೆಗೆ ನೀಡಲಾಗುವುದರಿಂದ ಇದನ್ನು ಮಿನಿ ಬೋನಸ್ ಎಂದೂ ಕರೆಯಬಹುದು. ಹಕ್ಕಿನ ಷೇರಿನ ನೀಡಿಕೆಯ ನಂತರ ಮಾರುಕಟ್ಟೆಯ ಬೆಲೆಯನ್ನು ನೋಡಿಕೊಂಡು, ಲಾಭದಾಯಕವಾಗಿದ್ದರೆ, ಷೇರುಗಳನ್ನು ಮಾರಿ ಲಾಭಗಳಿಸಬಹುದು.

ಷೇರು ಮಾರಾಟ ಮತ್ತು ಆದಾಯತೆರಿಗೆ

ಈಗಾಗಲೇ ತಿಳಿಸಿದಂತೆ ಷೇರುಗಳ ಮೇಲೆ ಲಾಭಾಂಶವನ್ನು ಕಂಪನಿಗಳು ನೀಡಿದಾಗ ಷೇರುದಾರನು ಅಂತಹ ಆದಾಯಕ್ಕೆ ಯಾವ ಆದಾಯ ತೆರಿಗೆಯನ್ನೂ ನೀಡಬೇಕಾಗಿಲ್ಲ.

ಆದರೆ ಷೇರುದಾರರು ತಾವು ಹೊಂದಿರುವ ಷೇರುಗಳನ್ನು ಅಗತ್ಯ ಬಿದ್ದಾಗ ಮಾರಿ ಹಣವನ್ನು ಪಡೆಯಬಹುದು. ಹೀಗೆ ಮಾರಿದಾಗ ಅವರು ತಾವು ಆ ಮಾರಾಟದಿಂದ ಪಡೆದ ಲಾಭ/ಅಥವಾ ಆದಾಯಕ್ಕೆ ತೆರಿಗೆಯನ್ನು ನೀಡಬೇಕಾಗುತ್ತದೆ. ಹಾಗೆ ನೀಡಬೇಕಾದ ತೆರಿಗೆ, ಷೇರುದಾರನು ಮಾರಾಟ ಮಾಡಿದ ಷೇರುಗಳನ್ನು ಆತ ಎಷ್ಟು ಕಾಲ ಹೊಂದಿದ್ದನೆಂಬುದರ ಮೇಲೆ ನಿರ್ಧಾರವಾಗುತ್ತದೆ.

ಷೇರುಗಳನ್ನು ಒಂದು ವರ್ಷದ ಅವಧಿಗಿಂತ ಜಾಸ್ತಿ ಸಮಯ ಹೊಂದಿದ್ದರೆ ಅಂತಹವನ್ನು ದೀರ್ಘಾವಧಿ ಕಾಲದ ಷೇರುಗಳೆಂದೂ, ಅಂತಹ ಷೇರುಗಳ ಮಾರಾಟದಿಂದ ಬರುವ ಲಾಭವನ್ನು ದೀರ್ಘಕಾಲಾವಧಿಯ ಹೂಡಿಕೆಯ ಲಾಭ(Long Term Capital Gains)ಎಂದೂ ಕರೆಯಲಾಗುತ್ತದೆ.

ಅದರಂತೆಯೇ ಒಂದು ವರ್ಷದ ಅವಧಿಗಿಂತ ಕಡಿಮೆ ಸಮಯಕ್ಕೆ ಷೇರುಗಳನ್ನು ಹೊಂದಿದ್ದರೆ ಅಂತಹವನ್ನು ಅಲ್ಪ ಕಾಲಾವಧಿ ಷೇರುಗಳೆಂದೂ, ಅಂತಹ ಷೇರುಗಳ ಮಾರಾಟದಿಂದ ಬರುವ ಲಾಭವನ್ನು ಅಲ್ಪ ಕಾಲಾವಧಿಯ ಹೂಡಿಕೆಯ ಲಾಭ (Short Term Capital Gain) ಎಂದೂ ಕರೆಯಲಾಗುತ್ತದೆ.

ಷೇರುದಾರನು ಷೇರು ಮಾರಾಟ ಮಾಡಿ ಧೀರ್ಘಕಾಲಾವಧಿಯ ಹೂಡಿಕೆಯ ಲಾಭವನ್ನು ಗಳಿಸಿದಾಗ ಆದಾಯ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ದೊರಕುತ್ತದೆ. ಆದರೆ ಆ ಮಾರಾಟದ ವ್ಯವಹಾರವು ಷೇರು ವಿನಿಮಯ ಕೇಂದ್ರದಿಂದ ನೊಂದಾಯಿತನಾದ ಷೇರು ಬ್ರೋಕರ್ ಮುಖಾಂತರ ಮಾರಾಟವಾಗಿರಬೇಕು. ಅಲ್ಲದೆ ನಿಗದಿತ ಶುಲ್ಕಗಳಾದ ಸೆಕ್ಯುರಿಟಿ ಟ್ರಾನ್ಸಾಕ್ಷನ್ ಟ್ಯಾಕ್ಸ್ (Security Transaction Tax) ಸರ್ವೀಸ್ ಟ್ಯಾಕ್ಸ್, (Service Tax) ಮುಂತಾದ ತೆರಿಗೆಗಳನ್ನು ಕಟ್ಟಿರಬೇಕು. ಅಂತಿದ್ದಲ್ಲಿ ಮಾತ್ರ ಆ ವ್ಯವಹಾರದಿಂದ ಗಳಿಸಿದ ಲಾಭಕ್ಕೆ ಆದಾಯ ತೆರಿಗೆಯಿಂದ ವಿನಾಯಿತಿ ದೊರೆಯುತ್ತದೆ.

ಒಂದು ವರ್ಷದ ಕಡಿಮೆ ಅವಧಿಯ ಷೇರುಗಳನ್ನು ಹೊಂದಿದ್ದು ಅವುಗಳ ಮಾರಾಟ ಮಾಡಿದಾಗ ಗಳಿಸುವ ಲಾಭಕ್ಕೆ ಅಂದರೆ ಅಲ್ಪ ಕಾಲಾವಧಿಯ ಲಾಭ (Short Term Capital Gains) ಕ್ಕೆ ಶೇ. 15 ರಷ್ಟು ತೆರಿಗೆಯನ್ನು ಕಟ್ಟಬೇಕಾಗುತ್ತದೆ.

ಈ ತೆರಿಗೆ ನಿಯಮಗಳು ಕೇವಲ ಷೇರು ಮಾರುಕಟ್ಟೆಯಲ್ಲಿ ಗಳಿಸುವ ಲಾಭಕ್ಕೆ ಮಾತ್ರ ಸೀಮಿತವಾಗಿವೆ. ಇದರಿಂದ ಷೇರು ಮಾರುಕಟ್ಟೆಯ ವ್ಯವಹಾರ ಹಾಗೂ ಗಳಿಸುವ ಲಾಭ ನಷ್ಟ ವಿಶಿಷ್ಟ ವಾದುದೆಂದು ಹೇಳಬಹುದು.

ಷೇರು ವಿಭಜನೆ Stock Split

ಷೇರು ಪೇಟೆ ವ್ಯವಹಾರದಲ್ಲಿ ಆಗಾಗ್ಗೆ ಕೇಳಬರುತ್ತಿರುವ ಷೇರು ವಿಭಜನೆ Stock Split ಬಗ್ಗೆಯೂ ತಿಳಿದುಕೊಳ್ಳುವುದು ಅಗತ್ಯ. ವಿಭಜನೆ ಎಂದರೆ ವಿಭಾಗಿಸುವುದು. ಷೇರು ವಿಭಜನೆ ಎಂದರೆ ಷೇರುಗಳನ್ನು ವಿಭಾಗಿಸುವುದು. ಉದಾಹರಣೆಗೆ ಹತ್ತು ರೂಪಾಯಿ ಮುಖಬೆಲೆಯ ಒಂದು ಷೇರನ್ನು ಐದು ರೂಪಾಯಿಗಳ ಎರಡು ಷೇರುಗಳನ್ನಾಗಿ ವಿಭಾಗಿಸಬಹುದು. ಎರಡು ರೂಪಾಯಿಗಳ ಐದು ಷೇರುಗಳನ್ನಾಗಿ ವಿಭಾಗಿಸುವುದು ಅಥವಾ ಒಂದು ರೂಪಾಯಿಯ ಹತ್ತು ಷೇರುಗಳನ್ನಾಗಿ ವಿಭಾಗಿಸಬಹುದು. ಈ ಪ್ರಕ್ರಿಯೆಯನ್ನು ಮುಖಬೆಲೆ ಸೀಳಿಕೆ Face Value Split ಎಂದೂ ಸಹ ಕರೆಯಬಹುದು.

ಈ ರೀತಿಯ ಷೇರು ವಿಭಜನೆಯಿಂದ ಕಂಪನಿಯ ಒಟ್ಟು ಬಂಡವಾಳದ ಮೇಲಾಗಲೀ ಅಥವಾ ಷೇರುದಾರನು ತಾನು ಹೊಂದಿರುವ ಒಟ್ಟು ಷೇರುಗಳ ಮುಖ ಬೆಲೆಯ ಮೌಲ್ಯದಲ್ಲಾಗಲೀ, ಯಾವುದೇ ವ್ಯತ್ಯಾಸವಾಗುವುದಿಲ್ಲ. ಬದಲಾಗಿ ಷೇರುಗಳ ಸಂಖ್ಯೆಯಲ್ಲಿ ಮಾತ್ರ ವೃದ್ಧಿಯಾಗುತ್ತದೆ. ಉದಾಹರಣೆಗೆ 10ರೂ ರೂಪಾಯಿಯ ಷೇರನ್ನು ಎರಡು ರೂಪಾಯಿಯ ಮುಖ ಬೆಲೆಯ ಷೇರುಗಳಾಗಿ ವಿಭಜಿಸಿದಾಗ ಷೇರುಗಳ ಸಂಖ್ಯೆ ಐದು ಪಟ್ಟು ಹೆಚ್ಚಿಗೆ ಆದ ಹಾಗೆ ಆಗುತ್ತದೆ ಅಷ್ಟೆ. ಅದೇ ರೀತಿ ಒಂದು ರೂಪಾಯಿಯ ಮುಖಬೆಲೆಯ ಷೇರನ್ನಾಗಿ ಪರಿವರ್ತಿಸಿದಾಗ ಹತ್ತು ಪಟ್ಟು ಆಗುತ್ತದೆ.

ಹಾಗಿರುವಾಗ ಷೇರು ವಿಭಜನೆಯನ್ನು ಮಾಡುವುದರ ಉದ್ದೇಶವಾದರೂ ಏನು?

ಉತ್ತಮವಾಗಿ ವ್ಯವಹಾರ ನಡೆಸಿ ಷೇರುದಾರರಿಗೆ ಹೆಚ್ಚಿನ ಲಾಭಾಂಶ (ಡಿವಿಡೆಂಡ್), ಆಗಾಗ್ಗೆ ಬೋನಸ್ ಷೇರು, ಹಕ್ಕಿನ ಷೇರುಗಳನ್ನು ನೀಡಿ ಷೇರುದಾರರ "ನೆಚ್ಚಿಗೆಯ ಹಾಗೂ ಮೆಚ್ಚುಗೆಯ" ಕಂಪನಿಗಳು ಹಲವಾಗಿಸಿವೆ. ಅಂತಹ ಕಂಪನಿಯ ಷೇರುಗಳನ್ನು ಕೊಂಡು ಅಂತಹ ಸಂಸ್ಥೆಗಳ ಷೇರುದಾರರಾಗಲು ಹೂಡಿಕೆದಾರರು ಹಾತೊರೆಯುತ್ತಾರೆ. ಆದರೆ ದ್ವಿತೀಯ ಮಾರುಕಟ್ಟೆಯಲ್ಲಿ ಅವುಗಳ ಮಾರುಕಟ್ಟೆ ದರ ಮಿತಿ ಮೀರಿದ್ದು ಜನಸಾಮಾನ್ಯರು, ಅದರಲ್ಲಿಯೂ ಸಣ್ಣ ಹೂಡಿಕೆದಾರರು, ಅವುಗಳನ್ನು ಕೊಳ್ಳಲು ಅಶಕ್ತರಾಗಿರುತ್ತಾರೆ. ಷೇರುಗಳು ಡಿಮ್ಯಾಟ್ ಆಗುವುದಕ್ಕೆ ಮೊದಲು, ಷೇರುಗಳನ್ನು ಒಂದು ನಿರ್ದಿಷ್ಟ ಸಂಖ್ಯೆಯಲ್ಲಿ ಅಂದರೆ Market lot ನಲ್ಲಿಯೇ ಕೊಳ್ಳಬೇಕಾಗುತ್ತಿತ್ತು. 25/50/100ರ ಸಂಖ್ಯೆಯಲ್ಲಿಯೇ ವ್ಯವಹಾರ ಮಾಡಬೇಕಿದ್ದ ಕಾರಣ ಸಣ್ಣ ಹೂಡಿಕೆದಾರರಿಗೆ ಅವುಗಳನ್ನು ಕೊಳ್ಳುವುದು ಸಾಧ್ಯವೇ ಆಗುತ್ತಿರಲಿಲ್ಲ.

ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಡಿಮ್ಯಾಟ್ ಆದ ನಂತರ ಒಂದು ಷೇರನ್ನಾದರೂ ಕೊಳ್ಳಬಹುದಾದ ಅನುಕೂಲವಿದೆ. ಅಲ್ಲದೆ ಷೇರು ವಿಭಜನೆಯಾದ ನಂತರ ವಿಭಜನೆಯಾದ ಷೇರಿನ ದರವೂ ಯಥೋಚಿತವಾಗಿ ಕಡಿಮೆಯಾಗುತ್ತದೆ. ಹತ್ತು ರೂಪಾಯಿಯ ಮುಖಬೆಲೆಯ ಷೇರು ದ್ವಿತೀಯ ಮಾರುಕಟ್ಟೆಯಲ್ಲಿ ಒಂದು ಸಾವಿರ ರೂಪಾಯಿಗಳಿಗೆ ಮಾರಾಟವಾಗುತ್ತಿದ್ದರೆ, ಷೇರು ವಿಭಜನೆಯಲ್ಲಿ ಅದನ್ನು ಎರಡು ರೂಪಾಯಿಯ ಐದು ಷೇರುಗಳಾಗಿ ಪರಿವರ್ತಿತವಾದಾಗ, ವಿಭಜಿತವಾದ ಪ್ರತಿಯೊಂದು ಷೇರೂ ಸಹ ಇನ್ನೂರು ರೂಪಾಯಿಗಳಿಗೆ ದೊರಕುತ್ತದೆ. ಆ ಕಾರಣದಿಂದ ಸಾಮಾನ್ಯ ಷೇರುದಾರನೂ ಸಹ ಅಂತಹ ಕಂಪನಿಯ ಷೇರುಗಳನ್ನು ಕೊಳ್ಳಲು ಶಕ್ತನಾಗುತ್ತಾನೆ.

ಷೇರು ವಿಭಜನೆಗೊಂಡ ಕೆಲವು ಕಂಪನಿಗಳನ್ನು ಹೆಸರಿಸಬಹುದಾದರೆ ಹೋಟೆಲ್ ಲೀಲಾ ವೆಂಚರ್ 10 ರೂ. ಮುಖಬೆಲೆಯ ಷೇರನ್ನು 2ರೂ. ಮುಖಬೆಲೆಯ, ಜಿ.ಎಂ. ಆರ್ ಇನ್ಫ್ರಾಸ್ಟ್ರಕ್ಚರ್ 10 ರೂ. ಮುಖಬೆಲೆಯ ಷೇರನ್ನು 2 ರೂ. ಮುಖಬೆಲೆಯ, ವೋಲ್ಟಾಸ್ ಕಂಪನಿಯು 10 ರೂ. ಮುಖಬೆಲೆಯ ಷೇರನ್ನು 1 ರೂ. ಮುಖಬೆಲೆಯ, ಯುನೈಟೆಡ್ ಬ್ರೂಯರಿಸ್ 10 ರೂ. ಮುಖಬೆಲೆಯ ಷೇರನ್ನು 1ರೂ. ಮುಖಬೆಲೆಯ ಷೇರನ್ನಾಗಿ ವಿಭಜಿಸಿವೆ.

ಷೇರು ವಿಭಜನೆಯ ನಂತರ ಷೇರುದಾರರ ಹೂಡಿಕೆಯ ಹಣದಲ್ಲಿ ಯಾವುದೇ ವ್ಯತ್ಯಾಸ ವಾಗದಿದ್ದರೂ ಹೊಂದಿರುವ ಷೇರುಗಳ ಸಂಖ್ಯೆ ಏರುತ್ತದೆ. ಆದ್ದರಿಂದ ಮಾರಾಟಕ್ಕೆ ಲಭ್ಯವಿರುವ ಷೇರುಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಹಾಗಾಗಿ ಷೇರುಗಳನ್ನು ಹೊಂದಿರುವವರು ತಮ್ಮಲ್ಲಿಯ ಕೆಲವು ಷೇರುಗಳನ್ನು ಮಾರಾಟ ಮಾಡಿ ಹಣಗಳಿಸಬಹುದು. ಸಣ್ಣ ಹೂಡಿಕೆದಾರರೂ ಅಲ್ಪ ಪ್ರಮಾಣದಲ್ಲಿ ಷೇರುಗಳನ್ನು ಕೊಳ್ಳಬಹುದು.

ಷೇರು ಪೇಟೆಯಲ್ಲಿ ಹಣ ಹೂಡುವಿಕೆಗೆ ಹಿಂಜರಿಕೆ ಏಕೆ?

ಷೇರು ಪೇಟೆಯ ಬಗ್ಗೆ, ಅದರಲ್ಲಿ ಹಣ ಹೂಡುವಿಕೆ ಬಗ್ಗೆ, ವಿವರಗಳನ್ನು ತಿಳಿದ ನಂತರ, ಸಾಮಾನ್ಯವಾಗಿ ಜನಗಳು ಆ ಕ್ಷೇತ್ರದಲ್ಲಿ ಹಣ ಹೂಡಲು ಏಕೆ ಹಿಂಜರಿಯುತ್ತಾರೆ ಎಂಬುದನ್ನು ವಿಶ್ಲೇಷಿಸಬೇಕಾಗಿದೆ.

ಒಂದು ವರದಿಯಂತೆ ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.ಎರಡರಷ್ಟು ಮಾತ್ರ ಷೇರುಪೇಟೆಯಲ್ಲಿ ಹಣ ಹೂಡುವರೆಂಬ ಅಂದಾಜಿದೆ. ಉಳಿದವರು ಸಾಂಪ್ರದಾಯಿಕ ಹಾಗೂ ಸುರಕ್ಷಿತ ಹೂಡಿಕೆಗಳಾದ ಬ್ಯಾಂಕ್ ಠೇವಣಿ, ಅಂಚೆಕಛೇರಿ ಠೇವಣಿ, ನಿವೇಶನಗಳು, ಚಿನ್ನ-ಬೆಳ್ಳಿ, ಮುಂತಾದ

ಕ್ಷೇತ್ರಗಳಲ್ಲಿ ತಮ್ಮ ಉಳಿತಾಯವನ್ನು ತೊಡಗಿಸುವರು. ಅದೇ ವಿಶ್ವದ ಇತರೇ ದೇಶಗಳಲ್ಲಿ, ಷೇರುಪೇಟೆಯಲ್ಲಿ ಹಣ ಹೂಡುವವರ ಪ್ರಮಾಣ ಹೆಚ್ಚಾಗಿದೆ. ಇದಕ್ಕೆ ಕಾರಣವಾದರೂ ಏನು?

ಷೇರುಗಳಲ್ಲಿ ಹೂಡುವ ಹಣಕ್ಕೆ ಪ್ರತಿಫಲವಾಗಿ ಪಡೆಯುವ ಲಾಭಾಂಶ, ಬೋನಸ್‌ಷೇರು, ಹಕ್ಕಿನ ಷೇರುಗಳು, ಷೇರು ಮಾರಾಟ ಮಾಡಿದಾಗ ಸಿಗಬಹುದಾದ ಲಾಭ, ಷೇರುಮಾರುಕಟ್ಟೆಯ ವ್ಯವಹಾರದ ಲಾಭ/ನಷ್ಟಗಳಿಗೇ ಸಿಗುವ ವಿಶಿಷ್ಟವಾದ ಆದಾಯ ತೆರಿಗೆ ವಿನಾಯತಿ- ಹೀಗೆ ಹತ್ತು ಹಲವಾರು ಸೌಲಭ್ಯಗಳು ದೊರಕಿದರೂ ಜನ ಏಕೆ ಈ ಕ್ಷೇತ್ರದಿಂದ ದೂರ ಇದ್ದಾರೆ ಎಂದು ಗಮನಿಸಿದರೆ ಕಾರಣಗಳು ಹಲವಾರು ಸಿಗಬಹುದು.

ಷೇರು ಪೇಟೆಯಲ್ಲಿ ಆಗಾಗ್ಗೆ ಸಂಭವಿಸುವ ಏರಿಳಿತಗಳು ಹಾಗೂ ಹಗರಣಗಳು (scandals) ಷೇರು ಪೇಟೆಯ ವ್ಯವಹಾರದಲ್ಲಿ ಜನ ಸಾಮಾನ್ಯರಿಗೆ ತಿಳವಳಿಕೆ ಇಲ್ಲದಿರುವುದು, ಈ ಕ್ಷೇತ್ರ ಕೇವಲ ಶ್ರೀಮಂತರಿಗೆ ಮಾತ್ರ ಮೀಸಲಾದುದು. ಜನ ಸಾಮಾನ್ಯರಿಗೆ ಈ ಕ್ಷೇತ್ರದಲ್ಲಿ ಹೂಡಿಕೆ ಸಾಧ್ಯವಿಲ್ಲ. ಷೇರು ಪೇಟೆಯಲ್ಲಿ ಹಣ ಹೂಡುವುದು ಅತ್ಯಂತ ಅಪಾಯಕಾರಿಯಾದುದು ಇವೇ ಮುಂತಾದ ಅಭಿಪ್ರಾಯಗಳು ಜನ ಸಾಮಾನ್ಯರಲ್ಲಿ ಮೂಡಿರುವುದರಿಂದ ಅವರ ಸಂಖ್ಯೆ ಈ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿ ಇಲ್ಲದಿರುವುದು ಕಂಡು ಬರುತ್ತದೆ.

ನಿಜ; 1991ರಲ್ಲಿ ನಡೆದ ಹರ್ಷದ್ ಮೆಹ್ತಾ ಹಗರಣ, ನಂತರದ ಹತ್ತು ವರ್ಷಗಳಲ್ಲಿ - 2001ರಲ್ಲಿ ನಡೆದ ಕೇತನ್ ಪರೇಖ್ ಹಗರಣ ಮುಂತಾದುವು ಷೇರು ಮಾರುಕಟ್ಟೆಯಲ್ಲಿ ತಲ್ಲಣ ಮೂಡಿಸಿದುವು.

ಅಲ್ಲದೆ ಆಗಾಗ್ಗೆ ಸಂಭವಿಸುವ ಷೇರುಪೇಟೆಯ ಕುಸಿತವೂ ಸಹ ಹೂಡಿಕೆದಾರರನ್ನು ಕಂಗೆಡಿಸುತ್ತದೆ.

ಷೇರುಪೇಟೆಯಲ್ಲಿ ಸಂಭವಿಸುವ ಅಧಿಕ ಪ್ರಮಾಣದ ಸೂಚ್ಯಂಕ (sensex) ಕುಸಿತವು ಷೇರುದಾರರನ್ನು ಭೀತಿ ಗೊಳಿಸಿ ಷೇರು ವ್ಯವಹಾರದಿಂದ ದೂರ ಸರಿಯುವುದೇ ಲೇಸೆಂಬ ಮನೋಭಾವವನ್ನುಂಟು ಮಾಡಿದ್ದರೆ ಆಶ್ಚರ್ಯವೇನಿಲ್ಲ.

(ಷೇರು ಪೇಟೆಯ ಸೂಚ್ಯಂಕ (sensex) ಎಂದರೆ ಮುಂಬಯಿ ಷೇರುಪೇಟೆ ಅರ್ಥಾತ್ BSE ನಲ್ಲಿ ದಾಖಲಾಗಿರುವ ಪ್ರಮುಖ 30 ಷೇರುಗಳ ಏರಿಳಿತವನ್ನು ನಿರ್ಧರಿಸುವ ಮಾಪಕ. ಈ ಸೂಚ್ಯಂಕವು ಪ್ರಮುಖ ಷೇರುಗಳ ವಹಿವಾಟು ಸೂಚ್ಯಂಕವನ್ನು ನಿರ್ಧರಿಸುತ್ತದೆ. ಅದರಂತೆ ರಾಷ್ಟ್ರೀಯ ಷೇರುಪೇಟೆ

ಸೂಚ್ಯಂಕ – NIFTY ಕೂಡ ಇದೇ ರೀತಿ ಕಾರ್ಯ ನಿರ್ವಹಿಸುತ್ತದೆ.)

ಹೀಗೆ ಷೇರು ಪೇಟೆಯಲ್ಲಿ ಷೇರು ಬೆಲೆಗಳು ಕಡಿಮೆಯಾಗಿ ಸೂಚ್ಯಂಕವು ಇಳಿಮುಖವಾದಾಗ, ಸಾಮಾನ್ಯ ಹೂಡಿಕೆದಾರರು ಅರ್ಥಾತ್ ಷೇರುದಾರರು ಗಾಬರಿ ಗೊಳ್ಳುವುದು ಸಹಜವಾದುದೇ.

ಆದರೆ ಇಂತಹ ಏರಿಳಿತಗಳು ಷೇರು ಮಾರುಕಟ್ಟೆಗೆ ಹೊಸತೇನಲ್ಲ. ಇವು ಪದೇ ಪದೇ ಸಂಭವಿಸುತ್ತಲೇ ಇರುತ್ತದೆ. ಒಂದು ಸಲ ಇಳಿತ ಕಂಡ ಮಾರುಕಟ್ಟೆ ಮತ್ತೆ ಏರಿದೆ. ಏರಿದ ಮಾರುಕಟ್ಟೆ ಮತ್ತೆ ಮೇಲೇರಿದೆ. "ಪುನರಪಿ ಜನನಂ ಪುನರಪಿ ಮರಣ" ಎಂಬಂತೆ ಏರಿಳಿತದ ಪುನರಾವರ್ತನೆ ಆಗುತ್ತಲೇ ಇದೆ. ಷೇರು ಪೇಟೆಯ ಏರಿಳಿತಗಳನ್ನು ಕಂಡವರಿಗೆ ಇದು ಒಂದು ಸಹಜ ಕ್ರಿಯೆ ಎಂದೇ ಅನಿಸುತ್ತದೆ.

ಈ ಏರಿಳಿತಗಳಿಗೆ ಕಾರಣಗಳನ್ನು ಪರಾಮರ್ಶಿಸಿದಾಗ ಪ್ರಮುಖವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆ, ತೈಲದರ ಏರಿಕೆ, ರಿಸರ್ವ್‌ಬ್ಯಾಂಕ್ ನೀತಿ, ಸರ್ಕಾರದ ಕೆಲವು ಪ್ರಮುಖ ನಿರ್ಧಾರಗಳು- ಇವೇ ಮುಂತಾದ ಹಲವಾರು ಸಂಗತಿಗಳು ಪ್ರಮುಖ ಪ್ರಭಾವ ಬೀರಿರುವುದನ್ನು ಕಾಣಬಹುದು.

ಆದರೆ ಈ ಏರಿಳಿತಗಳಿಂದ ನೈಜ ಹೂಡಿಕೆದಾರನಿಗೆ (Real investor) ಆಗುವ ಹಾನಿ ಕಡಿಮೆ. ನೈಜ ಹೂಡಿಕೆದಾರನ ಹೂಡಿಕೆಯ ಉದ್ದೇಶ್ಯ ದೀರ್ಘಾವಧಿಯ ಹೂಡಿಕೆಯದಾಗಿರುತ್ತದೆ. ಷೇರು ಪೇಟೆಯ ಏರಿಳಿತಗಳು ಆತನ ಹೂಡಿಕೆಯ ಕಂಪನಿಯ ವ್ಯವಹಾರದ ಮೇಲಾಗಲೀ, ಅದರ ಲಾಭನಷ್ಟಗಳ ಮೇಲಾಗಲೀ ಬೀರುವ ಪರಿಣಾಮ ಅಷ್ಟಾಗಿ ಕಾಣಲಾರದು. ಕಂಪನಿಯು ಗಳಿಸುವ ಲಾಭ, ಷೇರುದಾರರಿಗೆ ನೀಡಬಹುದಾದ ಲಾಭಾಂಶ (ಡಿವಿಡೆಂಡ್) ಇವುಗಳ ಬಗ್ಗೆ ಆಗುವ ಏರುಪೇರು ಗಣನೀಯವಾಗಿರುವುದಿಲ್ಲ. ಮಾರುಕಟ್ಟೆಯ ಪ್ರಭಾವ ಏನೇ ಇರಲಿ, ಉತ್ತಮ ವಹಿವಾಟು ನಡೆಸಿ, ಲಾಭಗಳಿಸಿದ ಕಂಪನಿ ತನ್ನ ಷೇರುದಾರರಿಗೆ ನೀಡುವ ಲಾಭಾಂಶದಲ್ಲಿ ಕಡಿತಗೊಳಿಸುವುದು ಅಪರೂಪ. ಹಾಗಾಗಿ ನೈಜ ಷೇರುದಾರನ ಹಿತಾಸಕ್ತಿಗೆ ಧಕ್ಕೆ ಉಂಟಾಗುವುದು ವಿರಳವೆಂದೇ ಹೇಳಬಹುದು.

ಆದರೆ ಷೇರುಪೇಟೆಯ ಏರಿಳಿತದ ಪರಿಣಾಮದಿಂದ ಸ್ವಲ್ಪ ಮಟ್ಟಿಗೆ ತೊಂದರೆ ಅನುಭವಿಸುವವರೆಂದರೆ ಕಡಿಮೆ ಬೆಲೆಗೆ ಷೇರುಗಳನ್ನು ಕೊಂಡು ಜಾಸ್ತಿಯಾದಾಗ ಮಾರುವ ಪ್ರವೃತ್ತಿಯುಳ್ಳ speculators ಎಂದು ಹೇಳಬಹುದು. ಇಂತಹವರ ಹೂಡಿಕೆಯ ಮೂಲ ಉದ್ದೇಶವೇ ಅಲ್ಪ ಕಾಲಾವಧಿಯಲ್ಲಿ ಲಾಭಗಳಿಸುವುದು. ಷೇರುಪೇಟೆಯಲ್ಲಿ ಇವರು ಕೊಂಡ ಷೇರುಗಳ ಬೆಲೆ ಕಡಿಮೆಯಾದಾಗ, ನಷ್ಟ ಸಂಭವಿಸಬಹುದು. ಅಂತಹ ಸಂದರ್ಭದಲ್ಲಿ ಅವರು ಕಳವಳ ಹಾಗೂ ಗೊಂದಲಗಳಿಗೆ ಈಡಾಗಬೇಕಾಗುತ್ತದೆ.

ಈ ಅಧ್ಯಾಯದ ಆರಂಭದಲ್ಲಿಯೇ ತಿಳಿಸಿದಂತೆ ಷೇರುಗಳನ್ನು ಕರೆಯುವುದೇ Risk Capital ಎಂದು. ಇದರಲ್ಲಿ ಹಣ ಹೂಡುವಾಗ ಷೇರು ಪೇಟೆಯ ಸಾಮಾನ್ಯ ಜ್ಞಾನ ಹಾಗೂ ತಿಳುವಳಿಕೆ ಸ್ವಲ್ಪ ಮಟ್ಟಿನ ಧೈರ್ಯ, ರಿಸ್ಕ್ ತೆಗೆದುಕೊಳ್ಳುವ ತಾಕತ್ತು ಇರಬೇಕು.

ಜನ ಸಾಮಾನ್ಯರ ತಿಳವಳಿಕೆಗಾಗಿ ದೃಶ್ಯಮಾಧ್ಯಮಗಳಲ್ಲಿ ಹಾಗೂ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಲ್ಲಿ ಹಲವಾರು ಕಾರ್ಯಕ್ರಮಗಳು ಹಾಗೂ ಲೇಖನಗಳು ಬರುತ್ತಿವೆ.

ದೃಶ್ಯಮಾಧ್ಯಮಗಳಲ್ಲಿ ಪರಿಣಿತರಿಂದ ಸಂವಾದ ಕಾರ್ಯ ಕ್ರಮಗಳನ್ನು ಏರ್ಪಡಿಸಿ ವೀಕ್ಷಕರ ಹಲವಾರು ಸಂದೇಹಗಳಿಗೆ ಹಾಗೂ ಪ್ರಶ್ನೆಗಳಿಗೆ ಸೂಕ್ತ ಸ್ಪಷ್ಟೀಕರಣ ನೀಡುವ ಕಾರ್ಯಕ್ರಮಗಳನ್ನು ಬಿತ್ತರಿಸಲಾಗುತ್ತಿದೆ. ಇದುವರೆಗೆ ಕೇವಲ ಇಂಗ್ಲಿಷ್ ಪತ್ರಿಕೆಗಳಿಗೆ ಮೀಸಲಾಗಿದ್ದ ಷೇರುಪೇಟೆಯ ಬಗೆಗಿನ ಲೇಖನಗಳನ್ನು ಕನ್ನಡದಲ್ಲಿಯೂ ಸಹ ಹಲವಾರು ಪತ್ರಿಕೆಗಳು ಹಾಗೂ ನಿಯತ ಕಾಲಿಕಗಳು ಜನ ಸಾಮಾನ್ಯರಿಗೂ ಅರ್ಥವಾಗುವಂತೆ, ತಜ್ಞರಿಂದ ಬೋಧಪ್ರದವಾಗಿ ಪ್ರಕಟಿಸುತ್ತಿವೆ.

ಬೆಂಗಳೂರು ಷೇರು ವಿನಿಮಯ ಕೇಂದ್ರವು ಹಲವಾರು ಹೂಡಿಕೆದಾರರ ಸಮಾವೇಶಗಳನ್ನು, ರಾಜ್ಯದ ವಿವಿಧ ಪ್ರದೇಶಗಳಲ್ಲಿ, ಏರ್ಪಡಿಸಿ ಜನ ಸಾಮಾನ್ಯರಿಗೂ ಅರ್ಥವಾಗುವಂತೆ, ಪರಿಣತರಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತವೆ.

ಹೀಗಾಗಿ ಜನ ಸಾಮಾನ್ಯರಿಗೆ ಷೇರುಪೇಟೆಯ ವ್ಯವಹಾರದ ಜ್ಞಾನ ಅನುಭವಕ್ಕೆ ಬರುತ್ತಿದೆ.

ಇನ್ನೂ ಡಿಮ್ಯಾಟ್ ಖಾತೆಯು ಚಾಲ್ತಿಗೆ ಬಂದ ನಂತರವಂತೂ ಎಷ್ಟೇ ಸಣ್ಣ ಹೂಡಿಕೆದಾರನೂ ಅಲ್ಪ ಪ್ರಮಾಣದ ಹಣವನ್ನು ಹೂಡಿ ಕೆಲವೇ ಷೇರುಗಳನ್ನು ಕೊಳ್ಳುವ ಸಾಮರ್ಥ್ಯವನ್ನು ಅವಕಾಶವನ್ನು ಗಳಿಸಿದ್ದಾನೆ. ಹಾಗಾಗಿ ಷೇರುಪೇಟೆ ಪ್ರವೇಶ ಕೇವಲ ಶ್ರೀಮಂತರಿಗೆ ಮಾತ್ರ ಎಂಬ ಮಾತು ಅನ್ವಯಿಸದಂತಾಗಿದೆ.

ಈ ಎಲ್ಲ ಕಾರಣದಿಂದ ನೈಜ ಹೂಡಿಕೆದಾರನು ಯಾವ ಹಿಂಜರಿಕೆಯೂ ಇಲ್ಲದೆ, ಧೈರ್ಯದಿಂದ ದೀರ್ಘಾವಧಿಯ ಹೂಡಿಕೆಯನ್ನು ಷೇರುಪೇಟೆಯಲ್ಲಿ ಹೂಡುವ ಪ್ರಯತ್ನವನ್ನು ಮಾಡಬಹುದು. ಆದರೆ ಹೂಡಿಕೆಯ ಪ್ರಮಾಣ ಹಾಗೂ ಹಣದ ಮೊತ್ತ, ಹೂಡಿಕೆದಾರನು ಹೊಂದಿರುವ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ.

ಮ್ಯೂಚುಯಲ್ ಫಂಡ್ MUTUAL FUND



ಷೇರುಗಳಲ್ಲಿ ಹಣ ವಿನಿಯೋಗಿಸುವುದರ (ಹೂಡಿಕೆಯ) ಸಾಧಕ/ಬಾಧಕ ಗಳನ್ನು ತಿಳಿದ ನಂತರ ಮ್ಯೂಚುಯಲ್ ಫಂಡ್ ಹಣ ಹೂಡಿಕೆಯ ಬಗ್ಗೆ ಕೊಂಚ ತಿಳಿಯೋಣ.

ಮ್ಯೂಚುಯಲ್ ಫಂಡ್ ಎನ್ನುವುದು ಜನ ಸಾಮಾನ್ಯರಿಗೆ ತಮ್ಮ ಹಣವನ್ನು ಹೂಡಲು ಅವಕಾಶವಿರುವ ಮತ್ತೊಂದು ಕ್ಷೇತ್ರ ಎನ್ನಬಹುದು. Mutual ಎಂದರೆ ಪರಸ್ಪರ, Fund ಎಂದರೆ ನಿಧಿ. ಹಾಗಾಗಿ ಮ್ಯೂಚುಯಲ್ ಫಂಡ್ ಎಂದರೆ ಪರಸ್ಪರ ನಿಧಿ. ಎಂದೆನ್ನಬಹುದು. ಆದಾಗ್ಯೂ ಜನಸಾಮಾನ್ಯರಲ್ಲಿ ಇದು ಮ್ಯೂಚುಯಲ್ ಫಂಡ್ ಎಂದೇ ಜನಪ್ರಿಯವಾಗಿದೆ.

ಹಲವಾರು ದೇಶಗಳಲ್ಲಿ ಇದನ್ನು ವಿವಿಧ ಹೆಸರುಗಳಿಂದ ಕರೆಯುವ ರೂಢಿಯಿದೆ. ಇಂಗ್ಲೆಂಡಿನಲ್ಲಿ ಯೂನಿಟ್ ಟ್ರಸ್ಟ್ ಎಂದು ಪರಿಚಿತವಾಗಿದ್ದರೆ, ಅಮೆರಿಕದಲ್ಲಿ ಮ್ಯೂಚುಯಲ್ ಫಂಡ್ ಎಂದು ಕರೆಯಲ್ಪಡುತ್ತದೆ.

ಭಾರತದಲ್ಲಿ ಇದು ಪ್ರಾರಂಭವಾಗಿದ್ದು 1964ರಲ್ಲಿ, ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಮೊಟ್ಟ ಮೊದಲಿಗೆ ಭಾರತ ಸರ್ಕಾರದ ಒಂದು ವಿಶೇಷ ಕಾಯ್ದೆಯಂತೆ. ಮೊದಲ ಮ್ಯೂಚುಯಲ್ ಫಂಡ್ ಆಗಿ ಕಾರ್ಯ ನಿರ್ವಹಿಸಲು ಪ್ರಾರಂಭ ಮಾಡಿತು. ಈ ಸಂಸ್ಥೆಯ ಪ್ರಮುಖ ಉದ್ದೇಶ ಜನಸಾಮಾನ್ಯರ ಉಳಿತಾಯದ ಹಣವನ್ನು ಕ್ರೋಢೀಕರಿಸುವುದು.

ದೀರ್ಘ ಕಾಲದ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತವು ಸಹಜವಾಗಿಯೇ, ಆ ಪ್ರಭಾವದಿಂದ, ಇಂಗ್ಲೆಂಡಿನಲ್ಲಿ ಪ್ರಚಲಿತವಾಗಿದ್ದ ಯೂನಿಟ್ ಟ್ರಸ್ಟ್ ಎಂಬ ಹೆಸರನ್ನೇ ಅಳವಡಿಸಿಕೊಂಡಿತು. ನಂತರದ ದಿನಗಳಲ್ಲಿ ಬೇರೆ ಸಂಸ್ಥೆಗಳು ಆರಂಭಿಸಿದ ಯೋಜನೆಗಳು ಮ್ಯೂಚುಯಲ್ ಫಂಡ್ ಎಂಬುದಾಗಿ ಬಳಕೆಗೆ ಬಂದಿತು.

ಈ ಮ್ಯೂಚುಯಲ್ ಫಂಡ್‌ಗಳು ಇತ್ತೀಚಿನ ದಿನಗಳಲ್ಲಿ ಅತ್ಯಂತ ಜನಪ್ರಿಯವಾಗಿ, ಹೂಡಿಕೆದಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುತ್ತಿದೆ. ಷೇರು ಪೇಟೆಯ ವ್ಯವಹಾರದ ಬಗ್ಗೆ ಹೆಚ್ಚು ಪರಿಣಿತರಲ್ಲದವರೂ ಇದರತ್ತ ಒಲವು ತೋರಿಸುತ್ತಿದ್ದಾರೆ. 1964ರ ಯೂನಿಟ್ ಟ್ರಸ್ಟ್ ಆಫ್ ಇಂಡಿಯಾದಿಂದ ಆರಂಭಗೊಂಡ ಮ್ಯೂಚುಯಲ್ ಫಂಡ್‌ನ ಶಕೆಯು ಇಂದು ವಿಸ್ತಾರವಾಗಿ ಹರಡಿ

ನೂರಾರು ಸಂಸ್ಥೆಗಳ ಹುಟ್ಟಿಗೆ ಕಾರಣವಾಗಿದೆ. ಅಲ್ಲದೆ ಈ ಕ್ಷೇತ್ರದಲ್ಲಿ ಹೂಡಿರುವ ಹಣದ ಮೊತ್ತವು ಎರಡು ಲಕ್ಷ ಕೋಟಿಗೂ ಮಿಗಿಲಾಗಿದೆ ಎಂದರೆ ಈ ಮ್ಯೂಚುಯಲ್ ಫಂಡ್‌ಗಳ ಮಹತ್ವ ಎಷ್ಟು ಗಾಢವಾಗಿ ಬೆಳೆದಿದೆ ಎಂದು ತಿಳಿಯಬಹುದು.

ಈ ಮ್ಯೂಚುಯಲ್ ಫಂಡ್‌ಗಳ ಪ್ರಮುಖ ಕಾರ್ಯೋದ್ದೇಶ ಗಳೆಂದರೆ ಸಾಮಾನ್ಯ ಹೂಡಿಕೆದಾರರಿಂದ ಹಣವನ್ನು ಸಂಗ್ರಹಿಸಿ ಅದನ್ನು ವಿವಿಧ ಕಂಪನಿಗಳ ಷೇರುಗಳಲ್ಲಿ ಹೂಡುವುದು– ಹಾಗೆ ಕೊಂಡ ಷೇರುಗಳನ್ನು, ಕೊಂಡ ಬೆಲೆಗಿಂತ ಜಾಸ್ತಿ ಬೆಲೆಗೆ ಮಾರಾಟ ಮಾಡುವುದು ಹಾಗೆ ಗಳಿಸಿದ ಲಾಭದ ಫಲವನ್ನು ತನ್ನ ಹೂಡಿಕೆದಾರರಿಗೆ ಹಂಚುವುದು.

ಕಂಪನಿಗಳ ಷೇರುಗಳಿಗೂ ಮತ್ತು ಮ್ಯೂಚುಯಲ್ ಫಂಡ್‌ನ ಷೇರುಗಳಿಗೂ ಇರುವ ಪ್ರಮುಖ ವ್ಯತ್ಯಾಸವೆಂದರೆ ಕಂಪನಿಗಳು ಷೇರುದಾರರಿಂದ ಹಣವನ್ನು ಸಂಗ್ರಹಿಸಿ ಅದನ್ನು ಉತ್ಪಾದನೆಗೆ ಬಳಸಿ ಲಾಭವನ್ನು ಪಡೆಯುವುದು– ಗಳಿಸಿದ ಲಾಭದಲ್ಲಿ ಲಾಭಾಂಶವನ್ನು ಷೇರುದಾರರಿಗೆ ಹಂಚುವುದು ಆದರೆ ಮ್ಯೂಚುಯಲ್ ಫಂಡ್‌ಗಳಲ್ಲಿ ಯಾವುದೇ ರೀತಿಯ ಉತ್ಪಾದನಾ ಕಾರ್ಯದಲ್ಲಿಯೂ ಹಣವನ್ನು ತೊಡಗಿಸುವುದಿಲ್ಲ. ಬದಲಿಗೆ ಉತ್ಪಾದನೆಯಲ್ಲಿ ತೊಡಗಿರುವ ಕಂಪನಿಗಳಲ್ಲಿ ಹಣವನ್ನು ಹೂಡಿ ತನ್ಮೂಲಕ ಗಳಿಸಿದ ಲಾಭಾಂಶ, ಹಾಗೂ ಷೇರುಮಾರಾಟದಿಂದ ಗಳಿಸಿದ ಆದಾಯವನ್ನು, ತನ್ನ ಖರ್ಚು ಕಳೆದು, ಉಳಿದುದನ್ನು ತನ್ನ ಹೂಡಿಕೆದಾರರಿಗೆ ಹಂಚುವುದು.

ಒಬ್ಬ ಸಾಮಾನ್ಯ ಹೂಡಿಕೆದಾರನಿಗೆ ಷೇರುಮಾರುಕಟ್ಟೆಯ ವ್ಯವಹಾರದಲ್ಲಿ ಅಷ್ಟಾಗಿ ಪರಿಣಿತಿಯಿರುವುದಿಲ್ಲ. ಯಾವ ಷೇರನ್ನು ಕೊಳ್ಳಬೇಕು, ಯಾವಾಗ ಕೊಳ್ಳಬೇಕು/ ಯಾವಾಗ ಮಾರಬೇಕು? ಎಂಬ ತಿಳಿವಳಿಕೆಯ ಕೊರತೆಯಿಂದ ಕೈ ಸುಟ್ಟು ಕೊಂಡ ಎಷ್ಟೋ ಘಟನೆಗಳು ಸಂಭವಿಸಿವೆ.

ಆದರೆ ಮ್ಯೂಚುಯಲ್ ಫಂಡ್‌ಗಳು ಹಣಕಾಸಿನ ವಿಚಾರದಲ್ಲಿ ತಜ್ಞರಾದ ನಿರ್ದೇಶಕ ಮಂಡಲಿಯ ಸದಸ್ಯರನ್ನು, ಅನುಭವೀ ವೃತ್ತಿ ನಿಪುಣರನ್ನೂ, ವಿಶ್ಲೇಷಕರನ್ನು ಹೊಂದಿರುತ್ತವೆ. ಹೀಗಾಗಿ ಷೇರು ಪೇಟೆಯ ಒಳ ಹೊರಗುಗಳನ್ನೂ, ಆಗುಹೋಗುಗಳನ್ನು, ಏರಿಳಿತಗಳನ್ನೂ ಗಮನದಲ್ಲಿಟ್ಟು ಕೊಂಡು, ಸೂಕ್ತ ಸಮಯದಲ್ಲಿ ಒಳ್ಳೆ ಕಂಪನಿಯ ಷೇರುಗಳನ್ನು ಸೂಕ್ತ ಬೆಲೆಗೆ ಕೊಳ್ಳುವ ಮಾರಾಟ ಮಾಡುವ ಪರಿಪೂರ್ಣ ತಿಳವಳಿಕೆಯನ್ನು ಹೊಂದಿರುತ್ತವೆ. ಹಾಗಾಗಿ ಅಂತಹ ವ್ಯವಹಾರದಿಂದ ಸಾಕಷ್ಟು ಲಾಭವನ್ನೂ ಸಹ ಪಡೆಯುತ್ತವೆ. ಈ

ಕಾರಣದಿಂದ ಸಾಮಾನ್ಯ ಹೂಡಿಕೆದಾರನು, ಯಾವ ಸಮಸ್ಯೆಯನ್ನೂ ತಲೆಗೆ ಹಚ್ಚಿಕೊಳ್ಳದೆ ಮ್ಯೂಚುಯಲ್ ಫಂಡ್‌ನಲ್ಲಿ ಹಣ ಹೂಡಿ ತನ್ನ ಹೂಡಿಕೆಗೆ ಸೂಕ್ತ ಪ್ರತಿಫಲವನ್ನು ಪಡೆಯಬಹುದು.

ಮ್ಯೂಚ್ಯುಯಲ್ ಫಂಡ್‌ಗಳು ಅಸಂಖ್ಯಾತ ಹೂಡಿಕೆದಾರರಿಂದ ಹಣ ಸಂಗ್ರಹಿಸುವುದರಿಂದ ಹೂಡಿಕೆಯ ಹಣದ ಮೊತ್ತ ಅಧಿಕವಾಗಿರುತ್ತದೆ. ಸಾಮಾನ್ಯ ಹೂಡಿಕೆದಾರನಿಗಿಂತ ಹಲವು ಹತ್ತು ಕಂಪನಿಗಳಲ್ಲಿ ಹಣವನ್ನೂ ಹೂಡಬಹುದು. ಹಾಗಾಗಿ ಹೂಡಿಕೆಯಲ್ಲಿ ವೈವಿಧ್ಯತೆಯನ್ನೂ ಕಾಣಬಹುದು. ಹೂಡಿಕೆಯ ಕಂಪನಿಗಳು ಒಂದೇ ಕ್ಷೇತ್ರಕ್ಕೆ ಸಂಬಂಧಪಡದೆ ಹಲವಾರು ಕ್ಷೇತ್ರಗಳಲ್ಲಿ ಹಂಚಿ ಹೋಗಿರುವುದರಿಂದ ಒಂದಲ್ಲ ಒಂದು ಕಂಪನಿಯಲ್ಲಿ ಲಾಭ ಮಾಡಬಹುದು. ಆದರೆ ಸಾಮಾನ್ಯ ಹೂಡಿಕೆದಾರನಿಗಾದರೋ, ಹಣದ ಲಭ್ಯತೆಯು ಒಂದೇ ಸೀಮಿತ ಪ್ರಮಾಣದಲ್ಲಿರುವುದರಿಂದ ಆಯ್ದ ಕೆಲವೇ ಕಂಪನಿಗಳಲ್ಲಿ ಮಾತ್ರ ಹೂಡಬಹುದು. ದುರದೃಷ್ಟವಶಾತ್ ಅಂತಹ ಕಂಪನಿಗಳು ಲಾಭಗಳಿಸದಿದ್ದರೆ ಅಥವಾ ನಷ್ಟ ಹೊಂದಿ ಮುಚ್ಚಬೇಕಾದ ಸಂದರ್ಭ ಬಂದರೆ ಹೂಡಿಕೆದಾರನಿಗೆ ಹಾಕಿದ ಹಣಕ್ಕೆ ಸಂಚಕಾರ ಉಂಟಾಗುತ್ತದೆ.

ಮ್ಯೂಚುಯಲ್ ಫಂಡ್‌ಗಳು ಉತ್ತಮ ಅನುಭವೀ ತಂಡದ ನೌಕರರನ್ನೂ/ಆರ್ಥಿಕ ತಜ್ಞರನ್ನು/ ವಿಶ್ಲೇಷಣಕಾರರನ್ನು ನೇಮಿಸಿ ಕೊಂಡಿರುವುದರಿಂದ, ಅಂತಹವರ ಜಾಣ್ಮೆ, ಸೂಕ್ತ ಸಲಹೆ, ಮಾರ್ಗದರ್ಶನಗಳಿಂದ ಕಂಪನಿಗಳ ಆಯ್ಕೆಯಲ್ಲಿ ತಪ್ಪೆಸುಗುವುದು ವಿರಳ. ಅಲ್ಲದೆ ಆಧುನಿಕ ಕಾಲದ ತಾಂತ್ರಿಕತೆ/ವಿದ್ಯುನ್ಮಾನ ಸೌಲಭ್ಯ ಮುಂತಾದವುಗಳ ನೆರವಿನಿಂದ ಉತ್ತಮ ಹಾಗೂ ಲಾಭದಾಯಕ ಕಂಪನಿಗಳ ಆಯ್ಕೆ ಮಾಡಿ ಅಂತಹ ಸಂಸ್ಥೆಗಳಲ್ಲಿ ಹಣ ಹೂಡಬಹುದು, ಹೆಚ್ಚಿನ ಲಾಭವನ್ನು ಗಳಿಸಬಹುದು.

ಈ ಎಲ್ಲ ಕಾರಣಗಳಿಂದ ಮ್ಯೂಚುಯಲ್ ಫಂಡ್‌ಗಳಲ್ಲಿ ಹಣ ತೊಡಗಿಸುವ ಹೂಡಿಕೆದಾರನಿಗೆ ಅಪ್ರತ್ಯಕ್ಷವಾಗಿ ಈ ಎಲ್ಲ ಪರಿಣಿತರ ಅನುಭವ ಪಡೆದಂತಾಗುತ್ತದೆ.

NAV- ಎಂದರೇನು?

ಮ್ಯೂಚುಯಲ್ ಫಂಡ್‌ಗಳಲ್ಲಿ ಪ್ರತಿ ಯೂನಿಟ್‌ನ ಮೌಲ್ಯವನ್ನು NAV ಎಂದು ಕರೆಯಲಾಗುತ್ತದೆ. Net Asset Value ಎಂಬುದರ ಸಂಕ್ಷಿಪ್ತ ರೂಪವೇ

NAV. ಇದು ಮ್ಯೂಚ್ಯುಯಲ್ ಫಂಡ್‌ನ ಆಸ್ತಿಯ ಒಟ್ಟು ಮೌಲ್ಯ.

ಒಂದು ಯೂನಿಟ್‌ನ NAV ಎಂದರೆ

(ಸಂಸ್ಥೆಯು ಹೂಡಿರುವ ಷೇರುಗಳ ಮಾರುಕಟ್ಟೆ ಬೆಲೆ+ಗಳಿಸಿದ ಲಾಭ)– ಅದು ಭರಿಸಿದ ಖರ್ಚು

ಒಟ್ಟು ಯೂನಿಟ್‌ಗಳ ಸಂಖ್ಯೆ

ಮೇಲಿನ ವಿವರಣೆಯಂತೆ, ನಮಗೆ ಗೋಚರಿಸುವುದು– ಹೂಡಿಕೆಯ NAV ಯು ಷೇರುಗಳ ಮಾರುಕಟ್ಟೆಯ ಬೆಲೆಯ ಮೇಲೆ ನಿರ್ಧಾರವಾಗುವುದು ಎಂದು. ಅಂದರೆ ಷೇರುಗಳ ಮಾರುಕಟ್ಟೆಯ ಬೆಲೆ ಹೆಚ್ಚಿದಷ್ಟು NAV ಹೆಚ್ಚಾಗುತ್ತದೆ. ಬೆಲೆ ಕಡಿಮೆಯಾದರೆ NAV ಯೂ ಸಹ ಕಡಿಮೆಯಾಗುತ್ತದೆ.

ಒಬ್ಬ ಹೂಡಿಕೆದಾರನು 1000 ಯೂನಿಟ್‌ಗಳನ್ನು ಹೊಂದಿದ್ದರೆ ಒಂದು ಯೂನಿಟ್‌ನ NAV 20ರೂಗಳಿದ್ದರೆ ಆತನ ಹೂಡಿಕೆಯ ಒಟ್ಟು ಮೌಲ್ಯ 20,000ರೂ.ಗಳಾಗುತ್ತದೆ. NAV ಯು 30ರೂ. ಗಳಾದರೆ 30,000 ರೂ. ಗಳಾಗುತ್ತದೆ. ಅದೇ ರೀತಿ NAV ಯು 15 ರೂ.ಗಳಿಗೆ ಇಳಿದರೆ ಹೂಡಿಕೆಯ ಮೌಲ್ಯವೂ ಸಹ 15,000 ರೂ.ಗಳಿಗೆ ಇಳಿಯುತ್ತದೆ.

ಹಾಗಾಗಿ ಹೂಡಿಕೆದಾರನು ದ್ವಿತೀಯ ಮಾರುಕಟ್ಟೆಯಲ್ಲಿ ಯಾವುದೇ ಮ್ಯೂಚುಯಲ್ ಫಂಡ್‌ನ ಯೂನಿಟ್‌ಗಳನ್ನು ಕೊಳ್ಳ ಬೇಕಾದರೆ ಮಾರಾಟ ಮಾಡ ಬೇಕಾದರೆ NAV ಯ ಆಧಾರದ ಮೇಲೆ ಮಾಡಬೇಕಾಗುತ್ತದೆ. ಪ್ರತಿದಿನವೂ ಪತ್ರಿಕೆಗಳ ವಾಣಿಜ್ಯ ಪುಟಗಳಲ್ಲಿ ಪ್ರಕಟವಾಗುವ ವಿವರಗಳಿಂದ ಈ ವಿಚಾರವನ್ನು ತಿಳಿಯಬಹುದಾಗಿದೆ.

ಮ್ಯೂಚ್ಯುಯಲ್ ಫಂಡ್‌ಗಳಲ್ಲಿ ಎರಡು ಬಗೆಯ ಯೋಜನೆಗಳನ್ನು ಕಾಣಬಹುದು.

1. Open Ended Scheme - ಮುಕ್ತ ಅಂತ್ಯ ಯೋಜನೆ

2. Closed Ended Scheme - ಅಂತ್ಯ ಸಹಿತ ಯೋಜನೆ

1. ಮುಕ್ತ ಅಂತ್ಯ ಯೋಜನೆ Open ended Scheme

ಈ ಯೋಜನೆ ನಿರಂತತೆಯ ಅಸ್ತಿತ್ವವನ್ನು (perpetual existence)

ಹೊಂದಿರುತ್ತದೆ. ಈ ಯೋಜನೆಗೆ ಅಂತ್ಯವಿರುವುದಿಲ್ಲ ದಿನನಿತ್ಯದ ಮಾರುಕಟ್ಟೆಯ ದರವನ್ನು NAV ಅನುಸರಿಸಿ ಕೊಳ್ಳಬಹುದು/ಮಾರಾಟ ಮಾಡಬಹುದು.

NAV ಯಲ್ಲಿ ಏರಿಳಿತವಾದಂತೆ ಕೊಳ್ಳುವ/ಮಾರಾಟದ ಬೆಲೆಯಲ್ಲಿಯೂ ಸಹ ವ್ಯತ್ಯಾಸವಾಗುತ್ತಿರುತ್ತದೆ.

ಈ ಯೋಜನೆಯಲ್ಲಿ ಹೂಡಿಕೆದಾರನಿಗೆ ಬೇಕೆನಿಸಿದಾಗ ಕೊಳ್ಳುವ ಹಾಗೂ ಮಾರುವ ಅವಕಾಶವಿದ್ದು ದ್ರವತೆ (liquidity) ಹೆಚ್ಚಿನ ಅವಕಾಶವಿರುತ್ತದೆ.

2. ಅಂತ್ಯ ಸಹಿತ ಯೋಜನೆ:– Closed Ended Scheme

ಈ ಯೋಜನೆಯು ನಿರ್ದಿಷ್ಟ ಅವಧಿಗೆ ಸೀಮಿತವಾಗಿದ್ದು ಆ ಅವಧಿ ಮುಗಿದ ನಂತರ ಯೋಜನೆಯು ಮುಕ್ತಾಯ ಗೊಳ್ಳುತ್ತದೆ. ಮುಕ್ತಾಯದ ಹಂತದಲ್ಲಿ ಯೋಜನೆಯನ್ನು ಪರಿಸಮಾಪ್ತಿಗೊಳಿಸಿ ಹೂಡಿಕೆಯ ಫಾಯಿದೆಯನ್ನು ಹೂಡಿಕೆದಾರರ ಹೂಡಿಕೆಯ ಪ್ರಮಾಣಕ್ಕೆ ಅನುಸಾರವಾಗಿ ಹಂಚಲಾಗುತ್ತದೆ.

ಮ್ಯೂಚ್ಯುಯಲ್ ಫಂಡ್‌ನ ಹಲವು ಬಗೆಗಳು

ಮ್ಯೂಚುಯಲ್ ಫಂಡ್‌ನಲ್ಲಿ ಹಲವು ಬಗೆಯ ಫಂಡ್‌ಗಳು ಚಾಲ್ತಿಯಲ್ಲಿದ್ದು ಸಾಮಾನ್ಯ ಹೂಡಿಕೆದಾರರನ್ನು ಆಕರ್ಷಿಸುತ್ತಿವೆ.
ಅವುಗಳಲ್ಲಿ ಕೆಲವನ್ನು ಹೆಸರಿಸಬಹುದಾದರೆ

ಈಕ್ವಿಟಿ ಫಂಡ್	–	Equity Fund
ಕ್ಷೇತ್ರವಾರು ಫಂಡ್	–	Sector Fund
ಸಮತೋಲನ ಫಂಡ್	–	Balanced Fund
ತೆರಿಗೆ ಉಳಿತಾಯದ ಫಂಡ್	–	Tax Saving Fund

ಮುಂತಾದವು

ಈಕ್ವಿಟಿ ಫಂಡ್ Equity Fund :

ಈ ಫಂಡ್‌ನ ಮುಖ್ಯ ಉದ್ದೇಶ ಈ ಫಂಡ್‌ನಲ್ಲಿ ಸಂಗ್ರಹವಾದ ಹಣವನ್ನು ಈಕ್ವಿಟಿ ಷೇರುಗಳಲ್ಲಿ ತೊಡಗಿಸುವುದು. ಈಕ್ವಿಟಿ ಷೇರುಗಳಲ್ಲಿ ಹೂಡುವುದರಿಂದ ಅಧಿಕ ಲಾಭವನ್ನು ಪಡೆಯಬಹುದು. ಈ ಅವಕಾಶವಿದ್ದಾಗ್ಯೂ ಅಷ್ಟೇ ಹೆಚ್ಚಿನ

ಮಟ್ಟದ ನಷ್ಟವಾಗುವ ಸಂಭವವೂ ಸಹ ಇರುತ್ತದೆ. ಹಾಗಾಗಿ ಎಷ್ಟು ಲಾಭದಾಯಕವೋ ಅಷ್ಟೇ. ಗಂಡಾಂತರವೂ ಸಹ ಇರುತ್ತದೆ. ಈಕ್ವಿಟಿ ಷೇರುಗಳು ಷೇರು ಮಾರುಕಟ್ಟೆಯಲ್ಲಿ ಏರಿಳಿತಗಳಿಗೆ ಒಳಗಾಗುತ್ತಿರುತ್ತವೆ. ಅವುಗಳ ಬೆಲೆ ಏರಿದಾಗ ಫಂಡ್‌ನ NAV ಜಾಸ್ತಿಯಾಗುತ್ತದೆ. ಅದೇ ರೀತಿ ಷೇರುಗಳ ಬೆಲೆ ಇಳಿದಾಗ NAV ಕಡಿಮೆಯಾಗುತ್ತದೆ.

ಕ್ಷೇತ್ರವಾರು ಫಂಡ್ Sector Fund :

ಕೆಲವು ಮ್ಯೂಚುಯಲ್ ಫಂಡ್‌ಗಳು ಕೆಲವು ನಿರ್ದಿಷ್ಟ ಕ್ಷೇತ್ರಗಳ ಕಂಪನಿಯ ಷೇರುಗಳ ಮೇಲೆ ಮಾತ್ರ ಹಣವನ್ನು ಹೂಡುತ್ತವೆ. ಅಂತಹವನ್ನು ಕ್ಷೇತ್ರವಾರು ಫಂಡ್ ಎಂದು ಕರೆಯಬಹುದು. ಉದಾಹರಣೆಗೆ ಔಷಧಿಕ್ಷೇತ್ರ ಮೂಲಭೂತ ಸೌಕರ್ಯ ಐ.ಟಿ. ಇತ್ಯಾದಿ. ಇತ್ತೀಚೆಗೆ ರಿಯಲ್ ಎಸ್ಟೇಟ್, ಇಂಧನ, ನಿರ್ಮಾಣ (construction) ಮುಂತಾದ ಹೊಸ ಹೊಸ ಕ್ಷೇತ್ರಗಳಲ್ಲಿ ಸೇರ್ಪಡೆಯಾಗುತ್ತಿವೆ.

ಸಮತೋಲನ ಫಂಡ್ Balanced Fund :

ಇಂತಹ ಷೇರುಗಳು ಸಾಮಾನ್ಯವಾಗಿ ಬಂಡವಾಳದ ವೃದ್ಧಿ ಯಾಗತಕ್ಕಂತಹ ಹಾಗೂ ನಿಖರ ಆದಾಯ ತರುವಂತಹ ಹೂಡಿಕೆಗಳಲ್ಲಿ ಹಣವನ್ನು ಹೂಡುತ್ತವೆ. ಅಂದರೆ ಈಕ್ವಿಟಿ ಷೇರುಗಳಲ್ಲಿ, ಬಾಂಡುಗಳು ಮತ್ತು ಸರ್ಕಾರೀ ಸೆಕ್ಯುರಿಟಿ ಪತ್ರಗಳಲ್ಲಿ ಹಣವನ್ನು ಹೂಡುತ್ತವೆ. ಇದರಿಂದ ಆ ಷೇರು ಪೇಟೆಯ ವೃದ್ಧಿಯಿಂದ ಸಿಗುವ ಹೆಚ್ಚು-ಕಡಿಮೆ ಆದಾಯ ಹಾಗೂ ಬಾಂಡುಗಳು ಮತ್ತು ಸರ್ಕಾರೀ ಸೆಕ್ಯೂರಿಟಿ ಪತ್ರಗಳಿಂದ ಸಿಗುವ ನಿಶ್ಚಿತ ಆದಾಯ - ಇವುಗಳ ಮಿಶ್ರಣದಿಂದ ಸೂಕ್ತವಾದ ನಿಶ್ಚಿತ ಆದಾಯ ಸಿಗುತ್ತದೆ.

ತೆರಿಗೆ ಉಳಿತಾಯದ ಫಂಡ್ Tax Saving Fund :

ಇಂತಹ ಫಂಡ್‌ಗಳಲ್ಲಿ ಹಣವನ್ನು ಹೂಡುವುದರಿಂದ ಆದಾಯ ತೆರಿಗೆ ನೀಡುವವರಿಗೆ ಒಂದು ನಿರ್ದಿಷ್ಟವಾದ ಫಂಡ್‌ನಲ್ಲಿ ಹೂಡಿದಾಗ ಆದಾಯ ತೆರಿಗೆಯ ಸ್ವಲ್ಪ ಮಟ್ಟಿನ ವಿನಾಯಿತಿ ಸಿಗುತ್ತದೆ. ಹಾಗಾಗಿ ಆದಾಯತೆರಿಗೆ ವ್ಯಾಪ್ತಿಗೆ ಒಳಪಡುವ ತೆರಿಗೆದಾರರು ಈ ಫಂಡ್‌ನಲ್ಲಿ ಹಣವನ್ನು ಹೂಡುವುದರ ಮುಖೇನ ತೆರಿಗೆ ವಿನಾಯತಿ ಸೌಲಭ್ಯವನ್ನು ಪಡೆಯಬಹುದು.

ಒಟ್ಟಿನಲ್ಲಿ ಹೇಳುವುದಾದರೆ, ಷೇರು ಪೇಟೆಯಲ್ಲಿ ನೇರವಾಗಿ ಪ್ರವೇಶ ಮಾಡುವ ಧೈರ್ಯವಿಲ್ಲದವರು, ಷೇರುಪೇಟೆ ಬಗ್ಗೆ ಸರಿಯಾದ

ಮಾಹಿತಿ/ತಿಳುವಳಿಕೆ ಪಡೆದಿಲ್ಲದವರು ಮ್ಯೂಚುಯಲ್ ಫಂಡ್‌ಗಳಲ್ಲಿ ಹಣವನ್ನು



ವಿನಿಯೋಗಿಸಬಹುದು. ಅಲ್ಲದೆ ಷೇರುಗಳಿಂದ ದೊರಕುವ ಲಾಭಾಂಶಕ್ಕೆ (Dividend) ಹೇಗೆ ಆದಾಯ ತೆರಿಗೆಯಿಂದ ವಿನಾಯತಿಯ ಸೌಲಭ್ಯವು ಇದೆಯೋ ಅದೇ ರೀತಿ ಮ್ಯೂಚುಯಲ್ ಫಂಡ್‌ನಿಂದ ದೊರಕುವ ಲಾಭಾಂಶಕ್ಕೆ ಆದಾಯ ತೆರಿಗೆಯ ವಿನಾಯತಿ ದಕ್ಕುತ್ತದೆ.

ಮ್ಯೂಚುಯಲ್ ಫಂಡ್‌ನಲ್ಲಿ ಹಣ ಹೂಡುವಾಗ ಹೂಡಿಕೆದಾರರು ಆ ಸಂಸ್ಥೆಯ ಹಿಂದಿನ ವರ್ಷಗಳ ಸಾಧನೆಯನ್ನೂ ಗಮನಿಸಬೇಕು. ಅದರ ಸಾಧನೆ ಉತ್ತಮವಾಗಿದ್ದು ಒಳ್ಳೆಯ ಲಾಭಗಳಿಸಿದ್ದು ಹೂಡಿಕೆದಾರನಿಗೆ ಸೂಕ್ತ ಲಾಭಾಂಶ ನೀಡಿದೆಯೇ ಎಂಬುದನ್ನು ಗಮನಿಸಬೇಕು. ನಂತರವೇ ಅಂತಹ ಸಂಸ್ಥೆಯಲ್ಲಿ ಹಣವನ್ನು ಹೂಡಬೇಕು.

ಮ್ಯೂಚುಯಲ್ ಫಂಡ್‌ಗಳನ್ನು ನಿಯಂತ್ರಿಸುವ ಸಂಸ್ಥೆ - ಸೆಬಿ Sebi ಅಂದರೆ Securities and Exchange Board of Inida ಈ ಸಂಸ್ಥೆ- ಸೆಬಿ ಹಾಗೂ ಮ್ಯೂಚುಯಲ್ ಫಂಡ್‌ಗಳು ತಮ್ಮ ಪ್ರಕಟಣೆಗಳಲ್ಲಿ ಘೋಷಿಸುವಂತೆ "ಈ ಹಿಂದೆ ಮಾಡಿದ ಯಾವುದೇ ಸಾಧನೆಗಳು ಮುಂದಿನ ಫಲಿತಾಂಶಗಳಿಗೆ ಖಾತರಿ ನೀಡುವುದಿಲ್ಲ" ಎಂಬ ಅಂಶವನ್ನು ಪ್ರತಿಯೊಬ್ಬ ಹೂಡಿಕೆದಾರನು ಅವಶ್ಯಕವಾಗಿ ಗಮನಿಸಲೇ ಬೇಕು.

ಪ್ರತಿಯೊಬ್ಬ ಹೂಡಿಕೆದಾರನೂ ತೆಗೆದುಕೊಳ್ಳಬೇಕಾದ ಎಚ್ಚರಿಕೆಯೆಂದರೆ ಎಲ್ಲ ಹೂಡಿಕೆಯನ್ನೂ ಮ್ಯೂಚುಯಲ್ ಫಂಡ್‌ನಲ್ಲಿ ಮಾಡಬಾರದು. ಹಾಗೆಯೇ ಒಂದೇ ಮ್ಯೂಚುಯಲ್ ಫಂಡ್‌ನಲ್ಲಿಯೂ ಮಾಡಬಾರದು. ಈಗ ಹತ್ತು ಹಲವಾರು ಮ್ಯೂಚುಯಲ್ ಫಂಡ್‌ಗಳು ಹಲವಾರು ರೀತಿಯ ಯೋಜನೆಗಳನ್ನು, ಹಲವಾರು ಕ್ಷೇತ್ರಗಳಲ್ಲಿ, ರೂಪಿಸುತ್ತವೆ. ಹಾಗಾಗಿ ಹಲವಾರು ಯೋಜನೆಗಳಲ್ಲಿ ಹಣ ಹೂಡುವುದು ವಿವೇಚನಾಯುತವಾದ ಕ್ರಮ. ಅಲ್ಲದೆ ಹೂಡುವಾಗ ಸಾಕಷ್ಟು ವಿವರಗಳನ್ನು ಪಡೆದು ತಜ್ಞರಿಂದ ಸಲಹೆಗಳನ್ನು ಪಡೆದು ಕೊಳ್ಳುವುದೂ ಸೂಕ್ತ.

ಗುರಿ ಒಂದು - ದಾರಿ ಹಲವು - ಆಯ್ಕೆ ನಿಮ್ಮದು

ನಿವೃತ್ತಿಯ ಸಮಯದಲ್ಲಿ ದೊರಕುವ ಸೇವಾಂತ್ಯ ಸೌಲಭ್ಯಗಳು ಯಾವುದು? ಅದರ ಆಧಾರದ ಮೇಲೆ ನಿವೃತ್ತಿಯ ನಂತರ, ಇನ್ನೊಬ್ಬರ ಮೇಲೆ ಅವಲಂಬಿತವಾಗದೆ, ತನ್ನ ಸ್ವಂತ ಗಳಿಕೆಯ ಉಳಿತಾಯದ ಆಧಾರದ ಮೇಲೆ ಜೀವನ ಸಾಗಿಸಲು - ರೂಪಿಸಿಕೊಳ್ಳಲು ಬೇಕಾದ ಆರ್ಥಿಕ ನಿರ್ವಹಣೆ, ಹಣ ಹೂಡುವಿಕೆಯ ಬಗ್ಗೆ ಸಾಕಷ್ಟು ಗಮನ ಹರಿಸಿದ್ದಾಯಿತು.

ಪ್ರಮುಖವಾಗಿ ನಿವೃತ್ತಿಯ ನಂತರ - ವೃದ್ಧಾಪ್ಯದಲ್ಲಿ, ಸ್ವಾಭಿಮಾನಿ - ಸ್ವಾವಲಂಬನೆಯ ಜೀವನ ನಡೆಸಬೇಕಾದರೆ ತಾನು ಗಳಿಸಿದ ಸೇವಾಂತ್ಯ ಸೌಲಭ್ಯದ ಹಣದ ಇಡುಗುಂಟನ್ನು ತನ್ನ ಜೀವಿತಾವಧಿಯವರೆಗೂ ಸುರಕ್ಷಿತವಾಗಿ, ಜತನವಾಗಿ ಕಾಪಾಡಿಕೊಂಡು, ಮತ್ತೊಬ್ಬರಿಗೆ ಹೊರೆಯಾಗದೆ ಬಾಳಬೇಕೆಂಬುದು ಅತಿ ಮಹತ್ವವಾದುದೆಂದು ಪ್ರತಿಯೊಬ್ಬರೂ ಅರಿಯ ಬೇಕಾದ್ದು ಅತಿ ಮುಖ್ಯ.

ಈ ದಿಶೆಯಲ್ಲಿ ಹಣವನ್ನು ಹೂಡುವಾಗ ಭದ್ರತೆಯ ಬಗ್ಗೆ ಗಮನ ಕೊಡಬೇಕಾದ್ದು ಅತ್ಯವಶ್ಯಕ. ಹಾಗೆಯೇ ಪ್ರತಿಫಲ ಅರ್ಥಾತ್ ಬಡ್ಡಿಯ ಕಡೆ ಗಮನ ಹರಿಸಬೇಕಾದ್ದು, ಸಹ ಅತಿ ಮುಖ್ಯ. ಅತಿ ಆಸೆಗೆ ಬಾಯಿ ಬಿಡದೆ- ಮೋಸಗಾರರ ಜಾಲಕ್ಕೆ ಬಲಿಯಾಗದೆ- **ಒಂದು ದಿನದ ಹರುಷದ ಕೂಳಿಗೆ ಮನಸೋತು ವರುಷದ ಕೂಳಿಗೆ ಸಂಚಕಾರ ತಂದುಕೊಳ್ಳುವಂತಿರಬಾರದು.** ಹಾಗೆಯೇ ಬೇಕೆಂದಾಗ ನಾವು ಠೇವಣಿ ಹೂಡಿದ ಹಣವು ನಮ್ಮ ಕಷ್ಟದ ಸಮಯದಲ್ಲಿ ಅಗತ್ಯವಿದ್ದಾಗ ನಮಗೆ ದಕ್ಕುವಂತಿರಬೇಕು. "**ಸಮಯಕ್ಕಾಗದ ಅರ್ಥ ಸಾವಿರವಿದ್ದರೂ ವ್ಯರ್ಥ**" ಎಂಬ ಸತ್ಯವನ್ನು ಅವಶ್ಯವಾಗಿ ಗಮನಿಸಬೇಕು.

ಅಂದರೆ ಹಣ ಹೂಡುವಿಕೆಯಲ್ಲಿ ಭದ್ರತೆ, ಪ್ರತಿಫಲ ಮತ್ತು ದ್ರವತೆ ಮೂರು ಪ್ರಮುಖ ಅಂಶಗಳೆಂದು ಮನದಟ್ಟಾಯಿತು.

ಹಾಗಿದ್ದಮೇಲೆ ಇದುವರೆಗೆ ತಿಳಿದುಕೊಂಡ ಹೂಡಿಕೆಯ ಅವಕಾಶಗಳು - ಅಂದರೆ - ಅಂಚೆಕಛೇರಿಯಲ್ಲಿ ಅರ್ಥಾತ್ ಸಣ್ಣ ಉಳಿತಾಯ ಯೋಜನೆಗಳು - ಬ್ಯಾಂಕುಗಳು -ಚಿನ್ನ, ಬೆಳ್ಳಿ ಹಾಗೂ ನಿವೇಶನಗಳು-ಷೇರುಗಳು - ಮ್ಯೂಚುಯಲ್ ಫಂಡ್‌ಗಳು -ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಹಣ ಹೂಡುವಿಕೆಗೆ ಇರುವ ಅವಕಾಶಗಳನ್ನು ಅದರ ಗುಣಾವಗುಣಗಳನ್ನು ವಿವರವಾಗಿ ಪರಿಶೀಲಿಸಿಯಾಗಿದೆ.

ಈಗ ಪ್ರತಿಯೊಂದು ಹೂಡಿಕೆಯಲ್ಲಿಯೂ ಇರುವ ಗುಣಾತ್ಮಕ (Positive) ಮತ್ತು ನಕಾರಾತ್ಮಕ (Negative) ಅಂಶಗಳ ಬಗ್ಗೆ ಕೆಳಗಿನ

ತುಲನಾತ್ಮಕ ಪಟ್ಟಿಯಲ್ಲಿ ಪರಿಶೀಲಿಸೋಣ :

ಹೂಡಿಕೆಯ ವಿವರ	ಸುರಕ್ಷತೆ	ಪ್ರತಿಫಲ/ಬಡ್ಡಿ	ದ್ರವತೆ
ಅಂಚೆ ಕಛೇರಿ ಉಳಿತಾಯ ಯೋಜನೆ	ಅಧಿಕ	ಸಾಧಾರಣ	ಸಾಧಾರಣ
ಮಾಸಿಕ ವರಮಾನ ಯೋಜನೆ			
ಹಿರಿಯ ನಾಗರಿಕರ ಉಳಿತಾಯ ಯೋಜನೆ			
ಇತ್ಯಾದಿ			
ಬ್ಯಾಂಕ್ ಠೇವಣಿ	ಅಧಿಕ	ಸಾಧಾರಣ	ಸಾಧಾರಣ
ಚಿನ್ನ, ಬೆಳ್ಳಿ, ಇತ್ಯಾದಿ	ಅಧಿಕ	ಸಾಧಾರಣ	ಸಾಧಾರಣ
ಮ್ಯೂಚುಯಲ್ ಫಂಡ್	ಸಾಧಾರಣ	ಸಾಧಾರಣ	ಅಧಿಕ
ನಿವೇಶನ	ಅಧಿಕ	ಸಾಧಾರಣ	ಸಾಧಾರಣ
ಷೇರುಗಳು	ಕಡಿಮೆ	ಅಧಿಕ	ಅಧಿಕ

ಮೇಲಿನ ಪಟ್ಟಿಯನ್ನು ಗಮನಿಸಿದಾಗ, ಯಾವುದೇ ಕ್ಷೇತ್ರದಲ್ಲಿ ಹೂಡಿಕೆ ಮಾಡಿದಾಗಲೂ ಅದು ಹೂಡಿಕೆಯ ಮೂರು ಸೂತ್ರಗಳನ್ನು ಅಂದರೆ– ಸುರಕ್ಷತೆ, ಪ್ರತಿಫಲ, ಬಡ್ಡಿ – ಇವುಗಳನ್ನು ಸಮಾನವಾಗಿ ಹೊಂದಿಲ್ಲವೆಂಬುದು ಗೋಚರಿಸುತ್ತದೆ. ಆದರೂ ಸಹ ನಮ್ಮ ಹೂಡಿಕೆಯ ಉದ್ದೇಶ ಹಾಗೂ ಅಗತ್ಯತೆಗಳ ಅನುಸಾರವಾಗಿ ಯಾವುದೇ ಒಂದನ್ನು ಆಯ್ಕೆ ಮಾಡಿಕೊಳ್ಳಲೇ ಬೇಕಾಗುತ್ತದೆ.

ಹಾಗೆ ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಯಾವುದು ಸೂಕ್ತ ಎಂಬುದನ್ನು ನಿರ್ಧರಿಸುವುದು ಹೂಡಿಕೆದಾರನೇ ಹೊರತು ಮತ್ತ್ಯಾರೂ ಅಲ್ಲ. ಅಂತಹ ಆಯ್ಕೆಯನ್ನು ಮಾಡಿಕೊಳ್ಳುವಾಗ ಪ್ರಮುಖವಾಗಿ ಗಮನ ನೀಡಬೇಕಾಗುವುದು ಸುಭದ್ರತೆಯ ಕಡೆಗೆ ಎಂಬುದು ಈಗಾಗಲೇ ಮನದಟ್ಟಾಗಿರಬಹುದು.

ಈ ಸಂದರ್ಭದಲ್ಲಿ ಹೂಡಿಕೆಯನ್ನು ನಾವು ನಿತ್ಯ ಮಾಡುವ ಊಟಕ್ಕೆ ಹೋಲಿಸಬಹುದು. ನಮ್ಮ ದಿನನಿತ್ಯದ ಊಟದಲ್ಲಿ ಸಾಧಾರಣವಾಗಿ ಅನ್ನ/ಚಪಾತಿ/ರಾಗಿಮುದ್ದೆ, ಸಾಂಬಾರ್/ತಿಳಿಸಾರು, ಮಜ್ಜಿಗೆ/ಮೊಸರು ಇರುತ್ತದೆ. ಇದಲ್ಲದೆ ಎಲೆಯ ಸುತ್ತಲೂ ಪಲ್ಯ, ಉಪ್ಪಿನ ಕಾಯಿ, ಗೊಜ್ಜು ಹಪ್ಪಳ ಸಂಡಿಗೆ


ಮುಂತಾದ ವ್ಯಂಜನಗಳು, ಪರಿಕರಗಳು ಅಲಂಕಾರಪ್ರಾಯನಾಗಿ ಇರುತ್ತದೆ. ಹಬ್ಬ ಹರಿದಿನಗಳಲ್ಲಿ ಮದುವೆ-ಮುಂಜಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಮತ್ತಷ್ಟು ಪರಿಕರಗಳೂ, ಸ್ವಾದಿಷ್ಟ ಸಿಹಿ ಭಕ್ಷ್ಯಗಳೂ ಸಹ ಯಥೇಚ್ಯವಾಗಿ ಇರುತ್ತದೆ.

ಇಷ್ಟೆಲ್ಲಾ ಇದ್ದರೂ ಅಗತ್ಯವಾಗಿ ಸಾಕಷ್ಟು ಪ್ರಮಾಣದಲ್ಲಿ ಸೇವಿಸುವುದು ಎಲೆಯ ಮಧ್ಯೆ ಇರುವ ಅನ್ನ ಅಥವಾ ಚಪಾತಿ ಮತ್ತು ಅದಕ್ಕೆ ಅಗತ್ಯವಾಗಿ ಬೇಕಾದ ಸಾಂಬಾರ್ ಮತ್ತು ಸಾರು ಮಾತ್ರ. ಉಳಿದ ವ್ಯಂಜನ, ಪರಿಕರಗಳಲ್ಲಿ ಕೆಲವನ್ನು ಮಾತ್ರ ಶಾಸ್ತ್ರಕ್ಕೆಂಬಂತೆ, ರುಚಿಗೆ ತಕ್ಕಷ್ಟು ಎಷ್ಟೋ ಅಷ್ಟನ್ನು ಸೇವಿಸಬಹುದು - ಅಥವಾ ಕೆಲವೊಮ್ಮೆ ಸೇವಿಸದೆಯೂ ಇರಬಹುದು.

ಅದೇ ರೀತಿ ಹೂಡಿಕೆಗೆ ಬೇಕಾದಷ್ಟು ಅವಕಾಶಗಳಿದ್ದಾಗ್ಯೂ ಸಹ ನಾವು ಆಯ್ಕೆ ಮಾಡಿಕೊಳ್ಳಬೇಕಾದ್ದು - ನಮ್ಮ ಜೀವನ ನಿರ್ವಹಣೆಗೆ ನಿರಂತರವಾಗಿ, ಯಾವ ಚ್ಯುತಿಯೂ ಬಾರದಂತೆ ನಿಶ್ಚಿತ ಆದಾಯವನ್ನು ತಂದು ಕೊಡುವಂತಹ ಹೂಡಿಕೆ ಮಾತ್ರ. ಹೂಡಿಕೆಯ ಸಮಯದಲ್ಲಿ ಆಕರ್ಷಕವಾಗಿ ಹೆಚ್ಚಿನ ಆದಾಯ ತರುವ ಹೂಡಿಕೆಗಳು ಕಾಣಬಹುದಾದರೂ, ಅನಿಶ್ಚಿಯತೆ (uncertainty) ಮತ್ತು ಅಪಾಯ (risk) ಇರುವಂತಹ ಹೂಡಿಕೆಗಳಲ್ಲಿ ಎಲ್ಲಾ ಹಣವನ್ನು ಹೂಡುವುದು ಅಷ್ಟೊಂದು ವಿವೇಚನಾಯುತವಾದುದಲ್ಲ.

ನಿಶ್ಚಿತ ಆದಾಯ ತರುವ ಹೂಡಿಕೆಗಳಲ್ಲಿ ಸಾಕಷ್ಟು ಪ್ರಮಾಣದ ಹೂಡಿಕೆ ಮಾಡಿ, ನೆಮ್ಮದಿಯ ಜೀವನಕ್ಕೆ ಭದ್ರ ಬುನಾದಿ ಹಾಕಿಕೊಂಡ ನಂತರ, ಬೇರೆ ರೀತಿಯ ಹೂಡಿಕೆಗಳಲ್ಲಿ ಸ್ವಲ್ಪ ಭಾಗದ ಹಣವನ್ನು ಹೂಡಬಹುದು.

ಹಾಗಾಗಿ ಹೂಡಿಕೆಯನ್ನು ಈ ರೀತಿ ವಿಂಗಡಿಸಬಹುದು.



ಒಟ್ಟಿನಲ್ಲಿ ಹೇಳುವುದಾದರೆ ಹಣದ ಹೂಡಿಕೆಯು ಹೂಡಿಕೆದಾರನು ಹೊಂದಿರುವ ಒಟ್ಟು ಹಣ, ಆತನ ಅಗತ್ಯತೆಗಳು, risk ತೆಗೆದುಕೊಳ್ಳುವ ಸಾಮರ್ಥ್ಯ ಇತ್ಯಾದಿಗಳ ಮೇಲೆ ಅವಲಂಬಿತವಾಗಿರುತ್ತದೆ ಎಂದು ಹೇಳಬಹುದು.

ಅದಕ್ಕನುಸಾರವಾಗಿ ಆತನು ಹೂಡುವಿಕೆಯನ್ನು ಎಲ್ಲಿ ಹೂಡಬೇಕು. ಯಾವ ಪ್ರಮಾಣದಲ್ಲಿ ಹೂಡಬೇಕು ಎಂಬುದನ್ನು ನಿರ್ಧರಿಸಬಹುದು.

ಇದುವರೆಗೆ ತಿಳಿಸಲ್ಪಟ್ಟ ಎಲ್ಲಾ ವಿಚಾರಗಳು ಮತ್ತು ಅಂಕಿ ಅಂಶಗಳು ಹೂಡಿಕೆದಾರನಿಗೆ ನೀಡಬಹುದಾದ ಒಂದು ದಿಕ್ಸೂಚಿಯೇ ಹೊರತು ಹೀಗೇ ಹೂಡಬೇಕು. ಇಷ್ಟೇ ಮಾಡಬೇಕು ಎಂದು ಹೇಳಲಾಗುವುದಿಲ್ಲ. ಬಡ್ಡಿಯ ದರವೂ ಅಷ್ಟೇ. ಈಗಿನ ಸಂದರ್ಭದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳು ಹಾಗೂ ನೀಡುವ ಬಡ್ಡಿಯ ದರವನ್ನು ವಿವರಿಸಲಾಗಿದೆ. ಕಾಲ ಕಾಲಕ್ಕೆ ಇವೆಲ್ಲವೂ ಬದಲಾಗಬಹುದು. ಹೊಸ ಹೊಸ ಯೋಜನೆಗಳು ರೂಪುಗೊಳ್ಳಬಹುದು. ಬಡ್ಡಿಯ ದರದಲ್ಲಿ ವ್ಯತ್ಯಾಸಗಳುಂಟಾಗಬಹುದು. ಹಾಗಾಗಿ ಹಣವನ್ನು ಹೂಡುವಿಕೆಯಲ್ಲಿ ಹೂಡಿಕೆದಾರನು ಆಯಾ ಸಂದರ್ಭಕ್ಕನುಗುಣವಾಗಿ, ಚಾಲ್ತಿಯಲ್ಲಿರುವ ಯೋಜನೆಗಳು ಹಾಗೂ ಅದರ ವಿವರಣೆಗಳನ್ನು ಪೂರ್ತಿಯಾಗಿ, ನಿಖರವಾಗಿ ಅಧ್ಯಯನ ಮಾಡಿ ತಿಳಿದುಕೊಂಡು, ವಿಶ್ಲೇಷಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಬಹುದು. ಪರಿಣಿತ ಆರ್ಥಿಕ ತಜ್ಞರಿಂದ ಸಲಹೆಗಾರರಿಂದ ನೆರವನ್ನು ಸೂಕ್ತ ಸಲಹೆಯನ್ನು ಪಡೆಯಬಹುದು.

ಹೂಡಿಕೆಯ ಹಣದ ನಿರ್ವಹಣೆ

ವಿಚಕ್ಷಣೆ, ವಿವೇಚನೆಗಳಿಂದ ಹೂಡಿಕೆ ಮಾಡಿದ ನಂತರ ಗಮನ ಕೊಡಬೇಕಾದ ಅಂಶವೆಂದರೆ ಹೂಡಿದ ಠೇವಣಿಗಳ ನಿರ್ವಹಣೆ.

ನಿಜ, ಹಣ ಹೂಡುವಿಕೆಯಲ್ಲಿ ತೆಗೆದುಕೊಂಡ ಆಸಕ್ತಿಯನ್ನು, ನೀಡಿದ ಗಮನವನ್ನು ಹೂಡಿಕೆಯ ನಂತರವೂ ತೆಗೆದುಕೊಳ್ಳಬೇಕಾದದ್ದು ಅಗತ್ಯ. ಪ್ರತಿ ತಿಂಗಳೂ ಸಂದಾಯವಾಗಬೇಕಾದ ಬಡ್ಡಿ ಪಾವತಿಯಾಗಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಠೇವಣಿಯ ಅವಧಿ, ಪೂರೈಸುವ ದಿನಾಂಕ ಯಾವುದು? ಅದನ್ನು ನವೀಕರಿಸುವುದೋ ಅಥವಾ ಹಿಂದೆಗೆದುಕೊಳ್ಳುವುದೋ ಎಂಬುದರ ಬಗ್ಗೆ ಗಮನಹರಿಸುವುದು ಅತ್ಯಗತ್ಯ.

ವಯಸ್ಸಾದಂತೆ ಮರೆಗುಳಿತನ ಜಾಸ್ತಿಯಾಗುವುದರಿಂದ ಈ ಮೇಲಿನ ಎಲ್ಲ ಅಂಶಗಳನ್ನು ಒಂದು ಕಡೆ ದಾಖಲು ಮಾಡುವುದು ಸೂಕ್ತ. ಅದಕ್ಕಾಗಿ ದಾಖಲೆ ಪುಸ್ತಕ (Record book) ವೊಂದರಲ್ಲಿ ಬರೆದಿಡುವುದು ಸಮಂಜಸವೆನಿಸುತ್ತದೆ.

ದಾಖಲೆ ಪುಸ್ತಕದಲ್ಲಿ ಏನೇನು ಬರೆದಿಡಬಹುದು?

- ಮುಖ್ಯವಾಗಿ ಹೂಡಿಕೆಯ ಎಲ್ಲ ವಿವರಗಳನ್ನು ಬರೆದಿಡಬಹುದು.
- ವಿಮಾಪಾಲಿಸಿ ಹೊಂದಿದ್ದರೆ ಅದರ ನಂ. ಅದು ಮುಕ್ತಾಯವಾಗುವ ದಿನ, ಪಾಲಿಸಿಯ ಮೊತ್ತ ನಾಮ ನಿರ್ದೇಶನ ಯಾರಿಗೆ ಮಾಡಿದೆ.
- ಹೂಡಿರುವ ಠೇವಣಿಗಳು : ಯಾವ ಸಂಸ್ಥೆಯಲ್ಲಿ ಹೂಡಿದೆ. ಠೇವಣಿಯ ಮೊತ್ತ, ಬಡ್ಡಿಯ ದರ, ಮುಕ್ತಾಯದ (Maturity) ದಿನಾಂಕ, ನಾಮ ನಿರ್ದೇಶಕರ ಹೆಸರು., ಜಂಟಿ ಠೇವಣಿದಾರರಿದ್ದರೆ ಅವರ ಹೆಸರು ಇತ್ಯಾದಿ.
- ಬ್ಯಾಂಕ್ ಲಾಕರ್ ಹೊಂದಿದ್ದರೆ ಅದರ ವಿವರಗಳು
- ಷೇರುಗಳು, ಮ್ಯೂಚುಯಲ್ ಫಂಡ್‌ಗಳಲ್ಲಿ ಹಣ ಹೂಡಿದ್ದರೆ ಅದರ ವಿವರಗಳು ಡಿ ಮ್ಯಾಟ್ ಆದ ನಂತರ ಕಾಲಕಾಲಕ್ಕೆ ಡಿ.ಪಿ. ಸೇವಾಸಂಸ್ಥೆಯವರು ಕಳುಹಿಸುವ ಹೂಡಿಕೆಯ ವಿವರಣಾ ಪತ್ರವೇ (Statement) ಒಂದು ದಾಖಲೆಯಾಗಿರುತ್ತದೆ. ಡಿಮ್ಯಾಟ್ ಖಾತೆಗೆ ಯಾರನ್ನು ನಾಮ ನಿರ್ದೇಶನ ಮಾಡಿದೆಯೆಂಬುದನ್ನು ನಮೂದಿಸಬಹುದು.

ಇವಿಷ್ಟೇ ಅಲ್ಲದೆ, ತನಗೆ ಸೂಕ್ತವೆನಿಸಿದ, ದಾಖಲು ಮಾಡಲು ಅರ್ಹವೆನಿಸಿದ ಯಾವುದೇ ಅಂಶವನ್ನಾದರೂ ಬರೆದಿಡಬಹುದು. ಒಟ್ಟಿನಲ್ಲಿ ಈ ಎಲ್ಲ ದಾಖಲೆಯ ಉದ್ದೇಶ- ತನ್ನ ಹೂಡಿಕೆಯ ಎಲ್ಲಾ ವಿವರಗಳು ಒಂದೆಡೆ ಲಭ್ಯವಿರುವುದು ಹಾಗೂ ತಕ್ಷಣದಲ್ಲಿ ಒಂದೇ ನೋಟದಲ್ಲಿ (at a glance) ಬೇಕಾದ ಮಾಹಿತಿ ಸಿಗುವಂತಿರುವುದು.

ಠೇವಣಿದಾರರು ಗಮನಿಸಬೇಕಾದ ಮತ್ತಷ್ಟು ಅಂಶಗಳು

- ಕಾಲಕಾಲಕ್ಕೆ ಕುಟುಂಬದಲ್ಲಿ ಏನಾದರೂ ಬದಲಾವಣೆಯಾದರೆ, ನಾಮ ನಿರ್ದೇಶನವನ್ನು ಬದಲಾಯಿಸಬೇಕಿದ್ದರೆ ಅದನ್ನು ಸಂಬಂಧಪಟ್ಟ ಸಂಸ್ಥೆಗೆ ತಿಳಿಸಬೇಕು.
- ವಾಸಸ್ಥಳದ ಬದಲಾವಣೆ ಆದರೆ ತಕ್ಷಣವೇ ಆ ಬದಲಾವಣೆಯನ್ನು ತಿಳಿಸಬೇಕು. ಠೇವಣಿಯ ಅವಧಿ ಮುಕ್ತಾಯಗೊಳಿಸುವ ಸಂದರ್ಭದಲ್ಲಿ ಠೇವಣಿದಾರನಿಗೆ ಸಂಸ್ಥೆಗಳು ಆ ವಿಷಯವನ್ನು ಮುಂಚಿತವಾಗಿ ತಿಳಿಸುವ ಪದ್ಧತಿ ಇದೆ. ಠೇವಣಿದಾರನು ತನ್ನ ವಾಸಸ್ಥಳದ ಬದಲಾವಣೆ ತಿಳಿಸದಿದ್ದರೆ, ಠೇವಣಿದಾರನನ್ನು ಸಂಪರ್ಕಿಸಲು ಸಾಧ್ಯವಾಗುವುದಿಲ್ಲ. ಠೇವಣಿದಾರನೂ, ಸರಿಯಾದ ದಾಖಲೆ ಹೊಂದದಿದ್ದರೆ ನಿಗದಿತ ದಿನದಂದು ಠೇವಣಿಯನ್ನು

ಮರುಪಡೆಯಲು ಕಷ್ಟವಾಗುತ್ತದೆ.

- ಬಡ್ಡಿಯನ್ನು ನೀಡುವಾಗ, ವಾರ್ಷಿಕ ಬಡ್ಡಿ 10,000ರೂಗಳಿಗಿಂತ ಹೆಚ್ಚಿಗೆ ನೀಡಿದರೆ, ಅಂತಹ ಸಂದರ್ಭದಲ್ಲಿ ಮೂಲದಲ್ಲಿ ಆದಾಯ ತೆರಿಗೆಯನ್ನು ಕಡಿತ ಗೊಳಿಸಲಾಗುತ್ತದೆ. (Tax Deducted at Source-TDS) ಇದರಿಂದ ವಿನಾಯತಿ ಪಡೆಯಬೇಕಾದರೆ ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ 15G / 15H ಫಾರಂನ್ನು ಸಲ್ಲಿಸಬೇಕಾಗುತ್ತದೆ. ಅಂತಹಸಮಯದಲ್ಲಿ ನೀಡುವ ಬಡ್ಡಿಯು 10,000 ರೂಗಳನ್ನು ಮೀರಿದ್ದರೂ ಸಹ ಮೂಲದಲ್ಲಿ ಆದಾಯ ತೆರಿಗೆಯನ್ನು ಕಡಿತಗೊಳಿಸದೆ ಪೂರಾ ಬಡ್ಡಿಯನ್ನು ನೀಡಲಾಗುತ್ತದೆ.
- ಬ್ಯಾಂಕ್ ವ್ಯವಹಾರವನ್ನು ಸುಲಭಗೊಳಿಸಲು ಸಾಧ್ಯವಾದಷ್ಟು ಸಹ ಮನೆಯ ಹತ್ತಿರವಿರುವ ಬ್ಯಾಂಕನ್ನು ವ್ಯವಹಾರಕ್ಕೆ ಇಟ್ಟುಕೊಳ್ಳುವುದು ಸೂಕ್ತ. ಕಾರಣ ವಯಸ್ಸಾದ ನಂತರ ದೂರದಲ್ಲಿದ್ದರೆ ಪ್ರಯಾಣ ಮಾಡಲು ಕಷ್ಟವಾಗುತ್ತದೆ.
- ಪದೇ ಪದೇ ಒತ್ತುಕೊಟ್ಟು ಹೇಳಿರುವಂತೆ ಎಲ್ಲಾ ಠೇವಣಿಗಳನ್ನು, ಸಾಧ್ಯವಾದಷ್ಟು ಮಟ್ಟಿಗೆ ಜಂಟೀ ಖಾತೆಯಲ್ಲಿಟ್ಟು, ನಾಮ ನಿರ್ದೇಶನವನ್ನು ಸಹ ಮಾಡಬೇಕು.
- ದೊಡ್ಡ ಮೊತ್ತದ ಠೇವಣಿ ಇಟ್ಟಾಗ ಒಂದೇ ಠೇವಣಿಯಲ್ಲಿ ಇಡದೆ ಅದನ್ನೇ ಭಾಗಭಾಗವಾಗಿ ಇಡುವುದು ಒಳ್ಳೆಯದು. ತುರ್ತು ಸಂದರ್ಭದಲ್ಲಿ ಮುಂಚಿತವಾಗಿಯೇ ಹಣದ ಅವಶ್ಯಕತೆ ಉದ್ಭವಿಸಿದಾಗ ಯಾವುದಾದರೊಂದು ಠೇವಣಿಯನ್ನು ಬಳಸಿಕೊಳ್ಳಬಹುದು.

ರಿಟೈರ್ ಆದ ತಕ್ಷಣ ಸುಮ್ಮನಾಗಬಾರದು
ಇನ್ನೊಂದು ಪ್ರವೃತ್ತಿ ಹಿಡಿಯಬೇಕು

*

ಪ್ರಶಾಂತವಾಗಿರುವ ಮನಸ್ಸೇ ಸ್ವರ್ಗ ವಿಚ್ಛಿದ್ರವಾಗಿರುವ ಮನಸ್ಸೇ ನರಕ

ECS ಮತ್ತು ಅದರ ಸೌಲಭ್ಯಗಳು



ನಮ್ಮ ಹೂಡಿಕೆಯ ಹಣದ ಮೇಲಿನ ಸಂದಾಯವಾಗುವ ಬಡ್ಡಿ, ಷೇರುಗಳ ಮೇಲೆ ಲಭ್ಯವಾಗುವ ಲಾಭಾಂಶ (Dividend) ನಿವೃತ್ತಿ ವೇತನ ಕಾಲಕಾಲಕ್ಕೆ ನಮಗೆ ಲಭ್ಯವಾಗುತ್ತವೆ. ಇವೆಲ್ಲವೂ ನಮಗೆ ಆದಾಯ ತರುವಂತಹುದಾದರೆ ಕೆಲವೊಂದು ಹಣಸಂದಾಯವನ್ನು (payment) ಸಹ ನಾವು ಮಾಡಬೇಕಾಗುತ್ತದೆ. ಉದಾಹರಣೆ ಟೆಲಿಫೋನ್ ಬಿಲ್, ನೀರಿನ ಬಿಲ್, ವಿದ್ಯುಚ್ಛಕ್ತಿ ಬಿಲ್ ಇತ್ಯಾದಿ.

ವಯಸ್ಸಿಗೆ ಸಹಜವಾದ ಅನಾರೋಗ್ಯ, ಮರೆಗುಳಿತನ, ಹೀಗೆ ಹಲವಾರು ಕಾರಣಗಳಿಂದ ಈ ಎಲ್ಲಾ ಹಣ ಸಂದಾಯವನ್ನೂ ನಿಗದಿತ ದಿನದಂದು (Due date) ಮಾಡಲು ಸಾಧ್ಯವಾಗದಿರಬಹುದು. ಅಂತಹ ಸಂದರ್ಭದಲ್ಲಿ ತಡಸಂದಾಯವಾದಾಗ (late payment) ಜುಲ್ಮಾನೆ (penalty) ಸಹಿತ ಪಾವತಿ ಮಾಡಬೇಕಾಗುತ್ತದೆ. ಅಲ್ಲದೆ ಕೆಲವೊಮ್ಮೆ ಸೇವಾಸಂಪರ್ಕಕ್ಕೆ ಸಂಚಕಾರವೂ ಬಂದೊಗಬಹುದು.

ಹಾಗಾಗಿ ಗ್ರಾಹಕರ ಹಿತದೃಷ್ಟಿಯನ್ನೇ ಗಮನದಲ್ಲಿಟ್ಟುಕೊಂಡು ರೂಪಿಸಿರುವ – Electronic Clearing Service ಅರ್ಥಾತ್ ವಿದ್ಯುನ್ಮಾನ ತೀರುವಳಿ ಸೇವೆಯನ್ನು ಪಡೆದು ಕೊಳ್ಳುವುದು ಸೂಕ್ತ.

ಈ ಸೌಲಭ್ಯದಡಿ ದೊರಕುವ ಅನುಕೂಲತೆಗಳು

ಗ್ರಾಹಕರ ಬ್ಯಾಂಕ್ ಖಾತೆಗೆ ಆಗುವ ಜಮಾ

- ಷೇರುಗಳು ಹಾಗೂ ಡಿಬೆಂಚರುಗಳ ಮೇಲಿನ ಲಾಭಾಂಶದ ನೇರಪಾವತಿ.
- ವೇತನದಾರರಿಗೆ ಸಂಬಳ ಹಾಗೂ ಪಿಂಚಣಿದಾರರಿಗೆ ಪಿಂಚಣಿ ಪಾವತಿ
- ಆದಾಯ ತೆರಿಗೆ ಇಲಾಖೆಯಿಂದ ನೀಡುವ ತೆರಿಗೆಯ ಮರುಪಾವತಿ
- ಇನ್ನಾವುದೇ ಸಂದರ್ಭದಲ್ಲಿ ನೀಡುವ ತೆರಿಗೆಯ ಹಣಸಂದಾಯ ಇವೇ ಮೊದಲಾದವುಗಳು ಬ್ಯಾಂಕ್ ಖಾತೆಗೆ ನೇರವಾಗಿ ನಿಗದಿತ ದಿನದಂದು ಜಮಾ ಆಗುತ್ತವೆ.

- ಈ ಎಲ್ಲಾ ನೇರ ಪಾವತಿಗಳ/ಸಂದಾಯಗಳ ಒಂದು ಪ್ರತಿಯನು ಖಾತೆದಾರರಿಗೆ, ಕಳುಹಿಸಲ್ಪಡುತ್ತವೆ. ಬ್ಯಾಂಕ್ ಪಾಸ್ ಬುಕ್‌ನೊಂದಿ ಅವುಗಳನ್ನು ಪರಿಶೀಲಿಸಿ ಸಂದಾಯವಾಗಿರುವುದನ್ನು ಖಾತ ಪಡಿಸಿಕೊಳ್ಳಬಹುದು.

ಗ್ರಾಹಕರ ಖಾತೆಯಿಂದ ಸಂದಾಯವಾಗುವ ಪಾವತಿ


- ದೂರವಾಣಿ, ಜಲಮಂಡಳಿ, ವಿದ್ಯುತ್ ಬಿಲ್‌ಗಳ ಪಾವತಿ.
- ಇನ್ಶೂರೆನ್ಸ್ ಪ್ರೀಮಿಯಂ
- ಆಸ್ತಿ ತೆರಿಗೆ ಮುಂತಾದ ಹಲವಾರು ಬಾಬ್ತುಗಳ ಪಾವತಿ

ECS ನಿಂದ ದೊರಕುವ ಅನುಕೂಲಗಳು

- ನಿಗದಿತ ದಿನಾಂಕದಂದು ಹಣ ಸಂದಾಯ / ಪಾವತಿ
- ಚೆಕ್‌ಗಳು ಡಿವಿಡೆಂಡ್ ವಾರೆಂಟ್‌ಗಳು ಬೇರೆಯವರಿಗೆ ತಲುಪಿ ದುರುಪಯೋಗವಾಗದಿರುವುದು.
- ಕಂಪನಿಗಳೊಂದಿಗೆ ಅನಗತ್ಯ ಪತ್ರವ್ಯವಹಾರದ ನಿವಾರಣೆ.
- ಹಣ ಪಾವತಿಗಾಗಿ ಬ್ಯಾಂಕುಗಳಿಗೆ/ಸೇವಾ ಸಂಸ್ಥೆಗಳಿಗೆ ಅಲೆದಾಡುವುದು / ಪ್ರಯಾಣ ಮಾಡುವುದು, ಪ್ರಯಾಣದ ಖರ್ಚು, ಕ್ಯೂನಲ್ಲಿ ನಿಲ್ಲುವುದು ಈ ಎಲ್ಲವುಗಳಿಂದ ಮುಕ್ತಿ
- ವಿಳಂಬದ ಪಾವತಿಗಾಗಿ ಟೆಲಿಫೋನ್, ವಿದ್ಯುತ್, ಜಲಮಂಡಲಿಗಳಿಂದ ಸಂಪರ್ಕದ ಕಡಿತದ ಬೆದರಿಕೆ /ಅಥವಾ ಜುಲ್ಮಾನೆಯ ಅಧಿಕ ಖರ್ಚು- ಇವುಗಳ ನಿವಾರಣೆ ಇತ್ಯಾದಿ.

ಇಷ್ಟೆಲ್ಲ ಅನುಕೂಲಗಳು ECS ವ್ಯವಸ್ಥೆಯಲ್ಲಿ ಅಡಕವಾಗಿರುವಾಗ ಪ್ರತಿಯೊಬ್ಬರೂ –ಅದರಲ್ಲೂ ಪ್ರಮುಖವಾಗಿ ನಿವೃತ್ತರು, ವಯಸ್ಸಾದವರು, ಅಶಕ್ತರು – ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವುದು ಅತ್ಯಂತ ವಿಹಿತವಾದುದೆಂದು ಹೇಳಬಹುದು.

ಆದಾಯ ತೆರಿಗೆ Income Tax



ಹಣ ಸಂಪಾದನೆಯ ಬಗ್ಗೆ ಯೋಚನೆ ಒಂದಾದರೆ, ಹಣಗಳಿಸಿದ ನಂತರ ಆದಾಯ ತೆರಿಗೆ ಪಾವತಿಯ ಬಗೆಗಿನ ಸಮಸ್ಯೆ ಆರಂಭವಾಗುತ್ತದೆ. ಸಂಬಳದಾರರಾದರೆ ಹೊಸ ಆರ್ಥಿಕ ವರ್ಷ ಆರಂಭವಾಗುತ್ತಿದ್ದಂತೆ ಹಿಂದಿನ ವರ್ಷದ ಆದಾಯದ ಮೇಲೆ ಸರ್ಕಾರಕ್ಕೆ ಪಾವತಿಸಬೇಕಾದ ಆದಾಯ ತೆರಿಗೆಯ ಬಗ್ಗೆ ತಲೆಕೆಡಿಸಿ ಕೊಳ್ಳಬೇಕಾಗುತ್ತದೆ.

ಉದ್ಯೋಗದಲ್ಲಿರುವವರಾದರೆ ಆಯಾ ವರ್ಷ ಅವರು ಗಳಿಸಿದ ವಾರ್ಷಿಕ ಸಂಬಳದ ಆದಾಯದ ಮೇಲೆ, ಅನ್ವಯವಾಗುವ ದರದಲ್ಲಿ, ತೆರಿಗೆ ನೀಡಬೇಕಾಗುತ್ತದೆ. ನಿವೃತ್ತರಾದವರಾದರೆ, ಅವರು ಗಳಿಸಿದ ವಾರ್ಷಿಕ ಬಡ್ಡಿಯ ಆದಾಯ, ನಿವೃತ್ತಿವೇತನ ಹಾಗೂ ಇನ್ನಿತರ ಆದಾಯದ ಆಧಾರದ ಮೇಲೆ ವರಮಾನ ತೆರಿಗೆಯನ್ನು ನೀಡಬೇಕಾಗುತ್ತದೆ.

ನಾವು ಕಷ್ಟಪಟ್ಟು ದುಡಿದ ಹಣಕ್ಕೆ, ನಾವು ಯಾಕೆ ತೆರಿಗೆ ಕಟ್ಟಬೇಕು? ಎನ್ನುವುದು ಕೆಲವರ ಪ್ರಶ್ನೆಯಾದರೆ, ಇನ್ನು ಕೆಲವರಿಗೆ ತಾವು ಗಳಿಸಿದ ಆದಾಯದಲ್ಲಿ ಒಂದಿಷ್ಟನ್ನು ತೆರಿಗೆಯ ರೂಪದಲ್ಲಿ ಸರ್ಕಾರಕ್ಕೆ ನೀಡಿದ ಮೇಲೆ ತಮ್ಮ ಗಳಿಕೆಯ ಹಣ ಕುಂಠಿತವಾಗುತ್ತದಲ್ಲಾ ಎಂಬ ಅಸಮಾಧಾನ, ಬೇಸರ ಉಂಟಾಗುತ್ತದೆ.

ಆದರೆ ಒಂದಲ್ಲಾ ಒಂದು ರೂಪದಲ್ಲಿ ಹಲವಾರು ರೀತಿಯ ತೆರಿಗೆಗಳನ್ನು ನಾವು ಸರ್ಕಾರಕ್ಕೆ ನೀಡುತ್ತಲೇ ಇದ್ದೇವೆ. ಹಾಗೆ ತೆರಿಗೆ ನೀಡಬೇಕಾದ್ದು ಕಾನೂನಿನ ಪ್ರಕಾರ ಕಡ್ಡಾಯ. ಅಲ್ಲದೆ ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕನ ಕರ್ತವ್ಯವೂ ಹೌದು. ಹಾಗಾಗಿ ಯಾರೇ ಆಗಲಿ ತಾವು ಪಡೆಯುವ ವಾರ್ಷಿಕ ಆದಾಯದ ಸ್ವಲ್ಪಭಾಗವನ್ನು ಆದಾಯ ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಕಟ್ಟಲೇ ಬೇಕಾಗುತ್ತದೆ.

ಇಲ್ಲಿ ಒಂದು ಪ್ರಶ್ನೆ ಅಥವಾ ಅನುಮಾನ ಪ್ರತಿಯೊಬ್ಬರಲ್ಲಿಯೂ ಸಾಮಾನ್ಯವಾಗಿ ಉದ್ಭವಿಸುತ್ತದೆ. ಅದೇಂದರೆ ವಾರ್ಷಿಕ ವರಮಾನದ ಪೂರಾ ಹಣದ ಮೇಲೆ ತೆರಿಗೆಯನ್ನು ಕೊಡಬೇಕೇ? ಎಂಬುದು.

ಕೂಲಂಕುಷವಾಗಿ ಪರಿಶೀಲಿಸಿದರೆ ಸಂಪಾದಿಸುವ ಸಂಪೂರ್ಣ ವರಮಾನದ ಹಣಕ್ಕೆ ತೆರಿಗೆಯನ್ನು ನೀಡಬೇಕೆಂದು ಸರ್ಕಾರವು ನಿರೀಕ್ಷಿಸುವುದಿಲ್ಲ.

ವರಮಾನದ ಗಳಿಕೆಯು ಒಂದು ಪರಿಮಿತಿಯನ್ನು ದಾಟಿದಾಗ ಮಾತ್ರ ತೆರಿಗೆಯನ್ನು ಕಟ್ಟಬೇಕಾಗುತ್ತದೆ. ಹಾಗೆ ಕಟ್ಟುವ ವರಮಾನ ತೆರಿಗೆಯ ಉಳಿತಾಯಕ್ಕೆ ಸಹ ಸರ್ಕಾರವೇ ಹಲವಾರು ಯೋಜನೆಗಳನ್ನು ರೂಪಿಸಿದೆ. ಯೋಜನೆಗಳನ್ನು ಹಾಗೂ ಲಭ್ಯವಿರುವ ಇತರೇ ಅವಕಾಶವನ್ನು ವ್ಯವಸ್ಥಿತ ಕ್ರಮದಲ್ಲಿ ಬಳಸಿಕೊಂಡರೆ ನ್ಯಾಯಯುತವಾಗಿ, ಕಾನೂನುಬದ್ಧವಾಗಿ ತೆರಿಗೆಯ ಹೊರೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಹೀಗೆ ವ್ಯವಸ್ಥಿತ ಕ್ರಮದಲ್ಲಿ TAX PLANNING ಅಂದರೆ ತೆರಿಗೆ ಉಳಿತಾಯ ಯೋಜನೆಯನ್ನು ರೂಪಿಸಿಕೊಂಡಾಗ ತೆರಿಗೆಯ ಹೊರೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಹಾಗೂ ಮಾನಸಿಕ ನೆಮ್ಮದಿಗೂ ಭಂಗವಿರುವುದಿಲ್ಲ.

ಆದರೆ ಇದಕ್ಕೆ ಬೇಕಾದ್ದು ಸಾಕಷ್ಟು ಮುಂದಾಲೋಚನೆ ಹಾಗೂ ಮುನ್ನೇರ್ಪಾಡುಗಳು. ಕ್ರಮಬದ್ಧವಾದ ಉಳಿತಾಯ ಯೋಜನೆಯಿಂದ, ಕಾನೂನುಬದ್ಧವಾಗಿ ಲಭ್ಯವಿರುವ ಈ ಎಲ್ಲಾ ಅವಕಾಶಗಳನ್ನೂ, ಸಂಪೂರ್ಣವಾಗಿ ಬಳಸಿಕೊಂಡು ತೆರಿಗೆಯ ಹೊರೆಯನ್ನು ಎಷ್ಟು ಸಾಧ್ಯವೋ ಅಷ್ಟನ್ನು ಕಡಿಮೆ ಮಾಡಿಕೊಳ್ಳಬಹುದು ನಂತರದಲ್ಲಿ ಅವಶ್ಯಕವಾಗಿ ಹಾಗೂ ಅಗತ್ಯವಾಗಿ, ಕಟ್ಟಲೇ ಬೇಕಾದ ತೆರಿಗೆಯನ್ನು ಕಟ್ಟಬಹುದು.

ತೆರಿಗೆಗೆ ಒಳಗಾಗುವ ಆದಾಯದ ಮೂಲ

ತೆರಿಗೆಗೆ ಒಳಪಡುವ ಆದಾಯವನ್ನು ಪ್ರಮುಖವಾಗಿ ಈ ರೀತಿ ವರ್ಗೀಕರಿಸಬಹುದು.

1. ಸಂಬಳದಿಂದ ಅಥವಾ ನಿವೃತ್ತಿ ವೇತನದಿಂದ ಬರುವ ಆದಾಯ.

2.ಹೂಡಿಕೆಯ ಮೇಲೆ ಸಂದಾಯವಾದ ಬಡ್ಡಿಯ ಆದಾಯ.

3. ಮನೆ ಬಾಡಿಗೆಯಿಂದ ಬರಬಹುದಾದ ಆದಾಯ.

4. ಹೂಡಿಕೆಯ ಮೇಲಿನ ಮಾರಾಟದಿಂದ ಗಳಿಸಬಹುದಾದ ಲಾಭದ ಆದಾಯ (capital gain) ಇತ್ಯಾದಿ

ಯಾವುದೇ ಒಬ್ಬ ವ್ಯಕ್ತಿಗೆ ಮೇಲೆ ತಿಳಿಸಿದ ಎಲ್ಲಾ ಬಾಬತ್ತಿನಿಂದ ಅಥವಾ ಯಾವುದಾದರೂ ಒಂದು ಅಥವಾ ಎರಡು ಬಾಬತ್ತಿನಿಂದ ಆದಾಯ ಬರಬಹುದು.

(ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ವರಮಾನದ

ಬಾಬತ್ತುಗಳನ್ನು ಪರಿಗಣಿಸುವಾಗ ಆದಾಯ ತೆರಿಗೆಯ ಕಾಯ್ದೆಯಂತೆ ಲಭ್ಯವಾಗುವ ಎಲ್ಲ ರಿಯಾಯತಿಗಳನ್ನೂ ಹಾಗೂ ಕಡಿತಗಳನ್ನು (Deductions) ಪರಿಗಣನೆಗೆ ತೆಗೆದುಕೊಳ್ಳಬೇಕಾದ ಮೊತ್ತವೆಂಬುದನ್ನು ಗ್ರಹಿಸಬೇಕು.

ಹೀಗೆ ಪರಿಗಣಿತವಾದ ಮೊತ್ತವು ತೆರಿಗೆಯ ಪರಿಮಿತಿಗಿಂತ ಜಾಸ್ತಿ ಇದ್ದರೆ, ಅಂತಹ ಜಾಸ್ತಿಯಾದ ಮೊತ್ತಕ್ಕೆ ಮಾತ್ರ ತೆರಿಗೆಯ ಹೊರೆ ಬೀಳುತ್ತದೆ.

ಆರ್ಥಿಕ ವರ್ಷ 2012-13 ವರಮಾನ ತೆರಿಗೆ	
ಆದಾಯ	ತೆರಿಗೆ
2,00,000	ಇಲ್ಲ
2,00,001-5,00,000	10%
5,00,001-10,00,000	20% + 30,000
10,00,001-ಮೇಲ್ಪಟ್ಟು	30% + 1,30,000
ಅರವತ್ತು ವರ್ಷಕ್ಕೆ ಮೇಲ್ಪಟ್ಟ ಹಿರಿಯರಿಗೆ	
2,50,000	ಇಲ್ಲ
2,50,001-5,00,000	10%
5,00,001-10,00,000	20% + 25,000
10,00,001 - ಮೇಲ್ಪಟ್ಟು	30% + 125,000
ಎಂಬತ್ತುವರ್ಷಕ್ಕೆ ಮೇಲ್ಪಟ್ಟ ಹಿರಿಯರಿಗೆ	
5,00,000	ಇಲ್ಲ
5,00,001-10,00,000	20%
10,00,001 -ಮೇಲ್ಪಟ್ಟು	30% + 1,00,000

ತೆರಿಗೆಯೊಂದಿಗೆ ಶೇ. 3 ಸೆಸ್ ಪಾವತಿ ಮಾಡಬೇಕು

2012-13 ಆರ್ಥಿಕ ವರ್ಷ			
ನೀವು ಕಟ್ಟಬೇಕಾದ ತೆರಿಗೆ 60 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪುರುಷರು ಮತ್ತು ಮಹಿಳೆಯರು			
ತೆರಿಗೆಗೊಳಪಡುವ ಆದಾಯ	ತೆರಿಗೆ	ಸೆಸ್ 3%	ಒಟ್ಟು ತೆರಿಗೆ
2,00,000	–	–	–
2,50,000	5,000	150	5,150
3,00,000	10,000	300	10,300
4,00,000	20,000	600	20,600
5,00,000	30,000	900	30,900
6,00,000	50,000	1,500	51,500
8,00,000	90,000	2,700	92,700
9,00,000	1,10,000	3,300	1,13,300
10,00,000	1,30,000	3,900	1,33,900
11,00,000	1,60,000	4,800	1,64,800
12,00,000	1,90,000	5,700	1,95,700
15,00,000	2,80,000	8,400	2,88,400
60 ವರ್ಷಕ್ಕಿಂತ ಮೇಲ್ಪಟ್ಟವರು			
ತೆರೆಗೆಗೊಳಪಡುವ ಆದಾಯ	ತೆರಿಗೆ	ಸೆಸ್3%	ಒಟ್ಟು ತೆರಿಗೆ
2,50,000	–	–	–
3,00,000	5,000	150	5,150
4,00,000	15,000	450	15,450
5,00,000	25,000	750	25,750
6,00,000	45,000	1,350	46,350
8,00,000	85,000	2,550	87,550
9,00,000	1,05,000	3,150	1,08,150

10,00,000	1,25,000	3,750	1,28,750
11,00,000	1,55,000	4650	1,59,650
12,00,000	1,85,000	5,550	1,90,550
15,00,000	2,75,000	8,250	2,83,250
80 ವರ್ಷಗಳಿಗೆ ಮೇಲ್ಪಟ್ಟವರು			
5,00,000	–	–	
6,00,000	20000	600	20,600
8,00,000	60000	1800	61,800
9,00,000	80000	2400	82,400
10,00,000	100,000	3000	1,03,000
12,00,000	160,000	4800	1,64,800
15,00,000	250,000	7500	2,57,500

ಈ ಮೇಲಿನ ಪಟ್ಟಿಯಂತೆ ಪುರುಷರು ಹಾಗೂ ಮಹಿಳೆಯರಿಗೆ 2,00,000 ರೂ.ಗಳವರೆಗೆ ಮತ್ತು 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ 2,50,000ರೂ.ಗಳವರೆಗೆ ಹಾಗೂ 80 ವರ್ಷ ದಾಟಿದ ಅತಿ ಹಿರಿಯ ನಾಗರಿಕರಿಗೆ ಐದು ಲಕ್ಷರೂಗಳವರೆಗಿನ ಆದಾಯದ ಪರಿಮಿತಿಗಿಂತ ಹೆಚ್ಚಿನ ಆದಾಯವಿದ್ದರೆ ಮಾತ್ರ ತೆರಿಗೆಯನ್ನು ಕಟ್ಟ ಬೇಕಾಗುತ್ತದೆ. ಅಲ್ಲದೆ ತೆರಿಗೆಯ ಮೇಲೆ ಶೇಕಡ 3 ರಷ್ಟು ವಿದ್ಯಾಭ್ಯಾಸದ ತೆರಿಗೆಯನ್ನು (education cess)ನೀಡಬೇಕಾಗುತ್ತದೆ.

ಅಂದರೆ ಈ ಪರಿಮಿತಿಗಿಂತ ಜಾಸ್ತಿ ಬಂದ ಆದಾಯಕ್ಕೆಲ್ಲಾ ತೆರಿಗೆಯನ್ನು ಕಟ್ಟಬೇಕೆ? ಎಂಬ ಪ್ರಶ್ನೆ ಉಧ್ಭವಿಸುವುದು ಸಹಜ.

ಆದರೆ, ವರಮಾನ ತೆರಿಗೆ ಕಾಯಿದೆ ಅಡಿಯಲ್ಲಿ, ಸರ್ಕಾರವೇ ನೀಡಿರುವ ಹಲವಾರು ವಿನಾಯಿತಿಯ ಅವಕಾಶಗಳನ್ನು ಉಪಯೋಗಿಸಿಕೊಂಡು ತೆರಿಗೆಯ ಹೊರೆಯನ್ನು ನ್ಯಾಯಬದ್ಧವಾಗಿ ಕಡಿಮೆ ಮಾಡಿಕೊಳ್ಳಬಹುದು.

ತೆರಿಗೆಯ ವಿನಾಯಿತಿಗಾಗಿ ಲಭ್ಯವಿರುವ ಹಲವಾರು ಅವಕಾಶಗಳು

(ಆದಾಯ ತೆರಿಗೆ ಕಾನೂನಿನ ಸೆಕ್ಷನ್ ೮೦c)

1. ಕಾರ್ಮಿಕ ಭವಿಷ್ಯ ನಿಧಿ Employees' Provident Fund :

ಕಾರ್ಮಿಕ ಭವಿಷ್ಯ ನಿಧಿಯು ಅನ್ವಯಿಸುವ ಉದ್ಯೋಗಸ್ಥರಿಗೆ, ಕಾರ್ಮಿಕ ಭವಿಷ್ಯ ನಿಧಿಯ ಅಧಿ ನಿಯಮದಂತೆ ಅವರ ಸಂಬಳದಲ್ಲಿ ಕಡಿತವಾಗುವ ಭವಿಷ್ಯನಿಧಿಯ ವಂತಿಗೆಗೆ ಹಾಗೂ ಅದರ ಮೇಲೆ ಸಂದಾಯವಾಗುವ ಬಡ್ಡಿಗೆ ಆದಾಯ ತೆರಿಗೆಯಿಂದ ವಿನಾಯತಿ ನೀಡಲಾಗುತ್ತದೆ. ಇಷ್ಟೇ ಅಲ್ಲದೆ ಉದ್ಯೋಗಿಯು ತನ್ನ ಸ್ವಂತ ಇಚ್ಛೆಯಿಂದ ಹೆಚ್ಚಿನ ವಂತಿಗೆಯನ್ನು ಸಂಬಳದಲ್ಲಿ ಕಡಿತಗೊಳಸಿ. ಭವಿಷ್ಯ ನಿಧಿಗೆ ವರ್ಗಾಯಿಸಬಹುದು. ಹೀಗೆ ಕಡಿತ ಗೊಳಸಿದ ಐಚ್ಛಿಕವಂತಿಗೆ ಹಾಗೂ ಅದರ ಮೇಲೆ ಸಂದಾಯವಾಗುವ ಬಡ್ಡಿಗೂ ಸಹ ಆದಾಯತೆರಿಗೆಯಿಂದ ವಿನಾಯಿತಿಯ ಸೌಲಭ್ಯ ನೀಡಲಾಗುವುದು.

ಪ್ರಸ್ತುತ ಭವಿಷ್ಯ ನಿಧಿಗೆ ವಂತಿಗೆಯ ಮೇಲೆ ನೀಡಲಾಗುತ್ತಿರುವ ಬಡ್ಡಿಯ ದರ ವಾರ್ಷಿಕ ಶೇ. ೮ ಇದೆ.

ಉದ್ಯೋಗದಲ್ಲಿರುವವರು ಪ್ರತಿ ತಿಂಗಳ ತಮ್ಮ ಸಂಬಳದಲ್ಲಿ ಒಂದಿಷ್ಟು ಮೊತ್ತವನ್ನು ಅಧಿಕವಾಗಿ ಭವಿಷ್ಯ ನಿಧಿಗೆ ವರ್ಗಾಯಿಸುವುದರಿಂದ ತೆರಿಗೆಯ ಹೊರೆಯನ್ನು ಕಡಿಮೆಮಾಡಿಕೊಳ್ಳುವುದೇ ಅಲ್ಲದೆ ತಮ್ಮ ಭವಿಷ್ಯದ ಜೀವನಕ್ಕೂ ಅನುಕೂಲ ಮಾಡಿಕೊಂಡಂತಾಗುತ್ತದೆ. ಸಂಬಳದಲ್ಲಿಯೇ ವಂತಿಗೆಯನ್ನು ಕಡಿತಗೊಳಸುವುದರಿಂದ ಕಡಿತದ ಭಾರ ಒಂದು ಹೊರೆ ಎನಿಸುವುದಿಲ್ಲ.

2. ಸಾರ್ವಜನಿಕ ಭವಿಷ್ಯ ನಿಧಿ Public Provident Fund :

ಅಂಚೆ ಕಛೇರಿಯಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕಿನ ಶಾಖೆಗಳಲ್ಲಿ ಸಾರ್ವಜನಿಕ ಭವಿಷ್ಯ ನಿಧಿಯ ಖಾತೆಯನ್ನು ತೆಗೆಯಬಹುದು. ಒಂದು ವರ್ಷದಲ್ಲಿ ಕನಿಷ್ಠ ೫೦೦ ರೂ.ಗಳನ್ನು ಹಾಗೂ ಗರಿಷ್ಠ ೭೦,೦೦೦ ರೂ. ಗಳನ್ನುಈ ಖಾತೆಗೆ ಜಮಾ ಮಾಡಬಹುದು. ಒಂದು ವರ್ಷಕ್ಕೆ ಗರಿಷ್ಠ 12 ಸಲ ಮಾತ್ರ ವಂತಿಗೆಯನ್ನು ಜಮಾ ಮಾಡಲು ಅವಕಾಶವಿದೆ. ಮತ್ತು ಒಂದು ವರ್ಷದಲ್ಲಿ ಕೊನೆಯ ಪಕ್ಷ ೫೦೦ ರೂ.ಗಳಸ್ನಾದರೂ ಕಡ್ಡಾಯವಾಗಿ ಜಮಾ ಮಾಡಲೇಬೇಕಾಗುತ್ತದೆ. ಹಾಗೆ ಮಾಡದಿದ್ದಲ್ಲಿ. ಅಂತಹ ಖಾತೆಯನ್ನು ಅಂತ್ಯಗೊಳಸಲಾಗುತ್ತದೆ. ಕೇಂದ್ರಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ದರದಂತೆ ಪ್ರತಿವರ್ಷವೂ ಬಡ್ಡಿಯನ್ನು ಖಾತೆಗೆ ಜಮಾ ಮಾಡಲಾಗುವುದು. (ಪ್ರಸ್ತುತ ಈ ಬಡ್ಡಿಯ ದರವು ಶೇ. ೮.೮ ಇದೆ) ಹೀಗೆ ಸಂದಾಯವಾಗುವ ವಂತಿಗೆ ಹಾಗೂ ಅದರ ಮೇಲಿನ ಬಡ್ಡಿಗೆ ಆದಾಯತೆರಿಗೆಯಿಂದ ಸಂಪೂರ್ಣ ವಿನಾಯತಿ ಇದೆ.

ಸ್ವಂತ ಉದ್ಯೋಗ ಮಾಡುವವರಿಗೆ, ವ್ಯಾಪಾರಿಗಳು, ವೈದ್ಯರು, ವಕೀಲರು, ಬರಹಗಾರರು, ಹೀಗೆ ಸ್ವಂತ ಸಂಪಾದನೆಯ ಮೇಲೆ ಅವಲಂಬಿತವಾಗಿರುವವರಿಗೆ ಈ ಸಾರ್ವಜನಿಕ ಭವಿಷ್ಯನಿಧಿಯಲ್ಲಿ ಉಳಿತಾಯ ಮಾಡುವುದು ಹೇಳಿ ಮಾಡಿಸಿದಂತಿದೆ. ಈ ಯೋಜನೆಯು ತೆರಿಗೆ ಉಳಿತಾಯ ಮಾಡುವುದಕ್ಕೇ ಅಲ್ಲದೆ, ತಮ್ಮ ನಿವೃತ್ತಿಯ ಬದುಕಿನ ಜೀವನಕ್ಕೆ ಅತ್ಯಂತ ಸೂಕ್ತವಾದ ಸುಭದ್ರದ ಉಳಿತಾಯದ ಮಾರ್ಗವಾಗಿದೆ.

ಈ ಯೋಜನೆಯ ಮತ್ತೊಂದು ವೈಶಿಷ್ಟ್ಯವೆಂದರೆ ಈ ಖಾತೆಯಲ್ಲಿರುವ ಹಣವನ್ನು ಯಾವುದೇ ನ್ಯಾಯಾಲಯವು ಅಟ್ಯಾಚ್‌ಮೆಂಟ್‌ಗೆ ಗುರಿಪಡಿಸಲು ಆಗುವುದಿಲ್ಲ.

3. ಜೀವವಿಮಾ ಪಾಲಿಸಿ Life Insurance

ಹಲವಾರು ರೀತಿಯ ಜೀವವಿಮೆಯ ಪಾಲಿಸಿಗಳು ಚಾಲ್ತಿಯಲ್ಲಿವೆ. ಜೀವವಿಮೆಯ ಪ್ರಮುಖ ಉದ್ದೇಶವು ರಿಸ್ಕ್ ಕವರ್ ಆಗಿರುತ್ತದೆ. ಜೀವ ವಿಮಾ ಪಾಲಿಸಿಯನ್ನು ಹೊಂದಿರುವುದರಿಂದ ಸಣ್ಣ ಪ್ರಮಾಣದಲ್ಲಿ ಉಳಿತಾಯ ಮಾಡುವುದರೊಂದಿಗೆ ಜೀವನದ ರಿಸ್ಕ್ ಕವರ್ ಸಹ ಆಗಿರುತ್ತದೆ. ಪ್ರತಿಯೊಬ್ಬರ ಜೀವನವೂ ಅತ್ಯಮೂಲ್ಯವಾದುದು. ಅದಕ್ಕೆ ಬೆಲೆ ಕಟ್ಟಲಾಗುವುದಿಲ್ಲ. ದುರುದೃಷ್ಟವಶಾತ್ ಅಕಾಲಿಕ ಮರಣವಾದರೆ ಕುಟುಂಬದವರಿಗೆ/ ನಾಮನಿರ್ದೇಶನ ಮಾಡಿದವರಿಗೆ ವಿಮೆಯ ಹಣ ದೊರೆತು ಅವರ ಜೀವನಕ್ಕೆ ಅನುಕೂಲವಾಗುತ್ತದೆ.

ವಿಮಾ ಪಾಲಿಸಿಗೆ ಕಟ್ಟುವ ಪ್ರೀಮಿಯಂ ಹಣಕ್ಕೆ ಆದಾಯ ತೆರಿಗೆಯಿಂದ ವಿನಾಯತಿ ಸಿಗುತ್ತದೆ. ಪಾಲಿಸಿಯ ಅವಧಿ ಮುಗಿದ ನಂತರ ಒಟ್ಟಿಗೆ ಇಡುಗಂಟು ಮತ್ತು ಬೋನಸ್ ಸಿಗುತ್ತದೆ. ಈ ಬೋನಸ್‌ಗೆ ಸಹ ಆದಾಯತೆರಿಗೆ ಇರುವುದಿಲ್ಲ.

ವಿಮೆ ಯೋಜನೆಯಲ್ಲಿ ಉಳಿತಾಯ, ಜೀವನದ ಸುಭದ್ರತೆ ಹಾಗೂ ಆದಾಯ ತೆರಿಗೆಯ ವಿನಾಯತಿ – ಈ ಮೂರೂ ಸೌಲಭ್ಯಗಳು ಅಡಕವಾಗಿವೆ.

4. ರಾಷ್ಟ್ರೀಯ ಉಳಿತಾಯ ಪತ್ರ National Savings certificate

ಈ ಉಳಿತಾಯ ಪತ್ರಗಳು ಐದು/ಹತ್ತು ವರ್ಷಗಳ ಅವಧಿಯ ದಾಗಿರುತ್ತದೆ. ಠೇವಣಿಯ ಅವಧಿ ಮುಗಿದ ನಂತರ ಬಡ್ಡಿಯ ಸಮೇತ ಹಣವನ್ನು ಹಿಂತಿರುಗಿಸಲಾಗುತ್ತದೆ. ಪ್ರಸ್ತುತ ಬಡ್ಡಿಯ ದರವು 5 ವರ್ಷಗಳ ಅವಧಿಗೆ ಶೇ. 8.6 ಮತ್ತು 10 ವರ್ಷಗಳ ಅವಧಿಗೆ ಶೇ.8.9.

ಈ ಉಳಿತಾಯ ಪತ್ರಗಳು 100 ರೂ. 500ರೂ. 1000ರೂ. 5000ರೂ. ಹಾಗೂ 10,000ರೂ.ಗಳ ಗಣಕದಲ್ಲಿ ಸಿಗುತ್ತದೆ.

5. ಅಂಚೆ ಕಛೇರಿಯ ನಿಗದಿತ ಠೇವಣಿ Post office Time Deposit

ಇದು ಅಂಚೆಕಛೇರಿಯಲ್ಲಿ ಕೊಡಬಹುದಾದ ನಿಗದಿತ ಠೇವಣಿ (Fixed Deposit) ಈ ಠೇವಣಿಯನ್ನು 1 ವರ್ಷ, 2 ವರ್ಷ, 3ವರ್ಷ ಹಾಗೂ 5 ವರ್ಷಗಳ ಅವಧಿಗೆ ಮಾಡಬಹುದಾದರೂ 5 ವರ್ಷಗಳ ಠೇವಣಿಗೆ ಲಭ್ಯವಿರುವ ಪ್ರಸ್ತುತ ಬಡ್ಡಿಯ ದರ ಶೇ. 8.5 ಈ ಬಡ್ಡಿಯನ್ನು ಮೂರು ತಿಂಗಳಿಗೊಮ್ಮೆ ಲೆಕ್ಕ ಹಾಕಿ ವಾರ್ಷಿಕವಾಗಿ ಪಾವತಿ ಮಾಡಲಾಗುವುದು. ಪಾವತಿ ಮಾಡುವ ಬಡ್ಡಿಗೆ ಆದಾಯ ತೆರಿಗೆಗೆ ಒಳಪಡುತ್ತದೆ.

ಈ ಯೋಜನೆಯಲ್ಲಿ ಕನಿಷ್ಠ ಮಾಡಬಹುದಾದ ಠೇವಣಿಯ ಮೊತ್ತ 200 ರೂ.ಗಳು.

6. ಬ್ಯಾಂಕುಗಳಲ್ಲಿ ಠೇವಣಿ Fixed Deposit in Banks

ಯಾವುದೇ ಷೆಡ್ಯೂಲ್ ಬ್ಯಾಂಕಿನಲ್ಲಿ ಐದು ವರ್ಷದ ಅವಧಿಗೆ ಇಡುವ ಠೇವಣಿಯ ಮೊತ್ತಕ್ಕೆ ಆದಾಯ ತೆರಿಗೆಯ ವಿನಾಯತಿ ಸಿಗುತ್ತದೆ. ಆದರೆ ಒಂದು ನಿಬಂಧನೆಯೆಂದರೆ ಅವಧಿಯ ಮುಂಚೆ, ಈ ಠೇವಣಿಯನ್ನು ಹಿಂದಕ್ಕೆ ಪಡೆಯುವುದಕ್ಕೆ ಸಾಧ್ಯವಿಲ್ಲ. ಅಂದರೆ ಬ್ಯಾಂಕ್ ಠೇವಣಿಗಳಲ್ಲಿ ಇರುವ Liquidity ದ್ರವತೆಯ ಸೌಲಭ್ಯ. ಈ ಠೇವಣಿಗೆ ಲಭ್ಯವಿರುವುದಿಲ್ಲ.

ಠೇವಣಿ ಮಾಡುವಾಗ ನಿಗದಿಪಡಿಸಿರುವ ಬಡ್ಡಿ ದರವನ್ನು ನೀಡಲಾಗುತ್ತದೆ. ಮತ್ತು ಠೇವಣಿಯ ಅವಧಿ ಪೂರ ಈ ದರವನ್ನೇ ನೀಡಲಾಗುತ್ತದೆ. ಬಡ್ಡಿಯನ್ನು ಮೂರು ತಿಂಗಳಿಗೊಮ್ಮೆ ನೀಡಲಾಗುತ್ತದೆ. ಸಂದಾಯವಾಗುವ ಬಡ್ಡಿಗೆ ತೆರಿಗೆಯ ವಿನಾಯತಿ ಇರುವುದಿಲ್ಲ.

7. ಹಿರಿಯ ನಾಗರಿಕರ ಉಳಿತಾಯ ಯೋಜನೆ – 2004

Senior Citizen Savings Scheme -2004

ಅರವತ್ತು ವರ್ಷಗಳನ್ನು ಪೂರೈಸಿರುವ ಯಾರು ಬೇಕಾದರೂ ಈ ಯೋಜನೆಯಲ್ಲಿ ಹಣವನ್ನು ತೊಡಗಿಸಬಹುದು. ಈ ಯೋಜನೆಯು 2004ರಲ್ಲಿ ಜಾರಿಗೆ ಬಂದಿದ್ದು ಹಿರಿಯ ನಾಗರಿಕರು ತಮ್ಮ ಹಣವನ್ನು ಸುರಕ್ಷಿತವಾಗಿಟ್ಟು

ಅದರಿಂದ ಬರುವ ನಿಗದಿತ ಆದಾಯದಿಂದ ಸುಖೀ ಜೀವನವನ್ನು ನಡೆಸುವ ಸದುದ್ದೇಶದಿಂದ ಕೇಂದ್ರಸರ್ಕಾರ ಹಿರಿಯ ನಾಗರಿಕರಿಗೆ ಅನುಕೂಲವಾಗಲೆಂದೇ ಈ ಯೋಜನೆಯನ್ನು ರೂಪಿಸಿತು. ಈ ಠೇವಣಿಗೆ ಶೇ. 9.3 ರ ದರದಲ್ಲಿ ಬಡ್ಡಿಯನ್ನು ನಿಗದಿ ಗೊಳಿಸಲಾಗಿದೆ. ಬಡ್ಡಿಯನ್ನು ಮೂರು ತಿಂಗಳಿಗೊಮ್ಮೆ ಅಂದರೆ 31ನೆಯ ಮಾರ್ಚ್, 30ನೇ ಜೂನ್, 30ನೇ ಸೆಪ್ಟೆಂಬರ್ ಹಾಗೂ 31ನೇ ಡಿಸೆಂಬರ್ ನಂದು ನೀಡಲಾಗುವುದು.

ಈ ಯೋಜನೆಯಲ್ಲಿ ಕನಿಷ್ಟ ಒಂದು ಸಾವಿರ ರೂ. ನಿಂದ ಗರಿಷ್ಟ ಹದಿನೈದು ಲಕ್ಷ ರೂ.ಗಳವರೆಗೆ ಠೇವಣಿ ಮಾಡಬಹುದು. ಮತ್ತು ಠೇವಣಿಯ ಅವಧಿ ಐದು ವರ್ಷಗಳು.

ಠೇವಣಿಯನ್ನು ಅಂಚೆ ಕಛೇರಿಗಳಲ್ಲಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾಡಬಹುದು. ಈ ಯೋಜನೆಯಲ್ಲಿ ಸಂದಾಯವಾಗುವ ಬಡ್ಡಿಗೆ ಮೂಲದಲ್ಲಿಯೇ ತೆರಿಗೆಯನ್ನು ಹಿಡಿಯಲಾಗುತ್ತದೆ.

2004ರಲ್ಲಿಯೇ ಈ ಯೋಜನೆಯು ರೂಪಿತವಾದರೂ, 2008-2009ರ ಆರ್ಥಿಕ ವರ್ಷದಿಂದ ಈ ಯೋಜನೆಯಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಮೀರದಂತೆ ಹೂಡುವ ಠೇವಣಿಗೆ, ಠೇವಣಿ ಮಾಡಿದ ವರ್ಷಕ್ಕೆ ಆದಾಯ ತೆರಿಗೆಯ ವಿನಾಯತಿ ಸಿಗುತ್ತದೆ.

ಹಿರಿಯ ನಾಗರಿಕರಿಗಾಗಿಯೇ ರೂಪಿಸಲ್ಪಟ್ಟಿರುವ ಈ ಯೋಜನೆಯಲ್ಲಿ ಹಿರಿಯ ನಾಗರಿಕರು ಅಗತ್ಯವಿರುವಷ್ಟು ಹಣವನ್ನು ಹೂಡಿ ಆದಾಯ ತೆರಿಗೆಯ ವಿನಾಯತಿಯನ್ನು ಪಡೆಯಬಹುದು.

ಮೇಲೆ ತಿಳಿಸಿದ ಎಲ್ಲಾ ಯೋಜನೆಗಳ ಜೊತೆಗೆ ಈಕ್ವಿಟಿ ಸಂಬಂಧಿತ ಉಳಿತಾಯ ಯೋಜನೆ (ELSS) ಮಕ್ಕಳ ಬೋಧನಾ ಶುಲ್ಕ (ಇಬ್ಬರು ಮಕ್ಕಳಿಗೆ ಮೀರದಂತೆ) ಗೃಹ ನಿರ್ಮಾಣ ಸಾಲದ ಅಸಲಿನ ಮರುಪಾವತಿ ಹಾಗೂ ಇನ್ ಷ್ಯೂರೆನ್ಸ್ ಪ್ರೀಮಿಯಂ ಹಣ ಮತ್ತು ಪೆನ್ಷನ್ ಫಂಡ್‌ಗಳಿಗೆ ನೀಡಿದ ಪ್ರೀಮಿಯಂ ಇವುಗಳಿಗೂ ತೆರಿಗೆ ವಿನಾಯತಿ ಲಭ್ಯವಾಗುತ್ತದೆ.

ಧನಿಕನಾಗಿರುವವರೇ ಅತ್ಯಂತ ಸುಖಿಗಳಲ್ಲ

*

ವೃದ್ಧಾಪ್ಯಕ್ಕೆ ಹಣ ಹಾಗೂ ಗೆಳೆಯರನ್ನು ಕೂಡಿಡು

ರಾಜೀವಗಾಂಧೀ ಷೇರು ಉಳಿತಾಯ ಯೋಜನೆ

Rajeev Gandhi Equity Savings Scheme

ಈ ಯೋಜನೆ ಪ್ರಕಾರ ವಾರ್ಷಿಕ 10 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಆದಾಯ ಹೊಂದಿರುವವರು 50 ಸಾವಿರ ರೂಪಾಯಿಗಳವರೆಗೆ ಷೇರುಗಳಲ್ಲಿ ನೇರ ಹೂಡಿಕೆ ಮಾಡಬಹುದು. ಆದರೆ ಈ ಯೋಜನೆಯಲ್ಲಿ ಹೂಡಿಕೆ ಮಾಡಿದರೆ ಮೂರು ವರ್ಷಗಳವರೆಗೆ ಅದನ್ನು ವಾಪಸ್ ಪಡೆಯುವಂತಿಲ್ಲ ಈಕ್ವಿಟಿ ಷೇರು ಬಂಡವಾಳದಲ್ಲಿ ನೇರವಾಗಿ 50,000 ರೂಗಳವರೆಗೆ ಹೂಡಿಕೆ ಮಾಡಿದಾಗ 25,000 ರೂಪಾಯಿಗಳವ ರೆಗೆ ಆದಾಯದಲ್ಲಿ ವಿನಾಯಿತಿ ಸಿಗುತ್ತದೆ. ಹೀಗೆ ಹೂಡಿಕೆ ಮಾಡುವವರು ಇದುವರೆಗೆ ಡಿಮ್ಯಾಟ್ ಖಾತೆಯನ್ನು ತೆಗೆದಿರಬಾರದು.

(2011-12ನೇ ವರ್ಷದವರೆಗೆ ತೆರಿಗೆ ಪಾವತಿದಾರರು ಸೆಕ್ಷನ್ 80CCF ನ ಅಡಿಯಲ್ಲಿ ಇನ್ಫಾಸ್ಟ್ರಕ್ಚರ್ ಬಾಂಡ್‌ಗಳಲ್ಲಿ 20,000 ರೂಗಳವರೆಗೆ ಹಣ ಹೂಡಿಕೆ ಮಾಡಿ ಆ ಹಣಕ್ಕೆ ತೆರಿಗೆ ವಿನಾಯಿತಿಯನ್ನು ಪಡೆಯಲು ಅವಕಾಶವಿತ್ತು. ಆದರೆ 2012-13ರಿಂದ ಈ ಸೌಲಭ್ಯವನ್ನು ಪಡೆಯಲು ಆಗುವುದಿಲ್ಲ. 2012-13ರ ಸಾಲಿನ ಬಡ್ಜೆಟ್ ಮಂಡನೆಯಾದಾಗ ಈ ಸೌಲಭ್ಯದ ಬಗ್ಗೆ ಯಾವುದೇ ಪ್ರಸ್ತಾಪ ಮಾಡದಿರುವುದರಿಂದ ಈ ವಿನಾಯಿತಿ ಲಭ್ಯವಾಗುವುದಿಲ್ಲ.)

ಈ ಹೊಸ ಯೋಜನೆಯ ಪ್ರಮುಖ ಉದ್ದೇಶ : ಬಂಡವಾಳ ಮಾರುಕಟ್ಟೆಗೆ ಜನ ಸಾಮಾನ್ಯರ ಉಳಿತಾಯದ ಹಣ ಹರಿದುಬರುವುದಕ್ಕೆ ಸುಲಭದ ಹಾದಿಯನ್ನು ಮಾಡಿಕೊಡುವುದೇ ಆಗಿದೆ. ಹೊಸ ಹೂಡಿಕೆದಾರರು (ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಆದಾಯ ಹೊಂದಿರುವವರು) 50,000 ರೂಪಾಯಿಗಳವರೆಗೂ ನೇರವಾಗಿ ಈ ಯೋಜನೆಯಲ್ಲಿ ಹೂಡಿದಾಗ ಹೂಡಿಕೆಯ ಹಣದ ಶೇಕಡ ಐವತ್ತರಷ್ಟು ಹಣಕ್ಕೆ ಆದಾಯ ತೆರಿಗೆ ಲೆಕ್ಕಾಚಾರಕ್ಕೆ ಕಡಿತ ಗೊಳಿಸಲಾಗುತ್ತದೆ. ಆದರೆ ಈ ಹಣಕ್ಕೆ 3 ವರ್ಷಗಳ ಕಾಲದ ಲಾಕ್ ಇನ್ ಪಿರೀಯಡ್ ಇರುತ್ತದೆ. ಈಕ್ವಿಟಿ ಸಂಬಂಧಿತ ತೆರಿಗೆ ವಿನಾಯಿತಿ ಯೋಜನೆಯಲ್ಲಿ ಮಾತ್ರ ಲಭ್ಯ.

ಆದರೆ ಒಂದು ವಿಶ್ಲೇಷಣೆಯಂತೆ ಮೂರು ವರ್ಷಗಳ ನಿರ್ಬಂಧವಿದ್ದರೂ ಅದಕ್ಕೆ Flexibility ಯೂ ಇದೆಯೆಂಬುದು ಒಂದು ಅಭಿಪ್ರಾಯ ಯೋಜನೆಯ ವಸ್ತುಸ್ಥಿತಿಯನ್ನು ಪರಿಶೀಲಿಸಿ ಷೇರುಗಳನ್ನು ಕೊಂಡ ಒಂದು ವರ್ಷದ ನಂತರ ಹೂಡಿದ ಷೇರುಗಳ (ಬಂಡವಾಳ)ದ ಪುನರ್ವಿಮರ್ಶೆ ಮಾಡಬಹುದು.

ನಮ್ಮ ದೇಶದಲ್ಲಿ ಸಾಮಾನ್ಯ ಜನತೆಯ ಷೇರು ಹೂಡಿಕೆಯ ಬಂಡವಾಳ

ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಷೇರುಪೇಟೆಯಲ್ಲಿ ನೇರವಾಗಿಯಾಗಲೀ ಅಥವಾ ಮ್ಯೂಚುವಲ್ ಫಂಡ್‌ಗಳ ಮುಖಾಂತರವಾದ ಹೂಡಿಕೆಯಲ್ಲಿ ತೊಡಗಿಸಿರುವವರ ಪ್ರಮಾಣ ಶೇ. 8 ರಷ್ಟಿದೆಯೆಂದು ಒಂದು ಅಂದಾಜು. ಆದರೆ ಇದೇ ಪ್ರಮಾಣ ಚೀನಾದಲ್ಲಿ ಶೇ. 14ರಷ್ಟಿದ್ದರೆ ಅಮೆರಿಕಾದಲ್ಲಿ ಶೇ. 42ರಷ್ಟಿದೆ.

ಈ ಯೋಜನೆಯ ಜಾರಿಯಿಂದ ಷೇರು ಮಾರುಕಟ್ಟೆಯಲ್ಲಿ ಜನ ಸಾಮಾನ್ಯರು ಅಧಿಕ ಸಂಖ್ಯೆಯಲ್ಲಿ ಪ್ರವೇಶಿಸಿ ಅವರಲ್ಲಿ ಷೇರುಗಳಲ್ಲಿ ಹಣ ಹೂಡುವ ಪರಿಚಯವನ್ನು ಮಾಡುವುದೇ ಅಲ್ಲದೆ ಷೇರು ಮಾರುಕಟ್ಟೆಯಲ್ಲಿ ಉಂಟಾಗುವ ಚಂಚಲತೆ (volatility) ಯನ್ನು ಕಡಿಮೆ ಮಾಡಬಹುದು.

ಯೋಜನೆಯ ವಿವರಗಳನ್ನು ವೀಕ್ಷಿಸಿದಾಗ ಮೂರುವರ್ಷಗಳವರೆಗೆ ಮಾರಾಟಮಾಡಬಾರದೆಂಬ ನಿರ್ಬಂಧವಿದ್ದರೂ ಸಹ, ಷೇರುಗಳನ್ನು ಕೊಂಡ ಒಂದು ವರ್ಷದ ನಂತರ ಕೊಂಡ ಷೇರುಗಳ ಮೌಲ್ಯ ಷೇರು ಮಾರುಕಟ್ಟೆಯಲ್ಲಿ ಏರಿದಾಗ, ಅವುಗಳನ್ನು ಮಾರಿ ಲಾಭಾಂಶವನ್ನು ಪಡೆಯಬಹುದು. ಉದಾಹರಣೆಗೆ 50,000 ರೂ.ಗಳನ್ನು ಹೂಡಿದ್ದಾಗ ಒಂದು ವರ್ಷದ ನಂತರ 75,000 ರೂಗಳಿಗೆ ಆ ಹೂಡಿಕೆಯ ಮೌಲ್ಯ ಏರಿದರೆ, ಅಂತಹ ಸಂದರ್ಭದಲ್ಲಿ 25,000 ರೂ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿ ಲಾಭವನ್ನು ತನ್ನದಾಗಿಸಿಕೊಳ್ಳಬಹುದು.

(ಈ ವಿವರಗಳನ್ನು ಬರೆಯುವಾಗ 2012-13 ಬಡ್ಜೆಟ್ ಪಾರ್ಲಿಮೆಂಟಿನಲ್ಲಿ ಇನ್ನೂ ಅಂಗೀಕಾರವಾಗಿರಲಿಲ್ಲ.)

ಮೇಲೆ ತಿಳಿಸಿದ ಯೋಜನೆಗಳಲ್ಲಿ ಹಣವನ್ನು ಹೂಡುವುದರಿಂದ ಆದಾಯ ತೆರಿಗೆಗೆ ಹೂಡಿದ ಹಣದ ಮೇಲೆ ತೆರಿಗೆ ವಿನಾಯತಿ ದೊರಕುತ್ತದೆಂದು ತಿಳಿದಂತಾಯಿತು. **ಆದರೆ ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಹೂಡಿಕೆಯ ಮೊತ್ತ, ಗರಿಷ್ಠ ಒಂದು ಲಕ್ಷ ರೂಪಾಯಿಗಳು**. ಯಾವುದೇ ಒಂದು ಯೋಜನೆಯಲ್ಲಾಗಲೀ ಅಥವಾ ಎಲ್ಲಾ ಯೋಜನೆಗಳಲ್ಲಿಯೂ ಹೂಡಿಕೆಯನ್ನು ಹೂಡುವುದರಿಂದಾಗಲೀ, ಹೂಡಿಕೆಯ ಹಣ, ಆದಾಯ ತೆರಿಗೆಯ ವಿನಾಯತಿಗಾಗಿ, ಲಭ್ಯವಾಗುವುದು ಒಂದು ಲಕ್ಷ ರೂಪಾಯಿಗಳಿಗೆ ಸೀಮಿತವಾಗಿರುತ್ತದೆಂಬುದನ್ನು ಪ್ರತಿಯೊಬ್ಬರೂ ಮನಗಾಣಬೇಕು.


ಈ ಯೋಜನೆಗಳಲ್ಲಿ ಹಣ ತೊಡಗಿಸುವಾಗ ಉಳಿತಾಯ ಮಾಡಬೇಕಾದ ತೆರಿಗೆಯ ಹಣ, ಹೂಡಿಕೆಗಾಗಿ ಆರಿಸಿಕೊಂಡ ಠೇವಣಿಯ ಕಾಲಾವಧಿ, ಅದಕ್ಕೆ ದೊರಕುವ ಬಡ್ಡಿ, ಬೇಕೆಂದಾಗ ಹಣವನ್ನು ಹಿಂದಕ್ಕೆ ಪಡೆಯುವ ಸೌಲಭ್ಯ ಸುರಕ್ಷತೆ ತೆಗೆದುಕೊಳ್ಳಬಹುದಾದ ರಿಸ್ಕ್ ಇವೆಲ್ಲವನ್ನು

ಗಮನದಲ್ಲಿಟ್ಟುಕೊಳ್ಳಬೇಕಾದ್ದು ಅತ್ಯಗತ್ಯ.

ಅಲ್ಲದೆ ಉಳಿತಾಯದ ಹಣವನ್ನು ಒಂದೇ ಯೋಜನೆಯಲ್ಲಿ ತೊಡಗಿಸದೆ ಹಲವಾರು ಯೋಜನೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಹಂಚುವುದೂ ಸೂಕ್ತ.

ಈ ಅಧ್ಯಾಯದಲ್ಲಿ ವಿವರಿಸಿರುವ ತೆರಿಗೆಯ ದರ ಹಾಗೂ ಉಳಿತಾಯ ಯೋಜನೆಗಳು ಕಾಲಕಾಲಕ್ಕೆ ಬದಲಾವಣೆ ಆಗುವ ಸಂಭವವಿರುತ್ತದೆ. ಪ್ರತಿವರ್ಷದ ಬಜೆಟ್ ಮಂಡನೆಯಾದಾಗಲೂ ತೆರಿಗೆದಾರರಿಗೆ ರಿಯಾಯತಿ ನೀಡುವ ಹಲವಾರು ಯೋಜನೆಗಳು ಪ್ರಕಟವಾಗುತ್ತಿರುತ್ತದೆ. ಹಾಗಾಗಿ ಈ ಲೇಖನದಲ್ಲಿ ಪ್ರಕಟವಾಗಿರುವ ಮಾಹಿತಿ ಕೇವಲ ತಿಳುವಳಿಕೆಗಾಗಿ ಮಾತ್ರ. ಆದಾಯ ತೆರಿಗೆಯನ್ನು ನಿರ್ಧರಿಸುವಾಗ ರಿಟರ್ನ್ ಸಲ್ಲಿಸುವಾಗ ಸೂಕ್ತ ಸಲಹೆಗಾರರನ್ನು ಸಂಪರ್ಕಿಸಿ ಸೂಕ್ತ ಮಾರ್ಗದರ್ಶನ ಪಡೆದುಕೊಳ್ಳಬೇಕು.

PAN ಕಾರ್ಡ್



ಆದಾಯ ತೆರಿಗೆಯ ಬಗ್ಗೆ ತಿಳಿದು ಕೊಳ್ಳುವಾಗ ಪ್ರತಿಯೊಬ್ಬರೂ ಗಮನ ನೀಡಲೇ ಬೇಕಾದ ಒಂದು ಪ್ರಮುಖ ಅಂಶವೆಂದರೆ ಪಾನ್ ಕಾರ್ಡ್ ನ ಪ್ರಾಮುಖ್ಯತೆ.

ಪ್ರತಿಯೊಂದು ಹಣಕಾಸಿನ ವ್ಯವಹಾರದ ಸಂದರ್ಭದಲ್ಲಿಯೂ ಪ್ರತಿಯೊಬ್ಬರಿಗೂ ಅತ್ಯಗತ್ಯವಾಗಿ ಬೇಕಾಗಿರುವ ಪಾನ್ ಕಾರ್ಡ್ ಸಂಖ್ಯೆಯನ್ನು ಆದಾಯ ತೆರಿಗೆಯ Returns ನ್ನು ನೀಡುವಾಗ ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸಲೇ ಬೇಕಾಗುತ್ತದೆ.

PAN ಕಾರ್ಡ್ ಎಂದರೇನು?

ಮೊದಲಿಗೆ PAN ಕಾರ್ಡ್ ಎಂದರೇನು? ಎಂಬುದನ್ನು ತಿಳಿದು ಕೊಂಡ ನಂತರ, ಅದರ ಅಗತ್ಯತೆ, ಯಾವ ಸಂದರ್ಭದಲ್ಲಿ ಅದರ ಅವಶ್ಯಕತೆ ಇದೆ? ಅದನ್ನು ಪಡೆಯುವುದು ಹೇಗೆ ಎಂಬುದರ ಬಗ್ಗೆ ಗಮನ ಹರಿಸೋಣ.

PAN ಎನ್ನುವುದು ಪರ್ಮನೆಂಟ್ ಅಕೌಂಟ್ ನಂಬರ್ (Permanent Account Number) ಎನ್ನುವುದರ ಸಂಕ್ಷಿಪ್ತ ರೂಪ. ಎಂದರೆ ಶಾಶ್ವತ ಖಾತೆಯ ಸಂಖ್ಯೆ ಎಂದು ಹೇಳಬಹುದು.

ಈ ನಂಬರನ್ನು ಆದಾಯ ತೆರಿಗೆಯ ಇಲಾಖೆಯು ಆದಾಯ ತೆರಿಗೆ ಪಾವತಿಸುವವರಿಗೆ ನೀಡುವ ಒಂದು ಲೆಕ್ಕದ ಖಾತೆಯ ಸಂಖ್ಯೆ. ಇದು ಹತ್ತು ಅಂಕೆಗಳನ್ನು ಹೊಂದಿದ್ದು ಅಕ್ಷಾರಾಂಕಗಳಲ್ಲಿ (Alpha Numeric) ನಮೂದಿಸಲಾಗಿರುತ್ತದೆ.

PAN ಕಾರ್ಡ್ ಯಾರಿಗೆ ಅವಶ್ಯಕ?

ಈ ಕೆಳಕಂಡ ಪ್ರತಿಯೊಬ್ಬರೂ PANಕಾರ್ಡನ್ನು ಅವಶ್ಯಕವಾಗಿ ಹೊಂದಿರಲೇ ಬೇಕು.

1. ಯಾರ ಆದಾಯವು ತೆರಿಗೆಗೆ ಒಳಪಡುವ ಆದಾಯದ ಮಿತಿಯನ್ನು ದಾಟಿರುತ್ತದೆಯೋ ಅಂತಹವರು.
2. ಐದು ಲಕ್ಷ ರೂಪಾಯಿಗಳಿಗೂ ಮೀರಿದ ವ್ಯಾಪಾರ ವಹಿವಾಟು ನಡೆಸುವವರು.
3. ಐದುಲಕ್ಷ ಅಥವಾ ಅದಕ್ಕೂ ಮೀರಿದ ಮೌಲ್ಯವುಳ್ಳ ಸ್ಥಿರಾಸ್ತಿಯನ್ನು ಕೊಳ್ಳುವವರು ಅಥವಾ ಮಾರಾಟ ಮಾಡುವವರು.
4. ಮೋಟಾರು ವಾಹನಗಳನ್ನು ಅಥವಾ ನೊಂದಣಿ ಮಾಡಿಸಬೇಕಾಗಿರುವ ಯಾವುದೇ ವಾಹನವನ್ನು ಕೊಳ್ಳುವವರು ಅಥವಾ ಮಾರಾಟ ಮಾಡುವವರು.
5. ಬ್ಯಾಂಕುಗಳಲ್ಲಿ ಅಥವಾ ಅಂಚೆ ಕಛೇರಿಗಳಲ್ಲಿ ಐವತ್ತು ಸಾವಿರಕ್ಕೂ ಹೆಚ್ಚಿನ ಹಣವನ್ನು ಠೇವಣಿ ಇಡುವವರು.
6. ಒಂದು ಲಕ್ಷ ರೂಪಾಯಿಗಳಿಗೂ ಮೀರಿದ ಸೆಕ್ಯೂರಿಟಿ ಪತ್ರಗಳನ್ನು (ಷೇರುಗಳನ್ನು ಬಾಂಡ್‌ಗಳನ್ನು ಇತ್ಯಾದಿ) ಮಾರುವವರು ಅಥವಾ ಕೊಳ್ಳುವವರು.
7. ಬ್ಯಾಂಕ್‌ನಲ್ಲಿ ಖಾತೆಯನ್ನು ತೆಗೆಯಬಯಸುವವರು.
8. ದೂರವಾಣಿ ಸಂಪರ್ಕಕ್ಕೆ ಅರ್ಜಿ ಸಲ್ಲಿಸುವವರು.
9. ಒಂದೇ ಸಲಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೂ ಮೀರಿದ ಹೋಟೆಲ್ ಬಿಲ್‌ಗಳನ್ನು ಪಾವತಿ ಮಾಡುವವರು.
10. ಐವತ್ತು ಸಾವಿರ ರೂಪಾಯಿ ನಗದು ನೀಡಿ ಡಿ.ಡಿ./ ಪೇ ಆರ್ಡ್‌ರ್/ ಬ್ಯಾಂಕರ್ ಚೆಕ್‌ಗಳನ್ನು ಪಡೆಯಲು ಇಚ್ಛಿಸುವವರು.

ಹೀಗೆ ಮೇಲ್ಕಂಡ ಎಲ್ಲ ರೀತಿಯ ವ್ಯವಹಾರವನ್ನು ಮಾಡಲು ಬಯಸುವವರು ಕಡ್ಡಾಯವಾಗಿ PANಕಾರ್ಡನ್ನು ಹೊಂದಿರಲೇ ಬೇಕಾದ್ದು ಅತ್ಯಗತ್ಯ.

ಇಷ್ಟೇ ಅಲ್ಲದೆ 2008-09 ರ ಬಜೆಟ್ ಮಂಡಿಸುವಾಗ, PAN ಕಾರ್ಡ್‌ವ್ಯಾಪ್ತಿಗೆ ಮತ್ತಷ್ಟು ಕ್ಷೇತ್ರಗಳನ್ನು ಸೇರಿಸಲಾಯಿತು.

ಇನ್‌ಷ್ಯೂರೆನ್ಸ್ ಪ್ರೀಮಿಯಂ ಕಟ್ಟುವಾಗ, ವೈಯುಕ್ತಿಕ ಸಾಲಗಳನ್ನು (Personal Loan) ತೆಗೆದುಕೊಳ್ಳುವಾಗ, ಸಾಲಪತ್ರದ ಮಾರುಕಟ್ಟೆಯಲ್ಲಿ (Debit Market) ವ್ಯವಹರಿಸುವಾಗ PANನಂಬರನ್ನು ಅತ್ಯಗತ್ಯವಾಗಿ ನಮೂದಿಸಲೇ ಬೇಕೆಂಬ ಕಡ್ಡಾಯವನ್ನು ಹೇರಲಾಯಿತು.

ಹೀಗಾಗಿ ಆರ್ಥಿಕ ಕ್ಷೇತ್ರದ ಪ್ರತಿಯೊಂದು ವ್ಯವಹಾರದಲ್ಲಿಯೂ PANಕಾರ್ಡ್‌ನ ಕಡ್ಡಾಯವಾದ ಮೇಲೆ ಪ್ರತಿಯೊಬ್ಬರಿಗೂ ಇದರ ಬಗ್ಗೆ ತಿಳವಳಿಕೆ ಇರಲೇಬೇಕು. ಹಾಗೂ ಆ ವ್ಯವಹಾರಗಳಲ್ಲಿ ತೊಡಗುವವರು ಕಡ್ಡಾಯವಾಗಿ PANಕಾರ್ಡನ್ನು ಹೊಂದಿರಲೇ ಬೇಕು.

ಆದಾಯ ತೆರಿಗೆ ಇಲಾಖೆಯವರು ನೀಡುವ ಈ ಕಾರ್ಡ್ ಪ್ಲಾಸ್ಟಿಕ್‌ನದಾಗಿದ್ದು ಅದರಲ್ಲಿ ಖಾತೆದಾರನ ಹೆಸರು, ತಂದೆಯ/ಗಂಡನ ಹೆಸರು ಹುಟ್ಟಿದ ದಿನಾಂಕ ಮುಂತಾದ ವಿವರಗಳಿದ್ದು ಆತನ ಭಾವಚಿತ್ರ ಹಾಗೂ ಸಹಿಯನ್ನು ಒಳಗೊಂಡಿರುತ್ತದೆ.

PAN ಕಾರ್ಡನ್ನು ಪಡೆಯುವುದು ಹೇಗೆ?

PANಕಾರ್ಡನ್ನು ಪಡೆಯಲು ನಿಗದಿತ ಅರ್ಜಿ ನಮೂನೆ 49ಎ ಯಲ್ಲಿ ಅರ್ಜಿ ಸಲ್ಲಿಸಬೇಕು.

ಅರ್ಜಿ ನಮೂನೆಗಳು ಇದಕ್ಕಾಗಿಯೇ ನೇಮಿಸಲ್ಪಟ್ಟ ಹಲವಾರು ಸೇವಾಕೇಂದ್ರ (Facilitating Centre) ಗಳಲ್ಲಿ ದೊರೆಯುತ್ತವೆ. ಅಂತಹ ಕೇಂದ್ರಗಳಲ್ಲಿ ಅರ್ಜಿಯ ನಮೂದಿತ ದರ (5ರೂಗಳನ್ನು) ನೀಡಿ ಅರ್ಜಿಯನ್ನು ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು ಗುರುತಿನ ಪುರಾವೆ (proof of Identity) ಭಾವಚಿತ್ರ (ಬಣ್ಣದ್ದು) ದೊಂದಿಗೆ ಸಲ್ಲಿಸಬೇಕು.

ಗುರುತಿನ ಪುರಾವೆಗಾಗಿ ಈ ಕೆಳಕಂಡ ಯಾವುದಾದರೂ ದಾಖಲೆಯನ್ನು ಸಲ್ಲಿಸಬಹುದು.

1. ಮತದಾನದ ಗುರುತಿನ ಪತ್ರ
2. ರಹದಾರಿ ಪತ್ರ (Pass Port)
3. ಕ್ರೆಡಿಟ್ ಕಾರ್ಡ್
4. ಪಡಿತರ ಚೀಟಿ ಇತ್ಯಾದಿ

ಹುಟ್ಟಿದ ದಿನಾಂಕದ ಸಮರ್ಥನೆಗಾಗಿ ಎಸ್‌ಎಸ್‌ಎಲ್‌ಸಿ ಪ್ರಮಾಣಪತ್ರ ಅಥವಾ ಮುನಿಸಿಪಲ್/ಸ್ಥಳೀಯ ಸಂಸ್ಥೆಗಳು ನೀಡಿದ ಜನನ ಪ್ರಮಾಣ ಪತ್ರವನ್ನು ಸಲ್ಲಿಸಬಹುದು.

ಈ ರೀತಿ ಭರ್ತಿ ಮಾಡಿದ ಅರ್ಜಿಗಳನ್ನು ನಿಗದಿತ ಶುಲ್ಕದೊಂದಿಗೆ ಹತ್ತಿರದ ಸೇವಾಕೇಂದ್ರ್ರದಲ್ಲಿ ಪಾವತಿ ಮಾಡಬಹುದು. ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟ್ ಲಿಮಿಟೆಡ್ (N.S.D.L) ಅಥವಾ ಯೂನಿಟ್ ಟ್ರಸ್ಟ್ ಆಫ್ ಇಂಡಿಯ (U.T.I.) ಸೇವಾ ಕೇಂದ್ರಗಳು ಅರ್ಜಿಯನ್ನು ಪಡೆದು ಸ್ವೀಕೃತಿ ಪತ್ರವನ್ನು ನೀಡುತ್ತವೆ. ಅರ್ಜಿಯನ್ನು ಸಲ್ಲಿಸಿದ ಎರಡು ಮೂರು ವಾರಗಳಲ್ಲಿ PANಕಾರ್ಡ್ ಅರ್ಜಿದಾರನಿಗೆ ಸಿಗುತ್ತದೆ. ಈ PAN ಕಾರ್ಡ್ ಹೊಂದಿರುವಾತನು ಕಾರ್ಡಿನ ನಂಬರನ್ನು ತನ್ನ ಎಲ್ಲಾ ವ್ಯವಹಾರಗಳಿಗೂ ಬಳಸಬಹುದು.

ಯಾವುದೇ ಕಾರಣಕ್ಕೂ, ಯಾರೊಬ್ಬರೂ ಒಂದಕ್ಕಿಂತ ಹೆಚ್ಚಿಗೆ PAN ಕಾರ್ಡನ್ನು ಹೊಂದಿರಬಾರದು. ಅಕಸ್ಮಾತ್ ತಿಳಿದೋ ಅಥವಾ ತಿಳಿಯದೆಯೋ ಒಂದಕ್ಕಿಂತ ಹೆಚ್ಚು ಕಾರ್ಡನ್ನು ಹೊಂದಿದ್ದರೆ, ತಕ್ಷಣವೇ ಅದನ್ನು ಆದಾಯ ತೆರಿಗೆ ಕಛೇರಿಗೆ ಹಿಂದಿರುಗಿಸಬೇಕು. ತಪ್ಪಿದ್ದಲ್ಲಿ ಅಂತಹ ಕಾರ್ಡನ್ನು ಹೆಚ್ಚಿಗೆ ಹೊಂದಿರುವವರಿಗೆ ಹತ್ತುಸಾವಿರ ರೂಪಾಯಿಗಳ ದಂಡನಾರ್ಹ ಶಿಕ್ಷೆ ವಿಧಿಸಲಾಗುವುದು.

ಆದರೆ ಕೆಲವೊಮ್ಮೆ ನೈಜವಾದ ಕಾರಣಗಳಿಗೆ ಅಂದರೆ ಉದಾಹರಣೆಗೆ, ಈಗಾಗಲೇ, ನೀಡಿದ್ದ ಕಾರ್ಡು ಕಳೆದುಹೋದರೆ, ಅಂತಹ ವಿಶೇಷ ಸಂದರ್ಭದಲ್ಲಿ ಮತ್ತೊಂದು ಕಾರ್ಡ್‌ಗೆ ಅರ್ಜಿ ಸಲ್ಲಿಸಬಹುದು. ಆ ಸಮಯದಲ್ಲಿಯೂ ಸಹ ಮತ್ತೊಮ್ಮೆ ಶುಲ್ಕವನ್ನು ನೀಡಿ ಈ ಹಿಂದೆ ಅನುಸರಿಸಿದ ರೀತಿಯಲ್ಲಿಯೇ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ.

ಎಲ್ಲಾ ಆರ್ಥಿಕ ವ್ಯವಹಾರ ನಡೆಸುವವರೂ ಕಡ್ಡಾಯವಾಗಿ PAN ಕಾರ್ಡನ್ನು ಹೊಂದಿರಲೇ ಬೇಕು. ನಿಜ ಆದರೆ ಕಾರ್ಡನ್ನು ಹೊಂದಿಲ್ಲದವರು ಯಾವುದೇ ವ್ಯವಹಾರವನ್ನು ನಡೆಸುವಂತೆಯೇ ಇಲ್ಲವೆ? ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಆದರೆ ಯಾವುದೇ ವ್ಯಕ್ತಿಯು PANಕಾರ್ಡನ್ನು ಹೊಂದಿರದ ಸಂದರ್ಭ ದಲ್ಲಿ ಅರ್ಜಿ ನಮೂನೆ 60/61 ನ್ನು ಭರ್ತಿ ಮಾಡಿ ಸಂಬಂಧ ಪಟ್ಟವರಿಗೆ ಸಲ್ಲಿಸಬಹುದು.

ಇಷ್ಟೊಂದು ಪ್ರಾಮುಖ್ಯತೆ ಹೊಂದಿರುವ ಹಾಗೂ ಎಲ್ಲಾ ಆರ್ಥಿಕ ವ್ಯವಹಾರಗಳಿಗೂ ಅತ್ಯಗತ್ಯವಾಗಿ ಬೇಕಾಗಿರುವ, ಅದರಲ್ಲೂ ವಿಶೇಷತಃ ಆದಾಯ ತೆರಿಗೆ ಸಲ್ಲಿಸುವವರು ತೆರಿಗೆ ಸಲ್ಲಿಸಿ ಫಾರಂನಲ್ಲಿ PANಕಾರ್ಡಿನ ಸಂಖ್ಯೆ ಯನ್ನು ನಮೂದಿಸಲೇ ಬೇಕಾಗಿರುವುದರಿಂದ ಪ್ರತಿಯೊಬ್ಬರೂ ಅದನ್ನು ಹೊಂದುವುದು ಅಗತ್ಯ.



ಹಿರಿಯ ಪ್ರಜೆಗಳು –ಸಮಸ್ಯೆಗಳು

ಹಿರಿಯ ಪ್ರಜೆಗಳು ಎಂದರೆ ಯಾರು? ಈ ಪ್ರಶ್ನೆಗೆ ಉತ್ತರಿಸುವುದು ಅಥವಾ ವ್ಯಾಖ್ಯಾನಿಸುವುದು ಅಷ್ಟು ಸುಲಭವಲ್ಲ. ಇದಕ್ಕೆ ಕಾರಣ ಸರ್ಕಾರವಾಗಲೀ ಅಥವಾ ಇತರೇ ಸಂಸ್ಥೆಗಳಾಗಲಿ ಅನುಸರಿಸುತ್ತಿರುವ ಮಾನ ದಂಡ ಅಥವಾ ಅಳತೆಗೋಲು.

ಕೆಲವೆಡೆ ಹಿರಿಯ ನಾಗರಿಕರಿಗೆ 60 ವರ್ಷವೆಂದು ನಿಗದಿ ಮಾಡಿದ್ದರೆ. ಕೆಲವು ಸರ್ಕಾರದ ಇಲಾಖೆಗಳು 65 ವರ್ಷ ವೆಂದು ನಿಗದಿಪಡಿಸಿವೆ. ಹೀಗಾಗಿ ಹಿರಿಯ ಪ್ರಜೆಗಳೆಂಬುದು ಯಾವ ವಯಸ್ಸಿಗೆ ಅನ್ವಯವಾಗುತ್ತದೆಂಬುದು ಗೊಂದಲ ದಲ್ಲಿಯೇ ಇದೆಯೆಂದೆನ್ನಬಹುದು.

ಆದರೆ ಸರ್ಕಾರಿ ಸೇವೆಯಲ್ಲಿ ನಿರತರಾಗಿರುವವರಿಗೆ ನಿವೃತ್ತಿಯ ವಯಸ್ಸನ್ನು 60 ವರ್ಷಗಳೆಂದು ನಿಗದಿ ಪಡಿಸಲಾಗಿದೆ. ನಿವೃತ್ತಿ ಹೊಂದಿದವರನ್ನೇ ಹಿರಿಯ ಪ್ರಜೆಗಳು ಎನ್ನುವುದಾದರೆ 60 ವರ್ಷ ಪೂರೈಸಿದವರನ್ನೂ ಸಾಮಾನ್ಯವಾಗಿ ಹಿರಿಯ ನಾಗರಿಕ ವರ್ಗಕ್ಕೆ ಸೇರಿಸಬಹುದು.

ಐದು ಆರು ದಶಕಗಳ ಹಿಂದೆ, ಅಂದರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ಸರಾಸರಿ ಒಬ್ಬ ವ್ಯಕ್ತಿಯ ಜೀವಿತಾವಧಿ 42 ವರ್ಷಗಳಾಗಿದ್ದವು. ಆದರೆ, ಅದು ಈಗ 65 ವರ್ಷಗಳಿಗೆ ಏರಿದೆ. ಅಲ್ಲದೆ ಜೀವಿತಾವಧಿ ದಿನದಿನಕ್ಕೆ ಹೆಚ್ಚಾಗುತ್ತಿದೆ.

ಸರ್ಕಾರದ ವಿವಿಧ ವರದಿಗಳ ಪ್ರಕಾರ ಹಿರಿಯ ಪ್ರಜೆಗಳ ಪ್ರಮಾಣವು ದೇಶದ ಜನಸಂಖ್ಯೆಯ ಶೇ. 8 ರಷ್ಟು ಇದೆಯೆಂದು ಒಂದು ಅಂದಾಜು. ಈ ಸಂಖ್ಯೆಯು ಮುಂಬರುವ ಒಂದೆರಡು ದಶಕಗಳಲ್ಲಿ ಶೇ. 12ರಷ್ಟು ಆಗುವುದೆಂಬುದು ಒಂದು ನಿರೀಕ್ಷೆಯಾಗಿದೆ.

ಆಧುನಿಕ ಜಗತ್ತಿನ ಒಂದು ಅಪ್ರತಿಮ ಸಾಧನೆ ಎಂದರೆ, ವೈದ್ಯಕೀಯ ವಿಜ್ಞಾನದಲ್ಲಿ ಆಗಿರುವ ಮಹತ್ತರ ಪ್ರಗತಿ ಮತ್ತು ತನ್ಮೂಲಕ ಮಾನವನ ಜೀವಿತಾವಧಿಯಲ್ಲಿ ಆಗಿರುವ ಹೆಚ್ಚಳ. ಈ ಕಾರಣದಿಂದ ಅರವತ್ತು ವರ್ಷಕ್ಕೆ ಕಾಲಿಟ್ಟರೆ ಜೀವನ ಮುಕ್ತಾಯಗೊಂಡಿತೆಂಬ ವಿಚಾರಧಾರೆಯಿಂದ ದೂರವಾಗುವ ಹಂತವನ್ನು ತಲುಪಿದ್ದೇವೆ. ಈಗ 80–85 ದಾಟಿದ್ದರೂ ಆರೋಗ್ಯವಂತರಾಗಿ ಬಾಳುತ್ತಿರುವ ಹಲವಾರು ಹಿರಿಯ ಜೀವಿಗಳನ್ನು ಕಾಣಬಹುದಾಗಿದೆ.

ಸಾಮಾನ್ಯವಾಗಿ ನಿವೃತ್ತಿಯಾಗುವ ವಯಸ್ಸಿಗೆ, ಅಂದರೆ, ಅರವತ್ತರ

ಗಡಿ ಸಮೀಪಿಸುತ್ತಿದ್ದಂತೆ ಪ್ರತಿಯೊಬ್ಬರೂ ಸಾಂಸಾರಿಕ ಹೊಣೆಗಾರಿಕೆಗಳನ್ನು ಪೂರೈಸಿ ಕೊಂಡಿರುತ್ತಾರೆ. ಆದರೂ ಸಹ ತಮ್ಮ ಜೀವನ ನಿರ್ವಹಣೆಗಾಗಿ ಈ ಹಿರಿಯ ಜೀವಗಳು ತಾವು ಸೇವೆಯಿಂದ ನಿವೃತ್ತರಾಗುವಾಗ ಪಡೆಯುವ ಪಿಂಚಣಿಯ ಆಧಾರದ ಮೇಲೆಯೇ ಆಗಲಿ ಅಥವಾ ತಾವು ಪಡೆದ ಸೇವಾಂತ್ಯ ಸೌಲಭ್ಯ (Terminal benefits) ಗಳಾದ ಭವಿಷ್ಯ ನಿಧಿ (Provident Fund) ಉಪಾದಾನ (Gratuity) ಮುಂತಾದ ಹಣದ ಹೂಡಿಕೆಯ ಮೇಲೆ ಸಿಗುವ ಬಡ್ಡಿಯ ಹಣದ ಆಧಾರದ ಮೇಲೆ ಜೀವನ ನಿರ್ವಹಣೆ ಮಾಡಬೇಕಾಗುತ್ತದೆ.

ಪಿಂಚಣಿದಾರರಿಗಾದರೋ ಪ್ರತಿ ತಿಂಗಳೂ ತಪ್ಪದೆ ಪಿಂಚಣಿ ಹಣ ಕರಾರುವಕ್ಕಾಗಿ ಸಿಗುತ್ತದೆ. ಅಲ್ಲದೆ ಸೂಚ್ಯಂಕದ ಆಧಾರದ ಮೇಲೆ ಕಾಲಾನುಕಾಲಕ್ಕೆ ಏರಿಕೆಯಾಗುವ ಸಂಭವವೂ ಇರುತ್ತದೆ. ಈ ಪಿಂಚಣಿ ಹಣದಿಂದ, ಸಾಧಾರಣ ಮಟ್ಟಿಗಾದರೂ ಜೀವನವನ್ನು ಸಾಗಿಸಬಹುದು. ಆದರೆ ನಮ್ಮ ದೇಶದಲ್ಲಿ ಪಿಂಚಣಿ ಪಡೆಯುವವರ ಸಂಖ್ಯೆ ಶೇ. ೦.೩ರಷ್ಟು ಮಾತ್ರವೆಂಬುದು ಒಂದು ಅಂದಾಜು. ಉಳಿದ ಎಲ್ಲ ಹಿರಿಯರೂ ಯಾವುದೇ ರೀತಿಯ ಪಿಂಚಣಿ ಪಡೆಯದೇ ಇರುವವರು. ಇಂತಹವರು ಈಗಾಗಲೇ ಹೇಳಿದ ಹಾಗೆ ಸೇವೆಯಿಂದ ನಿವೃತ್ತರಾದಾಗ ಪಡೆದ ಹಣದಿಂದ ಅಥವಾ ತಾವು ಜತನವಾಗಿ ಕೂಡಿಟ್ಟ ಉಳಿತಾಯದ ಹಣದ ಮೇಲಿನ ಬಡ್ಡಿಯ ಗಳಿಕೆಯಿಂದ ಮಾತ್ರ ಜೀವನ ಸಾಗಿಸಬೇಕಾಗಿರುವುದು.

ಒಂದು ದುರಂತವೆಂದರೆ ಅಂತಹವರು ಕೆಲವೊಮ್ಮೆ ಹಣ ಹೂಡುವಾಗ, ವಿವೇಚನಾರಹಿತರಾಗಿ, ಸರಿಯಾದ ಮಾರ್ಗದರ್ಶನವಿಲ್ಲದೆ, ಹೆಚ್ಚಿನ ಬಡ್ಡಿಯ ಆಸೆಯಿಂದ ಅಥವಾ ಮುಗ್ಧತೆಯಿಂದ, ಅವರಿವರ ಮಾತು ಕೇಳಿಕೊಂಡು ತಾವು ಕಷ್ಟಪಟ್ಟು ಉಳಿಸಿದ ಹಣಕ್ಕೆ ಸಂಚಕಾರ ತಂದು ಕೊಂಡಿರುವ ಹಲವಾರು ನಿದರ್ಶನಗಳಿವೆ.

ಅಲ್ಲದೆ ಇತ್ತೀಚಿನ ಕೆಲವು ವರ್ಷಗಳ ಹಿಂದೆ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು, ಹಾಗೂ ಅಂಚೆ ಉಳಿತಾಯ ಮುಂತಾದ ಯೋಜನೆಗಳಲ್ಲಿ ನೀಡುತ್ತಿದ್ದ ಬಡ್ಡಿಯ ದರಗಳು ಹಣದುಬ್ಬರದ ಹಾಗೂ ಸರ್ಕಾರದ ಆರ್ಥಿಕ ನೀತಿಯ ಕಾರಣದಿಂದಾಗಿ ಗಣನೀಯವಾಗಿ ಇಳಿಮುಖವಾಗಿವೆ. ಹೀಗಾಗಿ ಹಿರಿಯ ನಾಗರಿಕರು ಜೀವನ ಸಾಗಿಸುವುದೇ ಕಷ್ಟವೆನಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಅನೇಕ ಸಾಮಾಜಿಕ ಬದಲಾವಣೆಗಳಿಂದ ಹಿರಿಯ ನಾಗರಿಕರಲ್ಲಿ ಅಸ್ಥಿರತೆಯ ಭಯದ ವಾತಾವರಣ ಮೂಡುತ್ತಿದೆ. ಅನಾಥ ಪ್ರಜ್ಞೆ ಕಾಡುತ್ತಿದೆ.

ಈ ಎಲ್ಲಾ ಕಾರಣಗಳಿಂದ ಇಂದಿನ ಪರಿಸ್ಥಿತಿಯಲ್ಲಿ ಹಿರಿಯ ನಾಗರಿಕರು ಅನೇಕ ಸಮಸ್ಯೆಗಳನ್ನು ಸವಾಲುಗಳನ್ನು ಎದುರಿಸಬೇಕಾಗಿದೆ.

ಅವುಗಳಲ್ಲಿ ಪ್ರಮುಖವಾದುದೆಂದರೆ :

- ಅನುಪಸ್ಥಿತಿಯಲ್ಲಿರುವ ಸರ್ಕಾರದ ನೀತಿ.
- ಹಿರಿಯರ ಹಕ್ಕುಗಳ ರಕ್ಷಣೆಗಾಗಿ ಸೂಕ್ತವಾದ ಕಾನೂನಿಲ್ಲದಿರುವುದು.
- ಬದಲಾಗುತ್ತಿರುವ ಜೀವನ ಶೈಲಿ ಮತ್ತು ವೇಗವಾಗಿ ರೂಪುಗೊಳ್ಳುತ್ತಿರುವ ನಗರೀಕರಣ ವ್ಯವಸ್ಥೆ.
- ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳಾಗುತ್ತಿರುವುದು.
- ಹಿರಿಯರಿಗೆ ಸಹಾಯ ಮಾಡುವ ದಕ್ಷ ಕುಟುಂಬಗಳ ಕೊರತೆ.
- ಸೂಕ್ತವಾಗಿ ತರಬಲ್ಲ ಹಾಗೂ ಸುಲಭವಾಗಿ ದೊರೆಯಬಹುದಾದ ವೈದ್ಯೋಪಚಾರ ಮತ್ತು ಸಾಮಾಜಿಕ ವ್ಯವಸ್ಥೆಯ ಕೊರತೆ.
- ಆರ್ಥಿಕ ಅಭದ್ರತೆ – ಪಿಂಚಣಿ ಇರುವುದು ಇಲ್ಲದಿರುವುದು.
- ಭಾವನಾತ್ಮಕವಾಗಿ ಬೇರ್ಪಡಿಸುವುದು,
- ನಿಂದಿಸುವುದು, ಚಿಂತೆಗೊಳಪಡಿಸುವುದು ಮತ್ತು ಸಾಮಾಜಿಕವಾಗಿ ಗೌರವವನ್ನು ಕಳೆದುಕೊಳ್ಳುವುದು.

ಹಿರಿಯರ ಸಮಸ್ಯೆಗಳಿಗೆ ಸರ್ಕಾರದ ಸ್ಪಂದನೆ

ವಿಶ್ವಸಂಸ್ಥೆಯು ಹತ್ತು ವರ್ಷಗಳ ಹಿಂದೆ ಅಂದರೆ 1997ರಲ್ಲಿಯ ಜಗತ್ತಿನ ಜನ ವೃದ್ಧಾಪ್ಯದತ್ತ ಸಾಗುತ್ತಿರುವುದನ್ನು ಗಮನಿಸಿತು. ಹಿರಿಯರ ಏಳಿಗೆಯ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. 1999ನೇ ವರ್ಷವನ್ನು ವಿಶ್ವಹಿರಿಯರ ವರ್ಷವೆಂದು ಘೋಷಿಸಿತು. ಜಗತ್ತಿನ ಹಲವು ರಾಷ್ಟ್ರಗಳು ಹಿರಿಯರ ಕ್ಷೇಮಾಭ್ಯುದಯಕ್ಕಾಗಿ ಅನೇಕ ಕಾರ್ಯಾಚರಣೆಗಳನ್ನು ಜಾರಿಗೆ ತಂದವು.

ಈ ನಿಟ್ಟಿನಲ್ಲಿ ಭಾರತ ಸರ್ಕಾರವೂ ಹಿಂದೆ ಬೀಳಲಿಲ್ಲ. ನಮ್ಮ ದೇಶದಲ್ಲಿಯೂ ಸಹ ಹಿರಿಯ ನಾಗರಿಕರಿಗಾಗಿ ನೀತಿಯನ್ನು ರೂಪಿಸಿತು.

ಕೇಂದ್ರ ಸಮಾಜ ಕಲ್ಯಾಣ ಸಚಿವಾಲಯವು Age well Foundation ಎಂಬ ಸಂಸ್ಥೆಯನ್ನು ಸ್ಥಾಪನೆ ಮಾಡಿತು ಮತ್ತು ಅದರ ಅಡಿಯಲ್ಲಿಯೇ ಆಧಾರ್‌ನ್ನು ನಿಯೋಜಿಸಿತು.

ಭಾರತದ ವಯೋವೃದ್ಧರಿಗೆ ಹೆಚ್ಚಿನ ಶಕ್ತಿ ನೀಡಿ ಸ್ವಪ್ರೇರಿತ ಪ್ರಯತ್ನ ಮತ್ತು ಆಡಳಿತದ ಆರಂಭಿಕ ಕ್ರಿಯೆಗಳ ಸಂಯೋಜನೆಯಿಂದ ಹಿರಿಯರ

ಸಮಸ್ಯೆಗಳಿಗೆ ತೃಪ್ತಿಕರವಾದ ಪರಿಹಾರವನ್ನು ನೀಡುವ ನಿಟ್ಟಿನಲ್ಲಿ ಇದು ಕೆಲಸ ಮಾಡುತ್ತಿದೆ.

1999ರ ಡಿಸೆಂಬರ್‌ನಲ್ಲಿ ರಚಿಸಲ್ಪಟ್ಟ ಆಧಾರ್ ಅಂದಿನಿಂದ ಇಂದಿನವರೆಗೆ ಸಾವಿರಾರು ಸಲಹೆ ಮತ್ತು ದೂರುಗಳನ್ನು ಹಿರಿಯ ನಾಗರಿಕರು ಹಾಗೂ ಜನಸಾಮಾನ್ಯರಿಂದ ಮತ್ತು ಸಂಸ್ಥೆಗಳಿಂದ ಸ್ವೀಕರಿಸಿ ಅವುಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸಿದೆ.

ಭಾರತ ಸಂವಿಧಾನದ ಅನುಚ್ಛೇದ 41ರಲ್ಲಿ ಪ್ರಕಟಿಸಿರುವಂತೆ ಹಿರಿಯ ನಾಗರಿಕರ ಆರೋಗ್ಯಪಾಲನೆ, ಆರ್ಥಿಕ ಭದ್ರತೆ, ಆಶ್ರಯ ಮತ್ತು ಅವರಿಗೆ ಅಗತ್ಯವಿರುವ ಇನ್ನಿತರ ಸೌಲಭ್ಯಗಳನ್ನು ಒದಗಿಸುವಲ್ಲಿ ರಾಜ್ಯ ಸರ್ಕಾರವೂ ಸಹ ಒಂದು ನೀತಿಯನ್ನು ಪ್ರಕಟಿಸಿದೆ.

ಈ ನೀತಿಯ ಮುಖ್ಯ ಉದ್ದೇಶ ಹಿರಿಯ ನಾಗರಿಕರ ಹಿತವನ್ನು ಕಾಪಾಡುವುದು, ಅವರಿಗೆ ಆರ್ಥಿಕ ಭದ್ರತೆ, ಆರೋಗ್ಯ ಪಾಲನೆ, ಆಶ್ರಯ, ರಕ್ಷಣೆ ಸಮಾನ ಅವಕಾಶ, ಸ್ಥಾನಮಾನಗಳನ್ನು ಒದಗಿಸುವುದು. ಇವುಗಳೇ ಅಲ್ಲದೆ, ಹಿರಿಯ ನಾಗರಿಕರು ರಚನಾತ್ಮಕ ಸಂತೃಪ್ತ ಹಾಗೂ ಸಂತೋಷದಾಯಕ ಜೀವನವನ್ನೂ ನಡೆಸಲು ನೇರವಾಗುವುದು.

ಈ ನೀತಿಗಳ ಅನುಷ್ಠಾನಕ್ಕಾಗಿ ಸರ್ಕಾರವು ಪ್ರತ್ಯೇಕ ಇಲಾಖೆಯನ್ನೂ ತೆರೆದು ಅದನ್ನು ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಎಂದು ನಾಮಕರಣ ಮಾಡಿದೆ.

ಈ ಇಲಾಖೆಯು ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿ ಕೊಂಡಿವೆ. ಅವುಗಳಲ್ಲಿ ಪ್ರಮುಖವಾದುದೆಂದರೆ :

- ಹಿರಿಯ ನಾಗರಿಕರಿಗೆ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸುವುದು. 1090ಸಹಾಯವಾಣಿಯ ಉಚಿತ ಸುಂಕರರಹಿತ ದೂರವಾಣಿ ಸಂಖ್ಯೆ ಯಾಗಿರುತ್ತದೆ. ಬಹಳ ಮಟ್ಟಿಗೆ ಹಿರಿಯ ನಾಗರಿಕರು ಕಿರುಕುಳ. ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ಇತರೆ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಈ ದೂರವಾಣಿಯ ಕರೆಯ ಮೂಲಕ ಸಹಾಯ ಪಡೆಯಬಹುದು.
- ತೊಂದರೆಯಲ್ಲಿರುವ ಹಿರಿಯ ನಾಗರಿಕರಿಗೆ ಸಾಧ್ಯವಾಗುವ ಎಲ್ಲ ಸೌಲಭ್ಯಗಳನ್ನು ಒದಗಿಸುವುದು.
- ಗ್ರಾಮಾಂತರ ಹಾಗೂ ನಗರ ಪ್ರದೇಶದ ಹಿರಿಯ ನಾಗರಿಕರಿಗೆ ರಕ್ಷಣೆ

ಒದಗಿಸುವುದು.

- ಪೊಲೀಸ್ ಇಲಾಖೆಯಿಂದ ಆದ್ಯತೆ ಮೇರೆಗೆ ವಿಶೇಷ ಸೇವೆ ಒದಗಿಸುವುದು.
- ಉಚಿತ ಕಾನೂನು ಸಲಹೆ ನೀಡುವುದು.
- ಸಾಮಾಜಿಕ ಹಾಗೂ ಕೌಟುಂಬಿಕ ತೊಂದರೆಗಳಿಂದ ಮಾನಸಿಕವಾಗಿ ಅಸ್ವಸ್ಥರಾದ ಹಿರಿಯರಿಗೆ ಸಮಯೋಚಿತವಾಗಿ ಅಗತ್ಯ ವೈದ್ಯಕೀಯ ನೆರವು, ಸೂಕ್ತ ಸಲಹೆ, ಮಾರ್ಗದರ್ಶನ ನೀಡುವುದು.

ಈ ಯೋಜನೆಗಳಲ್ಲಿ ಅಡಕವಾಗಿರುವ ಸೌಲಭ್ಯಗಳೇ ಅಲ್ಲದೆ ರಾಜ್ಯ ಸರ್ಕಾರವು ಬಡತನದ ಕೆಳಗಿನ ರೇಖೆ (Below Poverty Line) ಯಲ್ಲಿರುವ ವೃದ್ಧರಿಗೆ 400ರೂಪಾಯಿಗಳ ಮಾಸಿಕ ವೃದ್ಧಾಪ್ಯ ವೇತನವನ್ನು ನೀಡುತ್ತಿದೆ.

ಹಿರಿಯ ನಾಗರಿಕರ ಹಿತರಕ್ಷಣಾ ಕಾರ್ಯದಲ್ಲಿ ಸರ್ಕಾರದ ಪಾತ್ರದೊಂದಿಗೆ ಹಲವಾರು ಸಮಾಜ ಸೇವಾ ಸಂಸ್ಥೆಗಳೂ ಸಹ ನಾನಾರೀತಿಯಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ತಮ್ಮದೇ ಆದ ರೀತಿಯಲ್ಲಿ ಹಿರಿಯರಿಗೆ ನೆರವನ್ನು ನೀಡುತ್ತಿವೆ.

ಪ್ರತಿವರ್ಷ ಅಕ್ಟೋಬರ್ 1ನೇ ತಾರೀಖನ್ನು ವಿಶ್ವ ಹಿರಿಯರ ದಿನಾಚರಣೆಯೆಂದು ಘೋಷಿಸಲಾಗಿದೆ. ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯು ಸ್ವಯಂ ಸೇವಾ ಸಂಘಗಳ ಸಹಯೋಗದೊಂದಿಗೆ ಆಚರಿಸಲು ವ್ಯವಸ್ಥೆ ಮಾಡುತ್ತದೆ. ಅಂದಿನ ದಿನ ಆ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಆರು ಜನ ಹಿರಿಯ ನಾಗರಿಕರನ್ನು ಸನ್ಮಾನಿಸಲಾಗುತ್ತದೆ.

ಹಿರಿಯ ನಾಗರಿಕರು –ಸವಲತ್ತುಗಳು

ಸರ್ಕಾರದ ಹಲವಾರು ಯೋಜನೆಗಳಿಂದ, ರೂಪಿಸಿದ ಕಾರ್ಯಕ್ರಮ ಗಳಿಂದ ಹಿರಿಯ ನಾಗರಿಕರಿಗೆ ದೊರಕುವ ಯೋಜನೆಗಳನ್ನು ತಿಳಿದಂತಾಯಿತು.

ಇದಲ್ಲದೆ ಹಿರಿಯರಿಗೆ ಕೆಲವೊಂದು ವಿಶೇಷ ಸವಲತ್ತುಗಳನ್ನು ಸಹ ರೂಪಿಸಲಾಗಿದೆ.

ಸಾಮಾನ್ಯವಾಗಿ ನಿವೃತ್ತರಾಗುವ ಎಲ್ಲ ಉದ್ಯೋಗಿಗಳಿಗೂ ನಿವೃತ್ತಿ ವೇತನದ ಸೌಲಭ್ಯವಿರುವುದಿಲ್ಲ. ರಾಜ್ಯ ಹಾಗೂ ಕೇಂದ್ರ ಸರ್ಕಾರದಲ್ಲಿದ್ದ ಉದ್ಯೋಗದಿಂದ ನಿವೃತ್ತವಾಗುವವರಿಗೆ ಮಾತ್ರ ಈ ಸೌಲಭ್ಯ ದಕ್ಕುತ್ತದೆ. ಕೈಗಾರಿಕಾಕ್ಷೇತ್ರದಲ್ಲಿ ನಿವೃತ್ತರಾಗುವವರಿಗೆ, ಖಾಸಗೀ ಕ್ಷೇತ್ರದಲ್ಲಿರುವವರಿಗೆ ನಿವೃತ್ತಿ

ವೇತನದ ಯೋಜನೆ ಅನ್ವಯವಾಗುವುದಿಲ್ಲ. ಸೇವಾಂತ್ಯದಲ್ಲಿ ಅವರಿಗೆ ದೊರಕುವ ಭವಿಷ್ಯ ನಿಧಿ (Provident Fund) ಉಪಾದಾನ(Gratuity)ಹಾಗೂ ಅಲ್ಪಸ್ವಲ್ಪ ಕೂಡಿಟ್ಟ ಉಳಿತಾಯ ಮಾಡಿದ ಹಣವೇ ಅವರ ಜೀವನದ ಶ್ರೀರಕ್ಷೆಯಾಗಿ ಅವರನ್ನು ಜೀವನಾದ್ಯಂತ ಕಾಪಾಡುವುದು. ಆದರೆ ಹಣದುಬ್ಬರದ ಇಂದಿನ ದಿನಗಳಲ್ಲಿ ಬಡ್ಡಿಯ ದರವು ಕುಂಠಿತವಾಗುತ್ತಿದೆ ಅಲ್ಲದೆ ಹೆಚ್ಚಿನ ಬಡ್ಡಿಯ ಆಕರ್ಷಣೆಗೆ ಮನಸೋತು ಅನೇಕ ನಿವೃತ್ತರಾದವರು ವಂಚಕರ ಬಲೆಗೆ ಬಿದ್ದು ತಮ್ಮ ಇಡೀ ಇಡುಗುಂಟನ್ನೇ ಕಳೆದುಕೊಂಡಿದ್ದಾರೆ.

ಈ ಕಾರಣದಿಂದ ಹಿರಿಯ ನಾಗರಿಕರಿಗೆಂದೇ ರೂಪಿತವಾದ ಒಂದು ಉಳಿತಾಯ ಯೋಜನೆಯನ್ನೂ ಸರ್ಕಾರದವರು ಜಾರಿಗೆ ತಂದಿದ್ದಾರೆ.

ಹಿರಿಯ ನಾಗರಿಕರ ಉಳಿತಾಯ ಯೋಜನೆ -2004

(Senior Citizens Savings Scheme 2004) ಎಂದು ಹೆಸರಿಸಲಾದ ಈ ಯೋಜನೆಯ ಪ್ರಮುಖಾಂಶಗಳು ಹೀಗಿವೆ:

ವಾರ್ಷಿಕ ಬಡ್ಡಿ : ಶೇ. 9.3 ಮೂರುತಿಂಗಳಿಗೊಮ್ಮೆ ನೀಡಲಾಗುತ್ತದೆ.

ಠೇವಣಿಯ ಅವಧಿ: 5 ವರ್ಷಗಳು

ಠೇವಣಿ ಮಾಡಬಹುದಾದ ಮೊತ್ತ: ಕನಿಷ್ಠ ಒಂದು ಸಾವಿರ ಗರಿಷ್ಠ 15 ಲಕ್ಷ

ಅರವತ್ತು ವರ್ಷಗಳನ್ನು ಪೂರೈಸಿರುವ ಹಿರಿಯರು ಈ ಯೋಜನೆಯಲ್ಲಿ ಹಣವನ್ನು ಹೂಡಬಹುದು.

ಈ ಯೋಜನೆಯ ಮತ್ತೊಂದು ವಿಶೇಷತೆ ಎಂದರೆ ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿಯಲ್ಲಿ, ಯೋಜನೆಯಲ್ಲಿ ಹೂಡಲಾಗುವ ಒಂದು ಲಕ್ಷ ರೂಪಾಯಿಗಳವರೆಗಿನ ಮೊತ್ತಕ್ಕೆ ಆದಾಯ ತೆರಿಗೆಯ ವಿನಾಯಿತಿ ಲಭ್ಯವಿರುತ್ತದೆ.

ಗೃಹ ವಾಪಸ್ ಅಡಮಾನ ಸಾಲಯೋಜನೆ

ಸಂಪೂರ್ಣವಾಗಿ ಹಿರಿಯ ನಾಗರಿಕರಿಗೆಂದೇ ಕೇಂದ್ರಸರ್ಕಾರ ಜಾರಿಗೆ ತಂದಿರುವ ಗೃಹವಾಪಸ್ ಅಡಮಾನ ಸಾಲಯೋಜನೆ (Reverse Mortgage Loan for Senior Citizens) ಯನ್ನು ಉಲ್ಟಾ ಅಡಮಾನ ಸಾಲಯೋಜನೆ ಎಂದೂ ಕರೆಯಲಾಗುತ್ತದೆ.

ಈ ಯೋಜನೆಯನ್ವಯ ತಮ್ಮ ಹೆಸರಿನಲ್ಲಿ ಸ್ವಂತಮನೆ ಹೊಂದಿರುವ 60 ವರ್ಷ ದಾಟಿರುವ ಭಾರತೀಯ ನಾಗರೀಕರಾಗಿರುವ ಯಾವುದೇ ವ್ಯಕ್ತಿ ತಾನು ಕಟ್ಟಿಕೊಂಡಿರುವ ಮನೆಯ ಆಧಾರದ ಮೇಲೆ ಹಣದ ನೆರವನ್ನು ಪಡೆಯಲು ಈ ಅವಕಾಶ ದೊರಕಿದಂತಾಗಿದೆ.

ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿ, ತಂದೆ ತಾಯಿಗಳನ್ನು ಉದಾಸೀನವಾಗಿ ಕಾಣುವ ಮಕ್ಕಳು, ವಯಸ್ಸಾದಂತೆ ಕಾಯಿಲೆ-ಕಸಾಲೆಗಳಾಗಿ, ಅವುಗಳ ನಿವಾರಣೆಗೆ ಅಗತ್ಯವಾಗಿ ಭರಿಸಲೇ ಬೇಕಾದ ವೈದ್ಯಕೀಯ ಖರ್ಚು, ಎಲ್ಲಕ್ಕೂ ಮಿಗಿಲಾಗಿ ಕುಂಠಿತವಾಗುತ್ತಿರುವ ಆದಾಯ- ಇವೆಲ್ಲಾ ಹಿರಿಯ ನಾಗರಿಕರನ್ನು ಸಂಕಷ್ಟದತ್ತ ದೂಡುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಜೀವನ ಸಾಗಿಸುವುದೇ ಅಸಾಧ್ಯ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ವೃದ್ಧಾಪ್ಯ ಒಂದು ಶಾಪ ಎನ್ನುವ ಮನೋಭಾವ ಬೆಳೆಯುತ್ತಿದೆ.

ಇಂತಹ ಸಂದರ್ಭದಲ್ಲಿ ಗೃಹ ವಾಪಸ್ ಅಡಮಾನ ಸಾಲಯೋಜನೆಯು ಸ್ವಂತ ಮನೆ ಹೊಂದಿರುವ ಹಿರಿಯ ನಾಗರಿಕರಿಗೆ ಆರ್ಥಿಕ ಸಬಲತೆಯನ್ನು ನೀಡುವುದರಲ್ಲಿ ಸಹಾಯವಾಗಬಹುದೆಂದು ಭಾವಿಸಬಹುದು. ಭಾವೀ ಜೀವನದ ಸುರಕ್ಷತೆಗಾಗಿ ಈ ಹಿಂದೆ ಸಾಲ ಸೋಲ ಮಾಡಿ ಕಷ್ಟಪಟ್ಟು ಕಟ್ಟಿದ್ದ ಮನೆ ಈಗಿನ ವೃದ್ಧಾಪ್ಯದಲ್ಲಿ ಸ್ವಂತ ಕಾಲ ಮೇಲೆ ನಿಲ್ಲಲು ಸಹಕಾರಿಯಾಗುವ ಈ ಯೋಜನೆ ಬಹುಜನ ಹಿರಿಯ ನಾಗರಿಕರ ಆಕರ್ಷಣೆ.

ಯೋಜನೆಯ ಹಲವು ವಿಶೇಷತೆಗಳು

ಈಗಾಗಲೇ ಹಲವಾರು ದೇಶಗಳಲ್ಲಿ ಇಂತಹ ಯೋಜನೆಗಳು ಜಾರಿಗೆ ಬಂದಿದ್ದರೂ, ಭಾರತದಲ್ಲಿ ಇದು ಜಾರಿಗೆ ಬಂದಿರುವುದು ಇತ್ತೀಚೆಗೆ.

ಹಿರಿಯ ನಾಗರಿಕರಿಗೆ ಅವರ ಸಂಧ್ಯಾಕಾಲದಲ್ಲಿನ ಆರ್ಥಿಕ ಸಂಕಷ್ಟ ದೂರ ಮಾಡುವುದು, ಬೆಲೆ ಬಾಳುವ ಅಮೂಲ್ಯ ಸ್ಥಿರಾಸ್ತಿ ಹೊಂದಿದ್ದರೂ ಜೀವನ ನಿರ್ವಹಣೆಗೆ, ತಮ್ಮ ಅವಶ್ಯಕತೆಗಳಿಗೆ ಸಾಕಷ್ಟು ಆದಾಯ ಹೊಂದಿಸಿ ಕೊಳ್ಳಲಾರದವರಿಗೆ ಈ ಯೋಜನೆಯಿಂದ ಪ್ರಯೋಜನ ದೊರಕಿಸಿಕೊಡುವುದು ಇದರ ಮುಖ್ಯ ಉದ್ದೇಶ.

ಯೋಜನೆಯ ಲಾಭ ಪಡೆಯಲು ಇರಬೇಕಾದ ಅರ್ಹತೆ

ಅರ್ಜಿದಾರರು ತಮ್ಮ ಹೆಸರಿನಲ್ಲಿ ಸ್ವಂತಮನೆ ಹೊಂದಿರಬೇಕು (ಪಿತ್ರಾರ್ಜಿತವಾಗಿ ಪಡೆದಿರತಕ್ಕ ಆಸ್ತಿಯ ವಾರಸುದಾರರು ಈ ಯೋಜನೆಯಲ್ಲಿ

ಸೌಲಭ್ಯ ಪಡೆಯಲು ಅರ್ಹರಲ್ಲ) ಅಲ್ಲದೆ ಅದೇ ಮನೆಯಲ್ಲಿ ವಾಸಿಸುತ್ತಿರಬೇಕು. ಹಾಗೆ ವಾಸಮಾಡುತ್ತಿರುವ ಪುರಾವೆಗಾಗಿ ಸಾಕ್ಷ್ಯಾಧಾರ ಒದಗಿಸಬೇಕಾಗುತ್ತದೆ.

ವಯಸ್ಸು 60 ವರ್ಷ ದಾಟಿದವರಾಗಿರಬೇಕು. ಜಂಟೀ ಅರ್ಜಿದಾರರಾಗಿದ್ದರೆ ಹೆಂಡತಿಯ ವಯಸ್ಸು ಕನಿಷ್ಠ 55 ಆಗಿರಬೇಕು.

ಈ ನಿಬಂಧನೆಗಳನ್ನು ಪೂರೈಸಿದವರು ಈ ಯೋಜನೆಯಲ್ಲಿ ಆರ್ಥಿಕ ನೆರವು ಪಡೆಯಬಹುದು. ಸಾಲ ಪಡೆಯಲು ಯಾವುದೇ ವರಮಾನದ ಪುರಾವೆಯ ಅವಶ್ಯಕತೆ ಇರುವುದಿಲ್ಲ.

ಸಾಲ ನೀಡುವ ಸಂಸ್ಥೆಗಳು

ಯೋಜನೆ ಆರಂಭವಾದ ಮೊದಲಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಭಾರತೀಯ ಸ್ಟೇಟ್ ಬ್ಯಾಂಕ್ ದಿವಾನ್ ಹೌಸಿಂಗ್ ಫೈನಾನ್ಸ್ ಮುಂತಾದ ಗೃಹಸಾಲ ಸಂಸ್ಥೆಗಳು ಯೋಜನೆಯಲ್ಲಿ ತೊಡಗಿಕೊಂಡವು. ತದನಂತರದಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ವಿಜಯಾ ಬ್ಯಾಂಕ್ ಮತ್ತು ಎಲ್.ಐ.ಸಿ. ಹೌಸಿಂಗ್ ಫೈನಾನ್ಸ್ ಸಂಸ್ಥೆಗಳೂ ಕೂಡ ಸೇರಿಕೊಂಡಿವೆ. ಈ ಕ್ಷೇತ್ರದಲ್ಲಿ ಅಗಾಧ ಬೆಳವಣಿಗೆಗೆ ಅವಕಾಶವಿರುವುದನ್ನು ಮನಗಂಡು ಮತ್ತು ಹಲವಾರು ಬ್ಯಾಂಕುಗಳು ಹಾಗೂ ಗೃಹಸಾಲ ಸಂಸ್ಥೆಗಳು ಈ ಕ್ಷೇತ್ರವನ್ನು ಪ್ರವೇಶಿಸುವ ಸಿದ್ಧತೆಯಲ್ಲಿವೆ.

ಸಾಲ ಮತ್ತು ಬಡ್ಡಿಯ ಪ್ರಮಾಣ

ಸಾಮಾನ್ಯವಾಗಿ ಅರ್ಜಿದಾರನ ಹೆಸರಿನಲ್ಲಿ ಆಸ್ತಿಯ ಮಾರುಕಟ್ಟೆಯ ಮೌಲ್ಯದ ಆಧಾರದ ಮೇಲೆ ಅಡಮಾನ ಸಾಲ ನೀಡಲಾಗುತ್ತದೆ. ಹಾಗೂ ಆತನ ವಯೋಮಾನದ ಮೇಲೆ ನಿರ್ಧರಿಸಲ್ಪಡುತ್ತದೆ.

ಅರ್ಜಿದಾರನ ವಯಸ್ಸು	ಆದಾಯ ಮೌಲ್ಯದ ಮೇಲೆ ನೀಡಲಾಗುವ ಸಾಲದ ಪ್ರಮಾಣ
60-65 ವರ್ಷಗಳು	ಶೇ. 40
66-70 ವರ್ಷಗಳು	ಶೇ. 50
71-75 ವರ್ಷಗಳು	ಶೇ. 55
75 ವರ್ಷಕ್ಕೆ ಮೇಲ್ಪಟ್ಟು	ಶೇ. 60

ಅಡಮಾನದ ಅವಧಿ ಗರಿಷ್ಠ 15 ವರ್ಷಗಳಾಗಿರುತ್ತದೆ. ನೀಡಲಾಗುವ

ಸಾಲದ ಮೊತ್ತ ಒಂದು ಲಕ್ಷದಿಂದ 50 ಲಕ್ಷ. ಸಾಲದ ಮೊಬಲಗನ್ನು ಒಂದೇ ಇಡುಗಂಟಿನಲ್ಲಾದರೂ ಪಡೆಯಬಹುದು. ಅಥವಾ ವರ್ಷಕ್ಕೆ ಒಂದು ಸಲದಂತೆ ಬೇಕಾದರೂ ತೆಗೆದುಕೊಳ್ಳಬಹುದು.

ಹೀಗೆ ಸಾಲ ಪಡೆಯುವ ಮೊಬಲಗಿಗೆ ವಾರ್ಷಿಕ ಬಡ್ಡಿಯದರ ಶೇ. 10ರಷ್ಟಿರುತ್ತದೆ. ಸಾಲ ನೀಡುವ ಪ್ರಮಾಣ ಹಾಗೂ ವಿಧಿಸುವ ಬಡ್ಡಿದರ ಸಾಲ ನೀಡುವ ಹಣಕಾಸಿನ ಸಂಸ್ಥೆಗಳ ನೀತಿ ನಿಯಮಗಳಿಗೆ ಅನುಗುಣವಾಗಿ ಒಳಪಟ್ಟಿರುತ್ತದೆ. ಹಾಗಾಗಿ ಒಂದೊಂದು ಸಂಸ್ಥೆಯ ವಿಧಿಸುವ ಬಡ್ಡಿಯ ದರದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವಿರಬಹುದು. ಆದರೂ ಸಹ ಸದ್ಯದ ಪರಿಸ್ಥಿತಿಯಲ್ಲಿ ಬಡ್ಡಿಯ ದರ 11% ಕ್ಕಿಂತ ಜಾಸ್ತಿಯಿರುವುದಿಲ್ಲ.

ಯಾವ ಕಾರಣಗಳಿಗೆ ಸಾಲ ಪಡೆಯಬಹುದು? ಹಾಗೂ ಬಳಸಿಕೊಳ್ಳಬಹುದು?

ಈ ಯೋಜನೆಯಲ್ಲಿ ಪಡೆದ ಹಣವನ್ನು ತನ್ನ ಸಂಸಾರದ ಅಗತ್ಯತೆ ಹಾಗೂ ತುರ್ತು ಖರ್ಚುಗಳಿಗೆ ಬಳಸಿಕೊಳ್ಳುವ ಅಧಿಕಾರವನ್ನು ಅರ್ಜಿದಾರನು ಹೊಂದಿರುತ್ತಾನೆ.

ಇತರೆ ಖರ್ಚುಗಳಿಗೆ ಅಂದರೆ ವೈದ್ಯಕೀಯ ಖರ್ಚು, ಮನೆಯ ದುರಸ್ತಿ ಕಾರ್ಯ, ನವೀಕರಣ, ವಿಸ್ತರಣೆ ಮುಂತಾದ ಬಾಬತ್ತುಗಳಿಗೆ ಸಹ ಈ ಹಣವನ್ನು ಬಳಸಿಕೊಳ್ಳಬಹುದು.

ಆದರೆ ಸಟ್ಟಾರೀತಿಯ ವ್ಯವಹಾರಗಳು (speculation activition) ಅಥವಾ ವ್ಯಾಪಾರಕ್ಷೇತ್ರಗಳಿಗೆ ಈ ಹಣವನ್ನು ತೊಡಗಿಸಬಾರದು.

ಅಡಮಾನ ಸಾಲದ ಹಿಂತಿರುಗಿಸುವಿಕೆ

ಅಡಮಾನ ಸಾಲದ ಅವಧಿಯ ನಂತರ ಸಾಲ ಪಡೆದಾತನು ತಾನು ಪಡೆದ ಸಾಲವನ್ನು ಹಿಂದಿರುಗಿಸಬಹುದು. ಹಾಗೆ ಹಿಂದಿರುಗಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಸಾಲ ನೀಡಿದ ಸಂಸ್ಥೆಯು ಅಂದಿನ ಮಾರುಕಟ್ಟೆ ದರದಲ್ಲಿ ಆಸ್ತಿಯನ್ನು ಮಾರಾಟಮಾಡಿ ಸಾಲದ ಹಣವನ್ನು ಉತ್ತಾರ ಹಾಕಿಕೊಂಡು ಉಳಿದ ಹಣವನ್ನು ಆತನಿಗೆ ಹಿಂತಿರುಗಿಸುವುದು.

ದುರದೃಷ್ಟವಶಾತ್ ಅವಧಿಗೆ ಮುಂಚಿತವಾಗಿಯೇ ಫಲಾನುಭವಿಯು ನಿಧನ ಹೊಂದಿದರೆ, ಅಂತಹ ಸಂದರ್ಭದಲ್ಲಿಯೂ ಆಸ್ತಿಯನ್ನು ಮಾರಾಟ ಮಾಡಿ ಸಾಲಕ್ಕೆ ಉತ್ತಾರ ಹಾಕಿಕೊಂಡು ಉಳಿದ ಹಣವನ್ನು ಆತನ ವಾರಸುದಾರರಿಗೆ

ನೀಡಲಾಗುವುದು. ಆದರೆ ಹೀಗೆ ಮಾಡುವ ಮುಂಚೆ ಕಾನೂನು ಪ್ರಕಾರ ವಾರಸುದಾರರಿಗೆ / ಉತ್ತರಾಧಿಕಾರಿಗೆ ತಿಳವಳಿಕೆ ಕೊಟ್ಟು ಸಾಲದ ಮರುಪಾವತಿಗೆ ಸೂಕ್ತ ಅವಕಾಶ ನೀಡಲಾಗುವುದು. ಈ ಸಾಲ ತೀರಿಸುವಿಕೆಯಲ್ಲಿ ಆತನ ಆಸಕ್ತಿ/ಅನಾಸಕ್ತಿ ಮತ್ತು ಶಕ್ತತೆಯನ್ನು ಪರಿಗಣಿಸಲಾಗುವುದು. ನಂತರ ಆತನು ಯಾವ ಕ್ರಮಗಳನ್ನು ಕೈಗೊಳ್ಳುತ್ತಾನೆಂಬುದರ ಮೇಲೆ ನಿರ್ಧರಿಸಿ ಆಸ್ತಿಯ ಮಾರಾಟದ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.

ಪಡೆದ ಸಾಲಕ್ಕೆ ಆದಾಯ ತೆರಿಗೆ ಇದೆಯೇ?

ಈ ಯೋಜನೆಯಡಿ ಪಡೆಯುವ ಹಣವನ್ನು ಸಾಲ ಎಂದು ಪರಿಗಣಿಸಲಾಗುವುದೇ ಹೊರತು ಆದಾಯ ಎಂದಲ್ಲ. ಆ ಕಾರಣದಿಂದ ಈ ಹಣಕ್ಕೆ ಆದಾಯ ತೆರಿಗೆ ವಿಧಿಸುವುದಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ವೃದ್ಧಾಪ್ಯದ ಅಂಚಿನಲ್ಲಿದ್ದ ಸ್ವಂತ ಆಸ್ತಿ ಹೊಂದಿರುವ ಹಾಗೂ ನಿಶ್ಚಿತ ಆದಾಯವಿಲ್ಲದ, ಹಣದ ಅಗತ್ಯತೆ ಹೊಂದಿರುವವರಿಗೆ ಈ ಯೋಜನೆಯಿಂದ ಪ್ರಯೋಜನವಾಗಬಹುದು.

ಯೋಜನೆಯ ಪ್ರಯೋಜನ ಪಡೆಯಲಿಚ್ಛಿಸುವವರು ಆ ಬಗ್ಗೆ ವಿವರಗಳನ್ನೂ, ಸಂಬಂಧ ಪಟ್ಟ ಸಂಸ್ಥೆಗಳಿಂದ ಸಂಪೂರ್ಣವಾಗಿ ಪಡೆದು, ತಿಳಿದುಕೊಂಡು, ತಜ್ಞರಿಂದ ನೆರವನ್ನೂ ಪಡೆದುಕೊಂಡು ವ್ಯವಹರಿಸುವುದು ಸೂಕ್ತ.

ಹಿರಿಯ ನಾಗರಿಕರು – ರಿಯಾಯತಿಗಳು

ಹಿರಿಯ ನಾಗರಿಕರಿಗೆ ಹಲವಾರು ಪ್ರತ್ಯೇಕ ಕಾನೂನುಗಳು ಹಾಗೂ ಸೌಲಭ್ಯಗಳನ್ನು ನೀಡಿರುವುದೇ ಅಲ್ಲದೆ ಹಲವಾರು ರೀತಿಯ ರಿಯಾಯತಿಗಳೂ ಲಭ್ಯವಿದೆ.

ಅವುಗಳಲ್ಲಿ ಈ ಕೆಳಗಿನವುಗಳನ್ನು ಪ್ರಮುಖವಾಗಿ ಹೆಸರಿಸಬಹುದು.

1. ಬ್ಯಾಂಕ್ ಠೇವಣಿಗಳಿಗೆ ಹೆಚ್ಚಿನ ಬಡ್ಡಿ

ಬ್ಯಾಂಕ್‌ನಲ್ಲಿ ಹಿರಿಯ ನಾಗರಿಕರು ಹೂಡುವ ಠೇವಣಿಗಳಿಗೆ ಸಾಮಾನ್ಯವಾಗಿ ನೀಡುವ ಬಡ್ಡಿಯ ದರಕ್ಕಿಂತ ಶೇ. 0.5ರಿಂದ ಶೇ. 1 ರವರೆಗೆ ಅಧಿಕ ಬಡ್ಡಿಯನ್ನು ನೀಡಲಾಗುತ್ತದೆ. ಈ ಸೌಲಭ್ಯವು ರಾಷ್ಟ್ರೀಕೃತ ಬ್ಯಾಂಕುಗಳು, ಷೆಡ್ಯೂಲ್ ಬ್ಯಾಂಕ್‌ಗಳೇ ಅಲ್ಲದೆ ಸಹಕಾರಿ ಬ್ಯಾಂಕ್‌ಗಳಲ್ಲಿಯೂ ಲಭ್ಯವಿರುತ್ತವೆ.

ಅಲ್ಲದೆ ಕೆಲವೊಂದು ಬ್ಯಾಂಕ್‌ಗಳು ಹಿರಿಯ ನಾಗರಿಕರು ಇಟ್ಟಿರುವ ಠೇವಣಿಯನ್ನು ಅವಧಿಗೆ ಮುಂಚೆಯೇ ವಾಪಸ್ ಪಡೆದಾಗ (Prematured Closer of Deposit) ಯಾವುದೇ ಶುಲ್ಕವನ್ನು ವಿಧಿಸುವುದಿಲ್ಲ.

ರೈಲ್ವೆ ಪ್ರಯಾಣದಲ್ಲಿ ರಿಯಾಯತಿ

ಹಿರಿಯ ನಾಗರಿಕರಿಗೆ ರೈಲ್ವೆ ಪ್ರಯಾಣದಲ್ಲಿ ಗಣನೀಯವಾದ ರಿಯಾಯತಿಯನ್ನು ನೀಡಲಾಗುತ್ತಿದೆ. 60 ವರ್ಷ ದಾಟಿದ ಹಿರಿಯರಾದ ಪುರುಷರಿಗೆ ಟಿಕೆಟ್ ದರದ ಶೇ. 40ರಷ್ಟನ್ನು ರಿಯಾಯತಿ ನೀಡಿದರೆ, 58 ವರ್ಷ ದಾಟಿದ ಮಹಿಳೆಯರಿಗೆ ಶೇ. 50 ರಷ್ಟನ್ನು ರಿಯಾಯತಿಗೆ ನೀಡಲಾಗುತ್ತದೆ.

ರೈಲು ಟಿಕೇಟನ್ನು ಪಡೆಯುವಾಗ ಹಿರಿಯ ನಾಗರಿಕರು ಯಾವ ದಾಖಲೆಯನ್ನು ನೀಡಬೇಕಿಲ್ಲವಾದರೂ, ಪ್ರಯಾಣಿಸುವಾಗ ತನಿಖಾಧಿಕಾರಿಗಳು ಕೇಳಿದಾಗ ಹಿರಿಯ ನಾಗರಿಕರೆಂಬುದಕ್ಕೆ ದಾಖಲೆಯನ್ನು ನೀಡಬೇಕಾಗುತ್ತದೆ.

ಇತರೆ ಸಾರಿಗೆಗಳಲ್ಲಿ ರಿಯಾಯತಿ

ಹಲವಾರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು, ಕೆಲವು ಖಾಸಗಿ ಸಾರಿಗೆ ಸಂಸ್ಥೆಗಳಲ್ಲಿ ಹಿರಿಯ ನಾಗರಿಕರಿಗೆ ಪ್ರಯಾಣದ ದರದಲ್ಲಿ ರಿಯಾಯತಿಯನ್ನು ನೀಡುತ್ತವೆ. ಅಲ್ಲದೆ ವಿಮಾನ ಸಾರಿಗೆಯಲ್ಲಿಯೂ ಸಹ ರಿಯಾಯತಿಯ ಸೌಲಭ್ಯವಿದೆ. ಆದರೆ ಈ ರಿಯಾಯತಿಯ ಸೌಲಭ್ಯವನ್ನು ಪಡೆಯಲಿಚ್ಛಿಸುವವರು ಪ್ರಯಾಣದ ಮುಂಚೆ ಸಂಬಂಧಪಟ್ಟವರಲ್ಲಿ ವಿಚಾರಿಸಿ ತಿಳಿದುಕೊಂಡು ಪ್ರಯಾಣಿಸುವುದು ಒಳ್ಳೆಯದು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹಿರಿಯ ನಾಗರಿಕರಿಗೆ ರಿಯಾಯತಿ

ಕರ್ನಾಟಕ ರಾಜ್ಯ ರಸ್ತೆ ನಿಗಮವೂ ಸಹ ಹಿರಿಯ ನಾಗರಿಕರಿಗೆ ಪ್ರಯಾಣದರದಲ್ಲಿ ರಿಯಾಯತಿಯನ್ನು ನೀಡುವ ಮೂಲಕ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಗಣನೀಯವಾದ ಪಾತ್ರವನ್ನು ನಿರ್ವಹಿಸುತ್ತಿದೆ. ಈಗಾಗಲೇ ಸ್ವಾತಂತ್ರ್ಯ ಹೋರಾಟಗಾರರು, ಅಂಧರಿಗೆ ಉಚಿತ ಸಾರಿಗೆ ಸೌಲಭ್ಯವನ್ನೂ ವಿದ್ಯಾರ್ಥಿಗಳಿಗೆ ಮತ್ತು ಪತ್ರಕರ್ತರಿಗೆ ರಿಯಾಯತಿ

ಪ್ರಯಾಣದ ಸೌಲಭ್ಯವನ್ನು ಕಲ್ಪಿಸಿದೆ.

ಹಿರಿಯ ನಾಗರಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ದಿನಾಂಕ 25.09.08ರಿಂದ ಜಾರಿಗೆ ಬರುವಂತೆ ಪ್ರಯಾಣದರದಲ್ಲಿ ರಿಯಾಯತಿಯನ್ನು ನೀಡಲಾಗುತ್ತಿದೆ. ಈ ರೀತಿ ರಿಯಾಯತಿ ನೀಡಲು ಈ ಕೆಳಕಂಡ ನಿಬಂಧನೆಗಳನ್ನು ಅನುಸರಿಸಬೇಕಾಗುತ್ತದೆ.

1. 65ವರ್ಷ ಮತ್ತು ಅದಕ್ಕೂ ಮೀರಿದ ವಯಸ್ಸಿನ ಹಿರಿಯ ನಾಗರಿಕರಿಗೆ ಪ್ರಯಾಣದರದಲ್ಲಿ ಶೇ. 25ರಷ್ಟು ರಿಯಾಯತಿ ನೀಡಲಾಗುವುದು.

2. ಈ ರಿಯಾಯತಿಯನ್ನು ಪಡೆಯಲು ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ನಿರ್ದೇಶನಾಲಯದವರು ವಿತರಿಸುವ ಭಾವಚಿತ್ರ ಇರುವ ಗುರುತಿನ ಚೀಟಿಯನ್ನು ಹೊಂದಿರಬೇಕು ಮತ್ತು ದರ ರಿಯಾಯತಿಯನ್ನು ಪಡೆಯಲು ಈ ಗುರುತಿನ ಚೀಟಿಯನ್ನು ತೋರಿಸಬೇಕಾಗುತ್ತದೆ. ಚಾಲನಾ ಪರವಾನಗಿ (ಡ್ರೈವಿಂಗ್ ಲೈಸೆನ್ಸ್) ಮತ್ತು ಚುನಾವಣಾ ಆಯೋಗದವರು ನೀಡಿರುವ ಗುರುತಿನ ಚೀಟಿ (ವೋಟರ್ ಐಡಿ) ಯನ್ನೂ ತೋರಿಸಬಹುದು. ಮುಂದೆ ನಿಗಮವು ತಾನೇ ಗುರುತಿನ ಚೀಟಿಯನ್ನು ವಿತರಿಸುವ ಯೋಜನೆಯನ್ನು ಹೊಂದಿದೆ. ಆಗ ಆ ಗುರುತಿನ ಚೀಟಿಯನ್ನು ಹೊಂದಿರುವವರಿಗೆ ಮಾತ್ರ ರಿಯಾಯತಿ ಸೌಲಭ್ಯ ನೀಡುವುದು.

3. ರಿಯಾಯತಿ ದರವು ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ ಪ್ರಯಾಣಿಸುವವರಿಗೆ ಮಾತ್ರ ದೊರೆಯುತ್ತದೆ.

4. ಪ್ರಯಾಣದ ದೂರದ ಯಾವುದೇ ಮಿತಿಯಿಲ್ಲದೆ ಈ ರಿಯಾಯತಿ ಸೌಲಭ್ಯವನ್ನು ಪಡೆಯಬಹುದು.

5. ಈ ರಿಯಾಯತಿ ಪ್ರಯಾಣದ ಸೌಲಭ್ಯವು ರಾಜ್ಯದೊಳಗೆ ಪ್ರಯಾಣಿಸಲು ಮಾತ್ರ ಅನ್ವಯವಾಗುತ್ತದೆ.

6. ಮುಂಗಡ ಆಸನ ಕಾಯ್ದಿರಿಸಿದಾಗ (advance reservation) ಆಸನ ಕಾಯ್ದಿರಿಸುವ ಶುಲ್ಕವನ್ನು ಪಡೆದು ಪ್ರಯಾಣದರದಲ್ಲಿ ಶೇ. 25ರಷ್ಟನ್ನು ರಿಯಾಯತಿ ನೀಡಲಾಗುವುದು.

ಅಲ್ಲದೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರು ಬೆಂಗಳೂರಿನಲ್ಲಿ ಸಂಚರಿಸುವ ಹಿರಿಯ ನಾಗರಿಕರು ಮಾಸಿಕ ಬಸ್ ಪಾಸನ್ನು ಪಡೆದಾಗ ಶೇ. 10ರಷ್ಟನ್ನು ರಿಯಾಯತಿ ನೀಡುವರು.

ಹಿರಿಯ ನಾಗರಿಕರ ಗುರುತಿನ ಚೀಟಿ

(Senior Citizens' Identity Card)

ಹಿರಿಯ ನಾಗರಿಕರ ಗುರುತಿನ ಚೀಟಿ ವಿತರಿಸುವ ಸರ್ಕಾರದ ಕಾರ್ಯ ಯೋಜನೆಯಡಿಯಲ್ಲಿ ಎಲ್ಲ ಹಿರಿಯ ನಾಗರಿಕರಿಗೆ ಈ ಗುರುತಿನ ಚೀಟಿಯನ್ನು ನೀಡಲು ಸರ್ಕಾರ ಕೆಲವೊಂದು ಸ್ವಯಂ ಸೇವಾಸಂಘಗಳನ್ನು ಮಾನ್ಯ ಮಾಡಿದೆ.

ರಾಜ್ಯದ ಹಿರಿಯ ನಾಗರಿಕರು ಈ ಯೋಜನೆಯ ಲಾಭ ಪಡೆದು ಅಧಿಕೃತ ಗುರುತಿನ ಚೀಟಿಯನ್ನು ಪಡೆದು ಕೊಳ್ಳಬಹುದು.

ಈ ಚೀಟಿಯಲ್ಲಿ ಆತನ ಭಾವಚಿತ್ರ, ಹೆಸರು, ಸಂಪೂರ್ಣವಿಳಾಸ ಹಾಗೂ ಸಂಪರ್ಕಿಸಬಹುದಾದ ದೂರವಾಣಿಯ ಸಂಖ್ಯೆಯನ್ನು ನಮೂದಿಸಲಾಗಿರುತ್ತದೆ. ಅಲ್ಲದೆ ಆತನ ಹುಟ್ಟಿದ ದಿನಾಂಕವನ್ನು ಸಹ ನಮೂದಿಸಲಾಗಿರುತ್ತದೆ.

ಚೀಟಿಯ ಹಿಂಬದಿಯಲ್ಲಿ ಆತನ ರಕ್ತದ ಗುಂಪಿನ ಬಗೆಗೆ ಮಾಹಿತಿ, ತುರ್ತು ಪರಿಸ್ಥಿತಿಯಲ್ಲಿ ಸಂಪರ್ಕಿಸಬೇಕಾದವರ ಹೆಸರು ಹಾಗೂ ಅವರ ದೂರವಾಣಿ ಸಂಖ್ಯೆಯನ್ನು ನಮೂದಿಸಲಾಗಿರುತ್ತದೆ.

ಹಾಗಾಗಿ ಅಕಸ್ಮಾತ್ ಮನೆಯಿಂದ ಹೊರಗೆ ಇದ್ದಾಗ ಏನಾದರೂ ಅವಗಡಗಳು ಸಂಭವಿಸಿದರೆ, ಮನೆಯವರಿಗೆ ವಿಷಯ ತಿಳಿಸಬೇಕಾದರೆ, ಈ ಚೀಟಿಯಿಂದ ಸಾಕಷ್ಟು ಮಾಹಿತಿ ದೊರಕುತ್ತದೆ. ಅಲ್ಲದೆ ತಕ್ಷಣವೇ ಆಸ್ಪತ್ರೆಗೆ ದಾಖಲಾಗಿ ರಕ್ತ ಕೊಡಬೇಕಾದ ಸಂದರ್ಭದಲ್ಲಿ ಆತನ ರಕ್ತದ ಗುಂಪು ಚೀಟಿಯಲ್ಲಿ ನಮೂದಿತವಾಗಿರುವುದರಿಂದ ತಕ್ಷಣದ ಕ್ರಮ ಕೈಗೊಳ್ಳಲು ನೆರವಾಗುತ್ತದೆ.

ಈ ಕಾರಣಗಳಿಂದಲೇ ಅಲ್ಲದೆ ಪ್ರಯಾಣ ಮಾಡುವಾಗ ವಯಸ್ಸನ್ನು ಸಮರ್ಥಿಸಲು, ರಿಯಾಯತಿಯ ಸೌಲಭ್ಯವನ್ನು ಪಡೆಯಲು ಈ ಚೀಟಿ ನೆರವಾಗುತ್ತದೆ. ಆದ್ದರಿಂದ ಈ ಚೀಟಿಯನ್ನು ಪಡೆದ ನಂತರ ಪ್ರತಿಯೊಬ್ಬ ಹಿರಿಯ ನಾಗರಿಕರು ಸದಾ ಕಾಲ ವಿಶೇಷವಾಗಿ ಮನೆಯಿಂದ ಹೊರಗೆ ನಾಗರಿಕರು ಸದಾ ಕಾಲ, ವಿಶೇಷವಾಗಿ ಮನೆಯಿಂದ ಹೊರಗೆ ಹೋದಾಗ ಈ ಚೀಟಿಯನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕು.

ದೈವಭಕ್ತಿ, ತಾಳ್ಮೆ, ದುಡಿಮೆ, ಮಾನವೀಯತೆ, ಹಾಸ್ಯಮನೋಭಾವ, ಸುಖಜೀವನದ ಪಂಚಸೂತ್ರಗಳು

ನಾಮ ನಿರ್ದೇಶನ - Nomination

ನಿವೃತ್ತಿಯ ನಂತರ ದೊರಕಿದ ಸೇವಾಂತ್ಯ ಸೌಲಭ್ಯಗಳಿಂದ (ಭವಿಷ್ಯ ನಿಧಿ, ಉಪದಾನ -ಮುಂತಾದವುಗಳಿಂದ) ದೊರಕಿದ ಹಣವನ್ನು ಯಾವ ರೀತಿ ಹೂಡಬೇಕು, ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು ಇವುಗಳ ಬಗ್ಗೆ ಕೂಲಂಕುಷವಾಗಿ ತಿಳಿದುಕೊಂಡ ನಂತರ, ಹೂಡಿದ ಠೇವಣಿಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕೆಲವು ಪ್ರಮುಖ ಅಂಶಗಳ ಬಗ್ಗೆ ತಿಳಿದು ಕೊಳ್ಳುವುದು ಅಗತ್ಯ.

ಠೇವಣಿ ಹೂಡಿದ ನಂತರ ಅದರ ಮೂಲಕ ಬರುವ ಪ್ರತಿಫಲವನ್ನು ಜೀವನಪೂರ್ತಿ ಅನುಭವಿಸಲು ತೆಗೆದುಕೊಳ್ಳಬೇಕಾದಷ್ಟು ಎಚ್ಚರಿಕೆಯನ್ನೇ ತಮ್ಮ ನಿಧನಾನಂತರ ಆ ಠೇವಣಿಯ ಮೊಬಲಗು ತಮ್ಮ ವಾರಸುದಾರರಿಗೆ ಸುಲಭವಾಗಿ, ಸುಲಲಿತವಾಗಿ ಯಾವ ವಿಧವಾದ ಕಾನೂನಿನ ತೊಡಕುಗಳೂ ಇಲ್ಲದೆ ಸಂದಾಯವಾಗುವಂತೆ ಕ್ರಮ ಕೈಗೊಳ್ಳಬೇಕಾದ್ದೂ ಅಷ್ಟೇ ಅಗತ್ಯವೂ ಹಾಗೂ ಅವಶ್ಯಕವೂ ಹೌದು. ಅಕಸ್ಮಾತ್ ಅಂತಹ ಸೂಕ್ತಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಮೃತರ ವಾರುಸುದಾರರಲ್ಲಿ ಪರಸ್ಪರ ತಕರಾರು-ಚಿಕ್ಕಟ್ಟು ಉಂಟಾಗಿ ನ್ಯಾಯಾಲಯದ ಮೊರೆ ಹೋಗುವ ಪ್ರಮೇಯ ಬಂದೊದಗುತ್ತದೆ. ಹಾಗಾಗದಿರಲು ಠೇವಣಿದಾರರು ತಮ್ಮ ಜೀವಿತಾವಧಿಯಲ್ಲಿಯೇ ಸಮರ್ಪಕವಾದ ವ್ಯವಸ್ಥೆಯನ್ನು ಮಾಡಬೇಕು. ತಾನು ಮಾಡಿರುವ ಎಲ್ಲ ಚರ ಆಸ್ತಿಯ ಮೇಲೆಯೂ (moveable) ಕಡ್ಡಾಯವಾಗಿ ನಾಮ ನಿರ್ದೇಶನವನ್ನು ಮಾಡುವುದೇ ಎಲ್ಲ ಗೊಂದಲಗಳ ಹಾಗೂ ಸಮಸ್ಯೆಗಳ ನಿವಾರಣೆಗೆ ಪರಮೋಪಾಯ.

ನಾಮ ನಿರ್ದೇಶನವನ್ನು ಎಲ್ಲೆಲ್ಲಿ ಮಾಡಬಹುದು.

ಬ್ಯಾಂಕುಗಳಲ್ಲಿ, ಅಂಚೆಕಛೇರಿಗಳಲ್ಲಿ ಹಾಗೂ ಇನ್ನಿತರ ಕಡೆ ಮಾಡಿರುವ ಠೇವಣಿಗಳು, ಜೀವವಿಮಾ ಪಾಲಿಸಿ, ರಾಷ್ಟ್ರೀಯ ಉಳಿತಾಯಪತ್ರ, ಸಾರ್ವಜನಿಕ ಭವಿಷ್ಯನಿಧಿ ಮುಂತಾದವುಗಳೇ ಅಲ್ಲದೆ ಕಂಪನಿಗಳಲ್ಲಿ ಹೊಂದಿರಬಹುದಾದ ಷೇರುಪತ್ರಗಳೂ ಡಿಮ್ಯಾಟ್ ಖಾತೆಗಳಲ್ಲಿ ನಾಮ ನಿರ್ದೇಶನವನ್ನು ಮಾಡಬಹುದು. ಅಲ್ಲದೆ ಬ್ಯಾಂಕ್‌ಗಳಲ್ಲಿ ಹೊಂದಿರುವ ಬ್ಯಾಂಕ್ ಲಾಕರ್‌ಗೂ ಸಹ ನಾಮನಿರ್ದೇಶನ ಮಾಡಬಹುದು. ಇಷ್ಟೇ ಅಲ್ಲದೆ ಹಣಕಾಸಿನ ವ್ಯವಹಾರ ಇರುವ ಇತರೆ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಮಾಡಬಹುದು.

ಯಾರನ್ನು ನಾಮನಿರ್ದೇಶಿತರನ್ನಾಗಿ ಮಾಡಬಹುದು?

ಸಾಮಾನ್ಯವಾಗಿ ಗಂಡ/ಹೆಂಡತಿ ಅಥವಾ ಮಕ್ಕಳು ಇವರಲ್ಲಿ ಯಾರನ್ನಾದರೂ ನಾಮನಿರ್ದೇಶನ ಮಾಡಬಹುದು. ನಾಮನಿರ್ದೇಶನ ಮಾಡುವಾಗ ಅರ್ಜಿ ಫಾರಂನಲ್ಲಿ ಠೇವಣಿದಾರನಿಗೂ ಮತ್ತು ನಾಮನಿರ್ದೇಶಿತ ವ್ಯಕ್ತಿಗೂ ಇರುವ ಸಂಬಂಧ ವಯಸ್ಸು, ಮುಂತಾದ ವಿವರಗಳನ್ನು ಭರ್ತಿ ಮಾಡಬೇಕಾಗುತ್ತದೆ.

ಕೆಲವೊಮ್ಮೆ ಠೇವಣಿದಾರನು ಅಪ್ರಾಪ್ತ ವಯಸ್ಸಿನವರನ್ನು ನಾಮನಿರ್ದೇಶನ ಮಾಡಿದ್ದರೆ ಅಂತಹ ಸಂದರ್ಭದಲ್ಲಿ, ವಯಸ್ಸಾಗಿರುವ ಮತ್ತೊಬ್ಬ ವ್ಯಕ್ತಿಯನ್ನು ಪೋಷಕರನ್ನಾಗಿ ನೇಮಿಸಬೇಕಾಗುತ್ತದೆ.

ನಾಮನಿರ್ದೇಶನವನ್ನು ಬ್ಯಾಂಕುಗಳವರು ದಾಖಲಿಸಿ ಕೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಹಲವು ಸಂದರ್ಭಗಳಲ್ಲಿ, ನಿಶ್ಚಿತ ಠೇವಣಿಯ ಸರ್ಟಿಫಿಕೇಟ್‌ಗಳಲ್ಲಿ ಆ ಹೆಸರನ್ನೂ ನಮೂದಿಸಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಹೆಸರನ್ನೂ ಸೂಚಿಸದೆ ಕೇವಲ ನಾಮನಿರ್ದೇಶನ ದಾಖಲಾಗಿದೆ ಎಂದು ನಮೂದಿಸಿರುತ್ತಾರೆ. ಏನೇ ಇರಲಿ, ಆ ಬಗ್ಗೆ ದೃಢೀಕರಿಸಿಕೊಳ್ಳುವುದು ಅತ್ಯಗತ್ಯ.

ನಾಮನಿರ್ದೇಶನವಿಲ್ಲದಿದ್ದರೆ ಆಗುವ ಅನಾನುಕೂಲ

ನಾಮನಿರ್ದೇಶನ ಮಾಡದೆ ಠೇವಣಿದಾರನೊಬ್ಬ ನಿಧನನಾದರೆ, ಹಣ ಸಂದಾಯ ಮಾಡಬೇಕಾದ ಸಂಸ್ಥೆಗಳು ತಾವು ಯಾರಿಗೆ ಸಂದಾಯ ಮಾಡಬೇಕು ಎಂಬ ಸಂದಿಗ್ಧತೆಗೆ ಒಳಗಾಗುತ್ತಾರೆ. ಒಬ್ಬರಿಗಿಂತ ಹೆಚ್ಚು ವಾರಸುದಾರರು ತಮ್ಮ ಹಕ್ಕನ್ನು ಮಂಡಿಸಿದಾಗ ಸಂಸ್ಥೆಗಳು ಅವರಿಂದ ಉತ್ತರಾಧಿಕಾರದ ಪ್ರಮಾಣಪತ್ರವನ್ನು (Succession Certificate) ತರುವಂತೆ ಕೇಳಬಹುದು.

ಅಂತಹ ಸಂದರ್ಭದಲ್ಲಿ ವಾರಸುದಾರರು ನ್ಯಾಯಾಲಯದ ಮೂಲಕ ಅದನ್ನು ಪಡೆಯಬೇಕಾಗುತ್ತದೆ. ಅದಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಸ್ಟಾಂಪ್ ಶುಲ್ಕ ಲಾಯರ್ ಶುಲ್ಕ ಇದೇ ಮುಂತಾದವುಗಳಿಗಾಗಿ ಅನವಶ್ಯಕ ಖರ್ಚುಮಾಡಬೇಕಾಗುತ್ತದೆ. ಸಂದಾಯವಾಗಬೇಕಾದ ಹಣದ ಮೊತ್ತ ಜಾಸ್ತಿಯಾದಷ್ಟು ಈ ಖರ್ಚುಗಳೂ ಸಹ ಜಾಸ್ತಿಯಾಗುತ್ತವೆ.

ವಾರಸುದಾರರು ಅನಗತ್ಯ ಪಡಿಪಾಟಲುಗಳಿಗೆ ಈಡಾಗ ಬೇಕಾಗುತ್ತದೆ ಸಿಗಬೇಕಾದ ಹಣ ಸಕಾಲದಲ್ಲಿ ಸಿಗದೆ ಸಂಕಷ್ಟಕ್ಕೆ ಸಿಲುಕಿ ಕೊಳ್ಳಬೇಕಾಗುತ್ತದೆ.

ಅಲ್ಲದೆ ಹಣ ನೀಡಬೇಕಾದ ಸಂಸ್ಥೆಗೂ ಸಹ ಅನಗತ್ಯ ತೊಂದರೆಗಳು ಉಂಟಾಗುತ್ತವೆ. ತನಗೆ ಸುಲಭವಾಗಿ ಸಿಗಬಹುದಾದ ಹಣಕ್ಕೆ ಪರದಾಡಬೇಕಾದ ಸ್ಥಿತಿಯನ್ನು ತಂದಿಟ್ಟ ಮೃತವ್ಯಕ್ತಿಯನ್ನು ಶಪಿಸುವ ಸಂದರ್ಭಗಳೂ ಉದ್ಭವಿಸುತ್ತವೆ.

ಈ ಎಲ್ಲಾ ಸಂಕಷ್ಟಗಳೂ ಬಾರದಂತೆ ಪ್ರತಿಯೊಬ್ಬ ಠೇವಣಿದಾರನೂ, ಕಡ್ಡಾಯವಿರಲಿ, ಇಲ್ಲದಿರಲಿ, ವಯಸ್ಸಿನಲ್ಲಿ ಕಿರಿಯನಾಗಿರಲಿ ಹಿರಿಯನಾಗಿರಲಿ, ತಾನು ಹೂಡುವ ಪ್ರತಿ ಠೇವಣಿಗೂ ತಪ್ಪದೆ ನಾಮ ನಿರ್ದೇಶನ ಮಾಡುವುದು ಒಳಿತು.

ಇತ್ತೀಚಿನ ಒಂದು ವರದಿ ಪ್ರಕಾರ 1000 ಕೋಟಿಗಿಂತಲೂ ಅಧಿಕ ಮೊತ್ತವು ಬ್ಯಾಂಕುಗಳಲ್ಲಿ ಠೇವಣಿದಾರರಿಗೆ ಸಂದಾಯವಾಗದೆ, ಉಳಿದಿದೆಯೆಂದು ತಿಳಿದುಬಂದಿದೆ. ಸುಮಾರು 1.03ಕೋಟಿ ಖಾತೆಗಳು ನಿಷ್ಕ್ರಿಯವಾಗಿದೆಯೆಂದು ಇದೇ ವರದಿ ತಿಳಿಸುತ್ತದೆ.

ಇವುಗಳಲ್ಲಿ ಅಧಿಕವಾಗಿ ವೈಯುಕ್ತಿಕ ಖಾತೆಗಳಿಗೆ ಸಂಬಂಧ ಪಟ್ಟಿರುವಂತಾಹುದಾಗಿದೆ. ಉಳಿತಾಯ ಖಾತೆಗಳೂ ಹಾಗೂ ನಿಶ್ಚಿತ ಠೇವಣಿಗಳು ಈ ಬಾಬ್ತಿನಲ್ಲಿ ಅಡಕವಾಗಿವೆ.

ಇಷ್ಟು ಅಗಾಧ ಮೊತ್ತದ ಖಾತೆಗಳು ನಿಷ್ಕ್ರಿಯವಾಗಿ/ಸಂದಾಯವಾಗದೇ ಉಳಿಯಲು ಹಾಗೂ ಖಾತೆಗಳಿಂದ ಹಣವನ್ನು ಪಡೆಯದೇ ಇರಲು ಕಾರಣಗಳನ್ನು ವಿಶ್ಲೇಷಿಸಿದಾಗ ಬಹುಮುಖ್ಯವಾಗಿ ಖಾತೆದಾರನು ಸೂಕ್ತವಾದ ನಾಮನಿರ್ದೇಶನ ಮಾಡದೆ ನಿಧನರಾಗಿರುವುದು ಪ್ರಮುಖವಾಗಿ ಕಂಡು ಬರುತ್ತದೆ. ಅಲ್ಲದೆ ಕಾನೂನುಬದ್ಧವಾದ ಉತ್ತರಾಧಿಕಾರಿಗಳಿಗೆ ಈ ಬಗ್ಗೆ ತಿಳಿವಳಿಕೆ ಇಲ್ಲದಿರುವುದೂ ಮತ್ತೊಂದು ಕಾರಣ.

ಕಂಪನಿಯ ಷೇರುಗಳಿಗೆ ನಾಮನಿರ್ದೇಶನ

ಕಂಪನಿಯ ಷೇರುಪತ್ರಗಳನ್ನು ಒಂದೇ ಹೆಸರಿನಲ್ಲಾಗಲೀ ಅಥವಾ ಜಂಟೀ ಹೆಸರಿನಲ್ಲಾಗಲೀ ಹೊಂದಿರುವವರು ನಾಮನಿರ್ದೇಶನವನ್ನು ಮಾಡುವುದು ಒಳಿತು.

ಕಂಪನಿಯ ಕಾಯಿದೆ 1956ರ ಅನ್ವಯ 109ಎ ಸೆಕ್ಷನ್ ಅನ್ವಯ ಷೇರುದಾರರು ನಾಮನಿರ್ದೇಶನ ಮಾಡುವ ಸೌಲಭ್ಯವನ್ನು ಒದಗಿಸಲಾಗಿದೆ. ಪ್ರಮುಖವಾಗಿ ಒಂದೇ ಹೆಸರಿನಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಇದರಿಂದ ಹೆಚ್ಚು ಪ್ರಯೋಜನ ಲಭ್ಯವಾಗುತ್ತದೆ.

ಜಂಟೀ ಷೇರುದಾರರೂ ಸಹ ಈ ನಾಮನಿರ್ದೇಶನದ ಸೌಲಭ್ಯವನ್ನು ಪಡೆಯಬಹುದು. ಎಲ್ಲಾ ಷೇರುದಾರರ ನಿಧನಾನಂತರ ನಾಮನಿರ್ದೇಶಿತ ವ್ಯಕ್ತಿಗೆ ಈ ಷೇರುಗಳ ವರ್ಗಾವಣೆಯಾಗುವುದು.

ನಾಮನಿರ್ದೇಶನವನ್ನು ಮಾಡಲು ಷೇರುದಾರರು, ಇದಕ್ಕಾಗಿಯೇ ನಿಗದಿಪಡಿಸಲಾಗಿರುವ ಅರ್ಜಿ ನಮೂನೆ 2ಬಿಯನ್ನು ಸಂಬಂಧಪಟ್ಟ ಕಂಪನಿಗೆ ಅಥವಾ ಕಂಪನಿಯ ರಿಜಿಸ್ಟ್ರಾರ್ ರವರಿಗೆ ಸಲ್ಲಿಸಬೇಕು. ಈ ಅರ್ಜಿನಮೂನೆಯನ್ನು ಕಂಪನಿಯಿಂದ ಪಡೆಯಬಹುದು. ಕೆಲವೊಮ್ಮೆ ಕಂಪನಿಗಳು ತಾವು ಷೇರುದಾರರಿಗೆ ಕಳಿಸುವ ವಾರ್ಷಿಕ ವರದಿಯ ಜೊತೆಗೆ ಈ ಅರ್ಜಿನಮೂನೆಯನ್ನು ಕಳಿಸುತ್ತಾರೆ.

ಈಗ ಕೆಲವು ವರ್ಷಗಳಿಂದ ಚಾಲ್ತಿಗೆ ಬಂದಿರುವ ಡಿಮ್ಯಾಟ್ ಪದ್ಧತಿಯಂತೆ ಡಿಮ್ಯಾಟ್ ಖಾತೆ ಹೊಂದಿರುವ ಡಿ.ಪಿ.ಸೇವಾಸಂಸ್ಥೆಗೆ ಅರ್ಜಿ ಸಲ್ಲಿಸುವಾಗ ಆ ಅರ್ಜಿಯಲ್ಲಿ ನಾಮನಿರ್ದೇಶನವನ್ನು ನಮೂದಿಸಬೇಕು. ಡಿಮ್ಯಾಟ್ ಖಾತೆಯಲ್ಲಿ ಹೊಂದಿರಬಹುದಾದ ಎಲ್ಲಾ ಕಂಪನಿಯ ಷೇರುಗಳಿಗೂ ಈ ನಾಮನಿರ್ದೇಶನವು ಅನ್ವಯವಾಗುತ್ತದೆ.

ನಾಮನಿರ್ದೇಶನವನ್ನು ಬದಲಿಸಬಹುದೇ?

ಒಂದು ಸಲ ನಾಮನಿರ್ದೇಶನ ಮಾಡಿದ ಮಾತ್ರಕ್ಕೆ ಅದು ಅಂತಿಮವಲ್ಲ. ತನ್ನ ಕುಟುಂಬದಲ್ಲಿ ಆಗಬಹುದಾದ ಬದಲಾವಣೆಗೆ ತಕ್ಕಂತೆ, ಅಥವಾ ತನ್ನ ಇಚ್ಛೆಯಂತೆ ನಾಮನಿರ್ದೇಶನವನ್ನು ಎಷ್ಟು ಸಲ ಬೇಕಾದರೂ ಬದಲಾಯಿಸಬಹುದು.

ನಾಮನಿರ್ದೇಶನ, ಮಾಡಿದಾಗ ಆ ದಾಖಲೆಗೆ ಒಬ್ಬ ಸಾಕ್ಷಿದಾರನ ಸಹಿ ಇರಬೇಕಾದ್ದು ಅಗತ್ಯ.

ನಾಮನಿರ್ದೇಶನ ಮಾಡಿದಾಕ್ಷಣ ಆ ಹಣದ ಸಂಪೂರ್ಣ ಸ್ವಾಮ್ಯ ನಾಮನಿರ್ದೇಶಿತ ವ್ಯಕ್ತಿಗೇ ಸಲ್ಲಬೇಕೆಂದಿಲ್ಲ. ನಾಮನಿರ್ದೇಶನ ಮಾಡುವುದರ ಉದ್ದೇಶ ಸಂಬಂಧಿತ ವ್ಯಕ್ತಿಗಳು ವಾರಸುದಾರರಿಗೆ ಯಾವ ತೊಂದರೆಯೂ ಇಲ್ಲದೆ, ವಿಳಂಬವಾಗದಂತೆ, ಹಣ ಸಂದಾಯ ಮಾಡಲು ನೀಡುವ ನಿರ್ದೇಶನ ಮಾತ್ರ. ಆ ರೀತಿ ಪಡೆದ ಹಣವನ್ನು ನಾಮನಿರ್ದೇಶಿತ ವ್ಯಕ್ತಿಯೊಬ್ಬನಿಗೇ ಅಲ್ಲದೆ, ಅದರಲ್ಲಿನ ಪಾಲು ಬೇರೆಯವರಿಗೂ ಸಲ್ಲಬೇಕೆಂದಿದ್ದರೆ ಅಂತಹ ವಿವರವನ್ನು ಪ್ರತ್ಯೇಕವಾಗಿ ಒಂದು ಉಯಿಲಿನಲ್ಲಿ ಬರೆದು ಅದರಲ್ಲಿ ಯಾರ್‍ಯಾರಿಗೆ ಹಣವು ಸಂದಾಯವಾಗಬಹುದೆಂಬುದನ್ನು ತಿಳಿಸಬಹುದು.

ಒಟ್ಟಿನಲ್ಲಿ ಹೇಳಬಹುದಾದರೆ, ಉದಾಸೀನ ಮಾಡದೆ, ಪ್ರತಿಯೊಬ್ಬರು ಹಣಕಾಸಿನ ವ್ಯವಹಾರಕ್ಕೆ ನಾಮನಿರ್ದೇಶನ ಮಾಡಬೇಕು.

ಉಯಿಲು Will



ಹಣ ಹೂಡಿಕೆ ಮಾಡುವಾಗ ಠೇವಣಿ ಮಾಡುವಾಗ ಬ್ಯಾಂಕುಗಳಲ್ಲಿ ಖಾತೆ ತೆರೆದಾಗ, ಇವೇ ಮುಂತಾದ ಸಂದರ್ಭಗಳಲ್ಲಿ-ಠೇವಣಿದಾರನು ನಿಧನ ಹೊಂದಿದ ನಂತರ, ಆತನ ವಾರಸುದಾರರಿಗೆ ಅದು ಸುಲಭವಾಗಿ ವರ್ಗಾವಣೆಯಾಗಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಅಂದರೆ, ಜಂಟೀ ಹೆಸರಿನಲ್ಲಿ ಠೇವಣಿ ಮಾಡುವುದು ನಾಮನಿರ್ದೇಶನ ಮಾಡುವುದು ಮುಂತಾದುವು ಗಳ ಬಗ್ಗೆ ಕೂಲಂಕುಷವಾಗಿ ತಿಳಿದು ಕೊಂಡಾಯಿತು.

ಮೃತರ ವಾರಸುದಾರರಲ್ಲಿ ಯಾವುದೇ ವಿಧವಾದ ಪರಸ್ಪರ ತಕರಾರು, ಬಿಕ್ಕಟ್ಟು ಮುಂತಾದವುಗಳು ಉದ್ಭವಿಸದಂತೆ ಚರಾಸ್ತಿ (movable property) ಯ ಬಗ್ಗೆ ಅಗತ್ಯವಾಗಿ ಮಾಡಲೇಬೇಕಾದ ಕ್ರಮಗಳ ಬಗ್ಗೆ ವಿವರಗಳನ್ನು ತಿಳಿದುಕೊಂಡಂತೆಯೇ ಸ್ಥಿರಾಸ್ತಿಯ/ವಿಲೇವಾರಿಯ (Immovable Property) ಬಗ್ಗೆಯೂ ಹರಿಸಬೇಕಾದ ಗಮನ, ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆಯೂ ತಿಳಿದುಕೊಳ್ಳಬೇಕಾದುದೂ ಅತಿ ಮುಖ್ಯ.

ಒಬ್ಬ ವ್ಯಕ್ತಿಯು ತಾನು ಸಂಪಾದಿಸಿರುವ ಆಸ್ತಿಯು ತನ್ನ ನಿಧನಾನಂತರ, ಯಾವ ರೀತಿ ವಿಲೇವಾರಿ ಆಗಬೇಕು ಎಂಬುದರ ಬಗ್ಗೆ ತೀರ್ಮಾನವನ್ನು ತನ್ನ ಜೀವಿತಾವಧಿಯಲ್ಲಿಯೇ ಅವಶ್ಯಕವಾಗಿ, ಕಡ್ಡಾಯವಾಗಿ ಮಾಡಲೇಬೇಕು. ಎಲ್ಲೆಲ್ಲಿ ನಾಮ ನಿರ್ದೇಶನವಿರುವುದಿಲ್ಲವೋ ಅಂತಹ ಕಡೆಗಳಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಬೇಕಾದ್ದು ಅತಿ ಮುಖ್ಯ. ಅದಕ್ಕಾಗಿ ಇರುವ ಏಕೈಕ ಮಾರ್ಗವೆಂದರೆ ಉಯಿಲು ಬರೆಯುವುದು.

ಉಯಿಲು ಎಂದರೇನು?

ಭಾರತ ಉತ್ತರಾಧಿಕಾರ ಅಧಿನಿಯಮ (Indian succession Act) 1925ರ ಪ್ರಕಾರ ಒಬ್ಬನು ತಾನು ಸಂಪಾದಿಸಿದ ಆಸ್ತಿಯನ್ನು ತನ್ನ ಮರಣಾನಂತರ ಯಾರಿಗೆ ಹೋಗಬೇಕು ಎಂದು ಮನಸ್ಸು ಮಾಡಿ, ಆ ನಿರ್ಧಾರವನ್ನು ಬರಹರೂಪದಲ್ಲಿ ಮಾಡಿಡುವ ದಾಖಲೆಗೆ ಉಯಿಲು ಎಂದು ಕರೆಯುತ್ತಾರೆ.

ಉಯಿಲನ್ನು ಮರಣ ಶಾಸನ, ಮೃತ್ಯುಪತ್ರ ಎಂದೂ ಕರೆಯುವ

ವಾಡಿಕೆ ಇದೆಯಾದರೂ, ಕನ್ನಡದ ಉಯಿಲು ಅಥವಾ ಇಂಗ್ಲಿಷಿನ ವಿಲ್ (will) ಎಂಬ ಎರಡೂ ಪದಗಳೇ ಹೆಚ್ಚಿನ ಬಳಕೆಯಲ್ಲಿದೆ.

ಮೇಲೆ ಕಾಣಿಸಿದ ಉಯಿಲಿನ ವಿಶ್ಲೇಷಣೆಯಲ್ಲಿ ಮೂರು ಪದಗಳಿಗೆ ವಿಶೇಷವಾದ ಮಹತ್ವವಿದೆ. ಅವುಗಳೆಂದರೆ

1.ತಾನು ಸಂಪಾದಿಸಿದ ಆಸ್ತಿ

2.ಮರಣಾನಂತರ

3.ಬರಹ ರೂಪ

ಅಂದರೆ ಉಯಿಲು ಬರೆಯುವವನು ತಾನು ಉಯಿಲಿನಲ್ಲಿ ಬರೆಯಬೇಕಾದ ಆಸ್ತಿಯನ್ನು ಸ್ವಂತವಾಗಿ ಗಳಿಸಿರಬೇಕು. ಪಿತ್ರಾರ್ಜಿತ ಆಸ್ತಿಯ ಮೇಲೆ ಉಯಿಲು ಬರೆಯಲು ಬರುವುದಿಲ್ಲ.

ಉಯಿಲು ಜಾರಿಗೆ ಬರುವುದು ಉಯಿಲು ಕರ್ತನ ಮರಣಾನಂತರ ಮಾತ್ರ. ಆತನ ಜೀವನಾವಧಿಯಲ್ಲಿ ಅದು ಜಾರಿಗೆ ಬರುವಂತಹುದಲ್ಲ.

ಉಯಿಲು ಬರಹ ರೂಪದಲ್ಲಿ ಮಾತ್ರ ಇರತಕ್ಕದ್ದು.

ಉಯಿಲನ್ನು ಯಾವಾಗ ಬರೆಯಬೇಕು?

ವಿಲ್ ಬರೆದಾಕ್ಷಣ ಅದು ತನ್ನ ಮರಣಕ್ಕೆ ತಾನೇ ಸಹಿ ಮಾಡಿದಂತೆ ಎಂದು ಕೆಲವರು ಭಾವಿಸುತ್ತಾರೆ. ಆದರೆ ವಸ್ತುಸ್ಥಿತಿ ಹಾಗಲ್ಲ ತನ್ನ ಮರಣಾನಂತರ ತನ್ನ ಆಸ್ತಿ ಏನಿದೆಯೋ ಅದು ತನ್ನ ವಾರಸುದಾರರಿಗೆ ಸುಲಭವಾಗಿ, ಸುಸೂತ್ರವಾಗಿ ವರ್ಗಾವಣೆಯಾಗಲು ಕಾನೂನಿನ ಕ್ರಮದಲ್ಲಿ ದೊರೆಯುವ ಒಂದು ಸೌಲಭ್ಯವೆಂದು ತಿಳಿಯಬೇಕು.

ಅಲ್ಲದೆ ಇಷ್ಟನೇ ವಯಸ್ಸಿಗೆ ಉಯಿಲು ಬರೆಯಬೇಕೆಂಬ ನಿಯಮವಾಗಲೀ, ಕಡ್ಡಾಯವಾಗಲೀ ಇಲ್ಲ. ಸಾವು ಯಾವಾಗ, ಹೇಗೆ ಬರುತ್ತದೆಂಬುದು ಯಾರಿಗೂ ತಿಳಿಯದು. ಜವರಾಯ ಯಾವ ಸಮಯದಲ್ಲಿಯಾದರೂ, ಯಾವ ಕ್ಷಣದಲ್ಲಿಯಾದರೂ ಕದ ತಟ್ಟಬಹುದು. ಸಾವಿಗೆ ಇಂತಹುದೇ ಕಾರಣ ಎಂಬುದು ಸಹ ಇಲ್ಲ. ವಯಸ್ಸಾದವರು ಮಾತ್ರ ಸಾಯುತ್ತಾರೆ ಎಂದು ತಿಳಿಯುವುದೂ ಸಹ ತಪ್ಪು. ಅಪಘಾತಗಳು, ಆತಂಕಕಾರಿಪ್ರವೃತ್ತಿ, Terrorist attack ಅನಾಹುತಗಳಿಂದ ತೀರಾ ಕಿರಿಯ ವಯಸ್ಸಿನಲ್ಲಿಯೇ ಸಾವನ್ನಪ್ಪುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಅಂತಹ ಘಟನೆಗಳನ್ನು ವರದಿಗಳನ್ನು ಆಗಾಗ್ಗೆ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಹಾಗಾಗಿ ಸಾವಿಗೆ ವಯಸ್ಸಿನ

ಯಾವ ಕಟ್ಟುಪಾಡು ಇರುವುದಿಲ್ಲ. ಆದ್ದರಿಂದ ಉಯಿಲು ಬರೆಯಲು ವಯಸ್ಸಿನ ಪರಿಮಿತಿ ಎಂಬುದಿಲ್ಲ. ಹಾಗಾಗಿ ಇಂದು ನಾಳೆ ಎಂಬ ಮೀನ ಮೇಷ ಎಣಿಸದೆ "ಇಂದಿನ ದಿನವೇ ಶುಭದಿನವು" ಎಂಬಂತೆ ಯಾವ ವಯಸ್ಸಿನಲ್ಲಿಯಾದರೂ ಉಯಿಲನ್ನು ಬರೆಯುವುದು ಕ್ಷೇಮಕರ ಹಾಗೂ ಬುದ್ಧಿವಂತಿಕೆಯ ಲಕ್ಷಣ. ಅಲ್ಲದೆ ಅಗತ್ಯವಾಗಿ ಕೈಗೊಳ್ಳಬೇಕಾದ ಕ್ರಮವೂ ಹೌದು.

ಉಯಿಲನ್ನು ಯಾರು ಬರೆಯಬಹುದು?

Indian Majority Act ಪ್ರಕಾರ ಹದಿನೆಂಟು ವರ್ಷ ವಯಸ್ಸಾಗಿರುವ ಯಾವುದೇ ವ್ಯಕ್ತಿಯು ಉಯಿಲನ್ನು ಬರೆಯಬಹುದು. ಉಯಿಲು ಬರೆಯುವ ವ್ಯಕ್ತಿಯು ಸ್ಥಿಮಿತಬುದ್ಧಿಯವನಾಗಿರಬೇಕು. ಬುದ್ಧಿ ಸರಿಯಿಲ್ಲದೆ ಅಥವಾ ಬುದ್ಧಿ ಸರಿಯಿದ್ದರೂ ಸಹ ಉಯಿಲು ಬರೆಯುವ ಸಮಯದಲ್ಲಿ ಮಾದಕ ವಸ್ತುಗಳ ಸೇವನೆಯಿಂದ ತನ್ನ ಮನಸ್ಸಿನ ಹತೋಟಿಯನ್ನು ಕಳೆದುಕೊಂಡಿರುವ ಸಂದರ್ಭದಲ್ಲಿ ಬರೆದ ಉಯಿಲಿಗೆ ಮಾನ್ಯತೆ ಇರುವುದಿಲ್ಲ.

ಕಿವುಡುತನ, ಮೂಕತನ ಅಥವಾ ಕುರುಡುತನ ಇವೇ ಮುಂತಾದ ದೈಹಿಕ ನ್ಯೂನತೆಗಳು ಉಯಿಲನ್ನು ಬರೆಯಲು ಯಾವುದೇ ಅಡ್ಡಿ ಉಂಟುಮಾಡಲಾರವು. ಆದರೆ ಉಯಿಲು ಬರೆಯುವ ವ್ಯಕ್ತಿಗೆ ಉಯಿಲಿನಲ್ಲಿ ಬರೆದಿರುವ ವಿವರಗಳ ಸಂಪೂರ್ಣ ತಿಳವಳಿಕೆ ಇರಬೇಕು.

ಉಯಿಲು ಬರೆಯುವ ಮುಂಚೆ ಕೈಗೊಳ್ಳಬೇಕಾದ ಪೂರ್ವಭಾವಿ ಸಿದ್ಧತೆಗಳು

ಉಯಿಲು ಬರೆಯಬೇಕು ಎಂಬ ತೀರ್ಮಾನವನ್ನು ತೆಗೆದುಕೊಂಡ ನಂತರ, ಕೆಲವು ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಅವುಗಳೆಂದರೆ:

1. ಮೊದಲಿಗೆ ಉಯಿಲಿನಲ್ಲಿ ಬರೆಯಬಹುದಾದಂತಹ ಇಡೀ ಆಸ್ತಿಯ ಪಟ್ಟಿಯನ್ನು ಸಿದ್ಧಗೊಳಿಸಬೇಕು.

2. ಆಸ್ತಿಯನ್ನು ಯಾರಾರಿಗೆ ವರ್ಗಾಯಿಸಬಹುದು / ಆಸ್ತಿಯ ಫಲಾನುಭವಿಗಳು ಯಾರು ಎಂಬುದನ್ನು ಗುರುತಿಸಿ ಅವರಿಗೆ ನೀಡಬೇಕಾದ ಪ್ರಮಾಣವನ್ನು ನಿರ್ಧರಿಸಬೇಕು.

3.ಉಯಿಲಿಗೆ ಸಾಕ್ಷಿಹಾಕಬಹುದಾದ ಇಬ್ಬರು ಸಾಕ್ಷಿದಾರರನ್ನು ಗುರುತಿಸಿ ಕೊಳ್ಳಬೇಕು. (ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಾಕ್ಷಿದಾರರಿಗೆ ಅಥವಾ ಅವರ ಗಂಡ/ಹೆಂಡತಿಯರಿಗೆ ಉಯಿಲಿನಲ್ಲಿ ಯಾವ ಫಲವೂ ಸಿಗದಂತೆ

ಇರಬೇಕು. ಅಲ್ಲದೆ ಸಾಕ್ಷಿದಾರರು ಉಯಿಲುಕರ್ತನಿಗಿಂತ ವಯಸ್ಸಿನಲ್ಲಿ ಚಿಕ್ಕವರಾಗಿರುವುದು ಒಳ್ಳೆಯದು)

4. ಉಯಿಲಿನ ಕಾರ್ಯನಿರ್ವಾಹಕನನ್ನು ನೇಮಿಸುವಂತಿದ್ದರೆ, ಅಂತಹ ವ್ಯಕ್ತಿಯನ್ನು ಗುರುತಿಸಿಕೊಳ್ಳಬೇಕು. ಅವರೂ ಸಹ ವಯಸ್ಸಿನಲ್ಲಿ ಉಯಿಲು ಕರ್ತನಿಗಿಂತ ಚಿಕ್ಕವರಾಗಿರುವುದು ಸೂಕ್ತ.

ಈ ಮೇಲಿನ ಅಂಶಗಳತ್ತ ಗಮನ ಕೊಡುವುದೇ ಅಲ್ಲದೆ, ಉಯಿಲು ಬರೆಯುವ ಮುಂಚೆ ಉಯಿಲುಕರ್ತನು ಗಮನಿಸಬೇಕಾದುದೆಂದರೆ ಉಯಿಲನ್ನು ತನ್ನ ಸ್ವಂತ ಇಚ್ಛೆಯಿಂದ ಬರೆಯಬೇಕು. ಬೇರೊಬ್ಬರ ಪ್ರಲೋಭನೆ, ಬೆದರಿಕೆ, ಮೋಸಕ್ಕೆ ಒಳಗಾಗಿರಬಾರದು. ಅಂಥವುಗಳಿಗೆ ಒಳಗಾಗಿ ಉಯಿಲನ್ನು ಬರೆದದ್ದು ರುಜುವಾತಾದಲ್ಲಿ ಅಂಥ ಉಯಿಲು ಅಸಿಂಧುವಾಗುವುದು.

ಉಯಿಲಿನಲ್ಲಿ ನಮೂದಿಸಲ್ಪಡುವ ಆಸ್ತಿಯು ಉಯಿಲುಕರ್ತನ ಸ್ವಂತ ಆಸ್ತಿಯಾಗಿದ್ದು ಅದು ಕಾನೂನು ಬದ್ಧವಾಗಿ ವರ್ಗಾವಣೆ ಆಗುವಂತಿರಬೇಕು.

ಉಯಿಲು ಬರೆಯುವ ಕ್ರಮ

ಮೇಲೆ ತಿಳಿಸಿದ ಪೂರ್ವಭಾವಿಸಿದ್ಧತೆಯ ನಂತರ ಉಯಿಲು ಬರೆಯಲು ಕೆಳಗಿನ ಕ್ರಮಗಳನ್ನು ಅನುಸರಿಸಬೇಕು.

- ಮೊದಲಿಗೆ ಉಯಿಲು ಬರೆಯಲು ಕಾನೂನು ತಜ್ಞರ ಸಹಾಯ ಪಡೆಯುವುದು ಒಳ್ಳೆಯದು.
- ಉಯಿಲನ್ನು ಒಂದು ಪೂರಾ ಹಾಳೆಯಲ್ಲಿಯೇ ಬರೆಯಬೇಕು. ದೀರ್ಘಕಾಲದ ಜೋಪಾನವಾಗಿಡಬೇಕಾದ ದಾಖಲೆಯಾದುದರಿಂದ ಉತ್ತಮ ಗುಣಮಟ್ಟದ ಕಾಗದದಲ್ಲಿ ಬರೆಯಬೇಕು.
- ಉಯಿಲು ಯಾವಾಗಲೂ ಬರಹ ರೂಪದಲ್ಲಿಯೇ ಇರಬೇಕು. ಕೈಬರಹದಲ್ಲಿರಬಹುದು ಅಥವಾ ಟೈಪ್ ಮಾಡಿದ್ದಾದರೂ ಆಗಬಹುದು. ಬಾಯಿಮಾತಿನ ಉಯಿಲಿಗೆ ಮಾನ್ಯತೆ ಇಲ್ಲ. ಆದರೆ ಕೆಲವೊಮ್ಮೆ ವಿಶೇಷ ಸಂದರ್ಭಗಳಲ್ಲಿ ಯುದ್ಧದಲ್ಲಿ ನಿರತರಾಗಿರುವ ಸೈನಿಕರು, ನಾವಿಕರು, ಹಾಗೂ ವೈಮಾನಿಕರು ನೀಡುವ ಬಾಯಿಮಾತಿನ ಹೇಳಿಕೆಗಳು ಉಯಿಲಿನ ಸ್ಥಾನವನ್ನು ಪಡೆಯುತ್ತವೆ.ಹಾಗೂ ಕಾನೂನಿನ ಮಾನ್ಯತೆ ಪಡೆಯುವ ಸಂಭವವಿರುತ್ತವೆ. ಅಂತಹ ಉಯಿಲಿಗೆ ಪ್ರಿವೆಲೆಜ್ಡ್ ವಿಲ್ ಎಂದು ಹೇಳಲಾಗುತ್ತದೆ.
- ಉಯಿಲು ಬರೆಯುವಾಗ ಉಯಿಲು ಕರ್ತನ ಹೆಸರು ಮತ್ತು ವಿಳಾಸ ಸ್ಪಷ್ಟವಾಗಿ

ಬರೆದಿರಬೇಕು. ಉಯಿಲನ್ನು ಸ್ವ ಇಚ್ಛೆಯಿಂದ ಬರೆದಿರಬೇಕು. ಉಯಿಲು ಬರೆದ ಉದ್ದೇಶವನ್ನು ಸ್ಪಷ್ಟವಾಗಿ ನಮೂದಿಸಿರಬೇಕು.

- ಯಾರ ಪರವಾಗಿ ಆಸ್ತಿಯನ್ನು ಬರೆಯಲಾಗಿದೆಯೋ ಅವರ ಸಂಪೂರ್ಣ ವಿವರವನ್ನು ನೀಡಬೇಕು.
- ಉಯಿಲಿನಲ್ಲಿ ಬರೆದಿರುವ ಭಾಷೆ ಸರಳವಾಗಿರಬೇಕು. ಬರೆಯಬೇಕಾದ್ದನ್ನು ಸ್ಪಷ್ಟವಾಗಿ,ನಿಖರವಾಗಿ, ವಿವರವಾಗಿ ಬರೆದಿರಬೇಕು. ಯಾವುದೇ ವಿಧವಾಗಿ ಗೊಂದಲ ಸಂದೇಹಗಳಿಗೆ ಎಡೆಯಾಗುವಂತಿರಬಾರದು. ದ್ವಂದ್ವಾರ್ಥಕ್ಕೆ ಅವಕಾಶವಿರಬಾರದು.
- ಯಾವುದೇ ತಪ್ಪು ಇರಬಾರದು ಅಥವಾ ಹೊಡೆದು ಹಾಕಿರಬಾರದು. ಅಂಥ ಅನಿವಾರ್ಯತೆ ಬಂದಲ್ಲಿ ತಿದ್ದಿದ/ಹೊಡೆದುಹಾಕಿದ ಜಾಗದಲ್ಲಿ ಸಹಿ ಮಾಡಬೇಕು. ಮತ್ತೆ ಉಯಿಲಿನ ಕೊನೆಯ ಪುಟದಲ್ಲಿ ಎಷ್ಟು ತಿದ್ದುಪಡಿ ಮಾಡಲಾಗಿದೆ ಎಂದು ನಮೂದಿಸಬೇಕು.
- ಉಯಿಲಿನ ಕೊನೆಯಲ್ಲಿ ಉಯಿಲುಕರ್ತನ ಸಹಿಯಿದ್ದು ನಂತರ, ಕಡೆಯಪಕ್ಷ, ಇಬ್ಬರು ಸಾಕ್ಷಿಗಳ ಸಹಿ ಇರಬೇಕು. ಸಾಕ್ಷಿಗಳ ಹೆಸರು, ಉದ್ಯೋಗ ಹಾಗೂ ವಿಳಾಸ ಸ್ಪಷ್ಟವಾಗಿರಬೇಕು.
- ಉಯಿಲು ಒಂದು ಪುಟಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಪ್ರತಿಪುಟದಲ್ಲಿಯೂ ಉಯಿಲುಕರ್ತ, ಹಾಗೂ ಸಾಕ್ಷಿದಾರರು ಸಹಿ ಹಾಕಿರಬೇಕು.
- ಉಯಿಲು ಬರೆಯುವಾಗ ಉಯಿಲುಕರ್ತನು ಯಾವುದೇ ವ್ಯಕ್ತಿಯಿಂದ ಯಾವುದೇ ವಿಧವಾದ ಅನಗತ್ಯ ಪ್ರಭಾವದಿಂದ (undue influence) ಉಯಿಲನ್ನು ಬರೆದಿರಬಾರದು.

ಉಯಿಲಿನ ನೋಂದಣಿ (Registration) ಅಗತ್ಯವೆ?

ಉಯಿಲು ಮಾಡಬೇಕೆಂದಿರುವವರ ಮನಸ್ಸಿನಲ್ಲಿ ಸಾಮಾನ್ಯ ವಾಗಿ ಒಂದು ಭಾವನೆ ಮೂಡುತ್ತದೆ. ಅದೆಂದರೆ ಉಯಿಲನ್ನು ಮಾಡಿದ ನಂತರ ಅದನ್ನು ನೋಂದಣಿ ಮಾಡಿಸಲೇಬೇಕೇ ಎಂದು.

ಆದರೆ ಉಯಿಲನ್ನು ನೋಂದಣಿ ಮಾಡಿಸಲೇಬೇಕೆಂಬ ಕಡ್ಡಾಯವೇನಿಲ್ಲ. ಮಾಡಿಸುವುದು ಅಥವಾ ಮಾಡಿಸದಿರುವುದು ಅವರವರ ಇಷ್ಟಕ್ಕೆ ಬಿಟ್ಟ ವಿಚಾರ. ಉಯಿಲನ್ನು ನೋಂದಣಿ ಮಾಡಿಸುವುದರಿಂದ ಆಗುವ

ಪ್ರಯೋಜನವೆಂದರೆ, ಅಕಸ್ಮಾತ್ ಉಯಿಲಿನ ಪ್ರತಿ ಏನಾದರೂ ಕಳೆದು ಹೋದರೆ, ಅಂಥ ಸಂದರ್ಭದಲ್ಲಿ, ಉಯಿಲಿನ ನಕಲಿ ಪ್ರತಿಯನ್ನು ನೋಂದಣಿ ಕಛೇರಿಯಿಂದ ಪಡೆಯಬಹುದು.

ಒಂದು ಸಲ ಬರೆದ ಉಯಿಲನ್ನು ಪುನಃ ಬದಲಾಯಿಸಲು ಸಾಧ್ಯವೇ?

ಖಂಡಿತವಾಗಿಯೂ ಸಾಧ್ಯ. ಉಯಿಲನ್ನು ಬರೆದಿರುವ ಉಯಿಲು ಕರ್ತನ ಸಂಸಾರದಲ್ಲಿ ಸಂಭವಿಸಬಹುದಾದ ಕೌಟುಂಬಿಕ ಬದಲಾವಣೆಗಳು, ಉಯಿಲುಕರ್ತನ ಮನಸ್ಸಿನಲ್ಲಿ ಬದಲಾಗಬಹುದಾದ ಮನೋಭಾವಗಳು ಮುಂತಾದ ಕಾರಣಗಳಿಂದ ಉಯಿಲನ್ನು ಯಾವಾಗಬೇಕಾದರೂ ಬದಲಾಯಿಸಬಹುದು. ಎಷ್ಟು ಸಲ ಬೇಕಾದರೂ ಬದಲಾಯಿಸಬಹುದು. ಇದು ಉಯಿಲುಕರ್ತನ ಅಗತ್ಯತೆಗಳು, ಹಾಗೂ ಸನ್ನಿವೇಶಗಳನ್ನು ಒಳಗೊಂಡಿರುತ್ತದೆ.

ಹಾಗೆ ಬದಲಾವಣೆ ಮಾಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ಒದಗಿದಾಗ, ಈಗಾಗಲೇ ಬರೆದಿರುವ ಉಯಿಲಿನಲ್ಲಿ ಅನುಬಂಧವನ್ನು ಬರೆದು ಬದಲಾವಣೆ ಮಾಡಬಹುದು. ಇಂತಹ ಬದಲಾವಣೆ/ತಿದ್ದುಪಡಿಯನ್ನು "ಕೊಡಿಸಿಲ್" (codicil) ಎನ್ನುವರು. ಈ ಅನುಬಂಧ/ತಿದ್ದುಪಡಿಯ ನಂತರ ಉಯಿಲುಕರ್ತ ಹಾಗೂ ಸಾಕ್ಷಿದಾರರು ರುಜುಹಾಕಬೇಕು.

ಉಯಿಲುಕರ್ತನು ಪೂರಾ ಉಯಿಲನ್ನು ಬದಲಾವಣೆ ಮಾಡುವ ಅಪೇಕ್ಷೆ ಹೊಂದಿದಲ್ಲಿ, ಅಂತಹ ಸಂದರ್ಭದಲ್ಲಿ ಬರೆದಿರುವ ಉಯಿಲನ್ನು ಸಂಪೂರ್ಣವಾಗಿ ನಾಶಮಾಡಿ ಹೊಸದಾಗಿ ಮತ್ತೆ ಬರೆಯಬಹುದು.

ಉಯಿಲುಕರ್ತನು ಎಷ್ಟೇ ಉಯಿಲುಗಳನ್ನು ಬರೆದಿರ ಬಹುದು. ಆದರೆ ಅವನು ಸಾಯುವ ಮುಂಚೆ ಬರೆದಿರಬಹುದಾದ ಕಟ್ಟಕಡೆಯ ಉಯಿಲು ಮಾತ್ರ ಪರಿಣಾಮಕಾರಿಯಾಗಿರುತ್ತದೆ ಎಂಬ ಅಂಶವನ್ನು ಪ್ರತಿಯೊಬ್ಬರು ಮನದಟ್ಟು ಮಾಡಿಕೊಳ್ಳಬೇಕು.

ಷರತ್ತು ಬದ್ಧ ಉಯಿಲು (Conditional Will)

ಕೆಲವೊಮ್ಮೆ ಉಯಿಲುಕರ್ತನು ತನ್ನ ಆಸ್ತಿಯನ್ನು ಯಾರಿಗೆ ನೀಡಬೇಕೆಂದಿರುವನೋ ಅಂತಹ ಫಲಾನುಭವಿಗೆ ಕೆಲವೊಂದು ನಿಬಂಧನೆ ಗಳನ್ನು/ ಷರತ್ತುಗಳನ್ನು ವಿಧಿಸಬಹುದು. ಆದರೆ ಅಂತಹ ನಿಬಂಧನೆಗಳು /

ಷರತ್ತುಗಳು ಕಾರ್ಯ ಸಾಧುವಾಗಿರಬೇಕು ಹಾಗೂ ಕಾನೂನಿನ ನಿಯಮಾವಳಿಗಳ ಚೌಕಟ್ಟಿನಲ್ಲಿರಬೇಕು. ಇದಕ್ಕೆ ಹೊರತಾಗಿ ನಿಬಂಧನೆಗಳು /ಷರತ್ತುಗಳನ್ನು ವಿಧಿಸಿದ್ದರೆ ಅಂತಹ ಉಯಿಲು ಕಾನೂನು ಬಾಹಿರವಾಗುತ್ತದೆ.

ದ್ವಿಪ್ರತಿ ಉಯಿಲು (Duplicate will)

ಉಯಿಲನ್ನು ದ್ವಿಪ್ರತಿಯಲ್ಲಿ ((Duplicate) ಬರೆಯಬಹುದು. ಹಾಗೆ ಬರೆದ ಸಂದರ್ಭದಲ್ಲಿ ಎರಡೂ ಪ್ರತಿಗಳು ಮೂಲ ಪ್ರತಿಗಳಾಗಿರಬೇಕು. ಯಾವುದೇ ಕಾರಣಕ್ಕೂ ಉಯಿಲಿನ ನಕಲು ಪ್ರತಿ ದ್ವಿಪ್ರತಿಯೆನಿಸಲಾರದು.

ಉಯಿಲನಲ್ಲಿ ಏನನ್ನು ಬರೆಯಬಹುದು?

ಈಗಾಗಲೇ ತಿಳಿಸಿರುವಂತೆ ಉಯಿಲುಕರ್ತನು ತಾನು ಸಂಪಾದಿಸಿರುವ ಸ್ವಯಾರ್ಜಿತ ಆಸ್ತಿಯನ್ನು ತಾನು ಯಾರಿಗೆ ನೀಡ ಬೇಕೆಂದಿರುವನೋ ಅದನ್ನು ಸ್ಪಷ್ಟವಾಗಿ, ವಿವರವಾಗಿ ಬರೆಯಬಹುದು.

ತನಗೆ ಸೇರಿರುವ ಆಸ್ತಿ ಎಂದರೆ ನಿವೇಶನ, ಮನೆ, ಹೊಲಗದ್ದೆ, ಹೊಂದಿರಬಹುದಾದ ಅಮೂಲ್ಯವಾದ ಚಿನ್ನ ಬೆಳ್ಳಿ ಒಡವೆಗಳು ಇವೇ ಮುಂತಾದುವನ್ನು ಹಾಗೂ ಅದರ ಹಂಚಿಕೆಯನ್ನು ವಿವರವಾಗಿ ಯಾರಿಗೆ ಹೋಗಬೇಕು ಎಂದು ಉಯಿಲಿನಲ್ಲಿ ಬರೆಯಬಹುದು.

ಈ ಎಲ್ಲಾ ಆಸ್ತಿಯೂ ಹಣಕಾಸಿನ ಮೌಲ್ಯವನ್ನು ಹೊಂದಿರತಕ್ಕಂತಹವು ಆದರೆ ಉಯಿಲುಕರ್ತನು ತಾನು ಭಾವನಾತ್ಮಕವಾಗಿ ಹೊಂದಿರುವ ತನ್ನ ಮನದಾಳದ ಆಸೆ ಆಕಾಂಕ್ಷೆಗಳನ್ನು ಸಹ ಉಯಿಲಿನಲ್ಲಿ ಬರೆಯಬಹುದು. ಭಾವನೆಗಳಿಗೆ ಹಣಕಾಸಿನ ಮಾನದಂಡವಿಲ್ಲರಬಹುದು. ಆದರೆ ತಾನು ಹುಟ್ಟಿ ಬೆಳೆದ ಸಮಾಜಕ್ಕೆ ತನ್ನಿಂದ ಏನಾದರೂ ಕೊಡುಗೆ ನೀಡುವ ಮನೋಭಾವನೆಯಿದ್ದರೆ (ನೆನಪಿಡಿ : ಇದು ಹಣಕಾಸಿನ ಸಂಬಂಧದ್ದಲ್ಲ) ತನ್ನ ಮನಸ್ಸಿನಲ್ಲಿ ಬೇರೂರಿದ ಇಚ್ಛೆಗಳನ್ನು ವ್ಯಕ್ತಪಡಿಸಿ ತನ್ನ ನಿಧನಾನಂತರ ಅವುಗಳನ್ನು ಕಾರ್ಯಗತ ಗೊಳಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸಬಹುದು. ಅದನ್ನೇ ಉಯಿಲಿನಲ್ಲಿ ಬರೆದು ತನ್ನ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವ ಜವಾಬ್ಧಾರಿಯನ್ನು ತನ್ನ ಬಾಧ್ಯಸ್ಥರಿಗೆ ತಿಳಿಸಬಹುದು.

ಅಂತಹ ಮೌಲ್ಯಾಧಾರಿತ, ಭಾವನಾತ್ಮಕ ಕೊಡುಗೆಗಳೆಂದರೆ

1. ನೇತ್ರದಾನ
2. ದೇಹದಾನ

ದಾನಗಳಲ್ಲಿ ಹಲವಾರು ಬಗೆಯ ದಾನಗಳುಂಟು. ಅನ್ನದಾನ, ವಿದ್ಯಾದಾನ, ಕನ್ಯಾದಾನ, ಗೋದಾನ, ಭೂದಾನ, ಧನದಾನ, ಇತ್ಯಾದಿಗಳು ದಾನದ ನಾನಾ ವಿಧಗಳನ್ನು ಸೂಚಿಸುತ್ತವೆ. ಒಬ್ಬ ವ್ಯಕ್ತಿಯು ತಾನು ಗಳಿಸಿದ ಸಂಪಾದನೆಯಲ್ಲಿ ಹೊಂದಿರುವ ಸಂಪತ್ತಿನಲ್ಲಿ ಸ್ವಲ್ಪಭಾಗವನ್ನು ಇತರರಿಗಾಗಿ ನೀಡುವುದು – ತನ್ಮೂಲಕ ಪರರ ನೆರವಿಗೆ ತನ್ನ ಕಾಣಿಕೆಯನ್ನು ನೀಡುವುದು– ಬಹು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದೆ. ತನ್ಮೂಲಕ ಸಮಾಜದಲ್ಲಿ ಇದ್ದವರು ಇಲ್ಲದವರಿಗೆ ತಮ್ಮ ನೆರವಿನ ಹಸ್ತ ಚಾಚಿ ಅವರ ಉನ್ನತಿಗೆ ಕಾರಣರಾಗಿದ್ದಾರೆ. ಸಮಾಜದ ಏಳಿಗೆಗೆ ನೆರವು ನೀಡಿದ್ದಾರೆ.

ಈ ಮೇಲಿನ ದಾನಗಳೇ ಅಲ್ಲದೆ ತನ್ನ ದೇಹದಲ್ಲಿ ಹರಿಯುವ ರಕ್ತವನ್ನೂ ಸಹ, ತುರ್ತು ಪರಿಸ್ಥಿತಿಯಲ್ಲಿ ಅಗತ್ಯವಿರುವವರಿಗೆ ನೀಡಿ ಅವರ ಜೀವವನ್ನುಳಿಸುವ ಅನುಕರಣೆಯ ಮಹತ್ಕಾರ್ಯದಲ್ಲಿ ನೆರವಾಗುವ ಉದಾರ ಮನಸ್ಸಿನ ಮಹನೀಯರೂ ಇದ್ದಾರೆ. ಹೀಗೆ ರಕ್ತದಾನವೂ ಸಹ ದಾನಗಳ ಗುಂಪಿನಲ್ಲಿ ಸೇರುತ್ತದೆ.

ಈ ಎಲ್ಲಾ ದಾನಗಳೂ ಸಹ ದಾನಿಯು ಜೀವಂತವಿರುವಾಗಲೇ, ಸ್ವತಃ ತನ್ನ ಇಚ್ಛೆಯಂತೆ ತನ್ನಿಂದಲೇ ನೇರವಾಗಿ ಕೊಡತಕ್ಕದ್ದಾಗಿರುತ್ತದೆ.

ಆದರೆ ಒಬ್ಬ ವ್ಯಕ್ತಿಯು ತನ್ನ ದೇಹದ ಅಂಗಾಂಗವನ್ನು ದಾನ ನೀಡುವ ಅಸಾಧಾರಣ ದಾನ ಪದ್ಧತಿಯೂ ಸಹ ಪ್ರಚಲಿತದಲ್ಲಿದೆ ಎಂದರೆ ಆಶ್ಚರ್ಯವಾಗಬಹುದು. ಈ ದಾನವು ದಾನ ನೀಡುವ ವ್ಯಕ್ತಿಯ ಮರಣಾನಂತರ ನೀಡಬಹುದಾದ ದಾನ. ಈ ರೀತಿ ದಾನ ಮಾಡುವ ಸಂದರ್ಭದಲ್ಲಿ ದಾನ ನೀಡುವ ವ್ಯಕ್ತಿಯು ಸ್ವತಃ ಹಾಜರಿರುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಈ ದಾನವನ್ನು ಆತನ ಅಪೇಕ್ಷೆಯಂತೆ, ಆತನ ವಾರಸುದಾರರು ನೀಡುವರು. ಹಾಗಾಗಿ ಈ ದಾನಕ್ಕೆ ಒಂದು ವಿಶಿಷ್ಟ್ಯ ರೀತಿಯ ಮಹತ್ವ ಬಂದಿದೆ.

ಇಂತಹ ಅಪೇಕ್ಷಿತ ದಾನಗಳಲ್ಲಿ ಕೆಲವನ್ನು ಹೆಸರಿಸ ಬಹುದಾದರೆ, ಕೆಲವರು ತಮ್ಮ ನಿಧನಾನಂತರ ತಮ್ಮ ಮೃತದೇಹದ ಅಂತ್ಯಕ್ರಿಯೆ ಹೇಗೆ ನಡೆಯಬೇಕು ಎಂದು ಬರೆದರೆ, ಮತ್ತೆ ಕೆಲವರು ತಮ್ಮ ಕಣ್ಣುಗಳನ್ನು ದಾನ ಮಾಡಿ ಅಂಧರಿಗೆ ಜೋಡಿಸಿ ಅವರ ಅಂಧತ್ವವನ್ನು ಹೋಗಲಾಡಿಸಬೇಕೆಂದು ಅಪೇಕ್ಷೆ ಪಡುತ್ತಾರೆ ಮತ್ತೆ ಕೆಲವರು ತಮ್ಮ ದೇಹ ಉರಿದು ಬೂದಿಯಾಗುವ ಬದಲು

ದೇಹವನ್ನು ಯಾವುದಾದರೂ ವೈದ್ಯಕೀಯ ವಿದ್ಯಾಸಂಸ್ಥೆಗಳಿಗೆ ನೀಡಿ ವೈದ್ಯಕೀಯ ವಿದ್ಯಾರ್ಥಿಗಳ ಪ್ರಯೋಗಗಳಿಗೆ ನೀಡುವ ತಮ್ಮ ಮನೋವೈಶಾಲ್ಯತೆಯನ್ನು ಉದಾರತೆಯನ್ನು ಮೆರೆದಿದ್ದಾರೆ.

ತಮ್ಮ ಈ ಎಲ್ಲಾ ಮನದಾಳದ ಆಸೆ ಆಕಾಂಕ್ಷೆಗಳನ್ನು ತಮ್ಮ ಉಯಿಲನಲ್ಲಿ ಬರೆದು, ತಮ್ಮ ಮರಣಾನಂತರ ಅದನ್ನು ಪೂರೈಸಲು ತಮ್ಮ ಮನೆಯವರಿಗೆ ತಿಳಿಸುತ್ತಾರೆ.

ಇಂತಹ ಉದಾರ ಮನಸ್ಸಿನ ಹಲವಾರು ಮಹನೀಯರು, ಅವರಲ್ಲಿ ಎಷ್ಟೋ ಜನ ಬಡವರಿರಬಹುದು ಶ್ರೀಮಂತರಿರಬಹುದು, ಈ ರೀತಿಯ ಉಯಿಲನ್ನು ಬರೆದು ತಮ್ಮ ಹೃದಯ ಶ್ರೀಮಂತಿಕೆ ಮೆರೆದು ನಾಡಿನ ಜನತೆಗೆ ಮಾದರಿಯಾಗಿದ್ದಾರೆ. ಅಂತಹವರಲ್ಲಿ ಕೆಲವು ಮಂದಿ ನ್ಯಾಯಾಧೀಶರು, ವೈದ್ಯರು, ಪ್ರಾಧ್ಯಾಪಕರು, ಸಿನಿಮಾ ನಟನಟಿಯರು ತಮ್ಮ ಈ ಸನ್ನಡತೆಯಿಂದ ಸಮಾಜದ ಸೇವೆಯಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಿದ್ದಾರೆ.

ಉಯಿಲು ಮಾಡುವುದರಿಂದ ಆಗುವ ಅನುಕೂಲ

- ಉಯಿಲುಕರ್ತನ ನಿಧನಾನಂತರ ಅವನ ಕುಟುಂಬದ ಸದಸ್ಯರಲ್ಲಾಗಲಿ ಆಸ್ತಿ ವಿಭಜನೆ ಅಥವಾ ವಿಲೇವಾರಿಯಲ್ಲಿ ಯಾವುದೇ ಗೊಂದಲ/ಸಂದೇಹಗಳಿಗೆ ಅವಕಾಶವಿರುವುದಿಲ್ಲ.
- ಉಯಿಲು ತೀರಾ ವ್ಯಕ್ತಿಗತ ದಾಖಲೆಯಾದುದರಿಂದ ಅದರಲ್ಲಿತನ್ನಕುಟುಂಬದ ಸದಸ್ಯರೊಂದಿಗಿನ ಬಂಧುಬಳಗದವರ ಹಾಗೂ ಸ್ನೇಹಿತರೊಂದಿಗಿನ ತನ್ನ ಸಂಬಂಧದ ಬಗ್ಗೆ ತನ್ನ ಅಭಿಪ್ರಾಯ ಮತ್ತು ಸಂವೇದನೆಯನ್ನು ನಿಖರವಾಗಿ ತಿಳಿಸಬಹುದು.
- ಕುಟುಂಬದ ಸದಸ್ಯರ –ಎಳೆ ವಯಸ್ಸಿನ ಮಕ್ಕಳ, ಅಂಗವಿಕಲರ, ವಿಧವೆಯಾದ ಹೆಣ್ಣು ಮಗಳ, ಅಶಕ್ತರಾದ ತಂದೆತಾಯಿಗಳೇ ಮುಂತಾದವರ ವಿಶೇಷ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಉಯಿಲನ್ನು ಬರೆಯಬಹುದು.
- ವಿಧೇಯ ಸೇವಕ, ದಾದಿ/ಆಯಾ, ಗೆಳೆಯ ಅಥವಾ ಹಣದ ನೆರವನ್ನು ಬಯಸುವ ಹಾಗೂ ತಮಗಿಷ್ಟವಾದವರಿಗೇ ಅಲ್ಲದೆ ತಮ್ಮ ಧ್ಯೇಯೋದ್ದೇಶಗಳನ್ನು ನೆರವೇರಿಸುವ ಸಂಘಸಂಸ್ಥೆಗಳು, ಅನಾಥಾಲಯಗಳು ಮುಂತಾದ ಸಾರ್ವಜನಿಕ ಸೇವಾ ಸಂಸ್ಥೆಗಳಿಗೆ ಪಾಲು ನೀಡಲು ಉಯಿಲನಲ್ಲಿ ಬರೆಯಬಹುದು.

- ಉಯಿಲನ್ನು ಬರೆಯುವುದರ ಮುಖಾಂತರ, ಕುಟುಂಬದಲ್ಲಿ ಉಂಟಾಗಬಹುದಾದ ವೈಮನಸ್ಸನ್ನು ತಡೆಗಟ್ಟಬಹುದು ಅಥವಾ ನಿವಾರಿಸಬಹುದು.

ಉಯಿಲಿನ ಉದ್ದೇಶ ಹಾಗೂ ಧ್ಯೇಯ ತುಂಬಾ ಸರಳವಾಗಿದೆ. ಉಯಿಲನ್ನು ಬರೆಯುವುದರಿಂದ, ಒಬ್ಬ ವ್ಯಕ್ತಿಯು ತಾನು ಜೀವಿತಾವಧಿಯಲ್ಲಿ ಗಳಿಸಿದ ಆಸ್ತಿ-ಉಳಿಸಿದ ಹಣ, ಆತನ ಮರಣಾನಂತರ ಆತನ ವಾರಸುದಾರರು ಸುಖವಾಗಿ ತೊಂದರೆ ತಾಪತ್ರಗಳಿಲ್ಲದೆ ಅನುಭವಿಸಲು ಸಹಾಯಕವಾಗುತ್ತದೆ.

ಆದ್ದರಿಂದ ಉಯಿಲು ಬರೆಯುವವರು ತಡಮಾಡದೆ ತಮ್ಮ ಮನದ ಇಂಗಿತವನ್ನು ಉಯಿಲಿನ ಮುಖಾಂತರ ಕಾರ್ಯರೂಪಕ್ಕೆ ಅಳವಡಿಸುವುದು ಸೂಕ್ತ.

ಮನಸ್ಸಿದ್ದಲ್ಲಿ ಮಾರ್ಗ – ಉಯಿಲಿದ್ದಲ್ಲಿ ನೆಂಟ
ವಿಳಂಬ ಮಾಡಬೇಡಿ ಇಂದೇ ಉಯಿಲು ಬರೆಯಿರಿ

*

ಉಯಿಲಿದ್ದರೆ ಹುಯಿಲಿಲ್ಲ

*

ಆರೋಗ್ಯ, ಬೌದ್ಧಿಕ ಸಾಮರ್ಥ್ಯ, ಮನಸ್ಸು
ಸುಸ್ಥಿತಿಯಲ್ಲಿರುವಾಗಲೇ ವಿಲ್ ಮಾಡಿ

ಮಾದರಿ ಉಯಿಲು

ಶ್ರೀ

ಸನ್ 1997ನೇ (ಸಾವಿರದ ಒಂಭೈನೂರ ತೊಂಭತ್ತೇಳನೇ) ಇಸವಿ ಜನವರಿ ಮಾಹೆ ಹದಿನಾರರಂದು ಇದೇ ಬೆಂಗಳೂರು ಮಹಾನಗರದ .... ಬಡಾವಣೆಯ .... ರಸ್ತೆಯಲ್ಲಿರುವ 188ನೇ ನಂಬರಿನ ಮನೆಯಲ್ಲಿ ವಾಸವಾಗಿರುವ ದಿವಂಗತ ಶ್ರೀ ಎಸ್. ನಾಗಭೂಷಣ್‌ರವರ ಮಗ ನಿವೃತ್ತ ಶಾಲಾ ಅಧ್ಯಾಪಕನಾದ **ಎನ್. ರಾಮಕೃಷ್ಣ** ಎಂಬ ಹೆಸರಿನವನಾದ ನಾನು ಬರೆದ ಮರಣ ಶಾಸನ ಉಯಿಲು (ವಿಲ್) ಏನೆಂದರೆ ನನಗೆ ಈಗ 68 ವರ್ಷಗಳಾಗಿರುತ್ತದೆ. ನನ್ನ ಮಾನಸಿಕ ಮತ್ತು ದೈಹಿಕ ಆರೋಗ್ಯ ಎಲ್ಲಾ ರೀತಿಯಿಂದಲೂ ಸಮರ್ಪಕ ಸ್ಥಿತಿಯಲ್ಲಿರುತ್ತವೆ. ಆದರೂ ಸಹ ನನ್ನ ಮುಂದಿನ ಜೀವನವು ಅನಿಶ್ಚಿತವಾಗಿರುವುದರಿಂದ ನನ್ನ ನಿಧನಾನಂತರ ನನ್ನ ಕುಟುಂಬದ ಸದಸ್ಯರಲ್ಲಿ ಯಾವುದೇ ವಿಧವಾದ ತಪ್ಪು ಅಭಿಪ್ರಾಯಗಳೂ ಮತ್ತು ಕಾನೂನು ವಿವಾದಗಳೂ ಉಂಟಾಗಬಾರದೆಂಬ ಉದ್ದೇಶದಿಂದ ಈ ಉಯಿಲನ್ನು ನನ್ನ ಸ್ವಂತ ಇಚ್ಛೆಯಿಂದ ಹಾಗೂ ಯಾರೊಬ್ಬರ ಒತ್ತಡವೂ ಇಲ್ಲದಂತೆ ಮಾಡುತ್ತಿದ್ದೇನೆ. ನನ್ನ ಸ್ಥಿರ ಹಾಗೂ ಚರಾಸ್ತಿಗಳ ಬಗ್ಗೆ ನನ್ನ ಉಯಿಲು (ವಿಲ್) ಈ ಕೆಳಕಂಡಂತಿರುತ್ತದೆ :

1. ಈಗ ನಾನು ಹಾಲಿ ವಾಸಿಸುತ್ತಿರುವ ಮೇಲೆ ನಮೂದಿಸಿರುವ ವಿಳಾಸದ ಮನೆ ಪೂರ್ವದಿಂದ ಪಶ್ಚಿಮಕ್ಕೆ 50-48/2 ಅಡಿ, ಉತ್ತರದಿಂದ ದಕ್ಷಿಣಕ್ಕೆ 30 ಅಡಿ ಜಾಗದಲ್ಲಿ ಕಟ್ಟಿದ್ದು ನನ್ನ ಹೆಸರಿನಲ್ಲಿ ಇದೆ.

ಇದರ ಚಕ್ಕುಬಂದಿ ಈ ರೀತಿ ಇದೆ

ಪೂರ್ವಕ್ಕೆ 40 ಅಡಿ ರಸ್ತೆ
ಪಶ್ಚಿಮಕ್ಕೆ ರೆವಿನ್ಯೂ ನಿವೇಶನ
ಉತ್ತರಕ್ಕೆ ಸೈಟ್ ನಂ 187
ದಕ್ಷಿಣಕ್ಕೆ ಸೈಟ್ ನಂ 189

ಈ ಮೇಲೆ ಕಾಣಿಸಿರುವ ನನ್ನ ಸ್ವಂತ ಮನೆಯನ್ನು ಕಟ್ಟುವಾಗ ನಾನು ನನ್ನ ಉಳಿತಾಯದ ಸ್ವಂತ ಹಣದೊಂದಿಗೆ ....

ಬ್ಯಾಂಕಿನಿಂದ ಸಾಲವನ್ನು ಪಡೆದಿದ್ದೆನು. ಈ ಸಾಲದ ಬಹುಭಾಗದ ಹಣವನ್ನು ನನ್ನ ಕಿರಿಯ ಮಗನಾದ ಚಿ॥ ಆರ್. ಮೃತ್ಯುಂಜಯನು ಮರುಪಾವತಿ ಮಾಡಿದ್ದಾನೆ. ಹಾಗೂ ಮೇಲ್ಕಂಡ ಮನೆಯನ್ನು ಕಟ್ಟುವ ಹೆಚ್ಚುವರಿ ಖರ್ಚನ್ನು ಕೂಡ ಆತನೇ ನಿರ್ವಹಿಸಿದ್ದಾನೆ. ಈ ಮೇಲ್ಕಂಡ ಸ್ಥಿರಾಸ್ತಿಯಲ್ಲದೆ ನನ್ನ ಹೆಸರಿನಲ್ಲಿ ಬೇರಾವ ಸ್ಥಿರಾಸ್ತಿಯೂ ಇರುವುದಿಲ್ಲ. ಆದುದರಿಂದ ಈ ಮೇಲ್ಕಾಣಿಸಿದ ಆಸ್ತಿಗೆ ನನ್ನ ನಂತರ ಅವನೇ ಸಂಪೂರ್ಣ ಹಾಗೂ ಏಕೈಕ ಹಕ್ಕುದಾರನಾಗಿದ್ದು ಆ ಮನೆಯಲ್ಲಿ ತನ್ನ ಕುಟುಂಬದೊಂದಿಗೆ ಸಂತೋಷವಾಗಿ ಬಾಳ ಬದುಕಲೆಂದೂ ಹಾಗೂ ಆಸ್ತಿಯನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡು ಅದರ ರಕ್ಷಣೆ ಮತ್ತು ವಿಲೇವಾರಿಯ ಬಗ್ಗೆ ತಾನು ಸೂಕ್ತ ಕಂಡುಬಂದಂತೆ ಸಂಪೂರ್ಣವಾಗಿ ವ್ಯವಹರಿಸ ಬಹುದೆಂದೂ ಆತ್ಮ ಸಂತೋಷದಿಂದ ಈ ಪತ್ರವನ್ನು ಬರೆದಿದ್ದೇನೆ.

ನನ್ನ ನಿಧನಾನಂತರ ನನ್ನ ಪತ್ನಿ ಸೌಭಾಗ್ಯವತಿ ಸುಶೀಲಳನ್ನು ಅವಳ ಜೀವಿತ ಕಾಲಾವಧಿಯವರೆಗೂ ಪೋಷಣೆ ಮಾಡಿಕೊಂಡು ಬರುವುದು ಚಿ॥ ಮೃತ್ಯುಂಜಯನ ಕರ್ತವ್ಯವೂ ಹಾಗೂ ಜವಾಬ್ದಾರಿಯೂ ಆಗಿರುತ್ತದೆ.

2. ....ಬ್ಯಾಂಕಿನಲ್ಲಿ ನನ್ನ ಮಗಳು ಶ್ರೀಮತಿ ಜಲಜ ಹಾಗೂ ನನ್ನ ಜಂಟಿ ಹೆಸರಿನಲ್ಲಿ 20,000/- (ಇಪ್ಪತ್ತು ಸಾವಿರ ರೂ) ಗಳ ನಿಶ್ಚಿತ ಠೇವಣಿಯಿದ್ದು ಅದು ಸಂಪೂರ್ಣವಾಗಿ ನನ್ನ ನಂತರ ಅವಳಿಗೆ ಸೇರತಕ್ಕದ್ದು.

3. ಬಸವನಗುಡಿ ರಸ್ತೆಯಲ್ಲಿರುವ .... ಬ್ಯಾಂಕಿನಲ್ಲಿ ರೂ 50,000/- (ಐವತ್ತುಸಾವಿರ ರೂಪಾಯಿಗಳು ಮಾತ್ರ) ಗಳ ನಿಶ್ಚಿತ ಠೇವಣಿ ಮತ್ತು ಇದೇ ಬ್ಯಾಂಕಿನಲ್ಲಿ ಉಳಿತಾಯ ಖಾತೆ ನಂ .... ಸಹ ಇದೆ. ವ್ಯವಹಾರ ಸೌಕರ್ಯದ ದೃಷ್ಟಿಯಿಂದ ಈ ಮೇಲಿನ ಖಾತೆಗಳು ನನ್ನ ಮತ್ತು ನನ್ನ ಹೆಂಡತಿ ಸುಶೀಲಳ ಜಂಟೀ ಹೆಸರಿನಲ್ಲಿದೆ. ನನ್ನ ನಂತರ ಮೇಲಿನ ಖಾತೆಗಳಲ್ಲಿ

ಉಳಿಯುವ ಹಣವನ್ನು ನನ್ನ ಹೆಂಡತಿ ಸುಶೀಲಳಿಗೆ ನೀಡಿರುತ್ತೇನೆ. ಅದರಿಂದ ಬರುವ ಬಡ್ಡಿಯ ಹಣವನ್ನು ಆಕೆ ತನಗೆ ಇಷ್ಟ ಬಂದ ರೀತಿಯಲ್ಲಿ ಖರ್ಚು ಮಾಡಿಕೊಳ್ಳಬಹುದು.

ನನ್ನ ಮೊದಲ ಮಗ ಚಿ॥ರಾಧಾಕೃಷ್ಣ ತನ್ನ ಸಂಸಾರದೊಂದಿಗೆ ದೆಹಲಿಯಲ್ಲಿ ನೆಲೆಸಿದ್ದು ಆರ್ಥಿಕವಾಗಿ ಚೆನ್ನಾಗಿರುವುದರಿಂದ ಈ ಉಯಿಲಿನಲ್ಲಿ ಅವನಿಗಾಗಲೀ ಅವನ ಹೆಂಡತಿ ಮಕ್ಕಳಿಗಾಗಲೀ ಏನನ್ನೂ ಕೊಟ್ಟಿರುವುದಿಲ್ಲ. ಆದರೆ ನನಗೆ ಅವನಲ್ಲಿ ಇರುವ ಪ್ರೀತಿ ಮಮತೆಯ ಜ್ಞಾಪಕಾರ್ಥವಾಗಿ ಈಗ ನಾನು ಉಪಯೋಗಿಸುತ್ತಿರುವ ಚಿನ್ನದ ಉಂಗುರವನ್ನು ಸಾಂಕೇತಿಕವಾಗಿ ಅವನಿಗೆ ಕೊಟ್ಟಿರುತ್ತೇನೆ.

ಈ ಮೇಲ್ಕಂಡ ವ್ಯವಸ್ಥಾ ಪತ್ರವನ್ನು ನನ್ನ ಇಚ್ಛೆಯಂತೆ ದೃಢ ಮನಸ್ಸಿನಿಂದಲೂ, ಆತ್ಮ ಸಂತೋಷದಿಂದಲೂ ಮಾಡಿದ್ದೇನೆ.

ನನ್ನ ನಿಧನಾ ನಂತರ ಜಾರಿಗೆ ಬರುವ ಈ ವ್ಯವಸ್ಥಾ ಕ್ರಮಕ್ಕೆ ನಮ್ಮ ಕುಟುಂಬದ ಹಿತೈಷಿಗಳಾದ ಈ ಕೆಳಕಂಡವರಿಬ್ಬರೂ ಸಾಕ್ಷಿದಾರರಾಗಿ ತಮ್ಮ ಸಹಿಯನ್ನು ಹಾಕಿದ್ದಾರೆ.

ಸಹಿ

ದಿನಾಂಕ : **(ಎನ್. ರಾಮಕೃಷ್ಣ)**

ಸಾಕ್ಷಿದಾರರು

1.

2.

ಉಳಿತಾಯ ಮಿತವ್ಯಯ

ಜೀವನದಲ್ಲಿ ಸುಖವಾಗಿ ಸಂತೋಷವಾಗಿ ನೆಮ್ಮದಿಯಿಂದ ಬಾಳಬೇಕಾದರೆ, ಮೂಲಭೂತ ಸೌಕರ್ಯಗಳಾದ ಅನ್ನ ಬಟ್ಟೆ ವಸತಿ, ಹಣ ಅತ್ಯಗತ್ಯ.

ನಮ್ಮ ಸರ್ಕಾರದ ನೀತಿಯೂ ಸಹ ಅದೇ ಆಗಿದೆ. ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ನೆಮ್ಮದಿಯಿಂದ ಬಾಳಬೇಕಾದರೆ ಮೂಲಭೂತ ಅಗತ್ಯತೆಗಳಾದ ಅನ್ನ, ವಸತಿ, ಮತ್ತು ಬಟ್ಟೆ ರೋಟಿ, ಕಪಡಾ, ಮಕಾನ್ ಎಂದು ತನ್ನ ಧ್ಯೇಯವನ್ನಾಗಿಟ್ಟುಕೊಂಡು ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ.

ಬಹಳ ವರ್ಷಗಳ ಹಿಂದೆಯೇ ನಮ್ಮ ನಾಡಿನ ಕ್ರಾಂತಿಕಾರೀ ಕವಿ ಎನಿಸಿದ ಸರ್ವಜ್ಞ ಕೂಡ ಬೆಚ್ಚನೆಯ ಮನೆ, ಖರ್ಚಿಗೆ ಹಣ – ಸುಖ ಜೀವನದ ಸೋಪಾನ ಎಂದು ಈ ಕೆಳಗಿನ ವಚನದಲ್ಲಿ ವಿವರಿಸಿದ್ದಾನೆ.:

ಬೆಚ್ಚನೆಯ ಮನೆಯಾಗೆ
ವೆಚ್ಚಕ್ಕೆ ಹೊನ್ನಾಗೆ
ಇಚ್ಛೆಯನರಿವ ಸತಿ ಇದ್ದೊಡೆ
ಸ್ವರ್ಗಕ್ಕೆ ಕಿಚ್ಚು ಹೆಚ್ಚೆಂದ ಸರ್ವಜ್ಞ

ಒಬ್ಬ ಮನುಷ್ಯ ತನ್ನ ಜೀವಿತಾವಧಿಯಲ್ಲಿ ತನ್ನ ಸಂಪಾದನೆಯ ಬಹು ಭಾಗವನ್ನು ಬಳಸುವುದು ತನ್ನ ದಿನನಿತ್ಯದ ಅಗತ್ಯತೆಗಳಾದ ಆಹಾರ ವಿಹಾರಗಳಿಗೆ. ಅಂದಂದಿನ ಅವಶ್ಯಕತೆಗಳಿಗೆ, ಬೇಕು ಬೇಡಗಳಿಗೆ ಅವನ ಸಂಪಾದನೆಯ ಬಹು ಭಾಗ ವ್ಯಯವಾಗುತ್ತದೆ. ಗಳಿಕೆಯ ಮುಖ್ಯ ಗುರಿ ಇಂದಿನ ಜೀವನ ನಿರ್ವಹಣೆಗಾಗಿಯೇ ಅಲ್ಲದೆ ತನ್ನ ಸಂಸಾರದ ಕಷ್ಟ ಸುಖಗಳು ಮಕ್ಕಳ ವಿದ್ಯಾಭ್ಯಾಸ, ಮದುವೆ, ವೈದ್ಯಕೀಯ ಖರ್ಚು , ಮನೆ ಕಟ್ಟುವುದು ಮುಂತಾದ ಅತ್ಯಂತ ಅಗತ್ಯವಾಗಿ ಬೇಕಾದ ಬಾಬ್ತುಗಳಿಗೂ ತನ್ನ ಗಮನವನ್ನು ಹರಿಸಬೇಕಾಗುತ್ತದೆ.
ಅಷ್ಟೇ ಅಲ್ಲ ವಿಶ್ರಾಂತ ಜೀವನದಲ್ಲಿ ನೆಮ್ಮದಿಯಿಂದ ಇರಬೇಕಾದರೂ ಸಹ ಅದಕ್ಕೆ ಬೇಕಾದ ಎಲ್ಲ ವ್ಯವಸ್ಥೆಯನ್ನು ಅಗತ್ಯನಾಗಿ ಮಾಡಿಕೊಳ್ಳಬೇಕಾಗುತ್ತದೆ.

ಪ್ರತಿಯೊಬ್ಬ ಮನುಷ್ಯನೂ ತನ್ನ ಜೀವನ ನಿರ್ವಹಣೆಗಾಗಿ ಯಾವುದಾದರೂ ಉದ್ಯೋಗವನ್ನು ಕೈಗೊಳ್ಳಲೇ ಬೇಕಾಗುತ್ತದೆ. ಸ್ವಂತ ಉದ್ಯೋಗವಾಗಬಹುದು ಅಥವ ಸರ್ಕಾರಿ ಉದ್ಯೋಗ ದಲ್ಲಿರಬಹುದು ಅಥವ

ಖಾಸಗೀ ಉದ್ದಿಮೆಗಳಲ್ಲಿರಬಹುದು. "ಉದ್ಯೋಗಂ ಪುರುಷ ಲಕ್ಷಣಂ" ಎಂಬಂತೆ ತನ್ನ ಸಂಸಾರ ನಿರ್ವಹಣೆಗಾಗಿ ದುಡಿಯಲೇ ಬೇಕು. ಇದನ್ನೇ ಪುರಂದರದಾಸರು "ಉದರ ನಿಮಿತ್ತಂ ಬಹುಕೃತ ವೇಷಂ" ಎಂದರು. "ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ" ಎಂದರು ಕನಕದಾಸರು.

ಸಂಪಾದನೆ ಮಾಡಿ ಇಂದು ಗಳಿಸಿದ್ದೆಲ್ಲವನ್ನೂ ಇಂದೇ ಖರ್ಚು ಮಾಡಿ ಬರಿಗೈ ದಾಸರಾಗಬಾರದು. ವಯಸ್ಸಾದ ನಂತರ, ಕೆಲಸ ಮಾಡಲು ಅಶಕ್ತರಾದಾಗ, ಸಂಪಾದನೆ ಇಲ್ಲದಾಗ, ಜೀವನ ನಿರ್ವಹಣೆ ಮಾಡಲು ಇಂದಿನ ಸಂಪಾದನೆಯಲ್ಲಿ ಸ್ವಲ್ಪ ಭಾಗವನ್ನಾದರೂ ಉಳಿತಾಯ ಮಾಡಲೇಬೇಕಾದ ಕ್ರಮವನ್ನು ಪ್ರತಿಯೊಬ್ಬರೂ ಕೈಗೊಳ್ಳಲೇ ಬೇಕು.

ಈ ವಿಷಯದಲ್ಲಿ ಪಕ್ಷಿಗಳು, ಕೀಟಗಳು, ಪ್ರಾಣಿಗಳು ಸಹ ಉಳಿತಾಯ ಯೋಜನೆಯನ್ನು ಮಾಡುವ ವಿಶಿಷ್ಟ ಪದ್ಧತಿಯನ್ನು ಗಮನಿಸಬಹುದು. ಸಾಲು ಸಾಲಾಗಿ ಸಾಗುತ್ತಿರುವ ಇರುವೆಗಳು ತಾವು ಸಂಗ್ರಹಿಸಿದ ಆಹಾರವನ್ನು ಗೂಡಿನಲ್ಲಿ ಸಂಗ್ರಹಿಸುವುದು, ಕಾಗೆ ಮುಂತಾದ ಪಕ್ಷಿಗಳು ಮರದ ಮೇಲಿನ ಪೊಟರೆಯಲ್ಲಿ ಆಹಾರವನ್ನು ಸಂಗ್ರಹಿಸುವುದು, ಕೋತಿಗಳು ಆಹಾರವನ್ನು ದವಡೆಯಲ್ಲಿ ಸಂಗ್ರಹಿಸಿಟ್ಟುಕೊಂಡು ನಂತರ ತನಗೆ ಬೇಕಾದಾಗ ನಿಧಾನವಾಗಿ ತಿನ್ನುವುದು ಇದೆಲ್ಲಾ ಅವುಗಳ ಮುಂಜಾಗ್ರತೆಯ ಕ್ರಮಗಳೆಂದೆನ್ನಬಹುದು.

ಕ್ರಿಮಿಕೀಟಗಳು, ಪಶುಪಕ್ಷಿಗಳೇ ಆಪತ್ಕಾಲಕ್ಕೆಂದು ಕೂಡಿಡುವ, ಉಳಿತಾಯ ಮಾಡುವ ಕ್ರಮವನ್ನು ಅನುಸರಿಸಿರಬೇಕಾದರೆ, ಬುದ್ಧಿವಂತರಾದ ಮನುಷ್ಯರು ಕಷ್ಟಕಾಲಕ್ಕೆ ಮುಪ್ಪಿನ ಜೀವನಕ್ಕೆ ಕೂಡಿಡುವ ಉಳಿತಾಯ ಕ್ರಮವನ್ನು ಕೈಗೊಳ್ಳಲೆಬೇಕಲ್ಲವೇ?

"ವೃದ್ಧಾಪ್ಯಕ್ಕೆ ಹಣ ಹಾಗೂ ಗೆಳೆಯರನ್ನು ಕೂಡಿಡು" ಎನ್ನುವ ಚೀನೀ ಗಾದೆಯಂತೆ ಪ್ರತಿಯೊಬ್ಬರೂ ದುಡಿಯುವ ಶಕ್ತಿ ಇದ್ದಾಗ, ಗಳಿಸುವ ಸಾಮರ್ಥ್ಯ ಇದ್ದಾಗ, ತಮ್ಮ ಆದಾಯದ ಒಂದು ಪಾಲನ್ನು ತಮ್ಮ ಮುಂದಿನ ಜೀವನಕ್ಕೆ ಅವಶ್ಯಕವಾಗಿ ಕೂಡಿಡಲೇ ಬೇಕು.

ಯೌವನದಲ್ಲಿ ಸಾಕಷ್ಟು ಹಣ ಸಂಪಾದಿಸಿದರೂ ಸಹ, ಅದನ್ನು ಸರಿಯಾಗಿ ಬಳಸದೆ, ದಾಂ ದೂಂ ಎಂದು ಧಾರಾಳವಾಗಿ, ಬೇಕಾ ಬಿಟ್ಟಿಯಾಗಿ, ಅಗತ್ಯತೆಗೂ ಮೀರಿ ಖರ್ಚು ಮಾಡಿ ಮುಂದೆ ಸಣ್ಣ ಪುಟ್ಟ ಹಣಕಾಸಿನ ಸಮಸ್ಯೆ ಎದುರಾದಾಗಲೂ ಕಣ್ ಕಣ್ಣು ಬಿಡುವಂತಾಗುತ್ತದೆ. ಕಂಡ ಕಂಡವರ ಮುಂದೆ ಕೈ ಚಾಚಬೇಕಾಗುತ್ತದೆ.

"ಧರ್ಮೋ ರಕ್ಷತಿ ರಕ್ಷಿತಃ" ಎಂಬ ಸಂಸ್ಕೃತದ ಉಕ್ತಿಯೊಂದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಯಾವನು ತನ್ನ ಧರ್ಮವನ್ನು ರಕ್ಷಿಸುತ್ತಾನೋ ಅವನನ್ನು ಧರ್ಮವು ರಕ್ಷಿಸುತ್ತದೆ. ಅದರಂತೆ ಯಾವನು ತನ್ನ ಅರ್ಥವನ್ನು ಅಂದರೆ ಹಣವನ್ನು ರಕ್ಷಿಸುತ್ತಾನೋ ಅವನನ್ನು ಅರ್ಥವು ಅಂದರೆ ಹಣವು ರಕ್ಷಿಸುತ್ತದೆ ಎಂದೆನ್ನಬಹುದು.

ಉದ್ಯೋಗಸ್ಥರಿಗಾದರೋ, ಅವರ ಸಂಬಳದ ಮೂಲದಲ್ಲಿಯೇ ಶಾಸನಬದ್ಧವಾದ ಉಳಿತಾಯ ಯೋಜನೆಗಳಿಗಾಗಿ ಹಣವನ್ನು ಕಡಿತಗೊಳಿಸಿ ಒಂದು ರೀತಿಯ ಕಡ್ಡಾಯ ಉಳಿತಾಯ ಯೋಜನೆಯನ್ನು ಮಾಡಲಾಗುತ್ತದೆ. ಹಾಗಾಗಿ ಇಷ್ಟವಿದೆಯೋ ಇಲ್ಲವೋ, ಆ ಉದ್ಯೋಗಿಯ ಭವಿಷ್ಯಕ್ಕಾಗಿ ಸ್ವಲ್ಪ ಮಟ್ಟಿನ ಉಳಿತಾಯ ವಾಗುತ್ತದೆ. ಆದರೆ ಸ್ವ ಉದ್ಯೋಗವನ್ನು ಹೊಂದಿರುವ ವ್ಯಕ್ತಿಗಳಿಗೆ ಈ ಅನುಕೂಲವಿರುವುದಿಲ್ಲ

ಈ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಸಂಗತಿಯೆಂದರೆ ಇಂದಿನ ಯುವ ಜನತೆಯಲ್ಲಿ ಮೈಗೂಡಿರುವ " ಕೊಳ್ಳಬಾಕ ಸಂಸ್ಕೃತಿ" ಕೆಲಸಕ್ಕೆ ಸೇರಿ ಕೈಗೆ ನಾಲ್ಕು ಕಾಸು ಸಂಪಾದನೆಯ ಹಣ ಕೈ ಸೇರುತ್ತಿದ್ದಂತೆಯೇ ತಮಗೆ ಬೇಕಾದ ಬೇಡವಾದ ಹಲವಾರು ವಸ್ತುಗಳನ್ನು ಕೊಂಡುಕೊಳ್ಳುವುದು. ಅಗತ್ಯ ವಸ್ತುಗಳನ್ನು ಕೊಳ್ಳುವುದಕ್ಕೆ ಮಾಡುವ ಖರ್ಚಿಗಿಂತ ಅನಗತ್ಯ ವಸ್ತುಗಳಿಗೆ , ಷೋಕಿಗೆ, ತಮ್ಮ "ಪ್ರೆಸ್ಟೀಜ್" ನ್ನು ಮೆರೆಸುವುದಕ್ಕೆ ಖರ್ಚು ಮಾಡುವುದೇ ಜಾಸ್ತಿಯಾಗಿದೆ.

ಅದರಲ್ಲಿಯೂ ಡೆಬಿಟ್ ಕಾರ್ಡ್ ಅಥವ ಕ್ರೆಡಿಟ್ ಕಾರ್ಡ್ ಗಳನ್ನು ಹೊಂದಿರುವವರಂತೂ ಷಾಪಿಂಗ್ ಮಾಲ್ ಗಳಿಗೆ ಹೋದಾಗ ಕಣ್ಣಿಗೆ ಕಾಣಬರುವ ಆಕರ್ಷಕ ವಸ್ತುಗಳನ್ನು, ಎಷ್ಟೇ ದುಬಾರಿ ಯಾದರೂ, ಬೇಕೋ ಬೇಡವೋ, ಕೊಂಡು ನಂತರ ಸಾಲದ ಹಣವನ್ನು ಕಟ್ಟುವಾಗ ಒದ್ದಾಡುವುದನ್ನು ಕಾಣಬಹುದಾಗಿದೆ. ಅಲ್ಲದೆ ಕ್ರೆಡಿಟ್ ಕಾರ್ಡ್‌ನಲ್ಲಿ ಮಿತಿ ಮೀರಿದ ವಸ್ತುಗಳನ್ನು ಕೊಂಡು ಅದಕ್ಕೆ ಅಧಿಕ ಬಡ್ಡಿ ಯನ್ನು ನೀಡುವವರು ಹಲವರಾದರೆ, ಮತ್ತೆ ಕೆಲವರು ಸಾಲವನ್ನು ತೀರಿಸಲಾಗದೆ ಸುಸ್ತಿದಾರರಾದಾಗ, ಸಾಲ ನೀಡಿದ ಸಂಸ್ಥೆಯವರು ಮನೆಬಾಗಿಲಿಗೆ ಬಂದು ಕೊಂಡ ವಸ್ತುಗಳನ್ನು ಆರಕ್ಕೆ ಮೂರರಂತೆ ಮಾರಿ ಸಾಲದ ಹಣವನ್ನು ಚುಕ್ತಾ ಮಾಡಿ "ಗಂಟೂ ಹೋಯ್ತು ನಂಟೂ ಹೋಯ್ತು" ಎಂದು ಗೋಳಿಡುವ ಪರಿಸ್ಥಿತಿಗೆ ಬಂದಿರುವ ಹಲವಾರು ಸಂದರ್ಭಗಳು ಸಾಕಷ್ಟಿವೆ.

ಇಷ್ಟೇ ಅಲ್ಲ "ಕೊಳ್ಳಬಾಕ ಸಂಸ್ಕೃತಿ"ಯೊಂದಿಗೆ ಇಂದಿನ ಯುವ ಜನತೆಯಲ್ಲಿ ಮೂಡಿರುವ ಮತ್ತೊಂದು ಹವ್ಯಾಸವೆಂದರೆ "ತಿಂಡಿಬಾಕತನ"ವೂ ಒಂದೆಂದು ಹೇಳಬಹುದು. ಐಷಾರಾಮಿ ಹೋಟಲುಗಳಿಗೆ ಹೋಗಿ ಒಂದಕ್ಕೆ ನಾಲ್ಕರಷ್ಟು ಹಣವನ್ನು ಖರ್ಚುಮಾಡಿ ಅರ್ಧ ತಿಂದು ಅರ್ಧ ಚೆಲ್ಲಿ ಬರುವ ಅಸಹ್ಯ ಸಂಪ್ರದಾಯವೂ ಮತ್ತೊಂದು. ಅಷ್ಟೇ ಅಲ್ಲ, ಹಲವಾರು ಚಟಗಳಿಗೆ, ದುರಭ್ಯಾಸಗಳಿಗೆ ದಾಸರಾಗಿ ಮಿತಿಯಿಲ್ಲದೆ ಸಂಪಾದನೆಯ ಹಣವನ್ನು ಪೋಲು ಮಾಡುವುದೂ ಮತ್ತೊಂದು ಕಾರಣ ಹಣ ಪೋಲಾಗಲು.

ಈ ಎಲ್ಲ ಸಮಸ್ಯೆಗಳಿಗೆ ಜೀವನದಲ್ಲಿ ಶಿಸ್ತು ಸಂಯಮಗಳನ್ನು ಕಾಪಾಡಿಕೊಂಡು ಬರದಿರುವುದು ಒಂದು ಕಾರಣವಾದರೆ ಆಸೆಗೆ ಅಂಕುಶ ಹಾಕದಿರುವುದು ಮತ್ತೊಂದು ಕಾರಣ. "ಬೇಕು ಎಂಬುದಕ್ಕೆ ಬ್ರೇಕು" ಹಾಕಿದಾಗ, ಸಂಯಮದ ಜೀವನ ನಡೆಸಿದಾಗ, ಎಲ್ಲಕ್ಕೂ ಮುಖ್ಯವಾಗಿ, ಇಂದಿನ ಜೀವನದ ಸವಿಯನ್ನು ಅನುಭವಿಸುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಮುಂದಿನ ದಿನಗಳ ಅಗತ್ಯತೆಗಳಿಗಾಗಿ ಯೋಜನೆಗಳನ್ನು ರೂಪಿಸಿಕೊಂಡು "ಹನಿ ಹನಿ ಕೂಡಿದರೆ ಹಳ್ಳ, ತೆನೆ ತೆನೆ ಗೂಡಿದರೆ ಬಳ್ಳ" ಎಂಬಂತೆ ಸ್ವಲ್ಪ ಮಟ್ಟಿಗಾದರೂ ಉಳಿತಾಯ ಮಾಡಲೇ ಬೇಕು.

"ಆಸೆಗೆ ಆಳಾಗದೆ ಆಸೆಯನ್ನು ಆಳಾಗಿಸಿಕೊಂಡಾಗ" ಮತ್ತು ಮನೋನಿಗ್ರಹ ಮಾಡಿಕೊಂಡಾಗ ಮಾತ್ರ ದುಂದು ವೆಚ್ಚವನ್ನು ತಡೆಯಬಹುದು. ಪ್ರತಿಯೊಬ್ಬರೂ ನೆನಪಿನಲ್ಲಿಟ್ಟು ಕೊಳ್ಳಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ಕೇವಲ ಹಣ ಸಂಪಾದನೆಯೊಂದರಿಂದಲೇ ಯಾರೂ ಶ್ರೀಮಂತರಾಗುವುದಿಲ್ಲ. ಸಂಪಾದನೆಯೊಂದಿಗೆ ಮಿತವ್ಯಯವನ್ನು ಅನುಸರಿಸುವುದೂ ಅಷ್ಟೇ ಮುಖ್ಯ. "ಮಿತವ್ಯಯವಿಲ್ಲದೆ ಯಾರೂ ಸಿರಿವಂತ ರಾಗುವುದಿಲ್ಲ – ಮಿತವ್ಯಯ ಸಾಧಿಸುವವರು ಎಂದೂ ಬಡವರಾಗುವುದಿಲ್ಲ" ಎಂಬ ಹಿರಿಯರ ಮಾತನ್ನು ಸದಾ ನೆನೆಪಿನಲ್ಲಿಟ್ಟು ಕೊಳ್ಳಬೇಕು.

"ತಮಗೆ ಬರುವ ಆದಾಯ ಜೀವನ ನಿರ್ವಹಣೆಗೇ ಸಾಕಾಗುವುದಿಲ್ಲ. ಇನ್ನು ಉಳಿತಾಯ ಮಾಡುವುದಾದರೂ ಹೇಗೆ ?" ಎಂದು ಬಹಳಷ್ಟು ಮಂದಿ ಪ್ರಶ್ನಿಸುತ್ತಾರೆ. ಆದರೆ ಇದನ್ನು ಒಂದು ಕುಂಟು ನೆಪವೆಂದೇ ಹೇಳಬಹುದು. ಏಕೆಂದರೆ ಸಂಪಾದನೆ ಮಾಡುತ್ತಿರುವ ಯಾವುದೇ ವ್ಯಕ್ತಿಯನ್ನು ಕೇಳಿ. ಯಾರೊಬ್ಬರೂ ತಮಗೆ ಬರುವ ಸಂಪಾದನೆ ಸಾಕು ಎಂದು ಹೇಳುವ ಮನೋಭಾವದವರಾಗಿರುವುದಿಲ್ಲ. ಅತ್ಯಲ್ಪ ದಿನಗೂಲಿ ಪಡೆಯುವ ಒಬ್ಬ ಕಾರ್ಮಿಕನಿರಬಹುದು ಅಥವಾ ಹೆಚ್ಚು ಸಂಬಳ ಪಡೆಯುತ್ತಿರುವ ಹಿರಿಯ ಅಧಿಕಾರಿಯೇ ಇರಬಹುದು. ತನಗೆ ಬರುವ ಆದಾಯ ಸಾಕು ಎಂಬ ತೃಪ್ತ

ಭಾವವನ್ನು ವ್ಯಕ್ತಪಡಿಸುವವರು ಬಹಳ ವಿರಳ. ಇದಕ್ಕೆ ಬಹು ಮುಖ್ಯ ಕಾರಣವೆಂದರೆ ಆದಾಯಕ್ಕಿಂತ ತಾನು ಮಾಡುವ ಖರ್ಚಿನ ಬಾಬತ್ತನ್ನು ಹೆಚ್ಚಿಗೆ ರೂಢಿಸಿಕೊಂಡಿರುವುದೇ ಆಗಿದೆ. ಹಾಸಿಗೆ ಇದ್ದಷ್ಟು ಕಾಲು ಚಾಚುವ ಮನೋವೃತ್ತಿ ಇಲ್ಲದಿರುವುದೇ ಈ ಎಲ್ಲ ಆಭಾಸಕ್ಕೆ ಕಾರಣವೆಂದೆನ್ನಬಹುದು.

ಮತ್ತೊಮ್ಮೆ ಸ್ಪಷ್ಟವಾಗಿ ಹೇಳಬಹುದಾದರೆ ಪ್ರತಿಯೊಬ್ಬನೂ "ಇಂದು" ಎಷ್ಟರ ಮಟ್ಟಿಗೆ ಬಾಳುತ್ತಿದ್ದಾನೋ ಅಷ್ಟೇ ನಿಶ್ಚಿತವಾಗಿ "ನಾಳೆ"ಯೂ ಬಾಳುತ್ತಾನೆ. ಆದರೆ ಇಂದಿಗಿರುವ ವರಮಾನ ಅಂದಿಗಿರುವುದಿಲ್ಲ. ಅಷ್ಟೇ ಅಲ್ಲ, ಹಿಂದಿನ ದಿನಗಳಲ್ಲಿ ಇದ್ದ ಸಾಮರಸ್ಯ ಮನೋಭಾವದ, ಕೂಡುಕುಟುಂಬದ ಪದ್ಧತಿ ಮಾಯವಾಗಿ, ಇಂದು ನಾನು ನನ್ನ ಹೆಂಡತಿ ಮಕ್ಕಳು ಎಂಬಷ್ಟೇ ಪರಿಮಿತ ಕುಟುಂಬದ ಪದ್ಧತಿ ಜಾರಿಯಲ್ಲಿರುವುದರಿಂದ ಯಾರೂ ಯಾರೊಬ್ಬರ ಮೇಲೂ ಅವಲಂಬಿತರಾಗಿ ಬಾಳಲು ಆಗುವುದಿಲ್ಲ. ಹಿಂದಿನ ಕಾಲದಲ್ಲಿದ್ದಂತೆ ತಂದೆತಾಯಿಯರನ್ನು ಅವರ ಮುದಿ ವಯಸ್ಸಿನಲ್ಲಿ ಪ್ರೀತಿ ವಿಶ್ವಾಸಗಳಿಂದ ಗೌರವಾದರಗಳಿಂದ ಗಮನಿಸುತ್ತಿದ್ದ ಪದ್ಧತಿ ಮಾಯವಾಗಿ ಅವರನ್ನು ತಮ್ಮ ಹೊರೆ ಎಂದೇ ಭಾವಿಸುವ ಅನಿಷ್ಟ ಭಾವನೆಗಳು ಇಂದು ಹೆಚ್ಚಾಗುತ್ತಿದೆ.

ಜೀವನ ವೆಚ್ಚ ನಾಗಾಲೋಟದಂತೆ ಏರುತ್ತಿರುವ ಇಂದಿನ ದಿನಗಳಲ್ಲಿ ಇನ್ನೊಬ್ಬರ ಮೇಲೆ ಅವಲಂಬಿತರಾಗಿ ಅವರಿಗೆ ಹೊರೆ ಎನಿಸುವಂತೆ ಬಾಳುವುದೂ ತರವಲ್ಲ. "ಮುಪ್ಪಿನ ದಿನಗಳಲ್ಲಿ ಹಣ ಕೊಡಬಲ್ಲ ಧೈರ್ಯ" ಮತ್ತಾವುದೂ ಕೊಡುವುದಿಲ್ಲ. ಹಣಕ್ಕಾಗಿ ಕೈ ಒಡ್ಡುವ ಪರಿಸ್ಥಿತಿಯನ್ನು ಯಾರೂ ಯಾವತ್ತೂ ತಂದುಕೊಳ್ಳಬಾರದು. ಹಾಗಿದ್ದಲ್ಲಿ ಮಾತ್ರ ಸ್ವಾಭಿಮಾನದಿಂದ ಬಾಳಲು ಸಾಧ್ಯ ಹಾಗಾಗಿ ನಮ್ಮ ಮುಪ್ಪಿನ ಜೀವನಕ್ಕೆ ಬೇಕಾದ ಎಲ್ಲ ವ್ಯವಸ್ಥೆಯನ್ನೂ ನಾವೇ ಮಾಡಿಕೊಳ್ಳಬೇಕಾದ್ದು ಅಗತ್ಯವೂ ಹೌದು ಅನಿವಾರ್ಯವೂ ಹೌದೆ.

ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಸಂಪಾದನೆಯ ಕಡೆಗೆ ಎಷ್ಟು ಗಮನ ಕೊಡಬಹುದೋ ಅಷ್ಟೇ ಗಮನವನ್ನು ಉಳಿತಾಯದ ಕಡೆಗೂ ಕೊಡಬೇಕಾದ್ದು ಅತ್ಯಂತ ಪ್ರಾಮುಖ್ಯವಾದುದು.

ಹಾರೈಕೆ



ನಿವೃತ್ತಿಯ ನಂತರ, ಜೀವನದ ಮುಸ್ಸಂಜೆಯಲ್ಲಿ ಆರೋಗ್ಯವಾಗಿ ಸುಖಸಂತೋಷದಿಂದ ಬದುಕು ಸಾಗಿಸ ಬೇಕಾದರೆ,ತೆಗೆದುಕೊಳ್ಳಬೇಕಾದ ಹಾಗೂ ಅನುಸರಿಸಬೇಕಾದ ಹಲವಾರು ಕಾರ್ಯ ಯೋಜನೆಗಳೂ ಸಿದ್ಧತೆಗಳು ಹಾಗೂ ಮುನ್ನೇರ್ಪಾ ಡುಗಳ ಬಗ್ಗೆ ಸಾಕಷ್ಟು ಅರಿವು ಉಂಟು ಮಾಡಲು ಈ ಪುಸ್ತಕದಲ್ಲಿ ಯತ್ನಿಸಲಾಗಿದೆ.

ಇಂದಿನ ದಿನಗಳಲ್ಲಿ ಜನರ ವಯೋಮಾನವು, ಹಿಂದಿನ ದಿನಗಳಿಗೆ ಹೋಲಿಸಿದರೆ ಹೆಚ್ಚುತ್ತಿದೆ. ಪ್ರಸ್ತುತದಲ್ಲಿ ಮನುಷ್ಯನ ಸರಾಸರಿ ಜೀವಿತಾವಧಿ 65 ವರ್ಷವಾಗಿದ್ದು ಇನ್ನು ಒಂದೆರಡು ದಶಕಗಳಲ್ಲಿ ಆ ಅವಧಿಯು ಗಣನೀಯವಾಗಿ ಏರುವ ಸಂಭವವು ಹೆಚ್ಚಬಹುದೆಂದು ನಿರೀಕ್ಷಿಸಬಹುದು. ಇದಕ್ಕೆ ಬಹುಮುಖ್ಯ ಕಾರಣ ವೈದ್ಯಕೀಯರಂಗದಲ್ಲಿ ಉಂಟಾಗುತ್ತಿರುವ ಹೊಸ ಹೊಸ ಆವಿಷ್ಕಾರಗಳು, ಲಭ್ಯವಿರುವ ರೋಗನಿರೋಧಕ ಔಷಧಗಳು ಮತ್ತು ಆಧುನಿಕ ಚಿಕಿತ್ಸಾ ಕ್ರಮಗಳು. ಹಾಗಾಗಿ ನಿವೃತ್ತಿಯ ನಂತರದ ಜೀವಿತಾವಧಿಯು ಕೊನೆಯ ಪಕ್ಷ ಇಪ್ಪತ್ತು ಇಪ್ಪತ್ತೈದು ವರ್ಷಗಳಾದರೂ ಇರಬಹುದು.

ಈ ಅವಧಿಯಲ್ಲಿ ಮನೆಯವರಿಗೆ ಹೊರೆಯಾಗದೆ, ಅವರನ್ನು ಆರ್ಥಿಕ ಸಂಕಷ್ಟಕ್ಕೆ ಈಡುಮಾಡದೆ, ತಮ್ಮ ಪಾಡಿಗೆ ತಾವು ಸ್ವಾವಲಂಬಿಗಳಾಗಿ ಬದುಕುವುದು ಅತಿ ಮುಖ್ಯ.

ವೃದ್ಧಾಪ್ಯದಲ್ಲಿ ಆರೋಗ್ಯ ಹಾಗೂ ಸ್ವಾವಲಂಬನೆಗಳಿಗೆ ಪ್ರಾಮುಖ್ಯತೆಯನ್ನು ನೀಡಬೇಕಾದ್ದು ಅಗತ್ಯತೆಯಷ್ಟೇ ಅಲ್ಲ. ಅದು ಅನಿವಾರ್ಯವೂ ಹೌದು.

ತಾವು ನಿವೃತ್ತಿಯಾದ ಸಮಯದಲ್ಲಿ ಪಡೆದ ಸೇವಾಂತ್ಯ ಸೌಲಭ್ಯವನ್ನು ಹಾಳು ಮಾಡಿಕೊಳ್ಳದೆ ಸುರಕ್ಷಿತ ಸ್ಥಳಗಳಲ್ಲಿ ಹೂಡಿಕೆ ಮಾಡಿ ಅದರಿಂದ ಸಿಗಬಹುದಾದ ಪ್ರತಿಫಲ/ಬಡ್ಡಿಯ ನೆರವಿನಿಂದ ಪರಾವಂಬಿಗಳಾಗದೆ, ತಮ್ಮ ಸ್ವಂತ ಕಾಲ ಮೇಲೆ ಜೀವನ ನಡೆಸಬಹುದು. ಮಕ್ಕಳ ಮೇಲೆ ಆರ್ಥಿಕ ಹೊರೆಬೀಳದೆ, ತಮ್ಮ ಖರ್ಚು ವೆಚ್ಚಗಳಿಗೆ ಪರರನ್ನಾಶ್ರಯಿಸದೆ ಸ್ವಾವಲಂಬನೆಯ ಜೀವನವನ್ನು ನಡೆಸಬಹುದು.

ತೀರಾ ಕೊನೆಗಾಲದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಬಯಸುವುದು ಅನಾಯಾಸ ಮರಣವನ್ನು

ಅನಾಯಾಸೇನ ಮರಣಂ ವಿನಾದೈನ್ಯೇನ ಜೀವನಂ ।
ದೇಹಿಮೇ ಕೃಪಯಾದೇವ ಶಂಭೋ ತ್ವಯೀಭಕ್ತಿ ಅಚಂಚಲಾಂ ॥

ಎಂಬುದು ಪ್ರತಿಯೊಬ್ಬರ ಪ್ರತಿದಿನದ ಪ್ರಾರ್ಥನೆ.

ಇದನ್ನೇ ಕನ್ನಡದ ಭಗವದ್ಗೀತೆ ಎಂದೆ ಪ್ರಸಿದ್ಧಿಯಾದ "ಮಂಕುತಿಮ್ಮನ ಕಗ್ಗ" ದಲ್ಲಿ ಪೂಜ್ಯ ಡಿ.ವಿ. ಗುಂಡಪ್ಪನವರು ಹೀಗೆನ್ನುತ್ತಾರೆ.

ಆರ ಕೈತುತ್ತಿಗಂ, ನಿನ್ನ ಕಾಯಿಸದೆ ವಿಧಿ ।
ಯಾರ ಭುಜಕಂ ನಿನ್ನ ಭಾರವಾಗಿಸದೆ ॥
ಆರ ಸೆಲೆ ಸುಳಿವು ಮಂಟದ ವೊಲಾಗಿಸಿ ನಿನ್ನ ।
ಪಾರಗಾಣಿಸಬೇಡು– ಮಂಕುತಿಮ್ಮ ॥

(ದೇಹ ಪೋಷಣೆಗಾಗಿ ಯಾರ ಮುಂದೆಯೂ ಒಂದು ತುತ್ತು ಅನ್ನಕ್ಕಾಗಿ ಕೈ ಒಡ್ಡಿ ಕಾಯಿಸದಂತೆ, ನನಗೆ ವರವನ್ನು ಕೊಡಲಿ. ನಾನು ಜೀವಿಸಿರುವುದು ಯಾರ ಭುಜಕ್ಕೂ ಭಾರವಾಗದೆ ಇರಲಿ. ಯಾರ ಜೀವನವೂ ನನ್ನ ಮೇಲೆ ಅವಲಂಬಿಸಿ ನನ್ನ ಮಮಕಾರವನ್ನು ಹೆಚ್ಚಿಸದೆ ಇರಲಿ.)

ಈ ರೀತಿ ಬಾಳಲು ಎಲ್ಲ ಹಿರಿಯ ಜೀವಿಗಳಿಗೂ ಸಾಧ್ಯವಾಗಲಿ. ಅದಕ್ಕೆ ಬೇಕಾದ ಶಕ್ತಿ ನೀಡಲಿ ಎಂದು ಡಿವಿಜಿಯವರೊಂದಿಗೆ ಎಲ್ಲರೂ ಹಾರೈಸೋಣ.

*****



ಈ ಕೃತಿಯ ಲೇಖಕರು ಎನ್. ಆನಂದ ರಾಮ ರಾವ್. ಹೆಸರೇ ಹೇಳುವಂತೆ ಸದಾ ಆನಂದವಾಗೇ ಇರುತ್ತಾರೆ. ಹಸನ್ಮುಖಿ, ಪ್ರಜ್ಞಾವಂತ ಲೇಖಕರೂ ಹೌದು. ನಮ್ಮ ಸುಂದರ ಪ್ರಕಾಶನದ ಸಲಹೆಗಾರರೂ ಆಗಿರುತ್ತಾರೆ. ನಾವು ಪ್ರಕಟಿಸಿದ ಟಿಪ್ಪು ಕನ್ನಡ ದ್ರೋಹಿಯೇ ಪುಸ್ತಕಕ್ಕೆ ಶ್ರೀ ಆನಂದರಾಮರಾಯರ ಲೇಖನ ಗಮನ ಸೆಳೆದು ಓದುಗರ ಮೆಚ್ಚುಗೆಗೆ ಪಾತ್ರವಾಯಿತು. ಬಿ. ಇ. ಎಲ್ ನ ಲೆಕ್ಕ ವಿಭಾಗದ ಅಧಿಕಾರಿಯಾಗಿ ನಿವೃತ್ತರಾದವರು. ಈಗಲೂ ಹಲವಾರು ಕಾರ್ಖಾನೆಗಳಲ್ಲಿ ಹಣಕಾಸಿನ ಬಗ್ಗೆ ಇವರು ನೀಡುವ ಮಾರ್ಗದರ್ಶನ ಎಷ್ಟೋ ಕುಟುಂಬಗಳಿಗೆ ದಾರಿ ದೀಪವಾಗಿದೆ. ಪ್ರತಿ ಮಂಗಳವಾರ ಇವರು ನಾಡಿನ ಉತ್ತಮ ಪತ್ರಿಕೆ ಉದಯವಾಣಿಯಲ್ಲಿ ಅರ್ಥ ವಿಷಯಗಳ ಬಗ್ಗೆ ಬರೆಯುತ್ತಿದ್ದ ಕಾಲಂ ಜನಪ್ರಿಯವಾಗಿ ದಿನಬೆಳಗಾದರೆ ಹತ್ತಾರು ಓದುಗರು ಇವರನ್ನು ಸಂಪರ್ಕಿಸಿ "ಗೈಡ್ ಲೈನ್" ಪಡೆಯುತ್ತಿದ್ದು ನಮನಗಳನ್ನು ಸಲ್ಲಿಸಿದ್ದಾರೆ.

ಶ್ರೀ ಆನಂದ ರಾಮರಾಯರ ಪುಸ್ತಕವನ್ನು ನಾವೂ ಪ್ರಕಟಿಸುತ್ತಿರುವುದು ಹೆಮ್ಮೆಯ ಸಂಗತಿ

–ಗೌರಿ ಸುಂದರ್
ಸುಂದರ ಪ್ರಕಾಶನ

₹130

ಚತುರ್ಮುಖ

43, 1ನೇ ಮಹಡಿ, 5ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ಹನುಮಂತ ನಗರ, ಬೆಂಗಳೂರು – 560 019
ದೂ : 080-2667 2141; ಮೊಬೈಲ್ : 80888 68525